ಮಂಗಳವಾರ, ಸೆಪ್ಟೆಂಬರ್ 9, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 250 | ಪುಟ 14

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಮೇರಿ ಮಾತೆ ಮಹೋತ್ಸವ

ಸಂತ ಮೇರಿ ಮಾತೆಯ ಮಹೋತ್ಸವ ದಿನದ ಅಂಗವಾಗಿ ಕಲಬುರಗಿಯ ಸೇಂಟ್ ಮೇರಿ ಚರ್ಚ್‌ನಲ್ಲಿ ಸೋಮವಾರ ಸಂತ ಮೇರಿ ವೇಷದಲ್ಲಿ ಗಮನ ಸೆಳೆದ ಬಾಲಕಿ



ಅಲ್ಕರಾಜ್‌ಗೆ ಕಿರೀಟ

ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರು ಫೈನಲ್‌ನಲ್ಲಿ ಯಾನಿಕ್ ಸಿನ್ನರ್ ಅವರನ್ನು ಮಣಿಸಿ ಅಮೆರಿಕ ಓಪನ್ ಪುರುಷರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು

ಸೆನ್ಸೆಕ್ಸ್ 80,787 | ನಿಫ್ಟಿ 24,773 | ಚಿನ್ನ (Std. 10g) ₹1,12,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,30,200 (ಬೆಂಗಳೂರು)

ಎಚ್‌ಡಿಕೆಗೆ ಮತ್ತೆ ತನಿಖೆ ಬಿಸಿ

ಕೇತಗಾನಹಳ್ಳಿಯ 6 ಎಕರೆ ಸರ್ಕಾರಿ ಜಮೀನು ಒತ್ತುವರಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇತಗಾನಹಳ್ಳಿಯ ಸರ್ಕಾರಿ ಜಮೀನು ಒತ್ತುವರಿ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧದ ಎಸ್‌ಐಟಿ (ವಿಶೇಷ ತನಿಖಾ ತಂಡ) ತನಿಖೆಗೆ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ನೀಡಿದ್ದ ಮಧ್ಯಂತರ ತಡೆ ಆದೇಶವನ್ನು ವಿಭಾಗೀಯ ನ್ಯಾಯಪೀಠ ತೆರವುಗೊಳಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ತೆರವುಗೊಳಿಸುವಂತೆ ಕೋರಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ರಾಮನಗರ ತಹಶೀಲ್ದಾರ್ ಸಲ್ಲಿಸಿದ ರಿಟ್ ಮೇಲ್ಮನವಿಗೆ ಸಂಬಂಧಿಸಿದಂತೆ ಸೋಮವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ, ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ಮಧ್ಯಂತರ ತಡೆ ನೀಡಿ ಆದೇಶಿಸಿದೆ.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಈ ಪ್ರಕರಣದಲ್ಲಿ ಪ್ರತಿವಾದಿ ವಿರುದ್ಧ 6 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿದ ಆರೋಪವಿದೆ. ಒತ್ತುವರಿ ತೆರವುಗೊಳಿಸಬೇಕಿದ್ದ ಹಿನ್ನೆಲೆಯಲ್ಲಿ ರಾಮನಗರ ತಹಶೀಲ್ದಾರ್ ಮುಖಾಂತರ ಸರ್ಕಾರ ಕಾನೂನು ಕ್ರಮಕ್ಕೆ ಮುಂದಾಗಿದೆ. ಇದೇ ವೇಳೆ ಆರೋಪಗಳಿಗೆ ಸಂಬಂಧಿಸಿದಂತೆ ವಾಸ್ತವಾಂಶಗಳ ಶೋಧನೆಗಾಗಿ ಎಸ್‌ಐಟಿ ರಚಿಸಲಾಗಿದೆ. ಆದರೆ, ಪ್ರತಿವಾದಿ ಕುಮಾರಸ್ವಾಮಿ ಅವರು ಎಸ್‌ಐಟಿ ರಚನೆಯನ್ನು ಪ್ರಶ್ನಿಸಿದ್ದರು. ಈ ಪ್ರಶ್ನಿತ ಅರ್ಜಿಯನ್ನು ಪುರಸ್ಕರಿಸಿದ್ದ ಏಕಸದಸ್ಯ ನ್ಯಾಯಪೀಠ ಎಸ್‌ಐಟಿ ರಚನೆಗೆ ಮಧ್ಯಂತರ ತಡೆ ನೀಡಿದೆ. ಈ ತಡೆ ಆದೇಶವನ್ನು ತೆರವುಗೊಳಿಸಬೇಕು' ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶಕ್ಕೆ ಮಧ್ಯಂತರ ತಡೆ ನೀಡಿತು. ಪ್ರತಿವಾದಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅಂತೆಯೇ, ನವೆಂಬರ್ 26ಕ್ಕೆ ವಿಚಾರಣೆ ಮುಂದೂಡಿತು. ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರೂ ಹಾಜರಿದ್ದರು.

3B

ಮುಖ್ಯಾಂಶಗಳು

- ಪ್ರತಿವಾದಿ ಎಚ್‌ಡಿಕೆಗೆ ನೋಟಿಸ್ ಜಾರಿ
- ನವೆಂಬರ್ 26ಕ್ಕೆ ವಿಚಾರಣೆ ಮುಂದೂಡಿಕೆ





ಮೇಲ್ಮನವಿಯಲ್ಲಿ ಏನಿದೆ?

'ಕರ್ನಾಟಕ ಭೂ ಕಂದಾಯ ಕಾಯ್ದೆ–1964ರ ಕಲಂ 104ರ ಅಡಿಯಲ್ಲಿ ಶಾಸನಾತ್ಮಕ ಅಧಿಕಾರ ಚಲಾಯಿಸಿರುವ ರಾಮನಗರ ತಹಶೀಲ್ದಾರ್, ಕುಮಾರಸ್ವಾಮಿ ಅವರಿಗೆ ನೋಟಿಸ್ ಜಾರಿ ಮಾಡಿ ದಾಖಲೆ ಒದಗಿಸುವಂತೆ ಕೇಳಿದ್ದಾರೆ. ಈ ನೋಟಿಸ್ ಅನ್ನು ಕುಮಾರಸ್ವಾಮಿ ಏಕಸದಸ್ಯ ನ್ಯಾಯಪೀಠದಲ್ಲಿ ಪ್ರಶ್ನಿಸಿದ್ದರು. ಪ್ರಶ್ನಿಸಲಾದ ರಿಟ್ ಅರ್ಜಿಯಲ್ಲಿ ಕುಮಾರಸ್ವಾಮಿ ಹಲವು ವಾಸ್ತವಾಂಶಗಳನ್ನು ನ್ಯಾಯಾಲಯದ ಗಮನಕ್ಕೆ ತಾರದೆ ಮರೆಮಾಚಿದ್ದಾರೆ' ಎಂದು ಮೇಲ್ಮನವಿಯಲ್ಲಿ ಆಕ್ಷೇಪಿಸಲಾಗಿದೆ.

'ಏಕಸದಸ್ಯ ನ್ಯಾಯಪೀಠದ ಆದೇಶ ಹಲವು ಕಾನೂನಾತ್ಮಕ ಅಂಶಗಳ ದೌರ್ಬಲ್ಯದಿಂದ ಬಳಲುತ್ತಿದೆ. ಇದೊಂದು ಏಕಪಕ್ಷೀಯ, ಸಕಾರಣಗಳಿಲ್ಲದ, ಸರಿಯಾಗಿ ವಿಚಾರ ಮಾಡದೆ ನೀಡಲಾಗಿರುವ ಆದೇಶವಾಗಿದ್ದು ಕಾನೂನಿಗೆ ವಿರುದ್ಧವಾಗಿದೆ. ಆದ್ದರಿಂದ, ಈ ಮಧ್ಯಂತರ ಆದೇಶವನ್ನು ವಜಾಗೊಳಿಸಬೇಕು' ಎಂದು ಕೋರಲಾಗಿದೆ.



> ಎಸ್‌ಐಟಿಯು ಸಂವಿಧಾನದ 162ನೇ ವಿಧಿಯಡಿ ಪ್ರದತ್ತವಾದ ಅಧಿಕಾರದಡಿ ಕಾನೂನಿನ ಅನುಸಾರ ತನ್ನ ಕಾರ್ಯ ನಿರ್ವಹಿಸುತ್ತದೆ
>
> **ಕೆ.ಶಶಿಕಿರಣ ಶೆಟ್ಟಿ,** ಅಡ್ವೊಕೇಟ್ ಜನರಲ್

ಮದ್ದೂರು ಮತ್ತೆ ಪ್ರಕ್ಷುಬ್ಧ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ): ಗಣೇಶನ ಮೂರ್ತಿ ವಿಸರ್ಜನೆಯ ವೇಳೆ ಭಾನುವಾರ ರಾತ್ರಿ ನಡೆದಿದ್ದ ಕಲ್ಲು ತೂರಾಟ, ಸಂಘರ್ಷದಿಂದ ಪಟ್ಟಣದಲ್ಲಿ ಮೂಡಿದ್ದ ಬಿಗುವಿನ ಸ್ಥಿತಿ ಸೋಮವಾರವೂ ಮುಂದುವರಿಯಿತು. ಪಟ್ಟಣದ ಸದ್ಯದ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ.


ಕಲ್ಲು ತೂರಾಟ ಕೃತ್ಯ ಖಂಡಿಸಿ ಬಿಜೆಪಿ, ಬಜರಂಗದಳ ಕಾರ್ಯಕರ್ತರು ಸೋಮವಾರ ನಡೆಸಿದ ಪ್ರತಿಭಟನೆ ವೇಳೆ ಕೆಲವರು ಮಸೀದಿಯತ್ತ ಕಲ್ಲು ತೂರಿ ಆಕ್ರೋಶ ವ್ಯಕ್ತಪಡಿಸಿದ್ದು, ಗುಂಪು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು. ಪೊಲೀಸರ ಜೊತೆಗೆ ವಾಗ್ವಾದವು ನಡೆಯಿತು.

3B



ಮದ್ದೂರು ಪಟ್ಟಣದಲ್ಲಿ ಸೋಮವಾರ ಬಿಜೆಪಿ, ಬಜರಂಗದಳ ಕಾರ್ಯಕರ್ತರು 'ಪ್ರತಿಭಟನಾ ಮೆರವಣಿಗೆ' ನಡೆಸುತ್ತಿದ್ದಾಗ ಮಸೀದಿ ಬಳಿ ಕಲ್ಲು ತೂರಾಟ ನಡೆಸಿದ ವೇಳೆ ಪೊಲೀಸರು ಲಾಠಿ ಪ್ರಹಾರ ನಡೆಸಿದರು

ಒಟ್ಟು ಬಲಾಬಲ



12 ರಾಜ್ಯಸಭೆಗೆ ನಾಮನಿರ್ದೇಶನ ಗೊಂಡವರೂ ಸೇರಿದ್ದಾರೆ

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಉಪರಾಷ್ಟ್ರಪತಿ ಚುನಾವಣೆ ಇಂದು

ಮಾಜಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಜುಲೈ 21ರಂದು ದಿಢೀರ್ ರಾಜೀನಾಮೆ ನೀಡಿದ್ದರಿಂದ ತೆರವಾಗಿದ್ದ ಉಪರಾಷ್ಟ್ರಪತಿ ಹುದ್ದೆಗೆ ಮಂಗಳವಾರ ಚುನಾವಣೆ ನಡೆಯಲಿದೆ. ಎನ್‌ಡಿಎ ಮೈತ್ರಿಕೂಟದ ಬಳಿ ಬಹುಮತ ಇರುವುದರಿಂದ ಸಿ.ಪಿ. ರಾಧಾಕೃಷ್ಣನ್ ಅವರ ಗೆಲುವು ಬಹುತೇಕ ಖಚಿತವಾಗಿದೆ. ಆದರೆ, 1962ರಿಂದ ಇಲ್ಲಿಯವರೆಗೂ ವಿರೋಧ ಪಕ್ಷಗಳ ಅಭ್ಯರ್ಥಿಗೆ ಸಿಕ್ಕ ಮತಗಳ ಹೋಲಿಕೆಯಲ್ಲಿ ಈ ಬಾರಿ ನ್ಯಾ. ಸುದರ್ಶನ ರೆಡ್ಡಿ ಅವರಿಗೆ ಅತಿ ಹೆಚ್ಚು ಮತಗಳು ಲಭಿಸುವ ಸಾಧ್ಯತೆ ಇದೆ




ಸಿ.ಪಿ. ರಾಧಾಕೃಷ್ಣನ್ (ಎನ್‌ಡಿಎ ಅಭ್ಯರ್ಥಿ)



ನ್ಯಾ. ಬಿ. ಸುದರ್ಶನ್ ರೆಡ್ಡಿ ('ಇಂಡಿಯಾ' ಅಭ್ಯರ್ಥಿ)

ಈ ಬಾರಿಯ ಬಲಾಬಲ




ಮತದಾನದ ಅವಧಿ: ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ

ಮತ ಎಣಿಕೆ: ಸಂಜೆ 6

- ಒಂದು ಮತಕ್ಕೆ ಒಂದು ಮತದ ಮೌಲ್ಯ
- ಬ್ಯಾಲಟ್ ಪೇಪರ್‌ನಲ್ಲಿ ಮತದಾನ

'ಮೈತ್ರಿ'ಗಳ ಬಲಾಬಲ



- ಇಂಥವರಿಗೇ ಮತ ಹಾಕಬೇಕು ಎಂದು ಪಕ್ಷಗಳು ತಮ್ಮ ಸಂಸದರಿಗೆ ವಿಪ್ ಜಾರಿ ಮಾಡಲು ಬರುವುದಿಲ್ಲ

'ಮೈತ್ರಿ'ಯಲ್ಲಿ ಇಲ್ಲದವರ ನಡೆ

- ವೈಆರ್‌ಎಸ್ ಕಾಂಗ್ರೆಸ್ ಪಕ್ಷವು ಎನ್‌ಡಿಎ ಅಭ್ಯರ್ಥಿಗೆ ಮತ ಹಾಕಲು ನಿರ್ಧರಿಸಿದೆ. ಈ ಪಕ್ಷದಲ್ಲಿರುವ ಒಟ್ಟು ಸಂಸದರು 11. ಲೋಕಸಭೆಯಲ್ಲಿ 4, ರಾಜ್ಯಸಭೆಯಲ್ಲಿ 7
- ಬಿಆರ್‌ಎಸ್ ಚುನಾವಣೆಯಲ್ಲಿ ತಟಸ್ಥವಾಗಿರುವುದಾಗಿ ಹೇಳಿದೆ. ಈ ಪಕ್ಷದಲ್ಲಿ ಒಟ್ಟು 4 ರಾಜ್ಯಸಭೆ ಸದಸ್ಯರಿದ್ದಾರೆ. ಲೋಕಸಭೆಯಲ್ಲಿ ಸದಸ್ಯರಿಲ್ಲ
- ಬಿಜೆಡಿ ಪಕ್ಷವು ಚುನಾವಣೆಯಲ್ಲಿ ತಟಸ್ಥವಾಗಿರುವುದಾಗಿ ಹೇಳಿದೆ. ಈ ಪಕ್ಷದಲ್ಲಿ ಒಟ್ಟು 7 ರಾಜ್ಯಸಭೆ ಸದಸ್ಯರಿದ್ದಾರೆ. ಲೋಕಸಭೆಯಲ್ಲಿ ಸದಸ್ಯರಿಲ್ಲ
- ಅಕಾಲಿ ದಳ ಪಕ್ಷದ ಒಬ್ಬ ಸಂಸದ ಚುನಾವಣೆಯಲ್ಲಿ ತಟಸ್ಥವಾಗಿರುವುದಾಗಿ ಹೇಳಿದ್ದಾರೆ

ಪೌರತ್ವದ ಪುರಾವೆ ಅಲ್ಲ • ಎಸ್‌ಐಆರ್ ಗುರುತಿನ ದಾಖಲೆಯಾಗಿ ಮನ್ನಣೆ ನೀಡಿ: 'ಸುಪ್ರೀಂ'

ಆಧಾರ್ ಪರಿಗಣನೆಗೆ ಸೂಚನೆ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಮತದಾರರ ಗುರುತಿನ ದಾಖಲೆಯಾಗಿ ಆಧಾರ್ ಸಂಖ್ಯೆಯನ್ನು ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಚುನಾವಣಾ ಆಯೋಗಕ್ಕೆ ಸೂಚಿಸಿದೆ.

ಪ್ರಸ್ತುತ ಬಿಹಾರದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ 11 ದಾಖಲೆಗಳನ್ನು ಗೊತ್ತುಪಡಿಸಲಾಗಿದೆ. ಮತದಾರರು ಈ ಪೈಕಿ ಯಾವುದಾದರೂ ಒಂದು ದಾಖಲೆಯನ್ನು ಅರ್ಜಿ ನಮೂನೆ ಜೊತೆ ಸಲ್ಲಿಸಬೇಕಿದೆ.

ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠವು, 12ನೇ ದಾಖಲೆಯಾಗಿ 'ಆಧಾರ್' ಅನ್ನು ಪರಿಗಣಿಸುವಂತೆ ಹೇಳಿದೆ.

ಆದಾಗ್ಯೂ, ಆಧಾರ್ ಸಂಖ್ಯೆಯು ಪೌರತ್ವಕ್ಕೆ ಪುರಾವೆ ಅಲ್ಲ. ಅದನ್ನು ಗುರುತಿನ ದಾಖಲೆಯಾಗಿ ಪರಿಗಣಿಸಬಹುದಷ್ಟೆ ಎಂದು ನ್ಯಾಯಪೀಠ ಹೇಳಿದೆ.

11



ಮುಖ್ಯಾಂಶಗಳು

- ಆಧಾರ್ ಕಾರ್ಡ್‌ನ ಅಧಿಕೃತತೆಯ ಪರಿಶೀಲನೆಗೆ ಅವಕಾಶ
- ಅಧಿಕಾರಿಗಳಿಗೆ ಅಗತ್ಯವಿರುವ ನಿರ್ದೇಶನ ನೀಡಲು ಸಲಹೆ

'ಆಯೋಗಕ್ಕೆ ನಾಚಿಕೆಯಾಗಬೇಕು'

ಮತದಾರರ ನೋಂದಣಿಗೆ ಗುರುತಿನ ದಾಖಲೆಯಾಗಿ ಆಧಾರ್ ಅನ್ನು ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದ್ದರೂ, ಅದನ್ನು ಪಾಲನೆ ಮಾಡದೆ ಬೇಜವಾಬ್ದಾರಿಯಿಂದ ವರ್ತಿಸುತ್ತಿರುವ ಚುನಾವಣಾ ಆಯೋಗಕ್ಕೆ ನಾಚಿಕೆಯಾಗಬೇಕು ಎಂದು ಕಾಂಗ್ರೆಸ್ ಸೋಮವಾರ ವಾಗ್ದಾಳಿ ನಡೆಸಿತು.

ಇದೇ ವೇಳೆ, 'ಈ ಚುನಾವಣೆಯು ಆಡಳಿತ ವ್ಯವಸ್ಥೆ ಮತ್ತು ಚುನಾವಣಾ ಆಯೋಗದ ತಿರಸ್ಕಾರ ಧೋರಣೆ ವಿರುದ್ಧದ ಹೋರಾಟ' ಎಂದು ಹೇಳಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, 'ಈ ಕುರಿತು ಸುಪ್ರೀಂ ಕೋರ್ಟ್ ಮೂರನೇ ಬಾರಿಗೆ ನಿರ್ದೇಶನ ನೀಡಿದೆ. ಅರ್ಹ ಮತದಾರರ ನೋಂದಣಿಗೆ ಉದ್ದೇಶಪೂರ್ವಕವಾಗಿ ಅನನುಕೂಲ ಉಂಟುಮಾಡಲು ಚುನಾವಣಾ ಆಯೋಗವು ನಿರಂತರವಾಗಿ ಅಡೆತಡೆಗಳನ್ನು ಸೃಷ್ಟಿಸುತ್ತಿದೆ' ಎಂದು ಆರೋಪಿಸಿದರು. 'ರಾಜಕೀಯ ಪಕ್ಷಗಳು ನೇಮಿಸಿದ ಬ್ಲಾಕ್ ಮಟ್ಟದ ಏಜೆಂಟ್‌ಗಳನ್ನು ಗುರುತಿಸಲು ಮತ್ತು ಆಧಾರ್ ಅನ್ನು ದಾಖಲೆಯಾಗಿ ಸ್ವೀಕರಿಸಲು ಆಯೋಗವು ನಿರಾಕರಿಸಿತ್ತು. ಗೊತ್ತುಪಡಿಸಿದ ದಾಖಲೆಗಳನ್ನು ಮಾತ್ರ ಸ್ವೀಕರಿಸುವಂತೆ ಅಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿತ್ತು' ಎಂದು ದೂರಿದರು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಇತಿಹಾಸವು ಕ್ಷಮಿಸುವುದಿಲ್ಲ ಎಂದು ಹರಿಹಾಯ್ದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಆಗುವ ಸಾಧ್ಯತೆ

ನಗರದಲ್ಲಿ 50 ಟ್ರಾಫಿಕ್ ಸಿಗ್ನಲ್ ಅಳವಡಿಕೆ

ಬೆಂಗಳೂರು: ನಗರದಲ್ಲಿ ಸಂಚಾರ ವ್ಯವಸ್ಥೆ ಸುಧಾರಣೆ ಮಾಡುವ ನಿಟ್ಟಿನಲ್ಲಿ ಕಳೆದ ಮೂರು ತಿಂಗಳಲ್ಲಿ ಹೊಸದಾಗಿ 50 ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಿದ್ದು, ಇದರೊಂದಿಗೆ ಟ್ರಾಫಿಕ್ ಸಿಗ್ನಲ್‌ಗಳ ಸಂಖ್ಯೆ 500 ದಾಟಿದೆ.

ಈ ಪ್ರದೇಶಗಳಲ್ಲಿ ವಾಹನಗಳ ಸಂಖ್ಯೆಯ ವಿವರವಾದ ವಿಶ್ಲೇಷಣೆಯ ಬಳಿಕ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.

'ಸ್ಥಳೀಯ ಪೊಲೀಸ್ ಅಧಿಕಾರಿಗಳ ಶಿಫಾರಸಿನ ಮೇರೆಗೆ ಹೊಸ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ದಟ್ಟಣೆ ಹೆಚ್ಚಾದ ಕಾರಣ ಈ ಜಂಕ್ಷನ್‌ಗಳಲ್ಲಿ ಕೆಲವು ಕ್ರಮಗಳನ್ನು ಜಾರಿಗೆ ತರುವ ಅಗತ್ಯವಿದೆ' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಹೇಳಿದರು.

ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಸಾಮಾನ್ಯವಾಗಿದೆ. ಒಂದು ಕಾಲದಲ್ಲಿ ವಾಹನ ದಟ್ಟಣೆಯಿಂದ ಮುಕ್ತವಾಗಿದ್ದ ಅನೇಕ ರಸ್ತೆಗಳಲ್ಲಿ ಈಗ ದಟ್ಟಣೆ ಸಮಸ್ಯೆ ಎದುರಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ವಿ.ವಿಗೆ ರಾಮಕೃಷ್ಣ ಹೆಗಡೆ ಹೆಸರಿಡಿ'

ಬೆಂಗಳೂರು: ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಜನ್ಮ ಶತಮಾನೋತ್ಸವದ ನೆನಪಿಗೆ ಅವರ ಹೆಸರಿನಲ್ಲಿ ಹೊಸ ವಿಶ್ವವಿದ್ಯಾಲಯ ಸ್ಥಾಪಿಸಿ, ಇಲ್ಲವೇ ಅಸ್ತಿತ್ವದಲ್ಲಿರುವ ವಿಶ್ವವಿದ್ಯಾಲಯಕ್ಕೆ ಅವರ ಹೆಸರು ಇಡಬೇಕು ಎಂದು ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಸಿಂಧ್ಯ, ಹೆಗಡೆ ಅವರ ಹೆಸರಿನಲ್ಲಿ ಆಡಳಿತ ಅಕಾಡೆಮಿ ನಿರ್ಮಿಸಿ ಆಡಳಿತಗಾರರು ಮತ್ತು ರಾಜಕಾರಣಿಗಳಿಗೆ ಹೆಗಡೆಯವರ ಆಡಳಿತ ತತ್ವಗಳ ಪರಿಚಯ ಮಾಡಿಸಿ ಎಂದು ಸಲಹೆ ನೀಡಿದ್ದಾರೆ.

ಪ್ರೀತಿ, ವಿಶ್ವಾಸ, ಸಹಿಷ್ಣುತೆ ಅಗತ್ಯ: ಸಿ.ಎಂ

ಸೇಂಟ್ ಮೇರಿ ಬೆಸಿಲಿಕಾ ಚರ್ಚ್‌ನಲ್ಲಿ ನಡೆದ ಸೇಂಟ್ ಮೇರಿ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನೇಕ ಜಾತಿ, ಧರ್ಮ, ಸಂಸ್ಕೃತಿ ಇರುವ ದೇಶ ನಮ್ಮದು. ಇಲ್ಲಿ ಪ್ರೀತಿ, ವಿಶ್ವಾಸ ಮತ್ತು ಸಹಿಷ್ಣುತೆ ಇದ್ದರೆ ಮಾತ್ರ ಮನುಷ್ಯತ್ವ ಇರಲು ಸಾಧ್ಯ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾ ಚರ್ಚ್‌ನಲ್ಲಿ ಸೋಮವಾರ ನಡೆದ ಸಂತ ಮೇರಿ ಮಾತೆಯ ಉತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ನಾವು ವಿವಿಧತೆಯಲ್ಲಿ ಏಕತೆಯನ್ನು ಕಂಡವರು. ನಮ್ಮ ಸರ್ಕಾರ ಈ ಬಗ್ಗೆ ಬಲವಾದ ನಂಬಿಕೆಯನ್ನು ಇಟ್ಟುಕೊಂಡಿದೆ. ಎಲ್ಲ ಧರ್ಮಗಳನ್ನೂ ಸಮಾನ ಗೌರವದಿಂದ ಕಾಣುವ ವ್ಯವಸ್ಥೆ ನಮ್ಮದಾಗಿದೆ. ಸರ್ಕಾರಕ್ಕೆ ಎಲ್ಲ ಧರ್ಮಗಳೂ ಒಂದೇ' ಎಂದು ಹೇಳಿದರು.

'ಜಾತಿ, ವರ್ಗ ಹೋಗಬೇಕು. ಸಮಾನತೆಯಿಂದ ಬಾಳಬೇಕು ಎಂದು ಅನೇಕ ಸಮಾಜ ಸುಧಾರಕರು ಶ್ರಮಿಸಿದ್ದರು. ಎಲ್ಲ ಧರ್ಮಗಳ ಮೂಲವೇ ದಯೆಯಾಗಿದ್ದು, ಇದನ್ನೇ 12ನೇ ಶತಮಾನದಲ್ಲಿ ಬಸವಣ್ಣ ಹೇಳಿದ್ದರು. ಅದಕ್ಕಿಂತ ಮೊದಲು ಬುದ್ಧ, ಯೇಸು ಹೇಳಿದ್ದರು. ಆ ನಂತರ ಗಾಂಧೀಜಿ, ಅಂಬೇಡ್ಕರ್ ಕೂಡ ಅದನ್ನೇ ಹೇಳಿದ್ದು, ನಮ್ಮ ಸಂವಿಧಾನದ ಆಶಯವೂ ಅದೇ ಆಗಿದೆ' ಎಂದು ಹೇಳಿದರು.

'ನಾವು ಬೇರೆ ಧರ್ಮದವರನ್ನು ಪ್ರೀತಿಸಬೇಕು. ದ್ವೇಷಿಸುವ ಕೆಲಸವನ್ನು ಮಾಡುವುದಿಲ್ಲ ಎಂಬ ಪ್ರತಿಜ್ಞೆಯನ್ನು ಎಲ್ಲ ಧರ್ಮದವರು ಸ್ವೀಕರಿಸಬೇಕು. ಆಗ ಎಲ್ಲರೂ ಸಮಾನ ಗೌರವದಿಂದ ಬದುಕಲು ಸಾಧ್ಯ' ಎಂದರು.

'ಕರ್ನಾಟಕ ಕ್ರೈಸ್ತರ ಅಭಿವೃದ್ಧಿ ಪ್ರಾಧಿಕಾರ ಮಾಡಿದ್ದೇವೆ. ಈ ಬಾರಿ ₹250 ಕೋಟಿ ಮೀಸಲಿಟ್ಟಿದ್ದೇವೆ. ಆರ್ಥಿಕವಾಗಿ ಬಡವರಾಗಿರುವವರನ್ನು ಮೇಲೆತ್ತುವ ಕೆಲಸ ಮಾಡುತ್ತಿದ್ದೇವೆ. ಇದೇ ರೀತಿ ಎಲ್ಲ ಧರ್ಮ, ಜಾತಿಗಳ ಬಡವರನ್ನು ಮೇಲೆತ್ತುವ ಯೋಜನೆಗಳನ್ನು ರೂಪಿಸಿದ್ದೇವೆ. ಗ್ಯಾರಂಟಿ ಯೋಜನೆಗಳ ಉದ್ದೇಶವೂ ಇದೇ ಆಗಿದೆ' ಎಂದು ವಿವರಿಸಿದರು.

ಬೆಂಗಳೂರು ಧರ್ಮಕ್ಷೇತ್ರದ ಆರ್ಚ್ ಬಿಷಪ್ ಪೀಟರ್ ಮಚಾಡೊ ಸಾನ್ನಿಧ್ಯ ವಹಿಸಿದ್ದರು. ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಿದ್ದರು. ಇಂಧನ ಸಚಿವ ಕೆ.ಜೆ. ಜಾರ್ಜ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ವಿವಿಧ ಧರ್ಮಗುರುಗಳು ಉಪಸ್ಥಿತರಿದ್ದರು.



ಶಿವಾಜಿನಗರದಲ್ಲಿರುವ ಸೇಂಟ್ ಮೇರಿ ಬೆಸಿಲಿಕಾ ಚರ್ಚ್‌ನಲ್ಲಿ ಸೋಮವಾರ ನಡೆದ 'ಸೇಂಟ್ ಮೇರಿ ಉತ್ಸವ'ದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಕೆಎಸ್‌ಬಿಡಿಬಿಗೆ ಭೇಟಿ ನೀಡಿ ಚರ್ಚಿಸಿದ ಜರ್ಮನಿ ಸಂಸದ

'ಹಸಿರು ಕ್ಷೇತ್ರ: ರಾಜ್ಯ ಮಾದರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಎಸ್‌ಬಿಡಿಬಿ ಹಾಗೂ ಜರ್ಮನಿಯ ಹ್ಯಾಂಬರ್ಗ್ ಇನ್ವೆಸ್ಟ್ ನಡುವಿನ ಸಾಂಸ್ಥಿಕ ಪಾಲುಗಾರಿಕೆಯು ಹಸಿರು ಶಕ್ತಿ ಕ್ಷೇತ್ರದ ಬೆಳವಣಿಗೆ, ಜೈವಿಕ ಇಂಧನ ಕ್ಷೇತ್ರದಲ್ಲಿ ನೂತನ ಆವಿಷ್ಕಾರ, ಬಂಡವಾಳ ಹೂಡಿಕೆ ಹಾಗೂ ಸುಸ್ಥಿರ ಇಂಧನ ಅಭಿವೃದ್ಧಿಯಲ್ಲಿ ಕರ್ನಾಟಕ ಮಾದರಿ ಆಗಲಿದೆ' ಎಂದು ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ (ಕೆಎಸ್‌ಬಿಡಿಬಿ) ಅಧ್ಯಕ್ಷ ಎಸ್.ಈ. ಸುಧೀಂದ್ರ ತಿಳಿಸಿದರು.

ಹಸಿರು ಶಕ್ತಿ ಮತ್ತು ಸಾಂಸ್ಥಿಕ ಪಾಲುಗಾರಿಕೆ ಸಂಬಂಧ ಸೋಮವಾರ ಬರ್ಜೆಡಾರ್ಫ್ (ಜರ್ಮನಿ) ಸಂಸದ ಪರ್ಮೋದ್ ಕುಮಾರ್ ಅವರು ಮಂಡಳಿ ಅಧ್ಯಕ್ಷ ಎಸ್.ಈ.ಸುಧೀಂದ್ರ ಅವರನ್ನು ಭೇಟಿಯಾಗಿ ಚರ್ಚಿಸಿದರು.

ಈ ವೇಳೆ ಮಾತನಾಡಿದ ಸುಧೀಂದ್ರ, 'ಹಸಿರು ಶಕ್ತಿ ಕ್ಷೇತ್ರದ ಉನ್ನತೀಕರಣ ಹಾಗೂ ವಾಣಿಜ್ಯೀಕರಣಕ್ಕಾಗಿ ಮಂಡಳಿಯು ಸಾಂಸ್ಥಿಕ ಪಾಲುದಾರಿಕೆಗೆ ಆಸಕ್ತಿ ಹೊಂದಿದೆ. ಇಂಧನ ಕ್ಷೇತ್ರಗಳಲ್ಲಿ ಜ್ಞಾನ, ಸಂಶೋಧನೆ, ಕೈಗಾರಿಕಾ ಸಂಬಂಧಗಳು ಮತ್ತು ಉದ್ದಿಮೆದಾರರ ಪ್ರೋತ್ಸಾಹಕ್ಕೆ ಜಂಟಿಯಾಗಿ ಕಾರ್ಯಾಚರಣೆ ರೂಪಿಸಿ ಅನುಷ್ಠಾನಗೊಳಿಸಲು ದಾರಿಯಾಗಲಿದೆ. ಈ ಕ್ಷೇತ್ರಗಳಲ್ಲಿ ಜರ್ಮನ್ ದೇಶದ ಹೂಡಿಕೆದಾರರು ಬಂಡವಾಳ ತೊಡಗಿಸಲು ಪೂರಕ ವಾತಾವರಣ ಸೃಷ್ಟಿಯಾಗಲಿದೆ. ಜಂಟಿ ಸಹಭಾಗಿತ್ವದಲ್ಲಿ ಕಾರ್ಯಯೋಜನೆ ರೂಪಿಸಲು ಅಗತ್ಯ ನೀತಿ ರಚನೆ, ತರಬೇತಿ ಕಾರ್ಯಕ್ರಮಗಳ ಆಯೋಜನೆ, ಪ್ರಾಯೋಗಿಕ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಚಾಲನೆ ಸಿಗಲಿದೆ' ಎಂದು ಅವರು ಅಭಿಪ್ರಾಯಪಟ್ಟರು.

ಚರ್ಚೆಯಲ್ಲಿ ಹ್ಯಾಂಬರ್ಗ್ ಇನ್ವೆಸ್ಟ್ ಯೋಜನಾ ನಿರ್ದೇಶಕ ಲೀ ಲೀ ಓಎನ್‌ಜಿ, ಹ್ಯಾಂಬರ್ಗ್ ಇನ್ವೆಸ್ಟ್‌ನ ಸಮಿಹಾ ಪ್ರದೀಪ್ ಸುಲೆ, ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಎಲ್. ಶಿವಶಂಕರ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಲೋಹಿತ್ ಬಿ.ಆರ್., ಯೋಜನಾ ಸಲಹೆಗಾರ ಜಿ.ಎನ್. ದಯಾನಂದ ಭಾಗವಹಿಸಿದ್ದರು.



ನಗರದಲ್ಲಿ ಸೋಮವಾರ ನಡೆದ ಸಭೆಯಲ್ಲಿ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ (ಕೆಎಸ್‌ಬಿಡಿಬಿ) ಅಧ್ಯಕ್ಷ ಎಸ್.ಈ.ಸುಧೀಂದ್ರ ಮಾತನಾಡಿದರು. ಪರ್ಮೋದ್ ಕುಮಾರ್, ಲೀ ಲೀ ಓಎನ್‌ಜಿ, ಸಮಿಹಾ ಪ್ರದೀಪ್ ಸುಲೆ, ಎಲ್.ಶಿವಶಂಕರ್, ಲೋಹಿತ್ ಬಿ.ಆರ್., ಜಿ.ಎನ್.ದಯಾನಂದ ಇದ್ದಾರೆ

ಮುಖ್ಯಾಂಶಗಳು

- ಕೆಎಸ್‌ಬಿಡಿಬಿ - ಹ್ಯಾಂಬರ್ಗ್ ಇನ್ವೆಸ್ಟ್ ನಡುವೆ ಸಾಂಸ್ಥಿಕ ಪಾಲುದಾರಿಕೆ
- ಇಂಧನ, ಸಂಶೋಧನೆ, ಕೈಗಾರಿಕೆ ಕ್ಷೇತ್ರದಲ್ಲಿ ಸಹಭಾಗಿತ್ವ

ನವೆಂಬರ್ 14ರಿಂದ ವೀರಲೋಕ ಪುಸ್ತಕ ಸಂತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನವೆಂಬರ್ 14ರಿಂದ 16ರವರೆಗೆ ವೀರಲೋಕ ಪುಸ್ತಕ ಸಂತೆ -3 ಜಯನಗರದ ಶಾಲಿನಿ ಆಟದ ಮೈದಾನದಲ್ಲಿ (ಶಾಲಿನಿ ಗ್ರೌಂಡ್) ನಡೆಯಲಿದೆ.

ಕನ್ನಡ ಭಾಷೆಯ ಪುಸ್ತಕಗಳಿಗಷ್ಟೇ ಸೀಮಿತವಾಗಿರಲಿದ್ದು, ಪುಸ್ತಕ ಸಂತೆಗೆ ಇಂಗ್ಲಿಷ್, ಹಿಂದಿ, ತೆಲುಗು, ತಮಿಳು, ಮಲೆಯಾಳ, ರಾಜಸ್ಥಾನಿ, ಪಂಜಾಬಿ ಮತ್ತು ಬಂಗಾಲಿ ಭಾಷೆಯ ಲೇಖಕರು ಮತ್ತು ಪತ್ರಕರ್ತರನ್ನು ಪ್ರತಿನಿಧಿಗಳಾಗಿ ಆಹ್ವಾನಿಸಲಾಗುವುದು. ನೂರು ಪುಸ್ತಕ ಮಳಿಗೆಗಳಿಗೆ ಅವಕಾಶ ಕಲ್ಪಿಸುವುದರ ಜತೆಗೆ 20ಕ್ಕೂ ಹೆಚ್ಚು ಪುಸ್ತಕಗಳನ್ನು ಬಿಡುಗಡೆ ಮಾಡಲಾಗುವುದು ಎಂದು ವೀರಕಪುತ್ರ ಶ್ರೀನಿವಾಸ ತಿಳಿಸಿದ್ದಾರೆ.

ವಿಚಾರಗೋಷ್ಠಿಗಳು, ನಿತ್ಯ ಸಂಜೆ ಸಂಗೀತ ಮತ್ತು ನಾಟಕ, ಪುಸ್ತಕ ಸಂತೆಯ ಜೊತೆಗೆ ಆಹಾರ, ಮಕ್ಕಳ ಮತ್ತು ಮನರಂಜನಾ ಸಂತೆಯೂ ಇರುತ್ತದೆ. ಪುಸ್ತಕ ಮಳಿಗೆಗಳ ನೋಂದಣಿಗೆ ಅಕ್ಟೋಬರ್ 30 ಕೊನೆ ದಿನ. ಮಾಹಿತಿಗೆ 7022122121 ಸಂಪರ್ಕಿಸಬಹುದು ಅಥವಾ ವೆಬ್‌ಸೈಟ್ ವೀರಲೋಕಬುಕ್ಸ್.ಕಾಮ್‌ಗೆ ಭೇಟಿ ನೀಡಬಹುದು.

ನಗರದಲ್ಲಿ ಇಂದು

ಸಂಸ್ಥಾಪಕರ ದಿನಾಚರಣೆ: ಅತಿಥಿಗಳು: ಸಂಜಯ್ ಕುಮಾರ್, ವೈ.ಎಸ್.ಪಾಟೀಲ, ಜಿ.ಜಗದೀಶ್, ಅಧ್ಯಕ್ಷತೆ: ಸಂಜಯ್ ಕುಮಾರ್ ಸಿಂಗ್, ಆಯೋಜನೆ ಮತ್ತು ಸ್ಥಳ: ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ, ಹೆಸರಘಟ್ಟ, ಬೆಳಿಗ್ಗೆ 10

ರೋಟರಿ ಬೆಂಗಳೂರು ಗಾಲ್ಫ್ ಅಕಾಡೆಮಿಯ ಉದ್ಘಾಟನೆ: ಅತಿಥಿ: ಎಂ.ಕೃಷ್ಣಪ್ಪ, ಆಯೋಜನೆ: ರೋಟರಿ ಕ್ಲಬ್ ಆಫ್ ಬೆಂಗಳೂರು, ಸ್ಥಳ: ಸರ್ಕಾರಿ ಪ್ರೌಢಶಾಲೆ, ಬೇಗೂರು, ಬೆಳಿಗ್ಗೆ 11

'ಭಾವಧಾರೆ' ಭಾವಗೀತೆಗಳ ಗಾಯನ: ಉದ್ಘಾಟನೆ: ವಿ.ಶ್ರೀಶಾನಂದ, ಅತಿಥಿಗಳು: ಎಂ.ನಾಗಪ್ರಸನ್ನ, ಕೆ.ಶಶಿಕಿರಣ್ ಶೆಟ್ಟಿ, ಅಧ್ಯಕ್ಷತೆ: ಪಂಪಾಪತಿ ಗದ್ದಿ, ಆಯೋಜನೆ: ಗಾನಗಂಗಾ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5.30

ಭಜನೆ: ವಾಣಿ ಮತ್ತು ತಂಡ, ಪ್ರವಚನ: ಸುರೇಶಾಚಾರ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಶ್ರೀರಾಮ ಮಂದಿರ, ರಾಜಾಜಿನಗರ, ಸಂಜೆ 6

'ಸಂಗೊಳ್ಳಿ ರಾಯಣ್ಣ' ನಾಟಕ ಪ್ರದರ್ಶನ: ರಚನೆ: ಕವಿತಾಕೃಷ್ಣ, ನಿರ್ದೇಶನ: ಧನ್ವಂತ್ರಿ ಬಿ.ಎ., ಉದ್ಘಾಟನೆ: ಎಚ್.ಎಂ.ರೇವಣ್ಣ, ಅಧ್ಯಕ್ಷತೆ: ಡಿ.ಹನುಮಂತಯ್ಯ, ರಂಗಗೌರವ ಸ್ವೀಕರಿಸುವವರು: ನಾಗಲಕ್ಷ್ಮೀ ಚೌಧರಿ, ಚಿಕ್ಕವೀರಯ್ಯ ಟಿ.ಎನ್., ಅತಿಥಿಗಳು: ಎಚ್. ಶಾಂತರಾಜು, ಜಿ.ವೈ. ಪದ್ಮನಾಗರಾಜು, ಆಯೋಜನೆ: ರಂಗ ಪರಂಪರೆ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ನೀಲಿ ಮಾರ್ಗ: 2ಎ ಕಾಮಗಾರಿ ಅಂತಿಮ ಹಂತಕ್ಕೆ

ಮುಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಆರಂಭಗೊಳ್ಳಲಿದೆ ನಮ್ಮ ಮೆಟ್ರೊ ರೈಲು ಸಂಚಾರ



• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕೇಂದ್ರ ರೇಷ್ಮೆ ಮಂಡಳಿಯಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗದ ಮೊದಲ ಹಂತದ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ರೇಷ್ಮೆ ಮಂಡಳಿಯಿಂದ ಕೆ.ಆರ್. ಪುರವರೆಗೆ 2026ರ ಸೆಪ್ಟೆಂಬರ್ ಒಳಗೆ ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ.

ನಗರವನ್ನು ವಾಹನದಟ್ಟಣೆ ಸಮಸ್ಯೆಯು ಕಾಡುತ್ತಿದೆ. ದಟ್ಟಣೆ ಅವಧಿಯಲ್ಲಿ ತಾಸುಗಟ್ಟಲೆ ರಸ್ತೆಯಲ್ಲೇ ಸಮಯ ಕಳೆದು ಹೋಗುತ್ತದೆ. ಈ ರೀತಿ ವಿಪರೀತ ದಟ್ಟಣೆ ಇರುವ ರಸ್ತೆಗಳಲ್ಲಿ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ರಸ್ತೆಯು ಪ್ರಮುಖವಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಅತಿ ಹೆಚ್ಚು ಪ್ರಯಾಣಿಕರ ಒತ್ತಡ ಇರುವ ದೇಶದ ವಿಮಾನ ನಿಲ್ದಾಣಗಳಲ್ಲಿ ಮೂರನೇ ಸ್ಥಾನದಲ್ಲಿದೆ. 2021-22ರಲ್ಲಿ ಈ ವಿಮಾನ ನಿಲ್ದಾಣದ ಮೂಲಕ 1.63 ಕೋಟಿ ಜನರು ಪ್ರಯಾಣಿಸಿದ್ದರು. ಮೂರೇ ವರ್ಷದಲ್ಲಿ ವಿಮಾನದಲ್ಲಿ ಸಂಚರಿಸುವವರ ಸಂಖ್ಯೆ ಎರಡೂವರೆ ಪಟ್ಟು ಹೆಚ್ಚಾಗಿದೆ. 2024-25ರಲ್ಲಿ 4.2 ಕೋಟಿ ಜನರು ಪ್ರಯಾಣಿಸಿದ್ದಾರೆ. ನಮ್ಮ ಮೆಟ್ರೊ ನೀಲಿ ಮಾರ್ಗ ಪೂರ್ಣಪ್ರಮಾಣದಲ್ಲಿ ಆರಂಭಗೊಂಡರೆ ಶೇ 25ರಷ್ಟು ಜನರು ಮೆಟ್ರೊ ಮೂಲಕವೇ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಸಾಧ್ಯತೆ ಇದೆ.

ಕೇಂದ್ರ ರೇಷ್ಮೆ ಸಂಸ್ಥೆಯಿಂದ (ಸೆಂಟ್ರಲ್ ಸಿಲ್ಕ್ ಬೋರ್ಡ್) ಕೆ.ಆರ್.ಪುರದವರೆಗೆ (ಹಂತ 2ಎ) ಮತ್ತು ಕೆ.ಆರ್. ಪುರದಿಂದ ವಿಮಾನ ನಿಲ್ದಾಣದವರೆಗೆ (ಹಂತ 2ಬಿ) ಎಂದು ನೀಲಿ ಮಾರ್ಗವನ್ನು ಎರಡು ಹಂತವಾಗಿ ವಿಂಗಡಿಸಲಾಗಿತ್ತು. 2021ರ ಆಗಸ್ಟ್‌ನಲ್ಲಿ ಹಂತ 2ಎ ಕಾಮಗಾರಿ ಆರಂಭವಾಗಿತ್ತು. 2022ರ ಫೆಬ್ರುವರಿಯಲ್ಲಿ ಹಂತ 2ಬಿ ಕಾಮಗಾರಿ ಶುರುವಾಗಿತ್ತು.


ಹಂತ 2ಎ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದೆ. ಆದರೆ, ಹಂತ 2ಬಿಯ ಕಾಮಗಾರಿ ಕೆ.ಆರ್. ಪುರದಿಂದ ಹೆಬ್ಬಾಳವರೆಗೆ ಬಹಳ ನಿಧಾನಗತಿಯಲ್ಲಿ ಸಾಗುತ್ತಿದೆ. ಹೆಬ್ಬಾಳದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಮತ್ತೆ ವೇಗವಾಗಿ ನಡೆಯುತ್ತಿದೆ.

ಕೆ.ಆರ್. ಪುರದಿಂದ ಹೆಬ್ಬಾಳದವರೆಗೆ ಹೊರವರ್ತುಲ ರಸ್ತೆಯಲ್ಲಿ ಹೆಚ್ಚು ಮೇಲ್ಸೇತುವೆ ರಸ್ತೆಗಳಿರುವುದರಿಂದ ಕಾಮಗಾರಿ ನಿಧಾನವಾಗಿದೆ. ಮೇಲ್ಸೇತುವೆಗಳನ್ನು ತಪ್ಪಿಸಿಕೊಂಡು ಗರ್ಡರ್ ಅಳವಡಿಸಬೇಕು. ಕ್ರೈನ್ ಹೋಗದ ಜಾಗಗಳಲ್ಲಿ ಬೇರೆ ವ್ಯವಸ್ಥೆಗಳನ್ನು ಮಾಡಬೇಕು. ಪ್ರಮುಖ ಜಂಕ್ಷನ್‌ಗಳಲ್ಲಿ ಕಾಂಪೋಸ್ಡ್ ಗರ್ಡರ್, ವೆಬ್ ಗರ್ಡರ್‌ಗಳನ್ನು ಹಾಕಲಾಗುತ್ತಿದೆ. ಈ ಎಲ್ಲ ಕಾರಣದಿಂದ ನಿಧಾನವಾಗಿದೆ ಎಂದು ನಮ್ಮ ಮೆಟ್ರೊ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ಎಲ್. ಯಶವಂತ್ ಚವಾಣ್ ಮಾಹಿತಿ ನೀಡಿದರು.

'ರೇಷ್ಮೆ ಮಂಡಳಿಯಿಂದ ಕೆ.ಆರ್. ಪುರ ವರೆಗೆ ಮುಂದಿನ ವರ್ಷ ಸೆಪ್ಟೆಂಬರ್‌ನಲ್ಲಿ ಸಂಚಾರ ಆರಂಭಿಸಲಾಗುವುದು. ವಿಮಾನ ನಿಲ್ದಾಣದಿಂದ ಹೆಬ್ಬಾಳವರೆಗೆ 2027ರ ಜೂನ್‌ನಲ್ಲಿ ಆರಂಭವಾಗುವ ನಿರೀಕ್ಷೆ ಇದೆ. ಹೆಬ್ಬಾಳದಿಂದ ಕೆ.ಆರ್. ಪುರ ನಡುವೆ ಅದೇ ವರ್ಷ ಡಿಸೆಂಬರ್ ಒಳಗೆ ಮೆಟ್ರೊ ಸಂಚಾರ ಆರಂಭಿಸಬೇಕು ಎಂಬ ಗುರಿ ಇಟ್ಟುಕೊಂಡಿದ್ದೇವೆ' ಎಂದು ಅವರು ವಿವರಿಸಿದರು.



ದೇವನಹಳ್ಳಿ ವಿಮಾನ ನಿಲ್ದಾಣ ನಗರದಲ್ಲಿ ಕೆಂಪೇಗೌಡ ಪ್ರತಿಮೆಯ ಬಳಿ ನಿರ್ಮಾಣಗೊಳ್ಳುತ್ತಿರುವ ನೀಲಿ ಮಾರ್ಗದ ಮೆಟ್ರೊ ನಿಲ್ದಾಣ



ಜನ ಏನಂತಾರೆ?



ಬೆಂಗಳೂರಿನಲ್ಲಿ ಮೂಲಭೂತ ಸೌಕರ್ಯಗಳು ಬಹಳ ಬೇಗ ಆಗುವುದಿಲ್ಲ. ವಿಮಾನ ನಿಲ್ದಾಣಕ್ಕೆ ಬಹಳ ಬೇಗನೇ ಮೆಟ್ರೊ ಸಂಪರ್ಕ ಆಗಬೇಕಿತ್ತು. 2027ರ ಒಳಗೆ ಆಗಲಿದೆ ಎಂದು ಹೊಸ ವ್ಯವಸ್ಥಾಪಕ ನಿರ್ದೇಶಕರು ಭರವಸೆ ನೀಡಿದ್ದಾರೆ. ಅವರ ಭರವಸೆ ಮತ್ತೆ ಮುಂದಕ್ಕೆ ಹೋಗದೇ ನೀಲಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭವಾಗಬೇಕು.

ಕೆ.ಎನ್. ಕೃಷ್ಣಪ್ರಸಾದ್, ನಿವೃತ್ತ ಸರ್ಕಾರಿ ಅಧಿಕಾರಿ



ಮೆಟ್ರೊ ಬೇಗ ಆದಷ್ಟು ಒಳ್ಳೆಯದು. ನಾಲ್ಕೈದು ವರ್ಷಗಳಿಂದ ಕೆಲಸ ಆಗುತ್ತಿದೆ. ಆದರೆ, ಪೂರ್ಣಗೊಂಡಿಲ್ಲ. ಸಂಚಾರ ದಟ್ಟಣೆ ಇರುವುದರಿಂದ ಓಡಾಡಲು ಸಮಸ್ಯೆಯಾಗಿದೆ. ಇನ್ನೊಂದು ಕಡೆಯಿಂದ ಮೆಟ್ರೊ ಕಾಮಗಾರಿ ನಡೆಸುವಾಗ ಉಂಟಾಗುವ ಸದ್ದು ಸ್ಥಳೀಯ ನಿವಾಸಿಗಳ ನಿದ್ದೆಯನ್ನು ಕೆಡಿಸುತ್ತಿದೆ. ದೂಳು ಆರೋಗ್ಯ ಮೇಲೆ ಪರಿಣಾಮ ಬೀರುತ್ತಿದೆ. ಹಾಗಾಗಿ ಮೆಟ್ರೊ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಿ ಸಂಚಾರ ಆರಂಭಿಸಿದರೆ ಸಾರ್ವಜನಿಕರಿಗೆ ಉಪಯೋಗವಾಗಲಿದೆ.

ಅನಿಲ್, ಹೋಟೆಲ್ ಉದ್ಯಮಿ, ಬಾಬುಸಾಬ್ ಪಾಳ್ಯ



ಸಂಪರ್ಕ ವ್ಯವಸ್ಥೆ ಸರಿಯಾಗಿ ಇಲ್ಲದ ಪ್ರದೇಶದಲ್ಲಿ ನೀಲಿ ಮಾರ್ಗ ಬರುತ್ತಿದೆ. ಈಗ ವಾಹನ ದಟ್ಟಣೆಯಲ್ಲಿ ಕಾಲ ಕಳೆದು ಹೋಗುತ್ತಿದೆ. ಇಲ್ಲಿ ಮೆಟ್ರೊ ಸಂಚಾರ ಆಂಭಗೊಂಡರೆ ನಮ್ಮ ಸಮಯ ಉಳಿಯಲಿದೆ. ವಾಹನಗಳಿಂದ ಉಂಟಾಗುವ ಮಾಲಿನ್ಯ ಕಡಿಮೆಯಾಗಲಿದೆ.

ಅನುಮೋಲ್, ಖಾಸಗಿ ಕಂಪನಿ ಉದ್ಯೋಗಿ, ನಾಗವಾರ ಕ್ರಾಸ್

50 ಕಿ.ಮೀ ವೇಗದ ಸಂಚಾರ

ನೀಲಿ ಮಾರ್ಗದಲ್ಲಿ ಸಂಚರಿಸಲಿರುವ ಮೆಟ್ರೊ ರೈಲುಗಳ ಸರಾಸರಿ ವಾಣಿಜ್ಯ ವೇಗ ಗಂಟೆಗೆ 50 ಕಿ.ಮೀ. ಇರಲಿದೆ.

ಪ್ರಸ್ತುತ ನಮ್ಮ ಮೆಟ್ರೊದ ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ ರೈಲುಗಳು ಗಂಟೆಗೆ 34 ಕಿ.ಮೀ. ವೇಗದಲ್ಲಿ ಚಲಿಸುತ್ತಿವೆ. ಸೋಮವಾರ ಆರಂಭವಾಗಿರುವ ಹಳದಿ ಮಾರ್ಗ, ನಿರ್ಮಾಣ ಹಂತದಲ್ಲಿ ಇರುವ ಗುಲಾಬಿ ಮಾರ್ಗದ ಸರಾಸರಿ ವೇಗ ಇಷ್ಟೇ ಇರಲಿದೆ.

ವಿಮಾನ ನಿಲ್ದಾಣಕ್ಕೆ ಹೋಗುವವರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಮೆಟ್ರೊಗಳ 'ಸರಾಸರಿ ವಾಣಿಜ್ಯ ವೇಗ' (ಆವರೇಜ್ ಕರ್ಮಿಷಿಯಲ್ ಸ್ಪೀಡ್) ಹೆಚ್ಚು ಮಾಡಲಾಗಿದೆ. ಹೆಬ್ಬಾಳದಿಂದ ವಿಮಾನ ನಿಲ್ದಾಣದವರೆಗೆ ಮೆಟ್ರೊ ನಿಲ್ದಾಣಗಳ ಸಂಖ್ಯೆ ಕೂಡ ಅದೇ ಕಾರಣಕ್ಕೆ ಕಡಿಮೆ ಇರುವಂತೆ ಯೋಜನೆ ರೂಪಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕುಲಪತಿಯಾಗಿ ರಮೇಶ್ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಪ್ರೊ.ಬಿ.ರಮೇಶ್ ಅವರು ಸೋಮವಾರ ಅಧಿಕಾರ ವಹಿಸಿಕೊಂಡರು.

ವಿಶ್ವವಿದ್ಯಾಲಯದ ಕುಲಾಧಿಪತಿಯೂ ಆದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ನೂತನ ಕುಲಪತಿಯನ್ನು ನೇಮಕ ಮಾಡಿ ಆದೇಶ ಹೊರಡಿಸಿದ ಬೆನ್ನಲ್ಲೇ ಪ್ರಭಾರ ಕುಲಪತಿ ಪ್ರೊ. ಕೆ.ಆರ್.ಜಲಜಾ ಅವರು ರಮೇಶ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ತುಮಕೂರು ವಿಶ್ವವಿದ್ಯಾಲಯದ ಸಮಾಜ ಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ರಮೇಶ್ ಅವರು, ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು.



ಬೆಂಗಳೂರು ನಗರ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಅಧಿಕಾರ ವಹಿಸಿಕೊಂಡ ಪ್ರೊ.ಬಿ.ರಮೇಶ ಅವರನ್ನು ಪ್ರಭಾರ ಕುಲಪತಿಯಾಗಿದ್ದ ಪ್ರೊ.ಕೆ.ಆರ್.ಜಲಜಾ ಅಭಿನಂದಿಸಿದರು

ಈ ಸಂದರ್ಭದಲ್ಲಿ ಕುಲಸಚಿವ ಎ. ನವೀನ್ ಜೋಸೆಫ್, ವಿತ್ತಾಧಿಕಾರಿ ಎಂ.ವಿ. ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರು, ಡೀನ್‌ಗಳು, ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ಹಾಜರಿದ್ದು ಶುಭ ಕೋರಿದರು.

ಟಿಕೆಟ್ ದರ: ನಿಲುವು ತಿಳಿಸಿ ಬಿಎಂಆರ್‌ಸಿಎಲ್‌ಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಬೆಂಗಳೂರು ಮೆಟ್ರೊ ರೈಲಿನ ಟಿಕೆಟ್ ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ತಾರಿಣಿ ಅವರ ನೇತೃತ್ವದ ಮೆಟ್ರೊ ರೈಲು ದರ ನಿಗದಿ ಸಮಿತಿ ಸಲ್ಲಿಸಿರುವ ವರದಿಯನ್ನು ಸಾರ್ವಜನಿಕಗೊಳಿಸುವ ಬಗ್ಗೆ ನಿಮ್ಮ ನಿಲುವು ಏನೆಂಬುದನ್ನು ತಿಳಿಸಿ' ಎಂದು ಹೈಕೋರ್ಟ್, ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ (ಬಿಎಂಆರ್‌ಸಿಎಲ್) ಹೈಕೋರ್ಟ್ ನಿರ್ದೇಶಿಸಿದೆ.

'ವರದಿ ಸಾರ್ವಜನಿಕಗೊಳಿಸಬೇಕು' ಎಂದು ಕೋರಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ತೇಜಸ್ವಿ ಪರ ಹೈಕೋರ್ಟ್ ವಕೀಲ ಅನಿರುದ್ಧ ಎ.ಕುಲಕರ್ಣಿ, 'ಅರ್ಜಿಗೆ ಸಂಬಂಧಿಸಿದಂತೆ ಬಿಎಂಆರ್‌ಸಿಎಲ್ ಆಕ್ಷೇಪಣೆ ಸಲ್ಲಿಸಿದೆ. ದರ ನಿಗದಿ ಸಮಿತಿ ವರದಿಯನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಜುಲೈನಲ್ಲಿ ರಾಜ್ಯ ಸರ್ಕಾರವು ತನಗೆ ಅನುಮತಿ ನೀಡಿದೆ ಎಂಬುದಾಗಿ ಆಕ್ಷೇಪಣೆಯಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಇನ್ನೂ ವೆಬ್ ಸೈಟ್‌ನಲ್ಲಿ ವರದಿ ಪ್ರಕಟಿಸಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ನ್ಯಾಯಪೀಠ, 'ನ್ಯಾಯಮೂರ್ತಿ ತಾರಿಣಿ ನೇತೃತ್ವದ ದರ ನಿಗದಿ ಸಮಿತಿಯ ವರದಿಯನ್ನು ಬಹಿರಂಗಪಡಿಸುವ ಕುರಿತಂತೆ ನಿಲುವು ಏನೆಂಬುದನ್ನು ತಿಳಿಸಿ' ಎಂದು ಬಿಎಂಆರ್‌ಸಿಎಲ್ ಪರ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿತು.

'ಕಾಳಿಂಗ ಮನೆ'ಯಿಂದ ಸರ್ಪಗಳ ಶೋಷಣೆ: ಸಚಿವ ಖಂಡ್ರೆಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಗುಂಬೆ ಸಮೀಪದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಕಾಳಿಂಗ ಸೆಂಟರ್ ಫಾರ್ ರೈನ್ ಫಾರೆಸ್ಟ್ ಇಕಾಲಜಿ ಸಂಸ್ಥೆ ಕಾಳಿಂಗ ಸರ್ಪದ ಸಂಶೋಧನೆ ಹೆಸರಿನಲ್ಲಿ ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುತ್ತಿದೆ' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಪತ್ರ ಬರೆದಿದೆ.

ಅಕ್ರಮವಾಗಿ ಕಾಡು ಪ್ರವೇಶ, ಛಾಯಾಗ್ರಹಣ, ವಿಡಿಯೊ ಚಿತ್ರೀಕರಣ, ಕಾಳಿಂಗ ಸರ್ಪದ ಮೊಟ್ಟೆಗಳನ್ನು ಕೃತಕವಾಗಿ ಮರಿ ಮಾಡುವುದು, ನಿಯಮ ಬಾಹಿರವಾಗಿ ಹರ್ಪ್ ಟೂರ್, ನೈಟ್ ಟ್ರೈಲ್, ಟ್ರಕ್ಕಿಂಗ್‌ಗಳನ್ನು ನಡೆಸಲಾಗುತ್ತಿದೆ. ಸಂಸ್ಥೆಯ ಮುಖ್ಯಸ್ಥ ಸಂಶೋಧಕ ಗೌರಿಶಂಕರ್ ಅವರು ಕಾಳಿಂಗ ಸರ್ಪದ ಸಂಶೋಧನೆ ನೆಪದಲ್ಲಿ ಆರ್ಥಿಕ ಚಟುವಟಿಕೆ ನಡೆಸುತ್ತಿದ್ದಾರೆ. ಕಾಳಿಂಗ ಮನೆ, ಕಾಳಿಂಗ ಕೇರ್ ಹೆಸರಿನಲ್ಲೂ ಕಾಳಿಂಗ ಸರ್ಪಗಳ ಶೋಷಣೆ ನಡೆದಿದೆ ಎಂದು ರಾಜ್ಯ ಉಪಾಧ್ಯಕ್ಷ ಜ್ಞಾನ ಸಿಂಧೂಸ್ವಾಮಿ ಆರೋಪಿಸಿದ್ದಾರೆ.

ಕಾಳಿಂಗ ಸರ್ಪ ಸಂರಕ್ಷಣೆ ಬಗ್ಗೆ ತರಬೇತಿ ನೀಡುವುದಾಗಿ 'ಕಿಂಗ್ ಕೋಬ್ರಾ ಬಯೊನಾಮಿಕ್ಸ್ ಅಂಡ್ ಕನ್ಸರ್ವೇಷನ್' ಕಾರ್ಯಾಗಾರ ನಡೆಸಲಾಗುತ್ತಿದೆ. ಅಲ್ಲಿ ಪ್ರತಿ ವ್ಯಕ್ತಿಗೆ ಸುಮಾರು ₹16,069 ಶುಲ್ಕ ವಿಧಿಸಲಾಗುತ್ತಿದೆ. ಖಾಸಗಿ ವ್ಯಕ್ತಿಗಳು ಈ ರೀತಿಯ ಚಟುವಟಿಕೆ ನಡೆಸಲು ಕಾನೂನಿನಲ್ಲಿ ಅವಕಾಶವೇ ಇಲ್ಲ. ಇಂತಹ ಕಾರ್ಯಾಗಾರದಲ್ಲಿ ಕಾಳಿಂಗ ಸರ್ಪಗಳನ್ನು ಹಿಡಿಯುವುದು, ಸ್ಪರ್ಶಿಸುವುದು, ಗೂಡಿನಲ್ಲಿ ಮೊಟ್ಟೆಗಳನ್ನು ಮುಟ್ಟುವುದು, ಆ ಮೊಟ್ಟೆಗಳನ್ನು ಸ್ಥಳಾಂತರಿಸುವ ಕಾರ್ಯ ನಡೆದಿದೆ. ಇದು ವನ್ಯಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ಇದು ಶಿಕ್ಷಾರ್ಹ ಅಪರಾಧ ಎಂದಿದ್ದಾರೆ.

ಬೆಳ್ಳಂದೂರು– ವರ್ತೂರು ಕೆರೆ ನಡುವೆ ರಸ್ತೆ

ರಾಜಕಾಲುವೆ ಬಫರ್ ವಲಯದಲ್ಲಿ ಸರ್ವಿಸ್ ರಸ್ತೆ ನಿರ್ಮಾಣಕ್ಕೆ ₹22.75 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ಕೆರೆ – ವರ್ತೂರು ಕೆರೆ ನಡುವಿನ ರಾಜಕಾಲುವೆಗಳ ಬಫರ್ ವಲಯದಲ್ಲಿ ಸರ್ವಿಸ್ ರಸ್ತೆಯನ್ನು ಆರು ತಿಂಗಳಲ್ಲಿ ನಿರ್ಮಿಸಲು 'ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆ' (ಬಿ-ಸ್ಮೈಲ್) ಮುಂದಾಗಿದೆ.

ರಾಜಕಾಲುವೆಗಳ ಬಫರ್ ವಲಯದಲ್ಲಿ ಸರ್ವಿಸ್ ರಸ್ತೆ ನಿರ್ಮಿಸುವ ಎರಡನೇ ಹಂತದ ಯೋಜನೆಗೆ ಬಿ-ಸ್ಮೈಲ್ ಚಾಲನೆ ನೀಡಿದ್ದು, 18.23 ಕಿ.ಮೀ ರಸ್ತೆಯನ್ನು ₹22.75 ಕೋಟಿ ವೆಚ್ಚದಲ್ಲಿ ನಿರ್ಮಿಸಲಿದೆ.


ಬೆಳ್ಳಂದೂರು ಕೆರೆ ಕೋಡಿಯಿಂದ ಹಳೆ ವಿಮಾನ ನಿಲ್ದಾಣದ ವರ್ಜಿನಿಯಾ ಮಾಲ್‌ವರೆಗೆ ಸರ್ವಿಸ್ ರಸ್ತೆ ನಿರ್ಮಾಣ ಸೇರಿದಂತೆ ರಾಜಕಾಲುವೆ ರಕ್ಷಣೆ, ಅಭಿವೃದ್ಧಿಯ ಕಾಮಗಾರಿಯನ್ನೂ ನಡೆಸಲಾಗುತ್ತದೆ. ಇದಕ್ಕಾಗಿ ಬಿ-ಸ್ಮೈಲ್ ಟೆಂಡರ್ ಕರೆದಿದ್ದು, ಅಕ್ಟೋಬರ್‌ನಲ್ಲಿ ಪ್ರಕ್ರಿಯೆ ಮುಗಿಸಿ, ಆರು ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಸರ್ವಿಸ್ ರಸ್ತೆ: ಪ್ರೆಸ್ಟೀಜ್ ಬೀಟಾ ಟೆಕ್ ಪಾರ್ಕ್‌ನಿಂದ ಕರಿಯಮ್ಮನ ಅಗ್ರಹಾರ ರಸ್ತೆ, ಕರಿಯಮ್ಮನ ಅಗ್ರಹಾರ ರಸ್ತೆಯಿಂದ ಪ್ರೆಸ್ಟೀಜ್ ಪಾರ್ಕ್ ಎಲಾನ್ತ್ ಬ್ಲಾಕ್ (ಎರಡೂ ಕಡೆ), ಒಳಹರಿವು ಕಾಲುವೆ ಪಕ್ಕ, ಪ್ರೆಸ್ಟೀಜ್ ಪಾರ್ಕ್ ಎಲಾನ್ತ್‌ನಿಂದ 100 ಅಡಿ ವರ್ತುಲ ರಸ್ತೆ (ಎರಡೂ ಕಡೆ), 100 ಅಡಿ ವರ್ತುಲ ರಸ್ತೆಯಿಂದ ರೈಲ್ವೆ ಬ್ರಿಡ್ಜ್ (ಎರಡೂ ಕಡೆ) ಹಾಗೂ ರೈಲ್ವೆ ಬ್ರಿಡ್ಜ್‌ನಿಂದ ವಿಬ್‌ಗಯಾರ್ ಪ್ರೌಢ ಶಾಲೆ ರಸ್ತೆವರೆಗೆ (ಎರಡೂ ಬದಿ) ರಾಜಕಾಲುವೆ ಬಫರ್ ವಲಯದಲ್ಲಿ ಸರ್ವಿಸ್ ರಸ್ತೆ ನಿರ್ಮಾಣವಾಗಲಿದೆ.

ರಾಜಕಾಲುವೆ ಬಫರ್ ವಲಯದಲ್ಲಿ ಸರ್ವಿಸ್ ರಸ್ತೆ ನಿರ್ಮಾಣ ಮಾಡುವಾಗ ಪರಿಸರಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆಯಾಗದಂತೆ ಕಾಮಗಾರಿ ನಡೆಸಬೇಕು. ಮಾಲಿನ್ಯ, ಶಬ್ದ ಸೇರಿದಂತೆ ಇತರೆ ಸಮಸ್ಯೆಗಳೂ ಉಂಟಾಗಬಾರದು. ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಇತರೆ ಪ್ರಾಧಿಕಾರಗಳ ಎಲ್ಲ ನಿಯಮಗಳನ್ನೂ ಪಾಲಿಸಬೇಕು ಎಂಬ ಷರತ್ತು ವಿಧಿಸಲಾಗಿದೆ.

ಮೊದಲ ಹಂತ: ಮೈಸೂರು ರಸ್ತೆ, ಹೊರವರ್ತುಲ ರಸ್ತೆ ಹಾಗೂ ಬಳ್ಳಾರಿ ರಸ್ತೆ, ನಾಗವಾರ ರಸ್ತೆಗಳ ಸುತ್ತಮುತ್ತಲಿನ ರಾಜಕಾಲುವೆಗಳ ಬಫರ್ ವಲಯದಲ್ಲಿ ಮೊದಲ ಹಂತದಲ್ಲಿ ಸುಮಾರು 42 ಕಿ.ಮೀ ರಸ್ತೆಯನ್ನು ನಿರ್ಮಿಸಲಾಗುತ್ತಿದೆ. ಇದಕ್ಕಾಗಿ ಬಿ-ಸ್ಮೈಲ್ ಸದ್ಯದಲ್ಲಿಯೇ ಕಾರ್ಯಾದೇಶ ನೀಡಲಿದೆ.

ಮೊದಲ ಹಂತದಲ್ಲಿ ₹75 ಕೋಟಿ ವೆಚ್ಚದಲ್ಲಿ ನಾಲ್ಕು ಪ್ಯಾಕೇಜ್‌ಗಳಲ್ಲಿ 42 ಕಿ.ಮೀ ಸರ್ವಿಸ್ ರಸ್ತೆಯನ್ನು ಆರು ತಿಂಗಳಲ್ಲಿ ನಿರ್ಮಿಸುವ ಗುರಿ ಹೊಂದಲಾಗಿದೆ. ರಾಜಕಾಲುವೆಯ ಅಳತೆಗೆ ಅನುಗುಣವಾಗಿ ಸರ್ವಿಸ್ ರಸ್ತೆಯ ಅಗಲ ನಿರ್ಧಾರವಾಗಲಿದೆ. ಕನಿಷ್ಠ 30 ಅಡಿಯಿಂದ ಗರಿಷ್ಠ 80 ಅಡಿ ಅಗಲದವರೆಗೆ ಸರ್ವಿಸ್ ರಸ್ತೆಗೆ ಜಾಗ ಸಿಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಶಿಲ್ಪ ಸಮಾಗಮ ಮೇಳ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಟಿಯುಎಲ್‌ಐಪಿ ಸಹಯೋಗದೊಂದಿಗೆ 'ಶಿಲ್ಪ ಸಮಾಗಮ ಮೇಳ-2025' ಆರಂಭಿಸಿದ್ದು, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಇದೇ 14ರವರೆಗೆ ನಡೆಯಲಿದೆ.

ವಿವಿಧ ರಾಜ್ಯಗಳ ಕುಶಲಕರ್ಮಿಗಳು ತಯಾರಿಸಿದ ಗೃಹೋಪಯೋಗಿ, ಅಲಂಕಾರಿಕ ಮತ್ತು ಇತರೆ ದೇಶೀಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಇದೆ. ಕರಕುಶಲ ವಸ್ತುಗಳ 75 ಮಳಿಗೆಗಳನ್ನು ತೆರೆಯಲಾಗಿದೆ. ಮರದ ಕಲಾಕೃತಿಗಳು, ಬೆತ್ತ, ಬಿದುರಿನ ಉತ್ಪನ್ನಗಳು, ಕುಂಬಾರಿಕೆ, ಜವಳಿ ಉತ್ಪನ್ನಗಳನ್ನು ಪ್ರದರ್ಶನದಲ್ಲಿ ಇಡಲಾಗಿದೆ. ಮೇಳದಲ್ಲಿ ಸಂಜೆ ಜಾನಪದ ನೃತ್ಯಗಳು, ಸಾಂಪ್ರದಾಯಿಕ ಸಂಗೀತ ಮತ್ತು ಕಥೆ ಹೇಳುವ ಕಾರ್ಯಕ್ರಮಗಳು ಇರುತ್ತವೆ.

ಕೇಂದ್ರ ಸಾಮಾಜಿಕ ಮತ್ತು ಸಬಲೀಕರಣ ಸಚಿವ ವೀರೇಂದ್ರ ಪ್ರಸಾದ್ ಅವರು ಮೇಳ ಉದ್ಘಾಟಿಸಿದರು. ರಾಜ್ಯ ಖಾತೆ ಸಚಿವ ರಾಮದಾಸ್ ಅಠಾವಳೆ, ಸಂಸತ್ ಸದಸ್ಯ ಪಿ.ಸಿ.ಮೋಹನ್ ಮತ್ತು ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಅಪಘಾತ: ಶಿಕ್ಷೆ ಪ್ರಮಾಣ ಶೇಕಡ 7

ನಾಲ್ಕೂವರೆ ವರ್ಷಗಳಲ್ಲಿ 3 ಸಾವಿರಕ್ಕೂ ಹೆಚ್ಚು ಗಂಭೀರ ಅಪಘಾತ ಪ್ರಕರಣ

• ಕೆ.ಎಸ್.ಸುನಿಲ್

ಬೆಂಗಳೂರು: ನಗರದಲ್ಲಿ ಕಳೆದ ನಾಲ್ಕೂವರೆ ವರ್ಷಗಳಲ್ಲಿ 3 ಸಾವಿರಕ್ಕೂ ಅಧಿಕ ಗಂಭೀರ ಅಪಘಾತ ಪ್ರಕರಣಗಳು ವರದಿಯಾಗಿವೆ. ಆದರೆ, ಈ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಶೇಕಡ 7ರಷ್ಟಕ್ಕೆ ಸೀಮಿತವಾಗಿದೆ.

ನಗರದಲ್ಲಿ ನಿತ್ಯ ಸರಾಸರಿ 2,300 ಹೊಸ ವಾಹನಗಳು ರಸ್ತೆಗೆ ಇಳಿಯುತ್ತಿವೆ. ಹೀಗಾಗಿ ವಾಹನಗಳ ಸಂಖ್ಯೆಯು 1.25 ಕೋಟಿಯ ಗಡಿ ದಾಟಿದೆ. ಈ ಪೈಕಿ ಶೇಕಡ 72ರಷ್ಟು ದ್ವಿಚಕ್ರ ವಾಹನಗಳಿವೆ. ನಿತ್ಯ ಸರಾಸರಿ 11 ಅಪಘಾತ ಪ್ರಕರಣ ವರದಿಯಾಗುತ್ತಿವೆ.



ಗಂಭೀರ ಅಪಘಾತಗಳಲ್ಲಿ ತಪ್ಪಿತಸ್ಥರಿಗೆಶಿಕ್ಷೆಯ ಪ್ರಮಾಣ ಕಡಿಮೆ ಆಗುತ್ತಿರುವುದಕ್ಕೆ ಹಲವು ಕಾರಣಗಳನ್ನು ತಜ್ಞರು ತಿಳಿಸಿದ್ದಾರೆ. ಗುಣಮಟ್ಟವಲ್ಲದ ತನಿಖೆ, ಪ್ರತ್ಯಕ್ಷದರ್ಶಿಗಳ ಕೊರತೆ, ನ್ಯಾಯಾಲಯದ ಹೊರಗೆ ಪ್ರಕರಣಗಳನ್ನು ಇತ್ಯರ್ಥ ಮಾಡಿಕೊಳ್ಳುತ್ತಿರುವುದು ಹಾಗೂ ಅಪಘಾತ ಸಂಭವಿಸಿದಾಗ ಎರಡೂ ಕಡೆಯವರು ರಾಜಿ ಮಾಡಿಕೊಳ್ಳುತ್ತಿದ್ದಾರೆ.

2021ರಿಂದ 2025ರವರೆಗಿನ (ಜೂನ್) ಅಂಕಿ ಅಂಶಗಳ ಪ್ರಕಾರ, ಒಟ್ಟು 3,536 ಗಂಭೀರ ಅಪಘಾತಗಳು ಮತ್ತು 15,349 ಸಣ್ಣ ಪ್ರಮಾಣದ ಅಪಘಾತ ಪ್ರಕರಣಗಳು ವರದಿಯಾಗಿವೆ. ಈ ಪೈಕಿ 250 ಗಂಭೀರ ಅಪಘಾತ ಪ್ರಕರಣ ಮತ್ತು 9,811 ಸಣ್ಣ ಅಪಘಾತ ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ.

'ಗಂಭೀರ ಅಪಘಾತ ಪ್ರಕರಣಗಳಲ್ಲಿ ಶೇಕಡ 70ರಷ್ಟು ಆರೋಪಿ ಮತ್ತು ಸಂತ್ರಸ್ತ ಕುಟುಂಬದ ನಡುವೆ ನ್ಯಾಯಾಲಯದ ಹೊರಗೆ ರಾಜಿ ಮಾಡಿಕೊಳ್ಳಲಾಗುತ್ತದೆ. ಇದರಿಂದ ಶಿಕ್ಷೆಯ ಪ್ರಮಾಣ ಕಡಿಮೆ ಆಗುತ್ತದೆ. ಬಹುತೇಕರು ಪ್ರಕರಣಗಳನ್ನು ನ್ಯಾಯಾಲಯದ ಹೊರಗೆ ಇತ್ಯರ್ಥ ಮಾಡಿಕೊಳ್ಳಲು ಬಯಸುತ್ತಾರೆ. ದೀರ್ಘ ಕಾನೂನು ಹೋರಾಟ ಹಾಗೂ ಕಚೇರಿಗೆ ಅಲೆದಾಡುವುದನ್ನು ತಪ್ಪಿಸುವ ಉದ್ದೇಶದಿಂದ ಈ ರೀತಿಯ ನಿರ್ಧಾರ ಕೈಗೊಳ್ಳುತ್ತಾರೆ.



ನಗರದಲ್ಲಿ ಇತ್ತೀಚೆಗೆ ಸಂಭವಿಸಿದ ಅಪಘಾತದಲ್ಲಿ ಜಖಂಗೊಂಡಿದ್ದ ಆಟೊ

ಹಾಗಾಗಿ, ಆರೋಪಿಗಳು ಶಿಕ್ಷೆಯಿಂದ ಪಾರಾಗುತ್ತಿದ್ದಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ತನಿಖೆಯ ಬಳಿಕ ಪ್ರಕರಣಗಳ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತದೆ. ಕೆಲವೊಮ್ಮೆ ಸಂತ್ರಸ್ತ ವ್ಯಕ್ತಿಯ ವಯಸ್ಸು ಮತ್ತು ವೃತ್ತಿಯನ್ನು ಆಧರಿಸಿ ವಿಮಾ ಕಂಪನಿಗಳು ಹೆಚ್ಚಿನ ಪರಿಹಾರ ನೀಡಿರುವ ಉದಾಹರಣೆ ಇದೆ. ಸಾಮಾನ್ಯವಾಗಿ ವರ್ಷದೊಳಗೆ ಪ್ರಕರಣ ಇತ್ಯರ್ಥಪಡಿಸಲಾಗುತ್ತದೆ' ಎಂದು ಹೇಳಿದರು.

'ಅಪಘಾತ ಪ್ರಕರಣಗಳಲ್ಲಿ ವಿಚಾರಣೆಯ ವಿಳಂಬದಿಂದಾಗಿ ಸಂತ್ರಸ್ತರು ಹಾಗೂ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಯಾಗಿ ಬದಲಾಗುತ್ತಾರೆ. ವಿಚಾರಣೆಯು ಹಲವು ವರ್ಷಗಳವರೆಗೆ ನಡೆದರೆ, ಕುಟುಂಬಗಳು ಪ್ರಕರಣವನ್ನು ಮುಂದುವರಿಸಲು ಆಸಕ್ತಿವಹಿಸುವುದಿಲ್ಲ. ಬದಲಾಗಿ ನ್ಯಾಯಾಲಯದ ಹೊರಗೆ ಇತ್ಯರ್ಥಕ್ಕೆ ಒಪ್ಪಿಕೊಳ್ಳುತ್ತಾರೆ. ಹಲವು ಬಾರಿ ಆರೋಪಿಗಳಿಗೆ ಠಾಣಾ ಹಂತದಲ್ಲೇ ಜಾಮೀನು ನೀಡಲಾಗುತ್ತದೆ' ಎಂದರು.

ವರ್ಷ	2021	2022	2023	2024	2025
ಗಂಭೀರ ಅಪಘಾತಗಳು	651	735	877	877	396
ಶಿಕ್ಷೆ	72	66	63	45	4
ಖುಲಾಸೆ	163	131	92	21	0
ವರ್ಷ	2021	2022	2023	2024	2025
ಸಣ್ಣ ಪ್ರಮಾಣ ಅಪಘಾತಗಳು	2488	3065	4014	3896	1886
ಶಿಕ್ಷೆ	2010	2324	2847	2332	298
ಖುಲಾಸೆ	80	56	43	20	0

'ಎಲ್ಲಾ ಆಯಾಮದಿಂದ ತನಿಖೆ ನಡೆಸಿ'

'ಅಪಘಾತ ಸಂಭವಿಸಿದಾಗ ಪೊಲೀಸರು ಎಲ್ಲಾ ಆಯಾಮದಿಂದಲೂ ತನಿಖೆ ನಡೆಸಬೇಕು. ಉದ್ದೇಶಪೂರ್ವಕವಾಗಿ ಅಪಘಾತ ಮಾಡಲಾಗಿದೆಯೇ, ಆಕಸ್ಮಿಕವಾಗಿ ಆಗಿದೆಯೇ? ಯಾವ ಕಾರಣಕ್ಕೆ ಎಂಬುದನ್ನು ಪರಿಶೀಲಿಸಬೇಕು. ಅವೈಜ್ಞಾನಿಕ ರಸ್ತೆ, ಚಾಲಕನ ನಿರ್ಲಕ್ಷ್ಯ, ವಾಹನದ ಬ್ರೇಕ್ ಫೇಲ್‌ನಿಂದ ಅಪಘಾತ ಸಂಭವಿಸಿರುವ ಉದಾಹರಣೆಗಳು ಇವೆ. ಕೆಲವೊಮ್ಮೆ ರಸ್ತೆಗೆ ಅಡ್ಡವಾಗಿ ಬಂದ ಪ್ರಾಣಿ ಹಾಗೂ ಮನುಷ್ಯರನ್ನು ರಕ್ಷಿಸಲು ಹೋಗಿ ವಾಹನಗಳು ಅಪಘಾತಕ್ಕೀಡಾಗಿವೆ. ದ್ವೇಷ, ಹಣ ಮತ್ತು ಆಸ್ತಿಗಾಗಿಯೂ ಅಪಘಾತ ಮಾಡಿ ವ್ಯಕ್ತಿಯನ್ನು ಸಾಯಿಸಲಾಗುತ್ತದೆ' ಎಂದು ಮೂಲ ಸೌಕರ್ಯ ತಜ್ಞ ಪ್ರೊ.ಎಂ.ಎನ್.ಶ್ರೀಹರಿ 'ಪ್ರಜಾವಾಣಿ'ಗೆ ತಿಳಿಸಿದರು.

'ಅಪಘಾತದ ಸ್ಥಳದಲ್ಲಿ ದೊರೆತ ಸಾಕ್ಷ್ಯಗಳನ್ನು ಪೊಲೀಸರು ಸಂಗ್ರಹಿಸಿ, ತಜ್ಞರ ಜತೆ ಸಮಾಲೋಚನೆ ನಡೆಸಬೇಕು. ಘಟನೆ ಸಂದರ್ಭದಲ್ಲಿ ಪೊಲೀಸರಿಗೆ ಹೇಳಿಕೆ ನೀಡುವ ಸಾಕ್ಷಿ, ವಿಚಾರಣೆ ಸಂದರ್ಭದಲ್ಲಿ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಾರೆ. ಹಾಗಾಗಿ ಗಂಭೀರ ಅಪಘಾತ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗುವುದು ಕಡಿಮೆ ಆಗುತ್ತಿದೆ' ಎಂದರು.

ಚಟಿಕೆ ಸುದ್ದಿ

ಜಲಮೂಲಗಳ ಪುನಶ್ಚೇತನ ಕಾರ್ಯಕ್ರಮ ನಾಳೆ

ಬೆಂಗಳೂರು: ಸಂಪೂರ್ಣ ಸಂಘ ಮತ್ತು ತೇರಾಪಂತ್ ಮಹಿಳಾ ಮಂಡಲದಿಂದ ಇದೇ 10ರಂದು ವಿಜಯನಗರದ ಅರ್ಹಂ ಭವನದಲ್ಲಿ ಜಲಸಂರಕ್ಷಣೆ ಮತ್ತು ಜಲಮೂಲಗಳ ಪುನಶ್ಚೇತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಪೂರ್ಣ ಸಂಘದ ರಾಷ್ಟ್ರೀಯ ಅಧ್ಯಕ್ಷೆ ಶೋಭಾ ವಿಜಯೇಂದ್ರ ಸಿಂಗ್, 'ಕಾರ್ಯಕ್ರಮದಲ್ಲಿ ಜಲ ಮೂಲಗಳ ಸಂರಕ್ಷಣೆಯ ಕುರಿತು ಸಂವಾದಗಳು ನಡೆಯಲಿವೆ. ಜಲ ಸಂರಕ್ಷಣೆ ಮಾಡುವ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ' ಎಂದು ಹೇಳಿದರು.

ಮಂಜುನಾಥ ಪ್ರಭುಗೆ 'ಸಾರ್ಥಕ ಸಾಧಕ' ಪ್ರಶಸ್ತಿ

ಬೆಂಗಳೂರು: ಯಕ್ಷಗಾನ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡಲಾಗುವ 'ಸಾರ್ಥಕ ಸಾಧಕ' ಪ್ರಶಸ್ತಿಗೆ ಚೇರ್ಕಾಡಿ ಮಂಜುನಾಥ ಪ್ರಭು ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಯಕ್ಷ ಸಿಂಚನ ಟ್ರಸ್ಟ್ ತಿಳಿಸಿದೆ.



ಮಂಜುನಾಥ ಪ್ರಭು

ಯಕ್ಷಗಾನದಲ್ಲಿ ನಾಲ್ಕು ದಶಕಗಳ ಕಾಲ ವಿಶಿಷ್ಟ ಸೇವೆ ಸಲ್ಲಿಸಿರುವ ಚೇರ್ಕಾಡಿ ಮಂಜುನಾಥ ಪ್ರಭು ಅವರಿಗೆ ಸೆಪ್ಟೆಂಬರ್ 21ರಂದು ಬೆಂಗಳೂರಿನ ಬಿ.ಪಿ. ವಾಡಿಯಾ ಸಭಾಂಗಣದಲ್ಲಿ ನಡೆಯುವ ಯಕ್ಷಸಿಂಚನದ 16ನೇ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಮತ್ತು ರಾಮನಗರ ಸ್ನಾತಕೋತ್ತರ ಕೇಂದ್ರದಲ್ಲಿ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಪೂರ್ಣಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಸ್ನಾತಕೋತ್ತರ ಪದವಿ ಪಡೆದಿರುವ ಅರ್ಹ ಅಭ್ಯರ್ಥಿಗಳು ಸೆಪ್ಟೆಂಬರ್ 14ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ https:/bangaloreuniversity karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಪಶ್ಚಿಮ ವಿಭಾಗದ ಅಂಚೆ ಅದಾಲತ್ 11ಕ್ಕೆ

ಬೆಂಗಳೂರು: ಬೆಂಗಳೂರು ಪಶ್ಚಿಮ ವಿಭಾಗದ ಅಂಚೆ ಅದಾಲತ್ ಸೆಪ್ಟೆಂಬರ್ 11ರಂದು ಬೆಳಿಗ್ಗೆ 11 ಗಂಟೆಗೆ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿರುವ ಅಂಚೆ ಕಚೇರಿಯಲ್ಲಿ ನಡೆಯಲಿದೆ.

ಬೆಂಗಳೂರು ಪಶ್ಚಿಮ ವಿಭಾಗಕ್ಕೆ ಸಂಬಂಧಿಸಿದ ಅಂಚೆ ಸೇವೆಗಳಿಗೆ ಸಂಬಂಧಿಸಿದ ಕುಂದು-ಕೊರತೆಗಳು ಅಥವಾ ಮೇಲ್‌ಗಳ ವಿತರಣೆ, ಸ್ಪೀಡ್ ಪೋಸ್ಟ್, ಲೇಖನಗಳು, ಪಾರ್ಸೆಲ್‌ಗಳು, ಮನಿ ಆರ್ಡರ್, ಉಳಿತಾಯ ಖಾತೆ, ನಗದು ಪ್ರಮಾಣ ಪತ್ರಗಳು ಮತ್ತು ಕೌಂಟರ್ ಸೇವೆಗಳ ದೂರುಗಳು ಇದ್ದರೆ ಅಂಚೆ ಇಲಾಖೆ ಅಧೀಕ್ಷಕರನ್ನು ಭೇಟಿ ಮಾಡಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 080-23493264, 080-23493267.

ಪ್ರತಿಭಾ ಪುರಸ್ಕಾರ 11ಕ್ಕೆ

ಬೆಂಗಳೂರು: ಡಾ. ರಾಜ್‌ಕುಮಾರ್ ರಂಗಭೂಮಿ ಚಲನಚಿತ್ರ ಟ್ರಸ್ಟ್‌ನ ಬೆಳ್ಳಿ ಹಬ್ಬದ ಅಂಗವಾಗಿ ಇದೇ 11ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಡಾ.ರಾಜ್‌ಕುಮಾರ್ ಪುರಸ್ಕಾರ ಹಾಗೂ ಡಾ. ರಾಜ್‌ಕುಮಾರ್ ಕನ್ನಡ ಪ್ರತಿಭಾ ಚೇತನ ವಿದ್ಯಾರ್ಥಿ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಎಂ.ಆರ್. ರಾಜು ತಿಳಿಸಿದರು.



ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಳ್ಳಿ ಹಬ್ಬದ ಸಮಾರಂಭದಲ್ಲಿ ದಾರಿ ತಪ್ಪಿದ ಮಗ, ಮಯೂರ ಚಿತ್ರಗಳ 50 ವರ್ಷದ ಸಂಭ್ರಮ, ಡಾ. ರಾಜ್‌ಕುಮಾರ್ ಅವರಿಗೆ ಗಾಯನ, ನೃತ್ಯ ಹಾಗೂ ರಂಗ ನಮನ ಸಲ್ಲಿಸಲಾಗುತ್ತದೆ. ಇದರ ಜೊತೆಗೆ ಚಿತ್ರಕಲಾ ಶಿಬಿರ, ನೇತ್ರದಾನ ಹಾಗೂ ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಸದ ಬಸವರಾಜ ಬೊಮ್ಮಾಯಿ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಿದ್ದಾರೆ. ಸಂಸದ ಪಿ.ಸಿ. ಮೋಹನ್, ನಿವೃತ್ತ ಐಪಿಎಸ್ ಅಧಿಕಾರಿ ಸುಭಾಷ್ ಭರಣಿ, ನಟ ವಿನಯ್ ರಾಜ್‌ಕುಮಾರ್, ನಟಿ ರೂಪಿಕಾ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸುದ್ದಿ 2 ನಿಮಿಷ

ಧರ್ಮಸ್ಥಳ ಪ್ರಕರಣ: ಗೃಹ ಸಚಿವರಿಗೆ ಬಿಜೆಪಿ ನಿಯೋಗ ವರದಿ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದ ಬಿಜೆಪಿ ನಿಯೋಗವು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸೋಮವಾರ ರಾತ್ರಿ ಇಲ್ಲಿ ಭೇಟಿ ಮಾಡಿ ಧರ್ಮಸ್ಥಳ ಪ್ರಕರಣದ ಬಗ್ಗೆ ವರದಿ ಸಲ್ಲಿಸಿತು.

ಶಾ ಅವರೊಂದಿಗೆ ಸುಮಾರು 30 ನಿಮಿಷ ಚರ್ಚೆ ನಡೆಸಿದ ನಿಯೋಗವು, 'ಧರ್ಮಸ್ಥಳದ ವಿರುದ್ಧದ ಪಿತೂರಿಯಲ್ಲಿ ಹೊರ ರಾಜ್ಯದ ಕೆಲವರ ಕೈವಾಡ ಇದೆ. ಈ ಬಗ್ಗೆ ಉನ್ನತ ತನಿಖೆ ನಡೆಸುವ ಅಗತ್ಯ ಇದೆ' ಎಂದು ಹೇಳಿತು.

'ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆದಿದೆ. ಆದರೆ, ಅದರ ಹಿಂದಿರುವ ರೂವಾರಿಗಳನ್ನು ಹುಡುಕುವ ಕೆಲಸವನ್ನು ಕಾಂಗ್ರೆಸ್ ಮಾಡಿಲ್ಲ. ಈ ಘಟನೆ ಬಗ್ಗೆ ವಿವರವಾದ ಮಾಹಿತಿಯನ್ನು ಶಾ ಅವರಿಗೆ ನೀಡಿದ್ದೇವೆ. ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ನೀತಿಯನ್ನು ಸಚಿವರ ಗಮನಕ್ಕೆ ತಂದಿದ್ದೇವೆ' ಎಂದು ವಿಜಯೇಂದ್ರ ತಿಳಿಸಿದರು.

ಹಿಂದುತ್ವ ಪರ ಕಾರ್ಯಕರ್ತ ಸುಹಾಸ್ ಶೆಟ್ಟಿ ಕೊಲೆ ಪ್ರಕರಣ, ಕೊಪ್ಪಳದಲ್ಲಿ ಹಿಂದುತ್ವ ಪರ ಕಾರ್ಯಕರ್ತನ ಹತ್ಯೆ, ಮದ್ದೂರು ಘಟನೆ ಸೇರಿದಂತೆ ಹಲವು ಘಟನೆಗಳು ನಡೆದಿವೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ದಿನೇ ದಿನೇ ಕುಸಿಯುತ್ತಿದೆ. ಈ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಿದ್ದೇವೆ ಎಂದು ಅವರು ತಿಳಿಸಿದರು.



ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಪಕ್ಷ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ, ಬ್ರಿಜೇಶ್ ಚೌಟ, ಶಾಸಕರಾದ ಎಸ್.ಆರ್.ವಿಶ್ವನಾಥ್, ಹರೀಶ್ ಪೂಂಜ, ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ ನಿಯೋಗದಲ್ಲಿ ಇದ್ದರು.

'ಹಿಂದುಳಿದವರ ಮೀಸಲಾತಿ ಕಬಳಿಕೆಗೆ ಹುನ್ನಾರ'

ಬೆಂಗಳೂರು: 'ರಾಜ್ಯ ಸರ್ಕಾರ ಹಿಂದುಳಿದ ಜಾತಿ– ಸಮುದಾಯಗಳನ್ನು ಒಡೆಯಲು ಮತ್ತು ಮತಾಂತರಕ್ಕೆ ಕುಮ್ಮಕ್ಕು ನೀಡುವ ಉದ್ದೇಶದಿಂದ ಹಿಂದೂ ಜಾತಿಗಳನ್ನು 'ಕ್ರೈಸ್ತ'ರೆಂದು ಗುರುತಿಸುವ ಷಡ್ಯಂತ್ರ ನಡೆಸಿದೆ' ಎಂದು ಬಿಜೆಪಿ ಆರೋಪಿಸಿದೆ.

ಬಿಜೆಪಿಯ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್ ಮತ್ತು ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ ಅವರ ನೇತೃತದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪಕ್ಷದ ದಲಿತ, ಹಿಂದುಳಿದ ಸಮುದಾಯಗಳ ಮುಖಂಡರು ಭಾಗವಹಿಸಿದ್ದರು.

'ಕರ್ನಾಟಕ ಸರ್ಕಾರದ ಉದ್ದೇಶಿತ ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆಯಲ್ಲಿ ಹಿಂದೂ ಜಾತಿಗಳನ್ನು ಕ್ರೈಸ್ತರೆಂದು ಗುರುತಿಸುವ ಹುನ್ನಾರವನ್ನು ಎಲ್ಲ ಸಮಾಜಗಳ ಮಠಾಧೀಶರು, ಜಾತಿವಾರು ಸಂಘಟನೆಗಳ ಮುಖಂಡರು ಅರ್ಥ ಮಾಡಿಕೊಳ್ಳಬೇಕು. ಈ ಬಗ್ಗೆ ಜನಾಕ್ರೋಶ ವ್ಯಕ್ತವಾಗಿದೆ. ಹಿಂದುಳಿದ ವರ್ಗಗಳ ಆಯೋಗಕ್ಕೆ ಹಲವು ಜಾತಿಗಳ ಸಂಘಟನೆಗಳು ಪತ್ರ ಬರೆದಿವೆ. ಕ್ರೈಸ್ತ ಹಣೆಪಟ್ಟಿ ಕಟ್ಟಿರುವ ಬಗ್ಗೆ ಆಕ್ಷೇಪಣೆ ಸಲ್ಲಿಸಿವೆ. ಆದರೆ, ಸರ್ಕಾರವಾಗಲಿ, ಆಯೋಗವಾಗಲಿ ತನ್ನ ನಿಲುವು ಬದಲಿಸಿಲ್ಲ. ಹಿಂದೂ ಜಾತಿಗಳನ್ನು ಕ್ರೈಸ್ತರನ್ನಾಗಿಸುವ ಹುನ್ನಾರದಲ್ಲಿ 50ಕ್ಕೂ ಹೆಚ್ಚು ಪ್ರಮುಖ ದಲಿತ, ಹಿಂದುಳಿದ ಜಾತಿಗಳು ಸೇರಿವೆ' ಎಂದು ತಿಳಿಸಿದರು.

'ಕ್ರೈಸ್ತ ಹೆಸರಿನಲ್ಲಿ ಮತಾಂತರಗೊಂಡವರು ನಮ್ಮ ಜಾತಿಯೊಳಗೆ ನುಸುಳಿ ನಮ್ಮ ಪಾಲಿನ ಮೀಸಲಾತಿಯನ್ನು ಕಬಳಿಸುವ ಹುನ್ನಾರಕ್ಕೆ ಸರ್ಕಾರವೇ ಪ್ರೋತ್ಸಾಹ ನೀಡುತ್ತಿದೆ. ಸರ್ಕಾರ ಬಿಡುಗಡೆಗೊಳಿಸಿದ ಪಟ್ಟಿಯಲ್ಲಿ ಕ್ಯಾಥೋಲಿಕ್, ಪ್ರೊಟೆಸ್ಟಂಟ್, ಪೆಂಟಕೋಸ್ಟ್ ಇತ್ಯಾದಿ ಮೂಲ ಕ್ರೈಸ್ತ ಪಂಗಡಗಳ ಹೆಸರೇ ಇಲ್ಲ. ಅವರಿಗೆ ಕೇವಲ ಕ್ರೈಸ್ತರೆಂದು ಗುರುತಿಸಿಕೊಳ್ಳಲು ಅವಕಾಶ ನೀಡಿದೆ' ಎಂದು ಅವರು ಹೇಳಿದರು.

'ಈ ಕುರಿತು ದಲಿತ ಮತ್ತು ಹಿಂದುಳಿದ ಸಮುದಾಯದಲ್ಲಿ ಜಾಗೃತಿ ಮೂಡಿಸುವುದರ ಜತೆಗೆ, ಎಲ್ಲ ಜಾತಿಗಳ ಮಠಾಧೀಶರನ್ನು ಒಳಗೊಂಡ ದುಂಡು ಮೇಜಿನ ಸಭೆಯನ್ನು ಶೀಘ್ರವೇ ಸಂಘಟಿಸಲಾಗುವುದು' ಎಂದು ಹರೀಶ್ ತಿಳಿಸಿದರು.

ರೌಡಿ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣ

ಜಗ್ಗ ಜೈಲಿಗೆ, ನಾಲ್ವರು ಸಿಐಡಿ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಆಗಿದ್ದ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದ ಮೊದಲನೇ ಆರೋಪಿ ಜಗದೀಶ್ ಅಲಿಯಾಸ್ ಜಗ್ಗನ ಸಿಐಡಿ ಕಸ್ಟಡಿಯು ಸೋಮವಾರಕ್ಕೆ ಅಂತ್ಯವಾಗಿದ್ದು, ನ್ಯಾಯಾಲಯದ ಸೂಚನೆ ಮೇರೆಗೆ ಆರೋಪಿಯನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ.

14 ದಿನಗಳಿಂದ ಸಿಐಡಿ ಕಸ್ಟಡಿಯಲ್ಲಿದ್ದ ಆರೋಪಿಯನ್ನು ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ಸೋಮವಾರ ಮಧ್ಯಾಹ್ನ ಸಿಐಡಿ ಪೊಲೀಸರು ಹಾಜರು ಪಡಿಸಿದರು. ಆರೋಪಿಯನ್ನು ಸೆ.22ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರು ಆದೇಶಿಸಿದರು.

ಪ್ರಾಸಿಕ್ಯೂಷನ್ ಪರ ವಕೀಲರು, ಆರೋಪಿಯನ್ನು ಚಿಕ್ಕಬಳ್ಳಾಪುರ ಜೈಲಿಗೆ ಕಳುಹಿಸುವಂತೆ ಮನವಿ ಮಾಡಿದರು. ಆದರೆ, ನ್ಯಾಯಾಧೀಶರು, ಪರಪ್ಪನ ಅಗ್ರಹಾರ ಜೈಲಿನಲ್ಲೇ ವಿಶೇಷ ಬ್ಯಾರಕ್‌ನಲ್ಲಿ ಇರಿಸುವಂತೆ ಆದೇಶಿಸಿದರು.

ಈ ಪ್ರಕರಣದಲ್ಲಿ ಕಿರಣ್, ಮದನ್, ಸ್ಯಾಮ್ಯುಯಲ್, ಪ್ರದೀಪ್, ವಿಮಲ್, ಅನಿಲ್, ಕೋಲಾರ ಜಿಲ್ಲೆ ಮಾಲೂರಿನ ಅವಿನಾಶ್ ದೀನಹಳ್ಳಿ, ಸುದರ್ಶನ್, ಮುರುಗೇಶ್ ಹಾಗೂ ನರಸಿಂಹ ಸೇರಿದಂತೆ 17 ಮಂದಿಯನ್ನು ಭಾರತಿನಗರ ಠಾಣೆಯ ಪೊಲೀಸರು ಈ ಹಿಂದೆ ಬಂಧಿಸಿದ್ದರು. ಇದೀಗ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು, ಆರೋಪಿಗಳ ವಿರುದ್ಧ ಸಂಘಟಿತ ಅಪರಾಧ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ ಎಂಬುದು ಗೊತ್ತಾಗಿದೆ.

ಪ್ರಕರಣದಲ್ಲಿ ಜೈಲಿನಲ್ಲಿರುವ 17 ಆರೋಪಿ ಗಳ ಪೈಕಿ ಕಿರಣ್, ಮದನ್, ವಿಮಲ್ ಸೇರಿ ನಾಲ್ವರನ್ನು ಹೆಚ್ಚಿನ ವಿಚಾರಣೆಗಾಗಿ ಸಿಐಡಿ ಪೊಲೀಸರು ಬಾಡಿ ವಾರಂಟ್ ಮೇಲೆ ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ವಿಚಾರಣೆ ಎದುರಿಸಿದ್ದ ಶಾಸಕ: ಇದೇ ಪ್ರಕರಣದಲ್ಲಿ ಐದನೇ ಆರೋಪಿ ಆಗಿರುವ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರನ್ನು ಭಾರತಿನಗರ ಠಾಣೆಯಲ್ಲಿ ಎರಡು ಬಾರಿ ವಿಚಾರಣೆ ನಡೆಸಲಾಗಿತ್ತು. ಅದಾದ ಮೇಲೆ ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರವು ಸಿಐಡಿಗೆ ಹಸ್ತಾಂತರಿಸಿ ಆದೇಶಿಸಿತ್ತು. ದೆಹಲಿ ವಿಮಾನ ನಿಲ್ದಾಣದಲ್ಲಿ ಆರೋಪಿ ಜಗ್ಗನನ್ನು ಸಿಐಡಿ ಪೊಲೀಸರು ಬಂಧಿಸಿದ್ದರು. ಭಾರತಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜುಲೈ 15ರಂದು ಶಿವಪ್ರಕಾಶ್ ಅವರ ಕೊಲೆ ನಡೆದಿತ್ತು.

'ಜಾಗದ ವಿಚಾರವಾಗಿ ಜಗದೀಶ್, ಕಿರಣ್, ವಿಮಲ್, ಅನಿಲ್ ಮತ್ತು ಇತರರು ಬೈರತಿ ಬಸವರಾಜ್ ಅವರ ಕುಮ್ಮಕ್ಕಿನಿಂದ ಕೊಲೆ ಮಾಡಿದ್ದಾರೆ' ಎಂದು ಆರೋಪಿಸಿ ಬಿಕ್ಲು ಶಿವ ಅವರ ತಾಯಿ ವಿಜಯಲಕ್ಷ್ಮಿ ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿತ್ತು.

ತಲೆ ಮೇಲೆ ಕಲ್ಲು ಎತ್ತಿಹಾಕಿ ಹತ್ಯೆ

ಬೆಂಗಳೂರು: ಮೈಸೂರು ರಸ್ತೆಯ ಬಾಪೂಜಿ ನಗರದಲ್ಲಿ ಭಾನುವಾರ ರಾತ್ರಿ ಸ್ನೇಹಿತರ ನಡುವೆ ನಡೆದ ಗಲಾಟೆಯು ಕೊಲೆಯಲ್ಲಿ ಅಂತ್ಯವಾಗಿದೆ.

ಕೌಶಿಕ್ (26) ಎಂಬುವರನ್ನು ಕೊಲೆ ಮಾಡಲಾಗಿದೆ.

ಸ್ನೇಹಿತನೇ ಕೃತ್ಯ ಎಸಗಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದ್ದು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬಾಪೂಜಿ ನಗರದ ಕೌಶಿಕ್ ಅವರು ಕೋಲಾರದಲ್ಲಿ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದರು. ಭಾನುವಾರ ಬಾಪೂಜಿ ನಗರದ ಮನೆಗೆ ಬಂದಿದ್ದರು. ಸ್ನೇಹಿತರಾದ ಚಂದನ್ ಮತ್ತು ಮನೋಹರ್ ಜತೆ ಹೊರಗೆ ಹೋಗಿದ್ದಾಗ ಕೊಲೆಯಾಗಿದೆ ಎಂದು ಪೊಲೀಸರು ಹೇಳಿದರು.

'ಹೊರಗೆ ಹೋಗಿದ್ದ ವೇಳೆ ಮೂವರೂ ಮದ್ಯಪಾನ ಮಾಡಿದ್ದರು. ಈ ವೇಳೆ ಕೌಶಿಕ್ ಅವರು ಚಂದನ್ ಹಾಗೂ ಕೌಶಿಕ್‌ಗೆ ನಿಂದಿಸಿದ್ದರು. ಸಿಟ್ಟಿಗೆದ್ದ ಇಬ್ಬರೂ, ಕೌಶಿಕ್ ಅವರ ತಲೆಗೆ ಬಿಯರ್ ಬಾಟಲಿನಿಂದ ಹೊಡೆದಿದ್ದರು. ಜತೆಗೆ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದರು. ಕೊಲೆ ನಂತರ ಆರೋಪಿಗಳು ಪರಾರಿಯಾಗಿದ್ದರು. ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಬ್ಬರೂ ಬಾಪೂಜಿ ನಗರ ನಿವಾಸಿಗಳು' ಎಂದು ಪೊಲೀಸರು ಹೇಳಿದರು.

₹54.30 ಕೋಟಿ ದಂಡ ಸಂಗ್ರಹ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಅವಕಾಶ ಕಲ್ಪಿಸಿದ್ದು, ಇದುವರೆಗೆ ಒಟ್ಟು 19,36,556 ಪ್ರಕರಣಗಳು ಇತ್ಯರ್ಥಗೊಂಡಿವೆ. ₹54.30 ಕೋಟಿ ದಂಡ ಸಂಗ್ರಹವಾಗಿದೆ.



ಪೊಲೀಸ್ ಇಲಾಖೆಯಲ್ಲಿ ಸಂಚಾರ ಇ–ಚಲನ್‌ನಲ್ಲಿ ದಾಖಲಾದ ಪ್ರಕರಣಗಳಿಗೆ ದಂಡ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ದಂಡ ಪಾವತಿಸಲು ರಿಯಾಯಿತಿ ನೀಡಿ ಸರ್ಕಾರವು ಆದೇಶಿಸಿತ್ತು. ಈ ಆದೇಶವು ಆ.23ರಿಂದ ಜಾರಿಗೆ ಬಂದಿದ್ದು, ಸೆ.12ರವರೆಗೆ ರಿಯಾಯಿತಿ ಅಡಿ ದಂಡ ಪಾವತಿಸಬಹುದಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು. ಬಿಟಿಪಿ ಅಸ್ತ್ರಂ,ಕೆಎಸ್‌ಪಿ ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ಮಾಲೀಕರು ದಂಡ ಪಾವತಿಸುತ್ತಿದ್ದಾರೆ ಎಂದರು.



ಬಿದರಹಳ್ಳಿ ಕಿತ್ತಗನೂರು ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಗೆ ಮಣ್ಣು ಸುರಿದ ಸಾರ್ವಜನಿಕರು

ಬಿದರಹಳ್ಳಿ- ಕಿತ್ತಗನೂರು ರಸ್ತೆ ಕೆಸರುಮಯ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಬಿದರಹಳ್ಳಿ– ಕಿತ್ತಗನೂರು ಮುಖ್ಯ ರಸ್ತೆ ಮಳೆಯಿಂದಾಗಿ ಕೆಸರುಮಯವಾಗಿದ್ದು, ವಾಹನ ಸಂಚಾರ ಕಷ್ಟಕರವಾಗಿದೆ.

ಈ ಬಗ್ಗೆ ಸಾರ್ವಜನಿಕರು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ದುರಸ್ತಿ ಪಡಿಸಿಲ್ಲ.

ಮಹದೇವಪುರ ಕ್ಷೇತ್ರ ವ್ಯಾಪ್ತಿಯ ಕಿತ್ತಗನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಬಿದರಹಳ್ಳಿಯಿಂದ ಕಿತ್ತಗನೂರಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ನಿತ್ಯ ವಾಹನ ಸವಾರರು ಕಿರಿಕಿರಿ ಅನುಭವಿಸುತ್ತಿದ್ದಾರೆ. ಹಲವು ಬಾರಿ ಅಪಘಾತಗಳು ಸಂಭವಿಸಿರುವುದೂ ಉಂಟು.

ಹದಗೆಟ್ಟ ರಸ್ತೆ ದುರಸ್ತಿ ಕಾಣದಿದ್ದಾಗ ಸುತ್ತಮುತ್ತಲಿನ ಜಮೀನು ಮಾಲೀಕರು ರಸ್ತೆಗೆ ಮಣ್ಣು ಸುರಿದಿದ್ದಾರೆ. ಹಾಗಾಗಿ ಪ್ರತಿ ಬಾರಿಯೂ ಮಳೆ ಬಂದಾಗ ರಸ್ತೆ ಕೆಸರುಮಯವಾಗುತ್ತದೆ.

'ಮುಖ್ಯರಸ್ತೆಯಲ್ಲಿ ಕೆಲವೆಡೆ ಮಳೆ ನೀರು ನಿಲ್ಲುತ್ತಿತ್ತು. ಕೆಲ ಜಮೀನು ಮಾಲೀಕರು ಚೆನ್ನಾಗಿರುವ ರಸ್ತೆಗೆ ಮಣ್ಣು ಸುರಿದ ಕಾರಣ ರಸ್ತೆ ಹಾಳಾಗಿ ಸಂಚಾರ ಮಾಡದಂತಾಗಿದೆ. ರಸ್ತೆಯಲ್ಲಿ ನೀರು ನಿಂತು ವಾಹನಗಳ ಸಂಚಾರಕ್ಕೆ ತೊಂದರೆ ಆಗಿದೆ. ಗ್ರಾಮ ಪಂಚಾಯಿತಿ ಅಧಿಕಾರಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳತ್ತ ಬೊಟ್ಟು ಮಾಡಿದ್ದಾರೆ' ಎಂದು ಕಿತ್ತಗನೂರು ನಿವಾಸಿ ವಿ.ಪಿ.ಕೃಷ್ಣ ದೂರಿದರು.

'ಮೂರು ತಿಂಗಳ ಹಿಂದೆ ಚೆನ್ನಾಗಿದ್ದ ರಸ್ತೆಗೆ ಕೆಲವರು ರಸ್ತೆಗೆ ಮಣ್ಣು ಸುರಿದು ಹೋಗಿದ್ದಾರೆ. ಈ ರಸ್ತೆಯ ಮೂಲಕ ಕಾಲೇಜಿಗೆ ಹೋಗುತ್ತೇವೆ. ಹಾಳಾದ ರಸ್ತೆಯಿಂದಾಗಿ 5 ಕಿಲೋ ಮೀಟರ್ ಸುತ್ತು ಹಾಕಿಕೊಂಡು ಅವಲಹಳ್ಳಿ ಮೂಲಕ ಕೆಲಸಕ್ಕೆ ಹೋಗಬೇಕಿದೆ' ಎಂದು ದ್ವಾರಕ ಬಡಾವಣೆಯ ನಿವಾಸಿ ಮಲ್ಲಾ ಸುಧಾಕರ್ ಅಕ್ರೋಶ ವ್ಯಕ್ತಪಡಿಸಿದರು.

'ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ರಸ್ತೆ ಮೂಲಕ ಹಾದು ಹೋಗಿರುವ ರಾಜಕಾಲುವೆಯನ್ನು ಸರಿಯಾಗಿ ಸ್ವಚ್ಛಗೊಳಿಸದ ಕಾರಣ ಮಳೆ ನೀರು ರಸ್ತೆ ಮೇಲೆ ನಿಲ್ಲುತ್ತದೆ. ಚರಂಡಿ ವ್ಯವಸ್ಥೆ ಇಲ್ಲದಿರುವುದು ಸಮಸ್ಯೆಗೆ ಕಾರಣವಾಗಿದೆ' ಸ್ಥಳೀಯ ನಿವಾಸಿ ಶಶಿಕಾಂತ್ ನಾಯಕ್ ದೂರಿದರು.

'ಬಿದರಹಳ್ಳಿ- ಕಿತ್ತಗನೂರು ರಸ್ತೆ ಸಮಸ್ಯೆ ದೊಡ್ಡಗುಬ್ಬಿ ಹಾಗೂ ಕಿತ್ತಗನೂರು ಗ್ರಾಮ ಪಂಚಾಯಿತಿಗಳ ನಡುವಿನ ಸಮನ್ವಯದ ಕೊರತೆಯಿಂದ ಬಗೆಹರಿದಿಲ್ಲ. ಈ ರಸ್ತೆ ಮೂಲಕ ಶಾಲಾ, ಕಾಲೇಜಿಗೆ ತೆರಳಬೇಕು. ಆಸ್ಪತ್ರೆಗೆ ರೋಗಿಗಳನ್ನು ಕರೆದೊಯ್ಯುವ ಸಂದರ್ಭದಲ್ಲಿ ವಾಹನಗಳು ಗುಂಡಿಯಲ್ಲಿ ಸಿಲುಕಿರುವ ಉದಾಹರಣೆಯೂ ಇದೆ' ಎಂದು ಸ್ಥಳೀಯ ನಿವಾಸಿ ಪ್ರಶಾಂತ್ ದೂರಿದರು.

ಚಲಿಸುತ್ತಿದ್ದ ರೈಲಿಗೆ ತಳ್ಳಿ ಸ್ನೇಹಿತನ ಕೊಲೆ: ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲಿಸುತ್ತಿದ್ದ ರೈಲಿಗೆ ಸ್ನೇಹಿತನನ್ನು ತಳ್ಳಿ ಕೊಲೆ ಮಾಡಿದ್ದ ಆರೋಪಿಯನ್ನು ಬೈಯಪ್ಪನಹಳ್ಳಿ ರೈಲ್ವೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪುನೀತ್ ಬಂಧಿತ ಆರೋಪಿ. ಮತ್ತೊಬ್ಬ ಆರೋಪಿ ಪ್ರತಾಪ್ ತಲೆಮರೆಸಿಕೊಂಡಿದ್ದು, ಆತನ ಪತ್ತೆಗೆ ಹುಡುಕಾಟ ನಡೆಸಲಾಗುತ್ತಿದೆ ಎಂದು ರೈಲ್ವೆ ಪೊಲೀಸರು ಹೇಳಿದರು.

ವಿಜಯಪುರದ ಇಸ್ಮಾಯಿಲ್ ಪಟವೇಗಾರ್ (20) ಎಂಬುವರನ್ನು ಚಲಿಸುತ್ತಿದ್ದ ರೈಲಿಗೆ ತಳ್ಳಿ ಆರೋಪಿಗಳು ಕೊಲೆ ಮಾಡಿದ್ದರು. ಬಳಿಕ, ಮೃತದೇಹವನ್ನು ಹಳಿಯ ಮೇಲೆ ಎಸೆದು ಪರಾರಿ ಆಗಿದ್ದರು ಎಂದು ರೈಲ್ವೆ ಪೊಲೀಸರು ಹೇಳಿದರು.

'ಇಸ್ಮಾಯಿಲ್ ಹಾಗೂ ಪುನೀತ್ ಸ್ನೇಹಿತರಾಗಿದ್ದರು. ಕಾರ್ಖಾನೆಯಲ್ಲಿ ಕೆಲಸ ಮಾಡಿಕೊಂಡು ಒಂದೇ ಪೇಯಿಂಗ್ ಗೆಸ್ಟ್‌ನಲ್ಲಿ ನೆಲಸಿದ್ದರು. ತಾನು ಪ್ರೀತಿಸುತ್ತಿದ್ದ ಯುವತಿಯನ್ನು ಆರೋಪಿ ಪುನೀತ್, ಇಸ್ಮಾಯಿಲ್‌ಗೆ ಇತ್ತೀಚೆಗೆ ಪರಿಚಯಿಸಿದ್ದ.



ಇಸ್ಮಾಯಿಲ್

ಆಕೆಯ ಮೊಬೈಲ್ ಸಂಖ್ಯೆ ಪಡೆದುಕೊಂಡಿದ್ದ ಇಸ್ಮಾಯಿಲ್ ಹೆಚ್ಚು ಮಾತನಾಡಲು ಆರಂಭಿಸಿದ್ದ. ಇದು ಪುನೀತ್‌ಗೆ ಸಿಟ್ಟು ತರಿಸಿತ್ತು' ಎಂದು ರೈಲ್ವೆ ಪೊಲೀಸ್ ಮೂಲಗಳು ತಿಳಿಸಿವೆ.

'ಯುವತಿಯ ಜತೆಗೆ ಇಸ್ಮಾಯಿಲ್ ಮಾತನಾಡುತ್ತಿರುವ ವಿಚಾರವು ಪ್ರತಾಪ್‌ಗೂ ಗೊತ್ತಾಗಿ, ಪ್ರಶ್ನಿಸಿದ್ದರು. ಆರೋಪಿಗಳಿಬ್ಬರು ಇಸ್ಮಾಯಿಲ್ ಜತೆಗೆ ಗಲಾಟೆ ಮಾಡಿದ್ದರು. ಸೆ.7ರಂದು ಪುನೀತ್ ಹಾಗೂ ಪ್ರತಾಪ್ ಮದ್ಯಪಾನ ಮಾಡುತ್ತಾ ಕುಳಿತಿದ್ದರು. ಅದೇ ವೇಳೆ ಅಲ್ಲಿಗೆ ಇಸ್ಮಾಯಿಲ್ ಬಂದಾಗ ಮತ್ತೆ ಗಲಾಟೆ ಆರಂಭವಾಗಿತ್ತು. ಆಗ ಚಲಿಸುತ್ತಿದ್ದ ರೈಲಿಗೆ ಇಸ್ಮಾಯಿಲ್ ಅವರನ್ನು ತಳ್ಳಿದ್ದರು. ನಂತರ, ಮೃತದೇಹವನ್ನು ರೈಲ್ವೆ ಹಳಿ ಮೇಲೆ ಎಸೆದು ಪರಾರಿ ಆಗಿದ್ದರು' ಎಂದು ಮೂಲಗಳು ತಿಳಿಸಿವೆ.

ಕಥೆ ಸಿದ್ಧಪಡಿಸಿಕೊಂಡಿದ್ದ ಆರೋಪಿಗಳು: 'ಒಂದು ವೇಳೆ ಪೊಲೀಸರಿಗೆ ಮಾಹಿತಿ ಗೊತ್ತಾಗಿ, ವಶಕ್ಕೆ ಪಡೆದುಕೊಂಡರೆ 'ರೀಲ್ಸ್' ಕಥೆ ಸಿದ್ಧಪಡಿಸಿಕೊಂಡಿದ್ದರು. ರೀಲ್ಸ್ ಮಾಡಲು ಹೋಗಿ ಚಲಿಸುತ್ತಿದ್ದ ರೈಲು ಡಿಕ್ಕಿಯಾಗಿ ಇಸ್ಮಾಯಿಲ್ ಮೃತಪಟ್ಟಿದ್ದಾನೆ ಎಂಬುದಾಗಿ ಹೇಳಲು ಯೋಜನೆ ರೂಪಿಸಿಕೊಂಡಿದ್ದರು. ವಿಚಾರಣೆ ವೇಳೆ ಆರೋಪಿಗಳು ಈ ಸಂಗತಿಯನ್ನು ಬಾಯ್ಬಿಟ್ಟಿದ್ದಾರೆ' ಎಂದು ರೈಲ್ವೆ ಪೊಲೀಸರು ಹೇಳಿದರು.

'ದೊಡ್ಡನೆಕ್ಕುಂದಿಯ ರೈಲ್ವೆ ಹಳಿ ಬಳಿ ಶವ ಪತ್ತೆಯಾಗಿತ್ತು. ರೈಲ್ವೆ ಸಿಬ್ಬಂದಿ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ, ಪರಿಶೀಲಿಸಿ ತನಿಖೆ ನಡೆಸಲಾಯಿತು. ಜೇಬಿನಲ್ಲಿದ್ದ ಕೆಲವು ಗುರುತಿನ ಚೀಟಿಗಳಲ್ಲಿ ಆರೋಪಿಯ ಹೆಸರು ಹಾಗೂ ವಿಳಾಸ ಇತ್ತು. ಕೊಲೆಯಾದ ವ್ಯಕ್ತಿ ವಿಜಯಪುರದ ಇಸ್ಮಾಯಿಲ್ ಪಟವೇಗಾರ್ ಎಂಬುದು ಗೊತ್ತಾಗಿತ್ತು. ಬಳಿಕ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಮತ್ತು ಇಸ್ಮಾಯಿಲ್ ಪಿ.ಜಿಯಲ್ಲಿ ಒಂದೇ ಕೊಠಡಿಯಲ್ಲಿ ವಾಸಿಸುತ್ತಿದ್ದರು. ಆರೋಪಿಯ ಪ್ರೇಯಸಿಯ ಮೊಬೈಲ್ ನಂಬರ್ ಪಡೆದು ಇಸ್ಮಾಯಿಲ್ ಮಾತನಾಡಿದ್ದ. ಇದರಿಂದ ಪಿ.ಜಿಯಲ್ಲಿ ಗಲಾಟೆ ಶುರುವಾಗಿತ್ತು. ಬಳಿಕ ಚಲಿಸುತ್ತಿದ್ದ ರೈಲಿಗೆ ತಳ್ಳಿ ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ರೈಲ್ವೆ ಪೊಲೀಸರು ತಿಳಿಸಿದರು.

ಅಗತ್ಯ ಕ್ರಮಕೈಗೊಳ್ಳಲು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಸೂಚನೆ

ಮಳಿಗೆಗಳಿಗೆ ಫುಟ್‌ಪಾತ್ ನಿರ್ವಹಣೆ ಜವಾಬ್ದಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರ 100 ಅಡಿ ರಸ್ತೆಯಲ್ಲಿ ಪಾದಚಾರಿ ಮಾರ್ಗ ಹಾಗೂ ಸಸಿಗಳ ನಿರ್ವಹಣೆ ಜವಾಬ್ದಾರಿಯನ್ನು ವಾಣಿಜ್ಯ ಮಳಿಗೆಗಳಿಗೆ ನೀಡಬೇಕು ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

'ಇದನ್ನು ವೈಟ್ ಟಾಪಿಂಗ್ ರಸ್ತೆಯಾಗಿ ಅಭಿವೃದ್ಧಿಪಡಿಸಿದ್ದು, ಪಾದಚಾರಿ ಮಾರ್ಗದುದ್ದಕ್ಕೂ ತೋಟಗಾರಿಕಾ ವಿಭಾಗದಿಂದ ಸಸಿಗಳನ್ನು ನೆಡಲಾಗಿದೆ. ಆದರೆ, ಸರಿಯಾಗಿ ನಿರ್ವಹಣೆ ಮಾಡಿಲ್ಲ. ಎಲ್ಲಾ ಕಡೆ ಒಂದೇ ಮಾದರಿಯಲ್ಲಿ ಕಾಣುವ ಹಾಗೆ ವಿನ್ಯಾಸ ಮಾಡಬೇಕು. ಅದಕ್ಕಾಗಿ ಸ್ಥಳೀಯ ವಾಣಿಜ್ಯ ಉದ್ದಿಮೆಗಳ ಜೊತೆ ಸಭೆ ನಡೆಸಿ ಒಡಂಬಡಿಕೆ ಮಾಡಿಕೊಂಡು ಅವರೇ ನಿರ್ವಹಣೆ ಮಾಡಲು ಕ್ರಮ ವಹಿಸಬೇಕು' ಎಂದು ಪರಿಶೀಲನೆ ಸಂದರ್ಭದಲ್ಲಿ ಅಧಿಕಾರಿಗಳಿಗೆ ಆದೇಶಿಸಿದರು.

ರಸ್ತೆಬದಿ ಕಸ ಬಿಸಾಡುವ ಉದ್ದಿಮೆ/ ಮಳಿಗೆಗಳಿಗೆ ದಂಡ ವಿಧಿಸಿ, ಮತ್ತೆ ಕಸ ಬಿಸಾಡದಂತೆ ಎಚ್ಚರಿಕೆ ನೀಡಬೇಕು. ದೊಮ್ಮಲೂರು ಮೇಲ್ಸೇತುವೆ ಬಳಿಯ ಕಸ ವರ್ಗಾವಣೆ ಕೇಂದ್ರ, ಒಣ ತ್ಯಾಜ್ಯ ಸಂಗ್ರಹಣಾ ಘಟಕದ ಬಳಿ ತುಂಬಾ ವಾಸನೆ ಬರುತ್ತಿದ್ದು, ಆ ಪ್ರದೇಶದಲ್ಲಿ ಪ್ರೆಷರ್ ಪಂಪ್ ಮೂಲಕ ಸ್ವಚ್ಛಗೊಳಿಸಿ, ವಾಸನೆ ಬರದಂತೆ ಹಾಗೂ ಸುಂದರವಾಗಿ ಅಭಿವೃದ್ಧಿಪಡಿಸಲು ಸಮಗ್ರ ಯೋಜನೆ ರೂಪಿಸಬೇಕು ಎಂದು ಹೇಳಿದರು.

ಪರಿಶೀಲನೆ ಸಂದರ್ಭದಲ್ಲಿ ಹಾಜರಿದ್ದ ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, 'ಕೇಂಬ್ರಿಡ್ಜ್ ರಸ್ತೆಯ ಇಸ್ರೊ ಸೇತುವೆ ಬಳಿ ರಾಜಕಾಲುವೆಯ ತಡೆಗೋಡೆ ಕಾಮಗಾರಿ ಪ್ರಗತಿಯಲ್ಲಿದ್ದು, ಅದನ್ನು ಕಾಲಮಿತಿಯೊಳಗಾಗಿ ಪೂರ್ಣಗೊಳಿಸಬೇಕು. ಜೋಗುಪಾಳ್ಯ, ಒ.ಆರ್.ಸಿ ರಸ್ತೆ ಹಾಗೂ ಅಕ್ಕಿತಿಮ್ಮನಹಳ್ಳಿಯಲ್ಲಿ ಸಮುದಾಯ ಭವನದ ಕಟ್ಟಡಗಳ ಕಾಮಗಾರಿ ಅರ್ಧಕ್ಕೆ ನಿಂತಿದ್ದು ಮರು ಟೆಂಡರ್ ಕರೆದು ತ್ವರಿತವಾಗಿ ಸುಮುದಾಯ ಭವನಗಳನ್ನು ನಿರ್ಮಿಸಿಕೊಡಬೇಕು' ಎಂದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ಕೆ.ವಿ. ರಾಜೇಂದ್ರ ಅವರು, ನಾಗರಿಕರ ಆರೋಗ್ಯದ ಹಿತದೃಷ್ಟಿಯಿಂದ ನಗರ ನೈರ್ಮಲ್ಯ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಲು ಹಾಗೂ ವಾರ್ಡ್ ಮಟ್ಟದಲ್ಲಿ ಅನಧಿಕೃತ ಜಾಹೀರಾತು ಫಲಕ/ಬ್ಯಾನರ್ ತೆರವುಗೊಳಿಸಲು ಆದೇಶಿಸಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಸಮರ್ಪಕವಾಗಿ ತ್ಯಾಜ್ಯ ವಿಲೇವಾರಿ ಮಾಡಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವಂತೆ ಆಯುಕ್ತ ಕೆ.ಎನ್ ರಮೇಶ್ ಅವರು ಅಧಿಕಾರಿಗಳಿಗೆ ತಿಳಿಸಿದರು. ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯುವಂತೆ ಮಾಡಲು ಹೂಳು ತೆರವುಗೊಳಿಸಬೇಕು ಎಂದರು.

ಮುಖ್ಯಾಂಶಗಳು

- ತ್ಯಾಜ್ಯ ಬಿಸಾಡುವ ಉದ್ದಿಮೆಗಳಿಗೆ ದಂಡ
- ದೊಮ್ಮಲೂರು ಮೇಲ್ಸೇತುವೆ ಬಳಿ ಸ್ವಚ್ಛತೆಗೆ ಸೂಚನೆ
- ಚರಂಡಿಗಳಲ್ಲಿ ಹೂಳು ತೆಗೆಯಲು ಆದೇಶ

3.5 ಟನ್ ಪ್ಲಾಸ್ಟಿಕ್ ವಶ, ₹1.5 ಲಕ್ಷ ದಂಡ

ಬೆಂಗಳೂರು ಉತ್ತರ ನಗರ ಪಾಲಿಕೆ ದಾಸರಹಳ್ಳಿಯ ಭೈರವವೇಶ್ವರ ಕೈಗಾರಿಕಾ ಪ್ರದೇಶದಲ್ಲಿ ಪ್ಲಾಸ್ಟಿಕ್ ಗೋದಾಮಿಗೆ ಪಾಲಿಕೆ ಅಧಿಕಾರಿಗಳು ದಿಢೀರ್ ಭೇಟಿ ನೀಡಿ, ಏಕ ಬಳಕೆಯ 3.5 ಟನ್‌ನಷ್ಟು ಪ್ಲಾಸ್ಟಿಕ್ ವಶಪಡಿಸಿಕೊಂಡು ₹1.5 ಲಕ್ಷ ದಂಡ ವಿಧಿಸಿದರು. ಏಕ ಬಳಕೆ ಪ್ಲಾಸ್ಟಿಕ್ ಅನ್ನು ಮತ್ತೆ ಬಳಸಿದರೆ ಕಾನೂನು ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದರು.



ಎನ್.ಎ. ಹ್ಯಾರಿಸ್, ರಾಜೇಂದ್ರ ಚೋಳನ್, ಬಿಡಿಎ ಆಯುಕ್ತ ಮಣಿವಣ್ಣನ್ ಅವರು ಇಂದಿರಾ ನಗರದಲ್ಲಿ ಸೋಮವಾರ ಪರಿಶೀಲನೆ ನಡೆಸಿದರು

ಜಕ್ಕೂರು ರೈಲ್ವೆ ಮೇಲ್ಸೇತುವೆ ಕಾಮಗಾರಿಯನ್ನು ಮೂರು ತಿಂಗಳಲ್ಲಿ ಪೂರ್ಣಗೊಳಿಸಲು ಉತ್ತರ ನಗರಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ರೈಲ್ವೆ ಸಮಾನಾಂತರ ರಸ್ತೆಯಾದ ಎಂ.ಸಿ.ಇ.ಸಿ. ಎಚ್.ಎಸ್ ಹಂತ-2, ಮೇಸ್ತ್ರಿಪಾಳ್ಯ-ರಾಚೇನಹಳ್ಳಿ ಲಿಂಕ್ ರಸ್ತೆಗಳಲ್ಲಿ ಡಾಂಬರೀಕರಣ ಮತ್ತು ಎರಡೂ ಬದಿಯ ಚರಂಡಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವಂತೆ ಹೇಳಿದರು.

ಮಳೆಯಿಂದ ಆಗುವ ಅನಾಹುತ ತಡೆಗಟ್ಟಲು ಎಲ್ಲ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಇ-ಖಾತಾ ಅರ್ಜಿಗಳ ವಿಲೇವಾರಿ ಮಾಡಬೇಕು ಎಂದು ವರ್ಚ್ಯುವಲ್ ಸಭೆ ಮೂಲಕ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಟಿಇಟಿ ಕಡ್ಡಾಯ ತೀರ್ಪು ಜಾರಿ ಬೇಡ: ಆಗ್ರಹ

ಬೆಂಗಳೂರು: 'ಬಡ್ತಿ ಹಾಗೂ ಸೇವೆ ಮುಂದುವರಿಕೆಗೆ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಕಡ್ಡಾಯಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪನ್ನು ಕರ್ನಾಟಕದಲ್ಲಿ ಜಾರಿ ಮಾಡಬಾರದು' ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಆಗ್ರಹಿಸಿದೆ.

'ಟಿಇಟಿ ಪರೀಕ್ಷೆಯನ್ನು ಸೇವಾನಿರತ ಶಿಕ್ಷಕರಿಗೆ ಪೂರ್ವಾನ್ವಯಗೊಳಿಸ ಬಾರದೆನ್ನುವ ತೀರ್ಮಾನ ವನ್ನು ಸಚಿವ ಸಂಪುಟದಲ್ಲಿ ತೆಗೆದುಕೊಳ್ಳಬೇಕು' ಎಂದು ಸಂಘದ ರಾಜ್ಯ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ, ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಚೇತನ್ ಅವರು ಮುಖ್ಯಮಂತ್ರಿಗೆ ಬರೆದ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಕರ್ನಾಟಕವು ಶಿಕ್ಷಕರ ಕೊರತೆ ಅನುಸರಿಸುತ್ತಿದೆ. 'ಸುಪ್ರೀಂ' ನೀಡಿರುವ ಸೂಚನೆ ಪಾಲಿಸಿದರೆ 1.68 ಲಕ್ಷ ಶಿಕ್ಷಕರ ಮೇಲೆ ಅದು ಪರಿಣಾಮ ಬೀರಲಿದೆ. ಸಮಾಜ, ಶಿಕ್ಷಕರ ಕುಟುಂಬಗಳು ಮತ್ತು ಶಿಕ್ಷಕ ಸಮುದಾಯದ ವಿಶಾಲ ಹಿತಾಸಕ್ತಿ ದೃಷ್ಟಿಯಿಂದ ಕೋರ್ಟ್ ನಿರ್ಧಾರ ಮರುಪರಿಶೀಲಿಸಬೇಕು ಎಂದು ಆಗ್ರಹಿಸಿದ್ದಾರೆ. ವೃತ್ತಿನಿರತ ಶಿಕ್ಷಕರಿಗೆ ಟಿಇಟಿ ಕಡ್ಡಾಯ ಮಾಡಿದರೆ ಹಲವು ವರ್ಷಗಳಿಂದ ಇರುವ ಶಿಕ್ಷಕರ ಹಿತಾ ಸಕ್ತಿಗೆ ವಿರುದ್ಧವಾಗಲಿದೆ ಎಂದಿದ್ದಾರೆ.

ಐಜಿಪಿ, 8 ಎಸ್‌ಪಿಗಳಿಂದ ತನಿಖೆ

ಮದ್ದೂರು ಸಂಘರ್ಷ: ಪ್ರತಾಪ್ ಸಿಂಹರಂಥ ಕಿಡಿಗೇಡಿಗಳು ಕಾರಣ –ಉಸ್ತುವಾರಿ ಸಚಿವ

ಪ್ರಜಾವಾಣಿ ವಾರ್ತೆ

ಮದ್ದೂರು: 'ಪಟ್ಟಣದಲ್ಲಿ ನಡೆದ ಕಲ್ಲುತೂರಾಟ, ಗಲಾಟೆ ಪೂರ್ವಯೋಜಿತ ಕೃತ್ಯವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. 21 ಆರೋಪಿಗಳನ್ನು ಬಂಧಿಸಿದ್ದು, ಇಬ್ಬರು ಹೊರಜಿಲ್ಲೆಯವರು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ಇಲ್ಲಿ ಹೇಳಿದರು.



ಚಲುವರಾಯ ಸ್ವಾಮಿ

ಪಟ್ಟಣಕ್ಕೆ ಸೋಮವಾರ ಭೇಟಿ ನೀಡಿದ್ದ ಅವರು ಸ್ಥಳ ಪರಿಶೀಲಿಸಿ ಅಧಿಕಾರಿಗಳಿಂದ ವಿವರ ಪಡೆದರು. ಬಳಿಕ ಸುದ್ದಿಗೋಷ್ಠಿಯಲ್ಲಿ, 'ಈ ವಿಷಯದಲ್ಲಿ ರಾಜಕೀಯ ಮಾಡಲ್ಲ. ಯಾವ ಸಮುದಾಯವನ್ನೂ ಓಲೈಸುವುದಿಲ್ಲ' ಎಂದು ಹೇಳಿದರು.

'ಜಿಲ್ಲೆಯ ಜನತೆಯ ಪರ ನಿಲ್ಲುತ್ತೇವೆ. ಎಲ್ಲ ಆಯಾಮದಲ್ಲೂ ಘಟನೆ ಕುರಿತು ತನಿಖೆಯನ್ನು ನಡೆಸಲಿದ್ದು, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು' ಎಂದರು.

ತನಿಖೆಗೆ ಐಪಿಎಸ್ ಅಧಿಕಾರಿಗಳು: 'ಘಟನೆಯ ತನಿಖೆಗೆ ತನಿಖೆಗಾಗಿ ದಕ್ಷಿಣ ವಲಯ ಐಜಿಪಿ ಹಾಗೂ 8 ಪೊಲೀಸ್ ವರಿಷ್ಠಾಧಿಕಾರಿಗಳನ್ನು ನೇಮಿಸಲಾಗಿದೆ. ಸಂಪೂರ್ಣ ವರದಿ ಸಿದ್ಧಪಡಿಸಿ ಶೀಘ್ರದಲ್ಲೇ ಮುಖ್ಯಮಂತ್ರಿ ಅವರಿಗೆ ಸಲ್ಲಿಸಲಾಗುವುದು' ಎಂದು ತಿಳಿಸಿದರು.

'ಇದು ಗಂಭೀರ ವಿಷಯ. ಮೆರವಣಿಗೆ ವೇಳೆ ವಿದ್ಯುತ್ ದೀಪ ಆರಿಸಿರುವ ಮಾಹಿತಿ ಇದೆ. ಇದರ ಹಿಂದೆ ಯಾರಿದ್ದಾರೆ ಎಂದು ಗೊತ್ತಾಗಬೇಕು. ಇಂತಹ ಘಟನೆಗೆ ಪ್ರತಾಪ ಸಿಂಹ ಅವರಂಥ ಕಿಡಿಗೇಡಿಗಳು ಕಾರಣ. ಬಿಜೆಪಿಯು ತಮ್ಮನ್ನು ದೂರವಿಟ್ಟಿರುವುದರಿಂದ ಏನೇನೋ ಪ್ರಚೋದನೆ ಮಾಡ್ತಾರೆ. ಧಾರ್ಮಿಕ ಸಂಘಟನೆಗಳು ರಾಜಕೀಯ ಪ್ರಚೋದನೆಗೆ ಒಳಗಾಗಬಾರದು' ಎಂದರು.

'ಕುಮಾರಸ್ವಾಮಿ ಅವರು ಕಾಂಗ್ರೆಸ್ ಅವನತಿ ಶುರು ಅಂತಾರೆ. ಮೊದಲು ಜೆಡಿಎಸ್ ಅವನತಿಯನ್ನು ತಡೆಯಲಿ. ಇದಕ್ಕೆ ರಾಜಕೀಯ ಬೆರೆಸಬೇಡಿ. ಅದನ್ನು ಬೇರೆ ಕಡೆ ಮಾಡೋಣ' ಎಂದು ಹೇಳಿದರು.

ಮುಖ್ಯಾಂಶಗಳು

- ಮುಖ್ಯಮಂತ್ರಿಗೆ ಶೀಘ್ರವೇ ಸಮಗ್ರ ವರದಿ
- ಯಾವುದೇ ಸಮುದಾಯ ಓಲೈಸಲ್ಲ
- ಧಾರ್ಮಿಕ ಸಂಘಟನೆ ಗಳು ಪ್ರಚೋದನೆಗೆ ಒಳಗಾಗಬಾರದು: ಚಲುವರಾಯ ಸ್ವಾಮಿ

ಪ್ರಚೋದಿಸುವುದರಲ್ಲಿ ಬಿಜೆಪಿಗರು ನಿಸ್ಸೀಮರು: ಸಿ.ಎಂ.ಸಿದ್ದರಾಮಯ್ಯ

ಬೆಂಗಳೂರು: 'ಮದ್ದೂರಿನಲ್ಲಿ ಮಸೀದಿ ಮುಂದೆ ಮೆರವಣಿಗೆ ಹೋದಾಗ ಸಣ್ಣಗಲಾಟೆ ನಡೆದಿದೆ. ಯಾರೇ ತಪ್ಪು ಮಾಡಿದರೂ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಗುಂಪು ಕಟ್ಟಿ ಗಲಾಟೆ ಮಾಡಲು ಹೋದಾಗ ಲಘು ಲಾಠಿ ಪ್ರಹಾರ ಮಾಡಲಾಗಿದೆ. ಅನವಶ್ಯಕ ವಾಗಿ ಬಿಜೆಪಿ ಪ್ರತಿಭಟನೆ ಮಾಡುವುದು ಏಕೆ? ಇದು ಪ್ರಚೋದನೆ ಅಲ್ಲವೇ? ಪ್ರಚೋದನೆ ಮಾಡುವುದರಲ್ಲಿ ಬಿಜೆಪಿಗರು ನಿಸ್ಸೀಮರು' ಎಂದು ದೂರಿದರು.

'ಸರ್ಕಾರ ಪತನವಾಗಲಿದೆ' ಎಂಬ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಕುಮಾರಸ್ವಾಮಿಯವರ ಪಕ್ಷ ಪತನದ ಹಾದಿ ಹಿಡಿಯದಂತೆ ನೋಡಿಕೊಳ್ಳಲಿ' ಎಂದು ತಿರುಗೇಟು ನೀಡಿದರು.

ದಸರಾ ಉದ್ಘಾಟಿಸಲು ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವುದನ್ನು ಪ್ರಶ್ನಿಸಿ ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಕೋರ್ಟ್ ಮೊರೆ ಹೋಗಿರುವ ವಿಚಾರವಾಗಿ ಮಾತನಾಡಿದ ಮುಖ್ಯಮಂತ್ರಿ, 'ಕೋರ್ಟ್ ತೀರ್ಮಾನ ಮಾಡಲಿ. ನಿಸಾರ್ ಅಹಮದ್, ಮಿರ್ಜಾ ಇಸ್ಮಾಯಿಲ್ ದಸರಾ ಉದ್ಘಾಟಿಸಿದಾಗ ಯಾರೂ ಕೋರ್ಟ್‌ಗೆ ಹೋಗಿರಲಿಲ್ಲ' ಎಂದರು.

'ಹಿಂದುತ್ವ ಪರ ಸಂಘಟನೆ ಶಾಮೀಲು'

ತುಮಕೂರು: 'ಮದ್ದೂರಿನಲ್ಲಿ ಗಣೇಶ ಮೂರ್ತಿ ವಿಸರ್ಜನೆ ವೇಳೆ ಕಲ್ಲು ತೂರಾಟ ನಡೆಸಿದವರ ಜತೆ ಹಿಂದುತ್ವ ಪರ ಸಂಘಟನೆ ಸದಸ್ಯರೂ ಸೇರಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ಸೋಮವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಘಟನೆಗೆ ಸಂಬಂಧಿಸಿ ಬಂಧಿಸಿರುವವರನ್ನು ಪೊಲೀಸರು ತನಿಖೆಗೆ ಒಳಪಡಿಸಿದ್ದಾರೆ. ಯಾರೆಲ್ಲ ಸೇರಿ ಕಲ್ಲು ತೂರಾಟ ನಡೆಸಿದ್ದಾರೆ ಎಂದು ಗೊತ್ತಿಲ್ಲ. ಹಿಂದುತ್ವ ಪರ ಸಂಘಟನೆಯವರು ಎಂದು ಪೊಲೀಸರು ಹೇಳುತ್ತಿದ್ದಾರೆ. ತನಿಖೆ ಪೂರ್ಣ ಗೊಂಡ ನಂತರ ಸತ್ಯಾಂಶ ಗೊತ್ತಾಗ ಲಿದೆ' ಎಂದರು.



ಜಿ.ಪರಮೇಶ್ವರ

ಪೊಲೀಸರು ಪರಿಸ್ಥಿತಿ ಕೈ ಮೀರಿದಾಗ ಲಾಠಿಪ್ರಹಾರ ಮಾಡಿದ್ದಾರೆ. ಈಗ ಬಂಧನದಲ್ಲಿ ಇರುವವರೂ ಕಲ್ಲು ತೂರಾಟ ನಡೆಸಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳ ಲಾಗುವುದು ಎಂದು ಹೇಳಿದರು.

'ಕಾಂಗ್ರೆಸ್‌ನ ಕೆಟ್ಟ ಆಡಳಿತದಿಂದ ಗಲಭೆ'

ನವದೆಹಲಿ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕೆಟ್ಟ ಆಡಳಿತ, ನಡವಳಿಕೆಯಿಂದಲೇ ಮದ್ದೂರಿನಲ್ಲಿ ಗಣಪತಿ ಮೆರವಣಿಗೆ ಮೇಲೆ ಕಲ್ಲು ಎಸೆಯುವಂಥ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.



ಕುಮಾರಸ್ವಾಮಿ

'ಮಂಡ್ಯ ಜಿಲ್ಲೆ ಯಾವಾಗಲೂ ಶಾಂತಿ ಸೌಹಾರ್ದಕ್ಕೆ ಹೆಸರಾಗಿದೆ. ಜನರು ಕಷ್ಟಪಟ್ಟು ಕೆಲಸ ಮಾಡುತ್ತಾ ನೆಮ್ಮದಿ ಜೀವನ ಮಾಡುತ್ತಿದ್ದಾರೆ. ಕುವೆಂಪು ಅವರ ಆಶಯದ ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ಆದರೆ, ಕೆಲ ಶಕ್ತಿಗಳು ವ್ಯವಸ್ಥಿತವಾಗಿ ಜನರ ನೆಮ್ಮದಿ ಹಾಳು ಮಾಡುವ ಕೆಲಸ ಮಾಡುತ್ತಿವೆ. ಕಾಂಗ್ರೆಸ್ ಪಕ್ಷದ ಓಲೈಕೆ ರಾಜಕಾರಣದಿಂದ ಇಂಥ ಕೆಟ್ಟ ಪರಿಸ್ಥಿತಿ ರಾಜ್ಯದ ಉದ್ದಗಲಕ್ಕೂ ಸೃಷ್ಟಿಯಾಗಿದೆ' ಎಂದರು.

ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ಸೂಚಿಸಿದ್ದೇನೆ ಎಂದು ಕೇಂದ್ರ ಸಚಿವರು ಹೇಳಿದರು.

ಇಂಥ ಗಲಭೆಗಳನ್ನು ನೋಡಿದರೆ ಕಾಂಗ್ರೆಸ್ ಪಕ್ಷದ ಅವನತಿ ಆರಂಭವಾಗಿದೆ ಎಂದು ಅರ್ಥವಾಗುತ್ತದೆ. ಇವೆಲ್ಲವನ್ನೂ ಕಾಂಗ್ರೆಸ್ ಅರ್ಥ ಮಾಡಿಕೊಳ್ಳದಿದ್ದರೆ ಇದು 'ಸೆಲ್ಫ್ ಸೂಸೈಡ್' ಆಗಲಿದೆ ಎಂದು ಎಚ್ಚರಿಸಿದರು.

ನಿಖಿಲ್ ಆಕ್ರೋಶ; ಮದ್ದೂರು ವರದಿ: 'ಶಾಂತಿಗೆ ಹೆಸರಾದ ಜಿಲ್ಲೆಯಲ್ಲಿ ಅಶಾಂತಿ ತಲೆದೋರಿದ್ದು, ವೋಟ್ ಬ್ಯಾಂಕ್‌ಗಾಗಿ ಕಾಂಗ್ರೆಸ್ ಓಲೈಕೆ ರಾಜಕಾರಣ ಮಾಡುತ್ತಿದೆ. ಸಿ.ಎಂ, ಗೃಹ ಸಚಿವರು ಅಸಮರ್ಥ ಆಗಿದ್ದಾರೆ' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪಿಸಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸುವ ಮುನ್ನ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಪೊಲೀಸರು ಸರ್ಕಾರ, ಗೃಹ ಸಚಿವರ ಒತ್ತಡ ಹಾಗೂ ಸಮಾಜ ಘಾತುಕ ಶಕ್ತಿಗಳಿಗೆ ಮಣಿಯಬಾರದು. ಘಟನೆಗೆ ಕಾರಣರಾದವರನ್ನು ಬಂಧಿಸದಿದ್ದರೆ ನಾವು ಸುಮ್ಮನಿರುವುದಿಲ್ಲ' ಎಂದರು.

ಎಂದೂ ಹೀಗಾಗಿರಲಿಲ್ಲ: ನಾನು ಶಾಸಕನಾಗಿದ್ದಾಗ ಎಂದೂ ಇಂಥ ಘಟನೆ ನಡೆದಿರಲಿಲ್ಲ' ಎಂದು ಮಾಜಿ ಶಾಸಕ ಡಿ.ಸಿ.ತಮ್ಮಣ್ಣ ಪ್ರತಿಪಾದಿಸಿದರು.

ಪ್ರತಿಭಟನಾ ಮೆರವಣಿಗೆಯಲ್ಲಿ ಮಾತನಾಡಿ, 'ಘಟನೆಗೆ ಪೊಲೀಸರೇ ಕಾರಣ. ಸಿಪಿಐ ಒಬ್ಬ ಅರೆಹುಚ್ಚ. ಇಲ್ಲಿನ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು' ಎಂದು ಆಗ್ರಹಿಸಿದರು.

'ಗಣೇಶ ಮೂರ್ತಿ ಮೇಲೆ ಕಲ್ಲು ತೂರಿದ ಮುಲ್ಲಾಗಳ ವಿರುದ್ಧ ಕೂಡಲೇ ಕ್ರಮವಾಗಬೇಕು, ಮಸೀದಿಗಳನ್ನು ಮುಚ್ಚಿಸಬೇಕು' ಎಂದು ಬಿಜೆಪಿ ಮುಖಂಡ ಪ್ರತಾಪ್ ಸಿಂಹ ಆಗ್ರಹಿಸಿದರು.

ಮದ್ದೂರಿಗೆ ಬಿಜೆಪಿ ನಿಯೋಗ ನಾಳೆ

ಬಿಜೆಪಿ ನಾಯಕರ ನಿಯೋಗವು ಬುಧವಾರ ಮದ್ದೂರಿಗೆ ಭೇಟಿ ನೀಡಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು. ಈ ನಿಯೋಗದಲ್ಲಿ ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಇರಲಿದ್ದಾರೆ ಎಂದರು.




ವಿಜಯೇಂದ್ರ

ಮದ್ದೂರಿನ ಗಲಭೆಕೋರರನ್ನು ಕೂಡಲೇ ಒದ್ದು ಒಳಗೆ ಹಾಕಬೇಕು ಎಂದು ಆಗ್ರಹಿಸಿದರು. 'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಗೃಹ ಸಚಿವರ ಹೇಳಿಕೆ ಗಮನಿಸಿದರೆ ಮೈ ಉರಿಯುತ್ತದೆ. ಹೆಣ್ಣುಮಕ್ಕಳ ಮೇಲಿನ ಲಾಠಿಚಾರ್ಜ್ ಅನ್ನು ಸಣ್ಣಪುಟ್ಟ ಘಟನೆ ಎಂದು ಗೃಹ ಸಚಿವರು ಹೇಳಿಕೆ ನೀಡಿದ್ದಾರೆ. ದರಿದ್ರ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಹಿಂದೂಗಳಿಗೆ ಅಪಮಾನ ಹಾಗೂ ಅವರ ಭಾವನೆಗಳಿಗೆ ಧಕ್ಕೆ ಆಗುತ್ತಿದೆ' ಎಂದರು.

'ಮ್ಯಾಜಿಸ್ಟೀರಿಯಲ್ ತನಿಖೆ ಆಗಲಿ'

ಮದ್ದೂರಿನಲ್ಲಿ ನಡೆದ ಘಟನೆ ಪೂರ್ವ ಯೋಜಿತ ಕೃತ್ಯ. ಪೊಲೀಸ್ ಇಲಾಖೆ ಹಾಗೂ ಸರ್ಕಾರದ ವೈಫಲ್ಯದಿಂದ ಈ ಘಟನೆ ಸಂಭವಿಸಿದೆ. ಈ ಬಗ್ಗೆ ಮ್ಯಾಜಿಸ್ಟೀರಿಯಲ್ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.



ಬೊಮ್ಮಾಯಿ

'ಅತಿವೃಷ್ಟಿಯಿಂದ ₹550 ಕೋಟಿ ನಷ್ಟ'

ಬೆಳೆ, ಮನೆಗಳಿಗೆ ಪರಿಹಾರ– ತಕ್ಷಣ ಕ್ರಮಕ್ಕೆ ಸಿ.ಎಂ ಸಿದ್ದರಾಮಯ್ಯ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತಿವೃಷ್ಟಿಯಿಂದಾಗಿ ಸುಮಾರು ₹550 ಕೋಟಿಯ ನಷ್ಟ ಆಗಿರಬಹುದು ಎಂದು ಅಂದಾಜಿಸಲಾಗಿದ್ದು, ಬೆಳೆ, ಮನೆ ಹಾನಿಗೆ ಪರಿಹಾರ ಒದಗಿಸಲು ತಕ್ಷಣ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಳೆ ಹಾನಿ ಹಾಗೂ ಪರಿಹಾರ ಕ್ರಮಗಳ ಕುರಿತು ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಜೊತೆ ಸೋಮವಾರ ಅವರು ವಿಡಿಯೊ ಸಂವಾದ ನಡೆಸಿದರು. ಬಳಿಕ ಮಾತನಾಡಿದ ಅವರು, 'ರಾಜ್ಯದಾದ್ಯಂತ ಮಳೆಯಿಂದ ಸುಮಾರು 5,20,663 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಏಪ್ರಿಲ್ ನಿಂದ ಈವರೆಗೆ 111 ಮಂದಿ ಸಾವಿಗೀಡಾಗಿದ್ದಾರೆ' ಎಂದರು.

'ಮುಂಗಾರು ಹಂಗಾಮಿನಲ್ಲಿ ಚಾಮರಾಜನಗರದಲ್ಲಿ ಶೇ 24ರಷ್ಟು ಕಡಿಮೆ ಮಳೆಯಾಗಿದೆ. ವಿಜಯಪುರ, ಗದಗ, ಬಾಗಲಕೋಟೆ, ದಾವಣಗೆರೆ, ತುಮಕೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಶೇ 20ಕ್ಕಿಂತ ಹೆಚ್ಚು ಮಳೆ ದಾಖಲಾಗಿದೆ. ವಾಡಿಕೆಗಿಂತ ಶೇ 19ರಷ್ಟು ಹೆಚ್ಚು ಮಳೆಯಾಗಿದ್ದಲ್ಲಿ, ಆ ಜಿಲ್ಲೆಗಳನ್ನು ಬರಪೀಡಿತ ಎಂದು ಘೋಷಿಸಲು ನಿಯಮಗಳಡಿ ಅವಕಾಶ ಇಲ್ಲ' ಎಂದರು.

'ಬೆಳೆ ಹಾನಿ ಬಗ್ಗೆ ಜಂಟಿ ಸಮೀಕ್ಷೆ ಕಾರ್ಯ ನಡೆಯುತ್ತಿದೆ. ಆದಷ್ಟು ಬೇಗ ಸಮೀಕ್ಷೆ ಪೂರ್ಣಗೊಳಿಸಿ 10 ದಿನಗಳ ಒಳಗೆ ವರದಿ ನೀಡಲು ಸೂಚಿಸಲಾಗಿದೆ' ಎಂದು ಹೇಳಿದರು.

'ಮಳೆಗೆ ಸಂಬಂಧಿಸಿದಂತೆ ಸಾವು ಸಂಭವಿಸಿದ ಎಲ್ಲ ಪ್ರಕರಣಗಳಲ್ಲಿ ಪರಿಹಾರ ವಿತರಿಸಲಾಗಿದೆ. ಒಟ್ಟು ₹ 5.55 ಕೋಟಿ ಪರಿಹಾರ ನೀಡಲಾಗಿದೆ. ಜಾನುವಾರುಗಳು ಸಾವಿಗೀಡಾದ ಪ್ರಕರಣಗಳಲ್ಲಿ ₹1.52 ಕೋಟಿ ಪರಿಹಾರ ವಿತರಿಸಲಾಗಿದೆ. ಸಂಪೂರ್ಣ ಹಾನಿಯಾದ 649 ಮನೆಗಳಿಗೆ ಹಾಗೂ ಭಾಗಶಃ ಹಾನಿಯಾದ 8,608 ಮನೆಗಳಿಗೆ ಪರಿಹಾರ ನೀಡಲಾಗಿದೆ' ಎಂದರು.

ಬದಲಾವಣೆಗೆ ಸೂಚನೆ: 'ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ನೀರಿನ ಮಟ್ಟ ಕಳೆದ ವರ್ಷಕ್ಕೆ ಹೋಲಿಸಿದರೆ ಸ್ವಲ್ಪ ಕಡಿಮೆಯಿದೆ. ತುಂಗಭದ್ರಾ ಜಲಾಶಯದಲ್ಲಿ ಮಾತ್ರ ಕಡಿಮೆ ನೀರು ಸಂಗ್ರಹಿಸಲಾಗಿದೆ. ಅಲ್ಲಿನ ಕ್ರೆಸ್ಟ್ ಗೇಟುಗಳು ಹಾನಿಯಾಗುತ್ತವೆ ಎಂಬ ವರದಿಯ ಕಾರಣ, ಮುಂಜಾಗ್ರತಾ ಕ್ರಮವಾಗಿ 80 ಟಿಎಂಸಿ ಅಡಿಗೆ ನಿಲ್ಲಿಸಿದ್ದೇವೆ. ಅದರ ಸಾಮರ್ಥ್ಯ 105 ಟಿಎಂಸಿ ಅಡಿ' ಎಂದು ಮಾಹಿತಿ ನೀಡಿದರು.

'ತುಂಗಭದ್ರಾ ಅಣೆಕಟ್ಟಿನ 32 ಕ್ರೆಸ್ಟ್ ಗೇಟ್ ಬದಲಾವಣೆಗೆ ಟೆಂಡರ್ ಆಗಿದೆ. ಎಂಟು ಕ್ರೆಸ್ಟ್ ಗೇಟ್‌ಗಳು ಅಳವಡಿಕೆಗೆ ಸಿದ್ಧವಿವೆ' ಎಂದು ಅಧಿಕಾರಿಗಳು ವಿವರಿಸಿದರು.

'ಅಡಿಕೆ ಮತ್ತು ತೆಂಗು ಬೆಳೆಗಳಿಗೆ ಉಂಟಾಗಿರುವ ಹಾನಿ ಬಗ್ಗೆ ಪರಿಶೀಲಿಸಲು ತೋಟಗಾರಿಕಾ ಇಲಾಖೆ ಜತೆ ಪ್ರತ್ಯೇಕ ಸಭೆ ನಡೆಸಲಾಗುವುದು. ಎಲೆ ಚುಕ್ಕಿ ರೋಗಕ್ಕೆ ಬಜೆಟ್‌ನಲ್ಲಿ ಈಗಾಗಲೇ ಅನುದಾನ ಒದಗಿಸಿದ್ದೇವೆ. ಹಿಂಗಾರು ಬಿತ್ತನೆಗೆ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ ಸೇರಿದಂತೆ ಈಗಲೇ ತಯಾರಿ ಮಾಡುವಂತೆ ಸೂಚನೆ ನೀಡಿದ್ದೇನೆ' ಎಂದೂ ಅವರು ತಿಳಿಸಿದರು.

ಮುಖ್ಯಾಂಶಗಳು

- ಹಿಂಗಾರು ಬಿತ್ತನೆಗೆ ಅಗತ್ಯ ಸಿದ್ಧತೆ ನಡೆಸಿಕೊಳ್ಳಿ
- ತೋಟಗಾರಿಕೆ ಇಲಾಖೆ ಅಧಿಕಾರಿಗಳೊಂದಿಗೆ ಪ್ರತ್ಯೇಕ ಚರ್ಚೆ
- ಎಲೆಚುಕ್ಕಿ ರೋಗಕ್ಕೆ ಅನುದಾನ

ಮಳೆ ಹಾನಿಗೆ ಪರಿಹಾರ ನೀಡಲು ಅನುದಾನ ಕೊರತೆ ಇಲ್ಲ. ಹೆಚ್ಚುವರಿ ಪರಿಹಾರ ಒದಗಿಸುವ ಕುರಿತು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗುವುದು

ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಂಕಿ ಅಂಶಗಳು

₹550 ಕೋಟಿ ಮಳೆ ಹಾನಿ ಅಂದಾಜು

₹1,385.21 ಕೋಟಿ ಡಿಸಿಗಳ ಪಿ.ಡಿ ಖಾತೆ ಮತ್ತು ತಹಶೀಲ್ದಾರ್ ವಿಪತ್ತು ನಿಧಿ ಅಡಿ ಲಭ್ಯ ಅನುದಾನ

721 ಮಿ.ಮೀ ಜೂನ್ 1ರಿಂದ ಸೆಪ್ಟೆಂಬರ್ ಮೊದಲ ವಾರದವರೆಗೆ ವಾಡಿಕೆ ಮಳೆ

753 ಮಿ.ಮೀ ಆಗಿರುವ ಮಳೆ

4 % ಹೆಚ್ಚುವರಿ ಮಳೆ


82.50 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ

80.76 ಲಕ್ಷ ಹೆಕ್ಟೇರ್ (ಶೇ 98) ಬಿತ್ತನೆ ಆಗಿರುವುದು

111 ಏಪ್ರಿಲ್‌ನಿಂದ ಈವರೆಗೆ ಸಾವು

766 ಜಾನುವಾರುಗಳು ಸಾವು

5,20,663 ಹೆಕ್ಟೇರ್ ಬೆಳೆ ಹಾನಿ ಒಟ್ಟು ಪ್ರದೇಶ



40,407 ಹೆಕ್ಟೇರ್ ತೋಟಗಾರಿಕಾ ಬೆಳೆ ಹಾನಿ

ಕೃಷಿ ಬೆಳೆ ಹಾನಿ

ಯಾವುದಕ್ಕೆಲ್ಲ ಹಾನಿ

651	ಸಂಪೂರ್ಣ ಹಾನಿಯಾದ ಮನೆಗಳು
9,087	ಭಾಗಶಃ ಹಾನಿಯಾದ ಮನೆಗಳು
683	ಕಿ.ಮೀ. ರಾಜ್ಯ ಹೆದ್ದಾರಿ
1,383	ಜಿಲ್ಲಾ ಪ್ರಮುಖ ಹೆದ್ದಾರಿ
5,558	ಗ್ರಾಮೀಣ ರಸ್ತೆಗಳು
656	ಸೇತುವೆಗಳು
1,877	ಶಾಲಾ ಕಟ್ಟಡಗಳು
160	ಪ್ರಾಥಮಿಕ ಆರೋಗ್ಯ ಕೇಂದ್ರಗಳು
1,018	ಅಂಗನವಾಡಿಗಳು
25,279	ವಿದ್ಯುತ್ ಕಂಬಗಳು
819	ಟ್ರಾನ್ಸ್‌ಫಾರ್ಮರ್‌ಗಳು
31	ಸಣ್ಣ ನೀರಾವರಿ ಕೆರೆಗಳು

ಎಲ್ಲಿ, ಎಷ್ಟು ಮಳೆ

- ಚಾಮರಾಜನಗರದಲ್ಲಿ ಶೇ 24ರಷ್ಟು ಕಡಿಮೆ
- ವಿಜಯಪುರ, ಗದಗ, ಬಾಗಲಕೋಟೆ, ದಾವಣಗೆರೆ, ತುಮಕೂರು, ಬೆಳಗಾವಿ ಜಿಲ್ಲೆಯಲ್ಲಿ ಶೇ 20ಕ್ಕಿಂತ ಹೆಚ್ಚು
- 24 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ

ಪ್ರಮುಖ ಜಲಾಶಯಗಳಲ್ಲಿ ನೀರಿನ ಸಂಗ್ರಹ

- 895.62 ಟಿಎಂಸಿ ಅಡಿ ಒಟ್ಟು ಗರಿಷ್ಠ ಸಾಮರ್ಥ್ಯ
- 840.52 ಟಿಎಂಸಿ ಅಡಿ ಪ್ರಸ್ತುತ ಸಂಗ್ರಹ
- 856.17 ಟಿಎಂಸಿ ಅಡಿ ಕಳೆದ ವರ್ಷ ಇದೇ ಅವಧಿಯಲ್ಲಿ ಸಂಗ್ರಹ

'ಗ್ಯಾರಂಟಿಗಳಿಗೆ ₹97,813 ಕೋಟಿ ವೆಚ್ಚ'

ಸಿ.ಎಂ. ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಯಾರಂಟಿ ಯೋಜನೆಯಡಿ ಈವರೆಗೆ ₹97,813 ಕೋಟಿ ಖರ್ಚು ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಸೋಮವಾರ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಅವರು ಈ ಮಾಹಿತಿ ನೀಡಿದರು.

ಈ ಪೈಕಿ ಗೃಹಲಕ್ಷ್ಮಿ ಯೋಜನೆಯಡಿ 1.24 ಕೋಟಿ ಫಲಾನುಭವಿಗಳಿಗೆ ₹50,005 ಕೋಟಿ, ಗೃಹಜ್ಯೋತಿ ಯೋಜನೆಯಡಿ 1.64 ಕೋಟಿ ಫಲಾನುಭವಿಗಳಿಗೆ ₹18,139 ಕೋಟಿ, ಯುವನಿಧಿ ಯೋಜನೆಯಡಿ 2.55 ಲಕ್ಷ ಫಲಾನುಭವಿಗಳಿಗೆ ₹623 ಕೋಟಿ, ಶಕ್ತಿ ಯೋಜನೆಯಡಿ 544 ಕೋಟಿ ಬಾರಿ ಪ್ರಯಾಣಿಸಿದ್ದಕ್ಕೆ ₹13,903 ಕೋಟಿ ಮತ್ತು ಅನ್ನಭಾಗ್ಯ ಯೋಜನೆಯಡಿ 72.02 ಕೋಟಿ ಫಲಾನುಭವಿಗಳಿಗೆ ₹11,821.17 ಕೋಟಿ ವೆಚ್ಚ ಮಾಡಲಾಗಿದೆ ಎಂದು ಹೇಳಿದರು.

ಮರಣ ಹೊಂದುವ ಫಲಾನುಭವಿಗಳ ಪಟ್ಟಿಯನ್ನು ಪ್ರತಿ ತಿಂಗಳು ಪಂಚಾಯತ್ ಹಂತದಲ್ಲಿ ನವೀಕರಿಸಿ ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಮಾಹಿತಿ ಒದಗಿಸಬೇಕು. ಮರಣ ಹೊಂದುವ ಫಲಾನುಭವಿಗಳ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಬೇಕು ಎಂದರು.



'ಶಕ್ತಿ' ಯೋಜನೆಗೆ ಲಭಿಸಿದ 'ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್'ನ ಪ್ರಮಾಣ ಪತ್ರವನ್ನು ರಾಮಲಿಂಗಾರೆಡ್ಡಿ ಅವರು ಸಿದ್ದರಾಮಯ್ಯ ಅವರಿಗೆ ತೋರಿಸಿದರು. ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ, ಅಧ್ಯಕ್ಷ ಎಚ್.ಎಂ.ರೇವಣ್ಣ, ಕೆ.ಜೆ.ಜಾರ್ಜ್ ಇದ್ದರು

'ವಿಶ್ವದಾಖಲೆ' ಸೃಷ್ಟಿಸಿದ ಶಕ್ತಿ ಯೋಜನೆ

'ರಾಜ್ಯದಲ್ಲಿ 'ಶಕ್ತಿ' ಯೋಜನೆಯಡಿ 500 ಕೋಟಿಗೂ ಹೆಚ್ಚು ಬಾರಿ ಮಹಿಳಾ ಪ್ರಯಾಣಿಕರು ಉಚಿತವಾಗಿ ಬಸ್‌ಗಳಲ್ಲಿ ಪ್ರಯಾಣಿಸಿದ್ದಾರೆ. ಇದು 'ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ ದಾಖಲಾಗಿದೆ. ಇದಕ್ಕೆ ಪ್ರಮಾಣ ಪತ್ರ ಸಿಕ್ಕಿದೆ' ಎಂದು ಸಭೆಯಲ್ಲಿ ಹೇಳಿದ ಸಚಿವ ರಾಮಲಿಂಗಾರೆಡ್ಡಿ ಅವರು ಸಭೆಯಲ್ಲಿ ಪ್ರಮಾಣ ಪತ್ರ ಪ್ರದರ್ಶಿಸಿ ಹರ್ಷ ವ್ಯಕ್ತಪಡಿಸಿದರು.

ಆದಾಯ ತೆರಿಗೆ ರಿಟರ್ನ್ ಸಲ್ಲಿಸುವವರು ಗೃಹಲಕ್ಷ್ಮಿ ಯೋಜನೆ ಲಾಭ ಪಡೆಯುವ ಕುರಿತು ಇರುವ ಗೊಂದಲವನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕು. ಅನರ್ಹ ಬಿಪಿಎಲ್ ಕಾರ್ಡುದಾರರನ್ನು ಗುರುತಿಸಿ ಬಿಪಿಎಲ್ ಕಾರ್ಡ್ ರದ್ದುಪಡಿಸುವ ಕಾರ್ಯವನ್ನು ಪಂಚಾಯತ್ ಮಟ್ಟದಲ್ಲಿ ನಡೆಸಬೇಕು. ಈ ಕುರಿತ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಸೂಚಿಸಿದರು. ಅನ್ನಭಾಗ್ಯ ಯೋಜನೆಯ ಅಕ್ಕಿ ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಅಕ್ಕಿಯ ಬದಲು ಪ್ರದೇಶವಾರು ಇತರ ಧಾನ್ಯಗಳನ್ನು ನೀಡುವ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ಮದ್ದೂರು ಮತ್ತೆ ಪ್ರಕ್ಷುಬ್ಧ

ಒಂದನೇ ಪುಟದಿಂದ...

ಎರಡೂ ಘಟನೆಗಳಿಗೆ ಸಂಬಂಧಿಸಿ ಪೊಲೀಸರು ಎರಡು ಪ್ರತ್ಯೇಕ ಪ್ರಕರಣ ದಾಖಲಿಸಿದ್ದು ಒಟ್ಟು 21 ಮಂದಿಯನ್ನು ಬಂಧಿಸಿದ್ದಾರೆ. ಇನ್ನೂ ನಾಲ್ವರ ವಿಚಾರಣೆ ನಡೆದಿದೆ. ಮಂಗಳವಾರ ಬೆಳಿಗ್ಗೆವರೆಗೆ ಪಟ್ಟಣದಾದ್ಯಂತ ಮುಂಜಾಗ್ರತೆಯಾಗಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಸಂಘಟನೆಗಳ ಕರೆಯ ಮೇರೆಗೆ, ಅಂಗಡಿ ಮಾಲೀಕರು ಸ್ವಯಂಪ್ರೇರಿತರಾಗಿ ಬಾಗಿಲು ಮುಚ್ಚಿ, ಅಘೋಷಿತ 'ಮದ್ದೂರು ಬಂದ್'ಗೆ ಬೆಂಬಲ ಸೂಚಿಸಿದರು. ಶಾಲಾ–ಕಾಲೇಜು, ಸರ್ಕಾರಿ ಕಚೇರಿ, ಹಾಲಿನ ಬೂತ್, ಔಷಧ ಮಳಿಗೆಗಳು ತೆರೆದಿದ್ದವು. ಬಸ್, ಆಟೊ ಸಂಚರಿಸಿದವು. ಬಿಜೆಪಿ, ಬಜರಂಗದಳವು ಸೆಪ್ಟೆಂಬರ್ 9ರಂದು 'ಮದ್ದೂರು ಬಂದ್'ಗೆ ಕರೆ ನೀಡಿದೆ.

ಉಗ್ರನರಸಿಂಹಸ್ವಾಮಿ ದೇಗುಲದಿಂದ ಹೊರಟ ಮೆರವಣಿಗೆಯಲ್ಲಿದ್ದ ಕಾರ್ಯಕರ್ತರು, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಹೂವಿನ ಸರ್ಕಲ್ ಬಳಿ ವಿದ್ಯುತ್ ಕಂಬದಲ್ಲಿದ್ದ ಅನ್ಯ ಕೋಮಿನ ಬಾವುಟವನ್ನು ಕಾರ್ಯಕರ್ತರೊಬ್ಬರು ಕಿತ್ತು, ಭಗವಾಧ್ವಜ ಹಾರಿಸಿದರು.

ಕಬ್ಬಿಣದ ಸಲಾಕೆ ತೋರಿಸಿದ ಯುವಕನನ್ನು ಪೊಲೀಸರು ವಶಕ್ಕೆ ಪಡೆದರು. ಕೆಮ್ಮಣ್ಣು ನಾಲೆ ವೃತ್ತ ಸಮೀಪದ ಮಸೀದಿ ಮುಂಭಾಗ ಕಾರ್ಯಕರ್ತರು, ಟೈರುಗಳಿಗೆ ಬೆಂಕಿ ಹಚ್ಚಿ, ಕಲ್ಲು ತೂರಿದವರ ವಿರುದ್ಧ ಧಿಕ್ಕಾರ ಕೂಗಿದರು. ಮುಂದೆ ಸಾಗುವಂತೆ ಜಿಲ್ಲಾಧಿಕಾರಿ ಕುಮಾರ ಮತ್ತು ಎಸ್ಪಿ ಮನವಿ ಮಾಡಿದರೂ ಕದಲದೆ, ಅರ್ಧಗಂಟೆ ರಂಪಾಟ ನಡೆಸಿದರು. ಅದೇ ವೇಳೆ ಕೆಲವರು ಮಸೀದಿಯತ್ತ ಕಲ್ಲು ತೂರಾಟ ನಡೆಸಿದರು. ಪೊಲೀಸರು ಕೂಡಲೇ ಲಾಠಿ ಪ್ರಹಾರ ನಡೆಸಿ, ಗುಂಪನ್ನು ಚದುರಿಸಿದರು. 'ಇಬ್ಬರು ಮಹಿಳೆಯರ ಮೇಲೆ ಲಾಠಿ ಬೀಸಿದ್ದಾರೆ' ಎಂದು ಆರೋಪಿಸಿ, ಹೊಡೆತದಿಂದ ಮಹಿಳೆಯೊಬ್ಬರು ಬೀದಿಯಲ್ಲಿ ಬಿದ್ದು ಒದ್ದಾಡಿದರು.

ಪ್ರತಿಭಟನಕಾರರು ಬೆಂಗಳೂರು–ಮೈಸೂರು ಸರ್ವಿಸ್ ರಸ್ತೆ ತಡೆದರು. ತಾಲ್ಲೂಕು ಕಚೇರಿಗೂ ಮುತ್ತಿಗೆ ಹಾಕಿದರು. ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭೇಟಿ ನೀಡಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು. ಎಸ್ಪಿ ಮಲ್ಲಿಕಾರ್ಜನ ಬಾಲದಂಡಿ ಅಧಿಕಾರಿಗಳೊಂದಿಗೆ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ. ಆಯಕಟ್ಟಿನ ಸ್ಥಳಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿದ್ದು, ಸಂಜೆ, ಐಜಿಪಿ ಬೋರಲಿಂಗಯ್ಯ ನೇತೃತ್ವದಲ್ಲಿ ಪಥ ಸಂಚಲನ ನಡೆಯಿತು.

ನಾಯಿ ದಾಳಿ 15 ಜನರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಇಲ್ಲಿನ ಎಪಿಎಂಸಿ ಯಾರ್ಡ್‌ನಲ್ಲಿರುವ ಶಾಲೆಯ ಐವರು ವಿದ್ಯಾರ್ಥಿಗಳು ಸೇರಿದಂತೆ 15 ಜನರಿಗೆ ಸೋಮವಾರ ನಾಯಿ ಕಚ್ಚಿದೆ.

ಸಜೀವಿ ಅಂಧ ಮಕ್ಕಳ ಶಾಲೆಯ ಐವರು ವಿದ್ಯಾರ್ಥಿಗಳು, ಆ ಪ್ರದೇಶದಲ್ಲಿರುವ 10 ಜನರ ಮೇಲೆ ನಾಯಿ ದಾಳಿ ಮಾಡಿದೆ. ಗಾಯಾಳುಗಳಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ನ್ಯಾಯಾಂಗ ಬಂಧನಕ್ಕೆ ಶಾಸಕ ವೀರೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ಮೂಲಕ ಅಕ್ರಮ ಚಟುವಟಿಕೆ ನಡೆಸುತ್ತಿದ್ದ ಆರೋಪದಡಿ ಕಳೆದ 15 ದಿನಗಳಿಂದ ಜಾರಿ ನಿರ್ದೇಶನಾಲಯದ (ಇ.ಡಿ) ವಶದಲ್ಲಿದ್ದ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ ಅವರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಇದೇ 22ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಇ.ಡಿ ಕಸ್ಟಡಿ ಅವಧಿ ಸೋಮವಾರಕ್ಕೆ ಮುಕ್ತಾಯ ಗೊಂಡ ಕಾರಣ ವೀರೇಂದ್ರ ಅವರನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದೆ ಮಧ್ಯಾಹ್ನ ಹಾಜರುಪಡಿಸಲಾಯಿತು.

ವಿಚಾರಣೆ ವೇಳೆ ಇ.ಡಿ ಪರ ವಿಶೇಷ ಪ್ರಾಸಿಕ್ಯೂಟರ್ ಐ.ಎಸ್.ಪ್ರಮೋದ್ ಚಂದ್ರ ಅವರು, 'ಆರೋಪಿಯ ಅಕ್ರಮ ಚಟುವಟಿಕೆ ಮತ್ತು ಆರ್ಥಿಕ ಹೇರಾಫೇರಿಗಳ ಕುರಿತಾಗಿ ತನಿಖಾಧಿಕಾರಿ ಸಾಕಷ್ಟು ಪ್ರಮುಖ ಸಾಕ್ಷ್ಯ ಸಂಗ್ರಹಿಸಿದ್ದಾರೆ. ಈತನಕ ನಗದು, ಬಂಗಾರ ಸೇರಿದಂತೆ ₹100 ಕೋಟಿ ಮೌಲ್ಯದ ಚರಾಸ್ತಿ ವಶಪಡಿಸಿಕೊಳ್ಳಲಾಗಿದೆ. ಈ ಹಂತದಲ್ಲಿ ನ್ಯಾಯಾಲಯ ಅವರಿಗೆ ಯಾವುದೇ ಉದಾರತೆ ತೋರಿ ಹೊರಗೆ ಬಿಟ್ಟಿದ್ದೇ ಆದರೆ ಸಾಕ್ಷ್ಯ ನಾಶಕ್ಕೆ ಪ್ರಯತ್ನಿಸುವ ಸಾಧ್ಯತೆ ಇದೆ. ಆದ್ದರಿಂದ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಬೇಕು' ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು ವೀರೇಂದ್ರರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಎಚ್‌ಡಿಕೆಗೆ ಮತ್ತೆ ತನಿಖೆ ಬಿಸಿ

ಒಂದನೇ ಪುಟದಿಂದ...

ಪ್ರಕರಣವೇನು?: 'ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಸೇರಿದಂತೆ ಇತರರು ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ಕೇತಗಾನಹಳ್ಳಿಯ ಸರ್ವೆ ನಂಬರ್ 8, 9, 10, 16, 17 ಮತ್ತು 79ರಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯ ಅನುಸಾರ ಕ್ರಮ ಕೈಗೊಳ್ಳಬೇಕು ಎಂದು 2020ರಲ್ಲಿ ಹೈಕೋರ್ಟ್ ಆದೇಶಿಸಿತ್ತು.

'ಈ ಆದೇಶವನ್ನು ಜಾರಿಗೊಳಿಸಿಲ್ಲ' ಎಂದು ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್.ಹಿರೇಮಠ ಅವರು, ರಾಜ್ಯ ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಐಎಎಸ್ ಅಧಿಕಾರಿ ಅಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ 2025ರ ಜನವರಿ 28ರಂದು ಆದೇಶಿಸಲಾಗಿತ್ತು.

ಈ ಆದೇಶವನ್ನು ಪ್ರಶ್ನಿಸಿ ಎಚ್.ಡಿ.ಕುಮಾರಸ್ವಾಮಿ ರಿಟ್ ಅರ್ಜಿ ಸಲ್ಲಿಸಿದ್ದರು.

ರಾಜ್ಯ ಗುತ್ತಿಗೆದಾರರ ಸಂಘಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ


'ಜ್ಯೇಷ್ಠತೆ ಆಧಾರದಲ್ಲಿ ಶೀಘ್ರ ಬಿಲ್ ಪಾವತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಸಂಪನ್ಮೂಲ ಇಲಾಖೆ ಹಾಗೂ ಬಿಬಿಎಂಪಿಯಿದ್ದಾಗ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಜ್ಯೇಷ್ಠತೆ ಆಧಾರದಲ್ಲಿ ಶೀಘ್ರವೇ ಬಿಲ್ ಪಾವತಿ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ರಾಜ್ಯ ಗುತ್ತಿಗೆದಾರರ ಸಂಘ ಹಾಗೂ ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳಿಂದ ಮನವಿ ಸ್ವೀಕರಿಸಿದ ಅವರು, 'ಎಲ್ಲ ಬೇಡಿಕೆಗಳನ್ನು ಈಡೇರಿಸಲಾಗುತ್ತದೆ' ಎಂದು ಆಶ್ವಾಸನೆ ನೀಡಿದರು.

'ನಾಲ್ಕು ನೀರಾವರಿ ನಿಗಮಗಳಲ್ಲಿ ಮೂರು ವರ್ಷದಿಂದ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರಿಗೆ ಹಣ ಬಿಡುಗಡೆ ಆಗಿಲ್ಲ. ₹50 ಲಕ್ಷದಿಂದ ₹3 ಕೋಟಿವರೆಗೆ ಬಾಕಿ ಇರುವ ಬಿಲ್ ಪಾವತಿಸಲು ಆದ್ಯತೆ ನೀಡಬೇಕು. ಕಾಯ್ದೆ ಪಾಲಿಸದೆ ಬಿಲ್ ಬಿಡುಗಡೆ ಮಾಡಲಾಗುತ್ತಿದ್ದು, ಜ್ಯೇಷ್ಠತೆ ಆಧಾರದಲ್ಲೇ ಪಾವತಿಸಬೇಕು' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಮನವಿ ಮಾಡಿದರು.



ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು

'ಕಾಮಗಾರಿ ಮುಗಿದು 10 ವರ್ಷ ಆಗಿದ್ದರೂ, ಠೇವಣಿ ಹಾಗೂ ಭದ್ರತಾ ಹಣವನ್ನು ನೀರಾವರಿ ನಿಗಮಗಳ ಅಧಿಕಾರಿಗಳು ಬಿಡುಗಡೆ ಮಾಡಿಲ್ಲ' ಎಂದು ದೂರಿದರು.

'ಗುತ್ತಿಗೆದಾರರ ₹50 ಲಕ್ಷ ದವರೆಗೆ ಬಿಲ್ ಪಾವತಿಗೆ ಕೂಡಲೇ ಆದೇಶ ಮಾಡುತ್ತೇನೆ. ಎಲ್‌ಒಸಿ, ಠೇವಣಿ, ಭದ್ರತೆ ಹಣ ಬಿಡುಗಡೆ ಸೂಚಿಸುತ್ತೇನೆ. ಬಾಕಿಯಿರುವ ಬಿಲ್ ಪಾವತಿಯನ್ನು ಜ್ಯೇಷ್ಠತೆ ಆಧಾರದಲ್ಲೇ ಮಾಡುವಂತೆ ತಾಕೀತು ಮಾಡುತ್ತೇನೆ' ಎಂದು ಶಿವಕುಮಾರ್ ಹೇಳಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಲ್ ಪಾವತಿ ಎರಡು ವರ್ಷಗಳಿಂದ ಬಾಕಿ ಉಳಿದಿದೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) ಮೂಲಕ ಮುಗಿದಿರುವ ಕಾಮಗಾರಿಗಳಿಗೆ ಐದಾರು ವರ್ಷದಿಂದ ಬಿಲ್ ಬಾಕಿ ಉಳಿದಿದ್ದು, ಕೂಡಲೇ ಬಿಡುಗಡೆ ಮಾಡಬೇಕು' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ನಂದಕುಮಾರ್ ಮನವಿ ಮಾಡಿದರು.

ಜಿಬಿಎಯಿಂದ ಬಿಡುಗಡೆ: 'ಬಿಬಿಎಂಪಿ ಇದ್ದಾಗ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಜಿಬಿಎ ₹750 ಕೋಟಿ ಹಣ ಬಿಡುಗಡೆ ಮಾಡಲಾಗುತ್ತದೆ. ಇನ್ನೊಂದು ತಿಂಗಳಲ್ಲಿ ಬಾಕಿ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಶಿವಕುಮಾರ್ ತಿಳಿಸಿದರು.

ಜಮೀನು ದಾಖಲೆ ಬಿಡುಗಡೆ

ತಾಯಿ ಅನಿತಾ ಹೆಸರಲ್ಲಿ ಜಮೀನು ಇಲ್ಲ ಎಂದಿದ್ದ ನಿಖಿಲ್

ಪ್ರಜಾವಾಣಿ ವಾರ್ತೆ

ರಾಮನಗರ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಪತ್ನಿ ಅನಿತಾ ಕುಮಾರಸ್ವಾಮಿ ಮತ್ತು ಪುತ್ರ ನಿಖಿಲ್ ಕುಮಾರಸ್ವಾಮಿ ಅವರು ಬಿಡದಿ ಸಮಗ್ರ ಉಪನಗರ ಯೋಜನಾ ಪ್ರದೇಶದ ಹೊಸೂರಿನಲ್ಲಿ ಹೊಂದಿರುವ ಜಮೀನು ದಾಖಲೆಗಳನ್ನು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಡಿಎ) ಅಧ್ಯಕ್ಷ ಗಾಣಕಲ್ ನಟರಾಜ್ ಸೋಮವಾರ ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು.

'ನನ್ನ ತಾಯಿ ಭೂ ಪರಿಹಾರಕ್ಕೆ ಅರ್ಜಿ ಸಲ್ಲಿಸಿರುವುದನ್ನು ಡಿ.ಕೆ. ಶಿವಕುಮಾರ್ ಸಾಬೀತು ಪಡಿಸಿದರೆ ತಾಯಿ ಹೆಸರಿನಲ್ಲಿರುವ ಎಲ್ಲ ಜಮೀನನ್ನು ಬಡವರಿಗೆ ದಾನ ಮಾಡುತ್ತೇನೆ' ಎಂದು ನಿಖಿಲ್ ಕುಮಾರಸ್ವಾಮಿ ಭಾನುವಾರ ಬೆಂಗಳೂರಿನಲ್ಲಿ ನಡೆದ ಜೆಡಿಎಸ್ ಸಮಾವೇಶದಲ್ಲಿ ಸವಾಲು ಹಾಕಿದ್ದರು.

ಈ ಸವಾಲಿಗೆ ಉತ್ತರವಾಗಿ ಇಬ್ಬರ ಜಮೀನು ದಾಖಲೆಗಳನ್ನು ಪ್ರದರ್ಶಿಸಿದ ನಟರಾಜ್, 'ಯೋಜನೆಯ ಪ್ರಾಥಮಿಕ ಅಧಿಸೂಚನೆ ವಿಶೇಷ ರಾಜ್ಯಪತ್ರ ಮಾರ್ಚ್ 14ರಂದು ಪ್ರಕಟವಾಗಿತ್ತು. 26ರಂದು ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಯಲ್ಲಿ ಜಾಹೀರಾತು ನೀಡಲಾಗಿತ್ತು. ಇದಾದ ಮೂರೇ ದಿನಕ್ಕೆ ಮಾರ್ಚ್ 29ರಂದು ಇಬ್ಬರೂ ಪ್ರಾಧಿಕಾರದ ಆಯುಕ್ತರಿಗೆ ಪತ್ರ ಬರೆದಿದ್ದಾರೆ' ಎಂದು ಹೇಳಿದರು.



ಗಾಣಕಲ್ ನಟರಾಜ್ ಅವರು ಜಮೀನಿನ ದಾಖಲೆ ಪ್ರದರ್ಶಿಸಿದರು

'ಹೊಸೂರಿನ ಸರ್ವೆ ನಂ. 26ರಲ್ಲಿ ನಾಲ್ಕು ಎಕರೆ ಜಮೀನು ನನಗೆ ಲಕ್ಷ್ಮೀದೇವಮ್ಮ ಅವರಿಂದ ಹಿಂಪಡೆಯಲಾಗದ ಜನರಲ್ ಪವರ್ ಆಫ್ ಅಟಾರ್ನಿ (ಜಿಪಿಎ) ಮತ್ತು ಕ್ರಯದ ಕರಾರುಪತ್ರ ಮಾಡಿಕೊಂಡಿರುವುದಾಗಿ ನಿಖಿಲ್ ಪತ್ರದಲ್ಲಿ ತಿಳಿಸಿದ್ದಾರೆ. ಹೊಸೂರು ಮತ್ತು ಬನ್ನಿಗಿರಿ ಗ್ರಾಮದ ಒಂಬತ್ತು ಸರ್ವೆ ನಂಬರ್‌ಗಳಲ್ಲಿ ಒಟ್ಟು 29 ಎಕರೆ 10 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಖಾತೆ ಮತ್ತು ಪಹಣಿಗಳು ದಾಖಲಾಗಿವೆ ಎಂದು ಅನಿತಾ ಹೇಳಿದ್ದಾರೆ. ಕಾರಣಾಂತರಗಳಿಂದ ವಿನಯ್ ಗೌಡ ಎಂ.ಜಿ ಎಂಬವರಿಗೆ ನಾನು ಸ್ಪೆಷಲ್ ಪವರ್ ಆಫ್ ಅಟಾರ್ನಿ (ಎಸ್‌ಪಿಎ) ನೀಡಿದ್ದು, ಇದೀಗ ಜಮೀನನ್ನು ಸ್ವಾಧೀನಾನುಭವಕ್ಕೆ ಪಡೆದಿರುವುದಾಗಿ ಉಲ್ಲೇಖಿಸಿದ್ದಾರೆ' ಎಂದು ಪತ್ರ ಪ್ರದರ್ಶಿಸಿದರು.

ನಿಖಿಲ್ ಅವರು ತಮ್ಮ ತಾಯಿಯ ಜಮೀನನ್ನು ಪ್ರಾಧಿಕಾರಕ್ಕೆ ಕೊಟ್ಟರೆ ನಾವೇ ಬಡವರಿಗೆ ದಾನ ಮಾಡುತ್ತೇವೆ. ದಿನಾಂಕವನ್ನು ಅವರೇ ನಿಗದಿಪಡಿಸಲಿ

ಗಾಣಕಲ್ ನಟರಾಜ್, ಅಧ್ಯಕ್ಷ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

‘ಮತಪತ್ರ’ ಕಡ್ಡಾಯ: 4 ಮಸೂದೆ ಸಿದ್ಧ

ಸಂಪುಟ ಸಭೆಯ ಅನುಮೋದನೆ ಪಡೆದು ಸುಗ್ರೀವಾಜ್ಞೆ ಹೊರಡಿಸಲು ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರದ (ಇವಿಎಂ) ಬದಲು, ರಹಸ್ಯ ಮತದಾನ ವ್ಯವಸ್ಥೆಗೆ ‘ಮತಪತ್ರ’ (ಬ್ಯಾಲಟ್ ಪೇಪರ್) ಬಳಕೆ ಕಡ್ಡಾಯಗೊಳಿಸಲು ಸಂಬಂಧಪಟ್ಟ ಕಾಯ್ದೆಗಳ ತಿದ್ದುಪಡಿಗೆ ನಾಲ್ಕು ಮಸೂದೆಗಳನ್ನು ರಾಜ್ಯ ಸರ್ಕಾರ ಸಿದ್ಧಪಡಿಸಿದೆ.

ಇದೇ 11ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಸೂದೆಗಳ ಕರಡನ್ನು ಮಂಡನೆ ಮಾಡಲಾಗುತ್ತಿದೆ. ಬಳಿಕ ಸುಗ್ರೀವಾಜ್ಞೆ ಹೊರಡಿಸಲು ಉದ್ದೇಶಿಸಲಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ತನ್ನ ವ್ಯಾಪ್ತಿಯಲ್ಲಿರುವ ನಗರ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇವಿಎಂ ಬದಲು ಮತಪತ್ರ ಬಳಕೆ ಹಾಗೂ ರಾಜ್ಯ ಚುನಾವಣಾ ಆಯೋಗದ ನೇತೃತ್ವದಲ್ಲಿ ಪ್ರತ್ಯೇಕ ಮತದಾರರ ಪಟ್ಟಿ ಸಿದ್ಧಪಡಿಸುವ ಮಹತ್ವದ ನಿರ್ಣಯವನ್ನು ಸೆ. 4ರಂದು ನಡೆದ ಸಂಪುಟ ಸಭೆಯಲ್ಲಿ ರಾಜ್ಯ ಸರ್ಕಾರ ತೆಗೆದುಕೊಂಡಿತ್ತು.

ಸರ್ಕಾರದ ಸಮರ್ಥನೆಗಳೇನು?: ಮತಪತ್ರದ ಗೌಪ್ಯತೆಯು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳ ಮೂಲ ಆಧಾರವಾಗಿದ್ದು, ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಪಾವಿತ್ರ್ಯವನ್ನು ಕಾಪಾಡುವ ಮೂಲಕ ಮತದಾರರನ್ನು ಬಲವಂತ, ಬೆದರಿಕೆ ಮತ್ತು ಅನುಚಿತ ಪ್ರಭಾವದಿಂದ ರಕ್ಷಿಸುತ್ತದೆ ಎಂದು ಹಲವು ತೀರ್ಪುಗಳಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಕುಲದೀಪ್ ನಾಯರ್ ವಿರುದ್ಧದ ಕೇಂದ್ರ ಸರ್ಕಾರ (2006) ಪ್ರಕರಣದಲ್ಲಿ ‘ಮತದಾರರ ಸ್ವಾಯತ್ತತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಬಾಹ್ಯ ಒತ್ತಡಗಳನ್ನು ತಡೆಯಲು ಸಾರ್ವತ್ರಿಕ ಚುನಾವಣೆಗಳಿಗೆ ರಹಸ್ಯ ಮತದಾನ ಅತ್ಯಗತ್ಯವಾಗಿದೆ’ ಎಂದೂ ಸ್ಪಷ್ಟಪಡಿಸಿದೆ. ಆ ಮೂಲಕ, ಮುಕ್ತ ಚುನಾವಣೆಗಳ ಸಾಂವಿಧಾನಿಕ ಆದೇಶ ಎತ್ತಿ ಹಿಡಿದಿದೆ.

ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರರ ವಿಶ್ವಾಸದ ಮಹತ್ವವನ್ನು ಸುಪ್ರೀಂ ಕೋರ್ಟ್ ಒತ್ತಿ ಹೇಳಿದ್ದು, ಮತಪತ್ರದ ಗೌಪ್ಯತೆ ಕಾಪಾಡುವಾಗ ಪಾರದರ್ಶಕತೆ ಹೆಚ್ಚಿಸಲು ಇವಿಎಂಗಳಲ್ಲಿ ದಾಖಲಾಗುವ ಮತಗಳ ಪರಿಶೀಲನೆಗೆ ವೆರಿಫೈಯಲ್ ಪೇಪರ್ ಆಡಿಟ್ ಟ್ರಯಲ್ (ವಿವಿ ಪ್ಯಾಟ್) ಪರಿಚಯಿಸಿತ್ತು. ಅಲ್ಲದೆ, ಇವಿಎಂ ವ್ಯವಸ್ಥೆಯಲ್ಲಿನ ದೌರ್ಬಲ್ಯಗಳನ್ನು ಪರಿಹರಿಸಲು ನಿರಂತರ ಸುಧಾರಣೆಗಳ ಅಗತ್ಯವನ್ನೂ ಎತ್ತಿ ತೋರಿಸಿದೆ. ಆದರೆ, ಇವಿಎಂಗಳಲ್ಲಿನ ದೌರ್ಬಲ್ಯಗಳು ಮತ್ತು ಮತದಾರರ ಪಟ್ಟಿಗಳಲ್ಲಿನ ವ್ಯತ್ಯಾಸಗಳ ಮೂಲಕ ಚುನಾವಣಾ ಕುತಂತ್ರಗಳ ಸಾಧ್ಯತೆಯ ಕುರಿತು ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿರುವುದರಿಂದ, ಸಾರ್ವಜನಿಕ ನಂಬಿಕೆಯನ್ನು ಮರು ಸ್ಥಾಪಿಸಲು ಸದೃಢವಾದ ರಹಸ್ಯ ಮತಪತ್ರ ವ್ಯವಸ್ಥೆಗೆ ಮರಳುವ ಅಗತ್ಯ ಉಂಟಾಗಿದೆ ಎಂದು ರಾಜ್ಯ ಸರ್ಕಾರ ಸಮರ್ಥನೆ ನೀಡಿದೆ.

ಈ ಕಳವಳಗಳ ಕಾರಣಕ್ಕೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಗದ ಮತಪತ್ರ ವ್ಯವಸ್ಥೆಗೆ ಮರಳಲು ನಿರ್ಧರಿಸಲಾಗಿದೆ. ಕಾಗದ ಮತಪತ್ರಗಳು ಅಥವಾ ಇತರ ಗೌಪ್ಯ ಕಾರ್ಯವಿಧಾನಗಳ ಬಳಕೆಯ ಮೂಲಕ ರಹಸ್ಯ ಮತದಾನ ವ್ಯವಸ್ಥೆಯು, ಮತದಾರರು ಪ್ರತೀಕಾರದ ಭಯ ಇಲ್ಲದೆ ತಮ್ಮ ಮತ ಚಲಾಯಿಸಬಹುದು ಎಂಬುದನ್ನು ಖಚಿತಪಡಿಸುತ್ತದೆ ಎಂದೂ ವಿವರಿಸಿದೆ.

ತಿದ್ದುಪಡಿ ಮಸೂದೆಗಳು ಯಾವುವು?

- ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ)
- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ)
- ಕರ್ನಾಟಕ ನಗರ ಪಾಲಿಕೆಗಳು (ಎರಡನೇ ತಿದ್ದುಪಡಿ)
- ಕರ್ನಾಟಕ ಪುರಸಭೆಗಳು (ತಿದ್ದುಪಡಿ)

‘ವಿಧಾನ ಮಂಡಲಕ್ಕೆ ಅಧಿಕಾರವಿದೆ’

‘ಸ್ಥಳೀಯ ಪ್ರಾಧಿಕಾರಗಳಿಗೆ ಮುಕ್ತ, ನ್ಯಾಯಯುತ ಮತ್ತು ಪಾರದರ್ಶಕ ಚುನಾವಣೆಗಳನ್ನು ಖಚಿತಪಡಿಸಿಕೊಳ್ಳಲು, ಕಾಗದ ಮತಪತ್ರಗಳನ್ನು ಬಳಸಿಕೊಂಡು ರಹಸ್ಯ ಮತದಾನ ವ್ಯವಸ್ಥೆ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಸಂಬಂಧಿತ ಕಾಯ್ದೆಗಳಿಗೆ ತಿದ್ದುಪಡಿ ಮಾಡಬೇಕಿದೆ. ಆ ಮೂಲಕ, ರಾಜ್ಯ ಚುನಾವಣಾ ಆಯೋಗವು ಮತದಾರರ ಗೌಪ್ಯತೆ ಮತ್ತು ಚುನಾವಣಾ ಸಮಗ್ರತೆಯೊಂದಿಗೆ ಚುನಾವಣೆಗಳನ್ನು ನಡೆಸಲು ಅನುಕೂಲ ಕಲ್ಪಿಸಲು ಉದ್ದೇಶಿಸಲಾಗಿದೆ. ಮಸೂದೆ ರೂಪಿಸಲು ರಾಜ್ಯ ವಿಧಾನ ಮಂಡಲಕ್ಕೆ ಅಧಿಕಾರವಿದೆ. ಮಸೂದೆಯಲ್ಲಿರುವ ಉಪಬಂಧಗಳು ಕೇಂದ್ರದ ಜಾರಿಯಲ್ಲಿರುವ ಯಾವುದೇ ಕಾಯ್ದೆಯ ಉಪಬಂಧಗಳಿಗೆ ವ್ಯತಿರಿಕ್ತ ಆಗುವುದಿಲ್ಲ. ಹೀಗಾಗಿ, ಮಸೂದೆಗಳನ್ನು ರಾಷ್ಟ್ರಪತಿಯ ಅಂಕಿತಕ್ಕೆ ಕಾಯ್ದಿರಿಸುವ ಅಗತ್ಯವೂ ಇಲ್ಲ’ ಎಂದು ಕಾನೂನು ಮತ್ತು ಸಂಸದೀಯ ಇಲಾಖೆ ಪ್ರತಿಪಾದಿಸಿದೆ.

ಸುದ್ದಿ 2 ನಿಮಿಷ

‘ಬದನೆಕಾಯಿ ಬಿಇಒ, ಅಯೋಗ್ಯ’ ಶಿಕ್ಷಣಾಧಿಕಾರಿಗೆ ಶಾಸಕ ನಿಂದನೆ

ಬೇಲೂರು (ಹಾಸನ): ವಿದ್ಯಾರ್ಥಿಗಳ ಕ್ರೀಡಾಕೂಟದ ಆಹ್ವಾನ ಪತ್ರಿಕೆಯಲ್ಲಿ ಹೆಸರಿಲ್ಲದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಶಾಸಕ ಎಚ್.ಕೆ.ಸುರೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡರ ವಿರುದ್ಧ ಇಲ್ಲಿ ಹರಿಹಾಯ್ದರು. ಒಂದು ಹಂತದಲ್ಲಿ ಅಧಿಕಾರಿಗೆ ‘ಬದನೆಕಾಯಿ ಬಿಇಒ’ ಎಂದೂ ದೂಷಿಸಿದರು.

ಇಲ್ಲಿನ ಕ್ರೀಡಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳ ಕ್ರೀಡಾಕೂಟದ ಉದ್ಘಾಟನೆ ವೇಳೆ ಈ ಘಟನೆ ನಡೆಯಿತು. ‘ಆಹ್ವಾನ ಪತ್ರಿಕೆಯಲ್ಲಿ ಹೆಸರು ಹಾಕಿಲ್ಲ. ಬಿಇಒ ಪಕ್ಕದಲ್ಲಿ ಕುಳಿತುಕೊಳ್ಳುವುದಿಲ್ಲ. ಅವರನ್ನು ಬೇರೆಡೆ ಕಳುಹಿಸಿ’ ಎಂದರು.

ಅದಕ್ಕೆ ಆಕ್ಷೇಪಿಸಿದ ಬಿಇಒ, ‘ನಾನು ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ. ಬೇರೆಡೆ ಕಳುಹಿಸುವುದು ಸರಿಯಲ್ಲ’ ಎಂದರು.

ಸಿಟ್ಟಿಗೆದ್ದ ಶಾಸಕರು, ‘ಜಾಸ್ತಿ ಮಾತನಾಡಬೇಡ. ರಾತ್ರಿಯೆಲ್ಲ ಕುಡಿದು ಫೋನ್ ಮಾಡುತ್ತಿಯಾ. ನೀನು ಬದನೆಕಾಯಿ ಬಿಇಒ. ಶಿಕ್ಷಕರು ನಿನ್ನಿಂದ ಚಿತ್ರಹಿಂಸೆ ಅನುಭವಿಸುತ್ತಿದ್ದಾರೆ’ ಎಂದು ಕಿಡಿಕಾರಿದರು.

‘ಯಾರು ಹೇಳಿದೋರು ನಿಮಗೆ, ಕರೆಯಿರಿ ಅವರನ್ನು’ ಎಂದು ರಾಜೇಗೌಡ ಪ್ರತ್ಯುತ್ತರ ನೀಡಿದರು.

‘ನಾನು ಈ ಬಿಇಒ ಪಕ್ಕ ಕೂರುವುದಿಲ್ಲ’ ಎಂದು ಹಟ ಹಿಡಿದ ಶಾಸಕರು, ‘ಎದ್ದೇಳು. ಏಯ್ ಜಾಗ ಬಿಡು’ ಎಂದು ವೇದಿಕೆಯಿಂದಲೇ ಹೊರಟು ನಿಂತರು. ನಂತರ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ‘ಕರೆಯದೇ ಬಂದವರಿಗೆ ಕೆರದಲ್ಲಿ ಹೊಡೆ ಸರ್ವಜ್ಞ ಎನ್ನುವಂತಾಗಿದೆ ನನ್ನ ಪರಿಸ್ಥಿತಿ’ ಎಂದರು.



‘ವಾರದೊಳಗೆ ಇ–ಸ್ವತ್ತು ಕರಡು ಪ್ರಕಟ’

ಬೆಂಗಳೂರು: ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿ ಇ–ಸ್ವತ್ತು ಜಾರಿಗೆ ತರಲು ನಿಯಮಗಳ ಕರಡನ್ನು ಒಂದು ವಾರದೊಳಗೆ ಪ್ರಕಟಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಈ ಕುರಿತು ವಿಕಾಸಸೌಧದಲ್ಲಿ ಅಧಿಕಾರಿಗಳ ಜತೆ ಸಭೆ ನಡೆಸಿ, ಕರಡು ನಿಯಮಗಳಲ್ಲಿ ಕೆಲವು ಬದಲಾವಣೆಗಳನ್ನೂ ಸೂಚಿಸಿದರು.

ತೆರಿಗೆ ದರ, ಶುಲ್ಕಗಳನ್ನು ವಿಧಿಸುವ ಪ್ರಕ್ರಿಯೆ, ಕಟ್ಟಡಗಳು ಮತ್ತು ಭೂಮಿಯ ಮೇಲೆ ತೆರಿಗೆ ವಿಧಿಸುವುದು, ನಮೂನೆ 11 ಎ ನಿರ್ವಹಣೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ನಿಯಮ, 2025 ರ ನಂತರ ನಮೂನೆ 11 ಎ ರಿಜಿಸ್ಟರ್‌ಗೆ ಹೊಸ ಆಸ್ತಿಗಳ ಸೇರ್ಪಡೆ, ಮೇಲ್ಮನವಿ, ದಂಡನೆಗಳು, ನೀರು ಸರಬರಾಜು ದರ ಮತ್ತು ಇತರ ದರಗಳ ನಿರ್ಧರಣೆ, ದಂಡ ನಿರ್ಧಾರ, ಸ್ಥಿರ ಸ್ವತ್ತಿನ ಪರಿಶೀಲನೆ, ಮೇಲ್ಮನವಿ, ತಗಾದೆ ನೋಟಿಸ್, ಜಪ್ತಿ ಮತ್ತು ಮಾರಾಟ ಮುಂತಾದ ವಿಷಯಗಳ ಕುರಿತು ಪ್ರಿಯಾಂಕ್ ಚರ್ಚಿಸಿದರು.

ಇ–ಸ್ವತ್ತು ರೂಪಿಸುವ ಸಂಬಂಧ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮುನೀಶ್ ಮೌದ್ಗಿಲ್ ಹಲವು ಸಲಹೆಗಳನ್ನು ನೀಡಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯಲ್ಲಿ ಬಣ ಸಂಘರ್ಷ

ಹಾಸನ: ಇಲ್ಲಿನ ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಕಾರ್ಯಕಾರಿ ಮಂಡಳಿಯ ವಿರುದ್ಧ ಸೋಮವಾರ ನಡೆದ ಅವಿಶ್ವಾಸ ನಿರ್ಣಯ ಸಭೆ ಗೊಂದಲದ ಗೂಡಾಗಿ ಪರಿಣಮಿಸಿತು.

ಎರಡೂ ಬಣಗಳ ನಡುವಿನ ತಿಕ್ಕಾಟ ತಾರಕಕ್ಕೆ ಏರಿದ್ದು, ಉಭಯ ಬಣಗಳು ತಮ್ಮದೇ ನಿಜವಾದ ಆಡಳಿತ ಮಂಡಳಿ ಎಂದು ಘೋಷಿಸಿಕೊಂಡವು.

‘ಅವಿಶ್ವಾಸ ನಿರ್ಣಯ ಮಂಡನೆಗೆ ಅವಕಾಶವಿಲ್ಲ’ ಎಂದು ಪ್ರತಿಪಾದಿಸಿದ ಹಾಲಿ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ ಹಾಗೂ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಬಣದ 11 ಸದಸ್ಯರು ತಮ್ಮದೇ ನಿಜವಾದ ಆಡಳಿತ ಮಂಡಳಿ ಎಂದು ನಿರ್ಣಯ ಅಂಗೀಕರಿಸಿದರು.

ಇನ್ನೊಂದೆಡೆ, ಅಶೋಕ್ ಹಾರನಹಳ್ಳಿ ಬಣದ 13 ಸದಸ್ಯರು, ನೂತನ ಅಧ್ಯಕ್ಷರಾಗಿ ಬಿ.ಆರ್. ಗುರುದೇವ್, ಕಾರ್ಯದರ್ಶಿಯಾಗಿ ಜಿ.ಟಿ.ಕುಮಾರ್, ಖಜಾಂಚಿಯಾಗಿ ಶ್ರೀಧರ್ ಅವರನ್ನು ಆಯ್ಕೆ ಮಾಡಿಕೊಂಡರು. ಬಣಗಳ ಕಿತ್ತಾಟ ಮುಂದುವರಿದಿದ್ದು, ಎರಡೂ ನಿರ್ಣಯದ ಪ್ರತಿಗಳನ್ನು ಸಹಕಾರ ಇಲಾಖೆಯ ವಿಶೇಷ ವೀಕ್ಷಕ ಅಧಿಕಾರಿ ಜಗದೀಶ್ ಅವರಿಗೆ ಸಲ್ಲಿಸಲಾಗಿದೆ.

‘ಅವಿಶ್ವಾಸ ನಿರ್ಣಯಕ್ಕೆ ಸೊಸೈಟಿ ನೋಂದಣಿ ಕಾಯ್ದೆಯಡಿ ಅವಕಾಶವಿಲ್ಲ. ವಿರೋಧಿ ಬಣದ 10 ನಿರ್ದೇಶಕರ ಗೊತ್ತುವಳಿ ತಿರಸ್ಕರಿಸಲಾಗಿದೆ’ ಎಂದು ದ್ಯಾವೇಗೌಡ ಪ್ರತಿಕ್ರಿಯಿಸಿದರು.

‘ಜಿ.ಆರ್ ಶ್ರೀನಿವಾಸ್ ಸೇರಿ 13 ನಿರ್ದೇಶಕರು, ಅವಿಶ್ವಾಸ ನಿರ್ಣಯ ಕೈಗೊಂಡು ಹಿಂದಿನ ಮಂಡಳಿ ಪದಚ್ಯುತಗೊಳಿಸಿದ್ದೇವೆ’ ಎಂದು ಇನ್ನೊಂದು ಬಣದ ಅಧ್ಯಕ್ಷ ಬಿ.ಆರ್. ಗುರುದೇವ್ ಹೇಳಿದರು.

‘ಅವಿಶ್ವಾಸ ಮಂಡನೆಗೆ ಗುರಿಯಾಗಿರುವ ಅಧ್ಯಕ್ಷರೇ ಅವಿಶ್ವಾಸ ನಿರ್ಣಯ ಸಭೆ ಮಾಡುವಂತಿಲ್ಲ’ ಎಂದು ಸಂಸ್ಥೆಯ ಹಿರಿಯ ನಿರ್ದೇಶಕ, ಮಾಜಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಹೇಳಿದರು.

ವೀರಶೈವ, ಲಿಂಗಾಯತ 11ಕ್ಕೆ ಸಭೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ವೀರಶೈವ–ಲಿಂಗಾಯತ ಒಂದೇ ಎಂದು ನಂಬಿರುವ ವಿವಿಧ ಮಠಾಧೀಶರು, ಅಖಿಲ ಭಾರತ ಲಿಂಗಾಯತ ವೀರಶೈವ ಮಹಾಸಭಾದ ಮುಖಂಡರು ಸೆ.11ರಂದು ಬೆಂಗಳೂರಿನಲ್ಲಿ ಸಭೆ ಸೇರುವರು.



ದಿಂಗಾಲೇಶ್ವರ ಸ್ವಾಮೀಜಿ

‘ಜಾತಿ, ಉಪಜಾತಿ ಕಾಲಂನಲ್ಲಿ ಸಮಾಜದವರು ಏನು ನಮೂದಿಸಬೇಕು ಎಂದು ಸಭೆ ನಿರ್ಧರಿಸಲಿದೆ’ ಎಂದು ಶಿರಹಟ್ಟಿಯ ಫಕೀರೇಶ್ವರ ಮಠದ ದಿಂಗಾಲೇಶ್ವರ ಸ್ವಾಮೀಜಿ ಸೋಮವಾರ ಇಲ್ಲಿ ತಿಳಿಸಿದರು.

‘ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆಯಲ್ಲಿ ಜಾತಿ, ಉಪ ಜಾತಿ ಕಾಲಂನಲ್ಲಿ ಏನು ಬರೆಸಬೇಕು ಎಂದು ಸಮಾಜದವರಲ್ಲಿ ಗೊಂದಲವಿದೆ ಇದನ್ನು ನಿವಾರಿಸುವುದು ಉದ್ದೇಶ’ ಎಂದು ತಿಳಿಸಿದರು.



ನನ್ನನ್ನೂ ಸೇರಿ ನಾಡಿನ ಯಾವೊಬ್ಬ ಸ್ವಾಮೀಜಿ, ವಿದ್ವಾಂಸ, ನಾಯಕರೂ ಬಸವಣ್ಣ ಪ್ರತಿಪಾದಿಸಿದ ಬಸವತತ್ವ ಪಾಲಿಸುತ್ತಿಲ್ಲ. ಪ್ರಚಾರ, ರಾಜಕೀಯಕ್ಕೆ ಇದು ಬಳಕೆಯಾಗುತ್ತಿದೆ

ವೀರಭದ್ರ ಚನ್ನಮಲ್ಲ ಸ್ವಾಮೀಜಿ
ನಿಡುಮಾಮಿಡಿ ಮಠ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ವೀರಶೈವ, ಲಿಂಗಾಯತ ಎರಡೂ ಒಂದೇ ಎಂದು ಪಂಚಪೀಠಾಧೀಶರು ಸಹಮತ ವ್ಯಕ್ತಪಡಿಸಿರುವುದು ಸ್ವಾಗತಾರ್ಹ. ಆದರೆ, ಕೆಲವರು ಬಸವ ಸಂಸ್ಕೃತಿ ಯಾತ್ರೆಯ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದಾರೆ’ ಎಂದು ಆರೋಪಿಸಿದರು.

ಯಾತ್ರೆಯ ನೇತೃತ್ವ ವಹಿಸಿರುವ ತೋಂಟದ ಸಿದ್ದರಾಮ ಸ್ವಾಮೀಜಿ, ಮಠದ ಅಡಿ ಮೂರು ವೈದಿಕ ಪಾಠಶಾಲೆ ನಡೆಸುತ್ತಿದ್ದಾರೆ. ಅವರ ನಡೆ–ನುಡಿಯಲ್ಲಿ ಹೋಲಿಕೆ ಇಲ್ಲ. ಬಸವ ಸಂಸ್ಕೃತಿ ಯಾತ್ರೆ ವೇದಿಕೆಗೆ ಕೆಲ ಸ್ವಾಮೀಜಿಗಳನ್ನು ಹೆದರಿಸಿ, ಬೆದರಿಸಿ ಕರೆತರುತ್ತಿದ್ದಾರೆ’ ಎಂದೂ ಆರೋಪಿಸಿದರು.

‘ಹಿಂದೂ ಧರ್ಮದ ವಿರೋಧಿ ಆಗಬೇಕಿಲ್ಲ’

ವಿಜಯಪುರ: ‘ವೀರಶೈವ, ಲಿಂಗಾಯತ ಹಿಂದೂ ಧರ್ಮದ ಅಂಗವಲ್ಲ. ಇದು ಸ್ವತಂತ್ರ ಧರ್ಮ. ಅಸ್ಮಿತೆ, ಸಿದ್ಧಾಂತ, ಆಚರಣೆಗೆ ಸ್ವತಂತ್ರ ಧರ್ಮದವರಾಗಬೇಕೇ ಹೊರತು, ಹಿಂದೂ ಧರ್ಮದ ವಿರೋಧಿಗಳಾಗಬೇಕಿಲ್ಲ’ ಎಂದು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಪ್ರತ್ಯೇಕ ಧರ್ಮ ಮಾನ್ಯತೆಯನ್ನು ವೀರಶೈವ, ಲಿಂಗಾಯತರು ಒಟ್ಟುಗೂಡಿಯೇ ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದರು.

‘ಕೇಂದ್ರ ಸರ್ಕಾರ ಜಾತಿ ಗಣತಿ ಆರಂಭಿಸುವ ಮುನ್ನವೇ ವೀರಶೈವ–ಲಿಂಗಾಯತರ ನಡುವಿನ ಭಿನ್ನಾಭಿಪ್ರಾಯ ಬಗೆಹರಿಸಲು ವೀರಶೈವ ಲಿಂಗಾಯತ ಮಹಾಸಭೆ ಶ್ರಮಿಸಬೇಕು’ ಎಂದರು.

ಮರ ಬಿದ್ದು ಗರ್ಭಿಣಿ ಸೇರಿ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಮದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಡೊಮಗೇರಿ ಅಂಗನವಾಡಿ ಸಮೀಪ ಸೋಮವಾರ ಬುಡ ಸಮೇತ ಮರ ಬಿದ್ದು, ಅದರಡಿ ಸಿಲುಕಿ ಗರ್ಭಿಣಿ ಸಾವಿತ್ರಿ ಬಾಬು ಖರಾತ (28) ಹಾಗೂ ಸ್ವಾತಿ ಖರಾತ್ (17) ಎಂಬುವವರು ಮೃತಪಟ್ಟಿದ್ದಾರೆ. ದುರ್ಘಟನೆಯಲ್ಲಿ ಆರು ಮಕ್ಕಳು ಗಾಯಗೊಂಡಿದ್ದಾರೆ.

‘ಐದು ತಿಂಗಳ ಗರ್ಭಿಣಿಯಾಗಿದ್ದ ಸಾವಿತ್ರಿ, ಅಂಗನವಾಡಿಯಲ್ಲಿರುವ ತಮ್ಮ ಮಗುವನ್ನು ಕರೆತರಲು ತೆರಳಿದ್ದಾಗ ಅವಘಡ ನಡೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ. ಗಾಯಗೊಂಡ ಸ್ವಾತಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮಾರ್ಗ ಮಧ್ಯೆ ಮೃತಪಟ್ಟಿದ್ದಾಗಿ ಮಾಹಿತಿ ನೀಡಿದ್ದಾರೆ.

ಒಳ ಮೀಸಲಾತಿ ಕಾವು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಒಳ ಮೀಸಲಾತಿ ನಿಗದಿಯಲ್ಲಿ ಆಗಿರುವ ಅನ್ಯಾಯ ಸರಿಪಡಿಸಲು ಒತ್ತಾಯಿಸಿ ಬಂಜಾರ, ಭೋವಿ, ಕೊರಚ, ಕೊರಮ ಸಮಾಜಗಳ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಸಮಾಜದವರು ಕಲಬುರಗಿಯಲ್ಲಿ ಸೋಮವಾರ ಪ್ರತಿಭಟಿಸಿದರು

ಸಂಕ್ಷಿಪ್ತ ಸುದ್ದಿ

ಸಿಇಟಿ: ಆಪ್ಷನ್ ದಾಖಲಿಸಲು ಗಡುವು

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಎರಡನೇ ಮುಂದುವರಿದ ಸುತ್ತು ಹಾಗೂ ಯುಜಿಸಿಇಟಿ ಕೋರ್ಸ್‌ಗಳ 3ನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಆಯ್ಕೆಗಳ ಅದಲು-ಬದಲು ಹಾಗೂ ಹೊಸದಾಗಿ ಸೇರಿಸುವುದಕ್ಕೆ ಸೆ.9ರಂದು ಬೆಳಿಗ್ಗೆ 8 ಗಂಟೆವರೆಗೆ ಸಮಯ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಎಲ್ಲ ವರ್ಗದ ಅರ್ಹ ಅಭ್ಯರ್ಥಿಗಳು ₹10 ಸಾವಿರ ಠೇವಣಿ ಪಾವತಿಸುವುದಕ್ಕೂ ಮಂಗಳವಾರ ಬೆಳಿಗ್ಗೆ 8 ಗಂಟೆವರೆಗೆ ಸಮಯ ನೀಡಲಾಗಿದೆ. ಮತ್ತೆ ಸಮಯ ವಿಸ್ತರಣೆ ಮಾಡುವುದಿಲ್ಲ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರಧ್ವಜ ವಿರೂಪ; ಐವರ ವಿರುದ್ಧ ಪ್ರಕರಣ

ಹುಬ್ಬಳ್ಳಿ: ನಗರದಲ್ಲಿ ಸೆ. 5ರಂದು ಈದ್ ಮಿಲಾದ್ ಮೆರವಣಿಗೆ ವೇಳೆ ರಾಷ್ಟ್ರಧ್ವಜ ವಿರೂಪಗೊಳಿಸಿದ್ದ ಪ್ರಕರಣದಲ್ಲಿ ಗೋಕುಲ ರಸ್ತೆ ಠಾಣೆ ಪೊಲೀಸರು ಐವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

‘ಮೆರವಣಿಗೆಯಲ್ಲಿ ಕೆಲವರು ನಕ್ಷತ್ರ, ಅರ್ಧ ಚಂದ್ರಾಕೃತಿಯ ರಾಷ್ಟ್ರಧ್ವಜ ಪ್ರದರ್ಶಿಸಿದ್ದರು. ಮೂಲ ಸ್ವರೂಪಕ್ಕೆ ಧಕ್ಕೆ ತಂದ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ಡಿಸಿಪಿ ಮಹಾನಿಂಗ ನಂದಗಾವಿ ತಿಳಿಸಿದ್ದಾರೆ.

ಸೌಜನ್ಯಾ ಪ್ರಕರಣ: ಮರು ತನಿಖೆ–ದೂರು

ಮಂಗಳೂರು: ‘ಸೌಜನ್ಯಾ ಕೊಲೆ ಪ್ರಕರಣದ ಮರು ತನಿಖೆಗೆ ಒತ್ತಾಯಿಸಿ ಮೈಸೂರಿನ ಸ್ನೇಹಮಯಿ ಕೃಷ್ಣ ಅವರು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ದೂರು ನೀಡಿದ್ದಾರೆ.

ಈ ದೂರಿನಲ್ಲಿ ಕೆಲ ವ್ಯಕ್ತಿಗಳ ಹೆಸರನ್ನು ಅವರು ಉಲ್ಲೇಖಿಸಿದ್ದಾರೆ. ಲೈಂಗಿಕ ದೌರ್ಜನ್ಯ ನಡೆಸಿ ಸೌಜನ್ಯಾಳನ್ನು ಕೊಲೆ ಮಾಡಿರುವ ನೈಜ ಆರೋಪಿಗೆ ಶಿಕ್ಷೆಆಗಬೇಕು. ಆ ಕಾರಣಕ್ಕಾಗಿ ದೂರಿನಲ್ಲಿ ಹೆಸರಿಸಿರುವ ವ್ಯಕ್ತಿಗಳನ್ನು ತನಿಖೆಗೆ ಒಳಪಡಿಸುವಂತೆ ಒತ್ತಾಯಿಸಿದ್ದಾರೆ.

4,108 ಕ್ವಿಂಟಲ್ ಪಡಿತರ ಅಕ್ಕಿ ಜಪ್ತಿ

ಪ್ರಜಾವಾಣಿ ವಾರ್ತೆ

ಗುರುಮಠಕಲ್ (ಯಾದಗಿರಿ ಜಿಲ್ಲೆ): ಇಲ್ಲಿನ ಲಕ್ಷ್ಮಿ ವೆಂಕಟೇಶ್ವರ ಮತ್ತು ಲಕ್ಷ್ಮಿ ಬಾಲಾಜಿ ಇಂಡಸ್ಟ್ರೀಸ್‌ಗಳಲ್ಲಿ ಅಕ್ರಮವಾಗಿ ದಾಸ್ತಾನು ಇರಿಸಿದ್ದ ₹1.17 ಕೋಟಿ ಮೌಲ್ಯದ 4,108 ಕ್ವಿಂಟಲ್ ಪಡಿತರ ಅಕ್ಕಿ ಜಪ್ತಿ ಮಾಡಲಾಗಿದೆ.

ಪಡಿತರ ಅಕ್ಕಿಯ ಅಕ್ರಮ ದಾಸ್ತಾನು ಆರೋಪದಡಿ ರೈಸ್ ಮಿಲ್ ಮಾಲೀಕರಾದ ನರೇಂದ್ರ ರಾಠೋಡ ಮತ್ತು ಅಯ್ಯಪ್ಪ ರಾಠೋಡ ವಿರುದ್ಧ ಆಹಾರ ಇಲಾಖೆ ಉಪನಿರ್ದೇಶಕ ಅನಿಲ್ ಕುಮಾರ ದೋವಳಗಿ ಅವರು ಗುರುಮಠಕಲ್ ಪೊಲೀಸ್ ಠಾಣೆಗೆ ಸೋಮವಾರ ದೂರು ನೀಡಿದ್ದಾರೆ.

ನರೇಂದ್ರ ಅವರು ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಅವರ ತಂದೆಯಾಗಿದ್ದು, ಅಯ್ಯಪ್ಪ ಹಿರಿಯ ಸಹೋದರ .

ಸೆಪ್ಟೆಂಬರ್ 5ರ ತಡರಾತ್ರಿ ಜಿಲ್ಲಾಧಿಕಾರಿ ಹರ್ಷಲ್ ಬೋಯರ್, ಎಸ್‌ಪಿ ಪೃಥ್ವಿಕ್ ಶಂಕರ್ ನೇತೃತ್ವ ಅಧಿಕಾರಿಗಳ ತಂಡ ರೈಸ್ ಮಿಲ್‌ಗಳ ಮೇಲೆ ದಾಳಿ ನಡೆಸಿತ್ತು. ಪಡಿತರ ಅಕ್ಕಿಯ ಜತೆಗೆ ರೈತರಿಂದ ಖರೀಸಿದ್ದ ಸಾವಿರಾರು ಕ್ವಿಂಟಲ್ ಅಕ್ಕಿ ಮೂಟೆಗಳು ಪತ್ತೆಯಾಗಿದ್ದವು. ಪಡಿತರ ಅಕ್ಕಿಯನ್ನು ಪ್ರತ್ಯೇಕಿಸಿ ಅದರ ಮೌಲ್ಯ ಮತ್ತು ಪ್ರಮಾಣವನ್ನು ನಿರ್ಣಯಿಸಲು ಎರಡೂವರೆ ದಿನಗಳು ಬೇಕಾಯಿತು.

ದಾರಾ ಡಬಲ್ ಸ್ಟಾರ್, ಡೈನೆಸ್ಟಿ ಮತ್ತು ರಿಜ್ಸ್ ಮಾರ್ಕಾನಾ ಉತ್ಪನ್ನಗಳ ಹೆಸರಿನ ಅಕ್ಕಿಯ ಮೂಟೆಗಳು ಪತ್ತೆಯಾಗಿವೆ. ಪಡಿತರ ಅಕ್ಕಿಯನ್ನು ಕಾಳ ಸಂತೆಯಲ್ಲಿ ಖರೀದಿಸಿ, ಪಾಲಿಶ್ ಮಾಡಿ ಹೊರ ರಾಜ್ಯಗಳಲ್ಲಿ ಮಾರಾಟ ಮಾಡಿರುವ ಶಂಕೆ ಇದೆ ಎಂದು ಮೂಲಗಳು ತಿಳಿಸಿವೆ.

ಪಂಜಾಬ್, ಹರಿಯಾಣ ಸೇರಿ ಇತರೆ ರಾಜ್ಯಗಳ ಸರ್ಕಾರಿ ಲೇಬಲ್ ಇರುವ ಪಡಿತರ ಚೀಲಗಳು ಸಹ ಪತ್ತೆಯಾಗಿವೆ. ಎರಡು ಸರಕು ಲಾರಿಗಳನ್ನು ವಶಕ್ಕೆ ಪಡೆಯಲಾಗಿದೆ. ವಿದೇಶಕ್ಕೆ ಮಾರಾಟವಾದ ಬಗ್ಗೆ ಖಚಿತ ಮಾಹಿತಿ ಇಲ್ಲ ಎಂದು ಮೂಲಗಳು ಹೇಳಿವೆ.

ಇದು ಎರಡನೇ ಪ್ರಕರಣ: ಎರಡು ವರ್ಷಗಳ ಹಿಂದೆ ಶಹಾಪುರ ತಾಲ್ಲೂಕಿನ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಉಗ್ರಾಣದಲ್ಲಿ ಇರಿಸಿದ್ದ ₹2.06 ಕೋಟಿ ಮೌಲ್ಯದ 6,077 ಕ್ವಿಂಟಲ್ ಪಡಿತರ ಅಕ್ಕಿ ನಾಪತ್ತೆಯಾಗಿತ್ತು. ಈ ಸಂಬಂಧ ಆಹಾರ ಇಲಾಖೆಯ ಡಿಡಿ ಸೇರಿ ಒಟ್ಟು 17 ಮಂದಿ ವಿರುದ್ಧ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದಾರೆ. ಮಣಿಕಂಠ ರಾಠೋಡ ಅದರಲ್ಲಿ ಆರೋಪಿಯಾಗಿದ್ದರು. ಈಗ ಮತ್ತೊಂದು ಪ್ರಕರಣ ದಾಖಲಾಗಿದೆ.

‘ವಿದೇಶಕ್ಕೆ ರವಾನೆ ಆಗುವುದು ಗೊತ್ತಿಲ್ಲ’

‘ಪಡಿತರ ಅಕ್ಕಿ ಪಾಲಿಶ್ ಮಾಡಿ, ಮಹಾರಾಷ್ಟ್ರಕ್ಕೆ ಒಯ್ದು ಮಾರಾಟ ಮಾಡುತ್ತಾರೆ ಎಂಬುದನ್ನು ಕೇಳಿದ್ದೆ. ಆದರೆ, ಹೊರದೇಶಕ್ಕೆ ಒಯ್ದು ಮಾರಾಟ ಮಾಡುವ ಬಗ್ಗೆ ನನಗೆ ಗೊತ್ತಿಲ್ಲ. ಸಿಂಗಪುರದವರು ನಮ್ಮಲ್ಲಿನ ಅಕ್ಕಿ ಏಕೆ ತಿನ್ನುತ್ತಾರೆ’ ಎಂದು ಸಚಿವ ಶರಣಬಸಪ್ಪ ದರ್ಶನಪುರ ಕೇಳಿದರು.

ಇಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ‘ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.95	15,448	15,559
ಹಾರಂಗಿ	2,859	2,858.53	3,328	3,500
ಕಬಿನಿ	2,284.00	2,283.89	6,5,51	5,000
ಹೇಮಾವತಿ	2,922	2,921.87	7,511	7,460
ಲಿಂಗನಮಕ್ಕಿ	1,819	1,817.80	11,746	9,041
ಸೂಪಾ (ಮೀ)	564	560.24	5,116.34	4,648.34
ಮಾಣಿ	595	594.14	1,283	649
ತುಂಗಭದ್ರಾ	1,633	1,626.06	42,965	40,081
ಮಲಪ್ರಭಾ	2,079.5	2,079.50	2,594	2,594
ಘಟಪ್ರಭಾ	2,175	2,174.66	4,158	5,444
ಭದ್ರಾ *	186	184.5	11,000	11,000
ಆಲಮಟ್ಟಿ (ಮೀ)	519.6	519.55	40,293	38,268
ನಾರಾಯಣಪುರ (ಮೀ)	492.25	492.22	27,000	26,030

* ನೆಲಮಟ್ಟದಿಂದ

ಧರ್ಮಸ್ಥಳ ಗ್ರಾಮದಲ್ಲಿ ಶವಗಳ ಹೂತಿದ್ದ ಆರೋಪ
ಕೇರಳದ ಯೂಟ್ಯೂಬರ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳದ ಬೆಳವಣಿಗೆ ಸಂಬಂಧಿಸಿ ಆರೋಪದ ವಿಚಾರಣೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಕೇರಳದ ಯೂಟ್ಯೂಬರ್ ಸೇರಿದಂತೆ ಹಲವರನ್ನು ಬೆಳ್ತಂಗಡಿಯ ಕಚೇರಿಗೆ ಕರೆಸಿಕೊಂಡು ಸೋಮವಾರ ವಿಚಾರಣೆಗೆ ಒಳಪಡಿಸಿದರು.

ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಜಯಂತ್ ಟಿ., ಸಾಕ್ಷಿ ದೂರುದಾರ ಎಸ್‌ಐಟಿಗೆ ತಂದೊಪ್ಪಿಸಿದ್ದ ಬುರುಡೆ ಇದ್ದ ಜಾಗವನ್ನು ತೋರಿಸಿದ್ದ ವಿಠಲ ಗೌಡ, ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನಿಂದ ಬುರುಡೆ ಹೊರ ತೆಗೆದ ವಿಡಿಯೊ ಪ್ರಸಾರ ಮಾಡಿದ್ದ ಕೇರಳದ ಯೂಟ್ಯೂಬರ್ ಮುನಾಫ್ ಹಾಗೂ ಕರ್ನಾಟಕದ ‘ಯುನೈಟೆಡ್ ಮಿಡಿಯಾ’ ಯೂಟ್ಯೂಬ್ ಚಾನೆಲ್‌ನ ಅಭಿಷೇಕ್ ಹಾಗೂ ಗಿರೀಶ ಮಟ್ಟೆಣ್ಣವರ ಸೋಮವಾರ ವಿಚಾರಣೆಗೆ ಹಾಜರಾದರು.

ಎಸ್‌ಐಟಿ ಕಚೇರಿಗೆ ತೆರಳುವ ಮುನ್ನ ಮಾಧ್ಯಮದವರ ಜೊತೆಗೆ ಮಾತನಾಡಿದ ಮುನಾಫ್, ‘ಎಸ್‌ಐಟಿಯವರು ಏತಕ್ಕಾಗಿ ನನ್ನನ್ನು ವಿಚಾರಣೆ ನಡೆಸುತ್ತಿದ್ದಾರೆ ಎಂಬುದು ಖಚಿತವಾಗಿ ಗೊತ್ತಿಲ್ಲ. ನನ್ನ ಬಳಿ ಇರುವ ಮಾಹಿತಿಯನ್ನು ಅಧಿಕಾರಿಗಳ ಜೊತೆ ಹಂಚಿಕೊಳ್ಳುತ್ತೇನೆ’ ಎಂದರು.

ಸಾಕ್ಷಿ ದೂರುದಾರ ತಂದೊಪ್ಪಿಸಿದ್ದ ತಲೆಬುರುಡೆಯನ್ನು ನೇತ್ರಾವತಿ ಸ್ನಾನಘಟ್ಟದ ಪಕ್ಕದಲ್ಲಿರುವ ಬಂಗ್ಲಗುಡ್ಡೆಯ ಕಾಡಿನಿಂದ ಹೊರತೆಗೆದ ಜಾಗದಲ್ಲಿ ಪೊಲೀಸ್ ಕಾವಲನ್ನು ಮುಂದುವರಿಸಲಾಗಿದೆ.

ವಸಂತ ಗಿಳಿಯಾರ್ ವಿರುದ್ಧ ಎಫ್‌ಐಆರ್: ದ್ವೇಷ ಹುಟ್ಟಿಸುವ ಸುದ್ದಿ ಹಂಚಿಕೊಂಡಿದ್ದ ಆರೋಪದ ಮೇಲೆ ವಸಂತ ಗಿಳಿಯಾರ್ ಫೇಸ್‌ಬುಕ್ ಖಾತೆ ಹಾಗೂ ಶ್ರೀಹರೀಶ್ ಪೂಂಜ ಫ್ಯಾನ್ಸ್ ಕ್ಲಬ್ ಕರ್ನಾಟಕ’ ಎಂಬ ಫೇಸ್ ಬುಕ್ ಖಾತೆ ವಿರುದ್ಧ ಬೆಳ್ತಂಗಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಒಡನಾಡಿಗೆ ಗುಪ್ತಚರ ತಂಡ ಭೇಟಿ

ಮೈಸೂರು: ರಾಜ್ಯ ಗುಪ್ತದಳದ ಇಬ್ಬರು ಅಧಿಕಾರಿಗಳು ಇಲ್ಲಿನ ಒಡನಾಡಿ ಸೇವಾ ಸಂಸ್ಥೆಗೆ ಶನಿವಾರ ಭೇಟಿ ನೀಡಿ, ಮೂರು ವರ್ಷದ ಹಣಕಾಸು ವಹಿವಾಟಿನ ವರದಿ ವಿವರಗಳನ್ನು ಸಂಗ್ರಹಿಸಿದರು.

‘ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿ ಮಂಡ್ಯದ ಮಹಿಳೆಯ ಬಗ್ಗೆ ಅಧಿಕಾರಿಗಳು ವಿಚಾರಿಸಿದರು. ಮಾಹಿತಿ ನೀಡಿದ್ದೇವೆ’ ಎಂದು ಸಂಸ್ಥೆ ನಿರ್ದೇಶಕ ಎಂ.ಎಲ್.ಪರಶುರಾಮ್ 'ಪ್ರಜಾವಾಣಿ'ಗೆ ತಿಳಿಸಿದರು.

‘ಸಂಸ್ಥೆಯ ವ್ಯವಹಾರಗಳು ಪಾರದರ್ಶಕವಾಗಿವೆ. ಯಾವುದೇ ತನಿಖೆ ಸ್ವಾಗತಿಸುತ್ತೇವೆ. ವಿದೇಶದಿಂದ ಹಣ ಬರುತ್ತಿರುವುದು ಸತ್ಯ. ಸರ್ಕಾರದ ನಿಯಮಗಳನ್ನು ಅನುಸರಿಸಿಯೇ ಪಡೆಯುತ್ತಿದ್ದೇವೆ’ ಎಂದರು.



ಆಹಾರೋದ್ಯಮದಲ್ಲಿ ಕ್ರಾಂತಿಕಾರಕ ಹೆಜ್ಜೆ



ನವ ಆಹಾರೋದ್ಯಮಿಗಳಿಗೆ ‘ಪಿಎಂಎಫ್‌ಎಂಇ’ ವರದಾನ



ರೈತರನ್ನು ಉದ್ಯಮಿಗಳಾಗಿ ರೂಪಿಸುವುದು ಕೆಪೆಕ್ ಆಶಯ

ಕೃಷಿ ಇಲಾಖೆ ವ್ಯಾಪ್ತಿಯಲ್ಲಿರುವ ಕೆಪೆಕ್ ಅಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಪಿಎಂಎಫ್‌ಎಂಇ ಯೋಜನೆಯನ್ನು ಬಳಸಿಕೊಂಡು ರೈತರು ಉದ್ದಿಮೆದಾರರಾಗಬೇಕು. ತಾವು ಬೆಳೆದ ಹಾಗೂ ಸುತ್ತ ಮುತ್ತಲಿನ ರೈತರು ಬೆಳೆದ ಬೆಳೆಗಳನ್ನು ಮೌಲ್ಯವರ್ಧಿಸಿ, ಉತ್ಪನ್ನಗಳಾಗಿಸಿ ಬ್ರ್ಯಾಂಡ್ ಮಾಡಿ ಮಾರಾಟ ಮಾಡುವಂತಾಗಬೇಕು. ಇಂಥ ಎಲ್ಲ ಕಾರ್ಯಗಳಿಗೆ ಕೆಪೆಕ್ ಬೆಂಬಲವಾಗಿ ನಿಲ್ಲಲಿದೆ.

> ಪಿಎಂಎಫ್‌ಎಂಇ ಯೋಜನೆಯನ್ನು ಇನ್ನೂ ಹೆಚ್ಚು ಜನರಿಗೆ ತಲುಪಿಸುವುದಕ್ಕಾಗಿ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಶೇ 15 ರಷ್ಟು ಸಹಾಯಧನ ನೀಡುತ್ತಿದ್ದು, ಆಹಾರ ಉದ್ದಿಮೆದಾರರಿಗೆ ಗರಿಷ್ಠ ₹ 15 ಲಕ್ಷದವರೆಗೆ ಸಹಾಯಧನ ಲಭ್ಯವಿದೆ.
>
> -ಚಲುವರಾಯಸ್ವಾಮಿ, ಕೃಷಿ ಸಚಿವ

ರಾಜ್ಯ ಸರ್ಕಾರ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ಬೆಂಬಲವಾಗಿ ನಿಂತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ಬಜೆಟ್‌ನಲ್ಲಿ ಆಹಾರ ಸಂಸ್ಕರಣೆ ಉದ್ಯಮದ ಅಭಿವೃದ್ಧಿಗಾಗಿ ₹206 ಕೋಟಿ ಹಂಚಿಕೆ ಮಾಡಿದ್ದಾರೆ. 5 ಸಾವಿರ ಆಹಾರೋದ್ಯಮಿಗಳನ್ನು ಸೃಷ್ಟಿಸುವ ಭರವಸೆ ನೀಡಿದ್ದಾರೆ. ಅವರು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದ್ದಾರೆ.

ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಪಿಎಂಎಫ್‌ಎಂಇ ಯೋಜನೆ ಅನುಷ್ಠಾನ ವೇಗ ಪಡೆದುಕೊಂಡಿದೆ. ಈ ಯೋಜನೆಯಡಿ ಗ್ರಾಮೀಣ ಮಹಿಳೆಯರು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯಮಿಗಳಾಗುತ್ತಿದ್ದಾರೆ. ಅಗತ್ಯಬಿದ್ದರೆ, ಈ ಯೋಜನೆಗೆ ರಾಜ್ಯ ಸರ್ಕಾರ ಅನುದಾನ ಹೆಚ್ಚಿಸಲು ಸಿದ್ಧವಿದೆ. ಇದು ಗ್ರಾಮೀಣ ಮಹಿಳೆಯರು ಮತ್ತು ಯುವಕರ ಸಬಲೀಕರಣಕ್ಕೆ ಸಾಧನವಾಗುತ್ತಿದೆ.

ಪಿಎಂಎಫ್‌ಎಂಇ ಯೋಜನೆಗೆ ಶೇ.35ರಷ್ಟು ಸಹಾಯಧನ (ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುಪಾತ 60:40) ನೀಡುತ್ತಿದೆ. ರಾಜ್ಯ ಸರ್ಕಾರದ ಹೆಚ್ಚುವರಿ ಸಹಾಯಧನ ಶೇ 15ರಷ್ಟು ಸೇರಿ ಶೇ 50ರಷ್ಟು ಸಹಾಯಧನವನ್ನು ಫಲಾನುಭವಿಗಳಿಗಾಗಿ ಒದಗಿಸಲಾಗುತ್ತಿದೆ. ಸಹಾಯಧನದ ಗರಿಷ್ಠ ಮಿತಿ ₹ 15 ಲಕ್ಷ. ಈ ಸಹಾಯಧನಕ್ಕೆ ರಾಜ್ಯಸರಕಾರ ₹ 9 ಲಕ್ಷ ಮತ್ತು ಕೇಂದ್ರ ಸರಕಾರ ₹6 ಲಕ್ಷ ನೀಡುತ್ತದೆ..

ಒಂದು ಯೋಜನೆ, ಐದು ವರ್ಷಗಳ ಅವಧಿ, ಆರೂಮುಕ್ಕಾಲು ಸಾವಿರ ಉದ್ದಿಮೆಗಳ ಸೃಷ್ಟಿ, ಮೂವತ್ತು ಸಾವಿರಕ್ಕೂ ಜನರಿಗೆ ನೇರ ಉದ್ಯೋಗಾವಕಾಶ. ಮನೆಯನ್ನೇ ಉದ್ಯಮ ಕೇಂದ್ರವಾಗಿಸಿಕೊಂಡ ಮಹಿಳೆಯರು ಮತ್ತು ಉದ್ಯಮಿಗಳಾಗುತ್ತಿರುವ ರೈತರು..!

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ (ಕೆಪೆಕ್- KAPPEC) ಸಂಸ್ಥೆಯು, ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ(ಪಿಎಂಎಫ್‌ಎಂಇ) ಯೋಜನೆ ಮೂಲಕ ಕರ್ನಾಟಕದ ಆಹಾರ ಸಂಸ್ಕರಣಾ ಉದ್ಯಮ ಕ್ಷೇತ್ರದಲ್ಲಿ ಮೂಡಿಸಿರುವ ಪ್ರಗತಿಯ ಹೆಜ್ಜೆ ಗುರುತುಗಳಿವು.

ಕಳೆದ ಐದು ವರ್ಷಗಳಿಂದ ಕೆಪೆಕ್ ಸಂಸ್ಥೆಯು ರಾಜ್ಯದಾದ್ಯಂತ ಪಿಎಂಎಫ್‌ಎಂಇ ಯೋಜನೆಯ ಮೂಲಕ ಸಾವಿರಾರು ಸಣ್ಣ ಮತ್ತು ಮಧ್ಯಮ ವರ್ಗದ ರೈತರನ್ನು ಸಣ್ಣ ನವೋದ್ಯಮಿಗಳನ್ನಾಗಿಸಿದೆ. ಉದ್ದಿಮೆ ಆರಂಭಿಸಲು ಅಗತ್ಯವಾದ ಆರ್ಥಿಕ ನೆರವು, ತಾಂತ್ರಿಕ ಸಲಹೆ, ಬ್ರ್ಯಾಡಿಂಗ್, ಮಾರುಕಟ್ಟೆಯ ಮಾರ್ಗದರ್ಶನ, ಉದ್ದಿಮೆ ನಡೆಸುವ ತರಬೇತಿ.. ಹೀಗೆ ಹಲವು ಸೌಲಭ್ಯಗಳನ್ನು ನವ ಆಹಾರೋದ್ಯಮಿಗಳಿಗೆ ಕಲ್ಪಿಸಿದೆ. ರೈತರಲ್ಲದೇ, ಸಣ್ಣ, ಸಣ್ಣ ಉದ್ಯಮಿಗಳು ತಮ್ಮ ಆಹಾರ ಸಂಸ್ಕರಣಾ ಉದ್ಯಮವನ್ನು ವಿಸ್ತರಿಸಿಕೊಂಡಿದ್ದಾರೆ ಎನ್ನುತ್ತಾರೆ ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್

ಕೆಪೆಕ್ – ಪಿಎಂಎಫ್‌ಎಂಇ: 1996ರಲ್ಲಿ ಕೃಷಿ ಇಲಾಖೆಯ ಅಡಿಯಲ್ಲಿ ಆರಂಭವಾದ ಕೆಪೆಕ್ ಸಂಸ್ಥೆಯು ಕೃಷಿ, ತೋಟಗಾರಿಕೆ, ಪುಷ್ಪ ಕೃಷಿ ಮತ್ತು ಸಂಬಂಧಿತ ಉತ್ಪನ್ನಗಳ ಉತ್ಪಾದನೆ, ಸಂಸ್ಕರಣೆ ಮತ್ತು ರಫ್ತನ್ನು ಪ್ರೋತ್ಸಾಹಿಸುತ್ತಿದೆ. ಐದು ವರ್ಷಗಳಿಂದ ‘ಆತ್ಮನಿರ್ಭರ ಭಾರತ’ ಯೋಜನೆಯಡಿ ರಾಜ್ಯದಲ್ಲಿ ಪಿಎಂಎಫ್‌ಎಂಇ ಯೋಜನೆಯನ್ನು ಅನುಷ್ಠಾನಗೊಳಿಸುವ ನೋಡಲ್ ಏಜೆನ್ಸಿಯಾಗಿ ಕೆಲಸ ಮಾಡುತ್ತಿದೆ. ಈ ಯೋಜನೆ ಆಹಾರ ಸಂಸ್ಕರಣೆಯ ನವೋದ್ಯಮಕ್ಕೆ ಹೊಸ ರೂಪವನ್ನೇ ಕೊಡುತ್ತಾ ಬಂದಿದೆ.

ಪಿಎಂಎಫ್‌ಎಂಇ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಎರಡೂ ಅನುದಾನ ನೀಡುತ್ತವೆ. ಯೋಜನೆಯಡಿಯಲ್ಲಿ ಕಿರು ಆಹಾರ ಉದ್ದಿಮೆ ಸ್ಥಾಪಿಸಲು ಶೇ 50 ರಷ್ಟು ಅಥವಾ ಗರಿಷ್ಠ ₹ 15 ಲಕ್ಷದವರೆಗೆ ಸಾಲ ಸಂಪರ್ಕಿತ ಸಹಾಯಧನ (ಕೇಂದ್ರ ಸರ್ಕಾರದ ₹ 6 ಲಕ್ಷ ಹಾಗೂ ರಾಜ್ಯ ಸರ್ಕಾರದ ₹ 9 ಲಕ್ಷ ಸಹಾಯಧನ ಲಭ್ಯವಿರುತ್ತದೆ). ಹೊಸದಾಗಿ ಆಹಾರ ಉದ್ದಿಮೆ ಸ್ಥಾಪಿಸಲು ಆಸಕ್ತಿಯಿರುವವರು ಅಥವಾ ಈಗಾಗಲೇ ಆಹಾರ ಉದ್ದಿಮೆಯಲ್ಲಿ ತೊಡಗಿಸಿಕೊಂಡಿರುವವರು ಅದನ್ನು ಮೇಲ್ದರ್ಜೆಗೇರಿಸಲು ಈ ಯೋಜನೆಯನ್ನು ಬಳಸಿಕೊಳ್ಳಬಹುದು ಎನ್ನುತ್ತಾರೆ ಶಿವಪ್ರಕಾಶ್.

ಕಳೆದ ಐದು ವರ್ಷಗಳಲ್ಲಿ ಕೆಪೆಕ್ ಮೂಲಕ 6888 ನವ ಆಹಾರ ಉದ್ಯಮಿಗಳು ಪಿಎಂಎಫ್‌ಎಂಇ ಯೋಜನೆಯಡಿ ಸಾಲ, ಸಬ್ಸಿಡಿ, ಮಾರ್ಗದರ್ಶನ ಪಡೆದುಕೊಂಡು 30 ಸಾವಿರಕ್ಕೂ ಹೆಚ್ಚು ನೇರ ಉದ್ಯೋಗವನ್ನು ಸೃಷ್ಟಿಸಿದ್ದಾರೆ. ಈ ಉದ್ಯಮಿಗಳಲ್ಲಿ ಮಹಿಳಾ ಉದ್ಯಮಿಗಳ ಸಂಖ್ಯೆ ಹೆಚ್ಚಿದೆ ಎಂಬುದು ವಿಶೇಷ.

ಆಹಾರ ಸಂಸ್ಕರಣೆ ಕ್ಷೇತ್ರದಲ್ಲಿ ಉದ್ಯಮ ಆರಂಭಿಸುವವರಿಗೆ ನೆರವಾಗುವುದಕ್ಕಾಗಿಯೇ ಕೆಪೆಕ್ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನು ನೇಮಕ ಮಾಡಿದೆ. ಇವರು ಉದ್ಯಮ ಆರಂಭಿಸುವವರಿಗೆ ಎಲ್ಲ ಹಂತಗಳಲ್ಲೂ ನೆರವಾಗುತ್ತಾರೆ.

ಉದ್ಯಮದ ಜತೆಗೆ ಆರೋಗ್ಯಕ್ಕೂ ಆದ್ಯತೆ: ಕೆಪೆಕ್, ಆಹಾರೋದ್ಯಮ ಸ್ಥಾಪನೆಯಲ್ಲಿ ನವೋದ್ಯಮಕ್ಕೆ ಮಾತ್ರವಲ್ಲದೇ ಜನರ ಸ್ವಾಸ್ಥ್ಯ ರಕ್ಷಣೆಯೆಡೆಗೆ ಹೆಚ್ಚು ಒತ್ತು ನೀಡಿದೆ. ಪಿಎಂಎಫ್‌ಎಂಇ ಯೋಜನೆಯ ಮೂಲಕ ಸಿರಿಧಾನ್ಯಗಳ ಸಂಸ್ಕರಣೆ, ಗಾಣದ ಎಣ್ಣೆ, ಸಾವಯವ ಬೆಲ್ಲದಂತಹ ಪರಿಶುದ್ಧ, ಪೌಷ್ಟಿಕಾಂಶಯುಕ್ತ ಆಹಾರ ಸಂಸ್ಕರಿಸುವ ಘಟಕಗಳ ಸ್ಥಾಪನೆಗೆ ಹೆಚ್ಚು ಒತ್ತು ನೀಡಿರುವುದು ಇದಕ್ಕೆ ಸಾಕ್ಷಿ.

ಪ್ರಸ್ತುತ ಪಿಎಂಎಫ್‌ಎಂಇ ಯೋಜನೆಯಡಿ ರಾಜ್ಯದಾದ್ಯಂತ 2000 ಕ್ಕಿಂತ ಹೆಚ್ಚು ಸಿರಿಧಾನ್ಯ ಸಂಸ್ಕರಣಾ ಘಟಕಗಳು ಆರಂಭವಾಗಿವೆ. ಸಾವಿರಾರು ಎಣ್ಣೆ ತೆಗೆಯುವ ಗಾಣಗಳು (Cold Pressed Oil) ಸ್ಥಾಪನೆಯಾಗಿವೆ. ರಾಸಾಯನಿಕ ಮುಕ್ತ ಬೆಲ್ಲ ಉತ್ಪಾದಿಸುವ 300 ಘಟಕಗಳು ಪ್ರಾರಂಭವಾಗಿವೆ. ಭವಿಷ್ಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲೂ ಸಾವಯವ ಬೆಲ್ಲದ ಉತ್ಪಾದನೆ ಘಟಕ, ಗಾಣದ ಎಣ್ಣೆಗಳ ಘಟಕಗಳಿರಬೇಕೆಂಬುದು ಕೆಪೆಕ್ ಗುರಿಯಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಪಿಎಂಎಫ್‌ಎಂಇ ಯೋಜನೆಯಡಿ ಸ್ಥಾಪಿಸಬಹುದಾದ ಘಟಕಗಳು

ಯಾವುದೇ ಆಹಾರ ಸಂಸ್ಕರಣಾ / ಮೌಲ್ಯವರ್ಧನಾ ಘಟಕಗಳು, ಪಶು ಮತ್ತು ಕುಕ್ಕುಟ ಆಹಾರ ಘಟಕಗಳು. ಉದಾಹರಣೆ: ಸಿರಿಧಾನ್ಯ ಸಂಸ್ಕರಣೆ, ಬೆಲ್ಲ ಉತ್ಪಾದನೆ, ಎಣ್ಣೆ ಗಾಣಗಳು, ಬೇಕರಿ ಉತ್ಪನ್ನಗಳು, ಮಸಾಲೆಪುಡಿ ಘಟಕಗಳು, ಶುಂಠಿ ಸಂಸ್ಕರಣೆ, ತೆಂಗಿನ ಉತ್ಪನ್ನಗಳು, ವಿವಿಧ ಹಣ್ಣು ತರಕಾರಿ ಉತ್ಪನ್ನಗಳು, ಕುಕ್ಕುಟ ಉತ್ಪನ್ನಗಳು ಮತ್ತು ಸಾಗರೋತ್ಪನ್ನಗಳು.



ಮಹಿಳಾ ಸಬಲೀಕರಣಕ್ಕೆ ಒತ್ತು

ಪಿಎಂಎಫ್‌ಎಂಇ ಯೋಜನೆ ಮೂಲಕ ಗ್ರಾಮೀಣ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಕೆಪೆಕ್ ಚಿಂತನೆ ನಡೆಸಿದೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳ ಮಹಿಳೆಯರಿಗೆ ಸ್ವಾವಲಂಬನೆ ಬದುಕು ರೂಪಿಸಲು ಸರ್ಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಹಾಗೂ ನಗರ ಜೀವನೋಪಾಯ ಅಭಿಯಾನದ ಫಲಾನುಭವಿಗಳಿಗೆ ಪಿಎಂಎಫ್‌ಎಂಇ ಯೋಜನೆ ತಲುಪಿಸಲು ಸಿದ್ಧತೆ ನಡೆಸಿದೆ.

ಈ ಎರಡೂ ಯೋಜನೆಯಡಿ ಮಹಿಳೆಯರು ಕೆಲವು ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಕೆಪೆಕ್ ಸಂಸ್ಥೆ, ಅವರಿಗೆ ಪಿಎಂಎಫ್‌ಎಂಇ ಯೋಜನೆಯ ತರಬೇತಿ ಹಾಗೂ ಸಹಾಯಧನ ನೀಡುವ ಗುರಿ ಇಟ್ಟುಕೊಂಡಿದೆ. ಪ್ರತಿ ಜಿಲ್ಲೆಯ ಕನಿಷ್ಠ 100 ಮಂದಿ ಫಲಾನುಭವಿಗಳ ಪಟ್ಟಿ ನೀಡುವಂತೆ ಎರಡೂ ಯೋಜನೆಯ ಮುಖ್ಯಸ್ಥರಿಗೆ ಪತ್ರ ಬರೆಯಲಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳಿಂದ ಆಯ್ಕೆಯಾಗಲು 3,100 ಮಹಿಳೆಯರು ಕಿರು ಆಹಾರ ಉತ್ಪಾದ ಘಟಕ ಸ್ಥಾಪಿಸಲು ಗರಿಷ್ಠ ₹ 40 ಸಾವಿರ ಮೂಲ ಬಂಡವಾಳ ನೀಡಲು ಯೋಜನೆ ರೂಪಿಸಿದೆ.

‘ಕಂದು ಕ್ರಾಂತಿ’ ಆರಂಭಕ್ಕೆ ನಾಂದಿ

ಪ್ರಸ್ತುತ ಕಲಬೆರಕೆ ಆಹಾರ, ರೀಫೈನ್ಡ್ ಎಣ್ಣೆಗಳಲ್ಲಿನ ಕಲಬೆರಕೆ, ಅತಿಯಾದ ಸಕ್ಕರೆ ಬಳಕೆಯಿಂದ ಆರೋಗ್ಯದ ಮೇಲೆ ಯಾವ ರೀತಿ ದುಷ್ಪಾರಿಣಾಮ ಬೀರುತ್ತಿದೆ ಎಂಬುದರ ಬಗ್ಗೆ ಜನರಲ್ಲಿ ಅರಿವು ಮೂಡುತ್ತಿದೆ. ಇದರಿಂದಾಗಿ ಆರೋಗ್ಯ ಪೂರ್ಣವಾಗಿರುವ ಸಿರಿಧಾನ್ಯ, ಗಾಣದ ಎಣ್ಣೆ, ಸಾವಯವ ಬೆಲ್ಲ ಮತ್ತು ಸಂಬಾರ ಪದಾರ್ಥಗಳತ್ತ ಜನರ ಒಲವು ಹೆಚ್ಚಿದೆ. ಈ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿರುವುದೇ ನಮ್ಮ ಉದ್ದಿಮೆದಾರರ ಯಶಸ್ಸಿಗೆ ಕಾರಣವಾಗಿದೆ. ರಾಜ್ಯದಲ್ಲಿರುವ ರಾಜ್ಯದಲ್ಲಿ ಕಂದು ಕ್ರಾಂತಿ (Brown Revolution) ಆರಂಭವಾಗುವ ಲಕ್ಷಣಗಳು ಕಾಣಿಸುತ್ತಿವೆ. ಕೆಪೆಕ್, ರಾಜ್ಯದ ಸಣ್ಣ ಆಹಾರ ಸಂಸ್ಕರಣಾ ಉದ್ದಿಮೆ ಕ್ಷೇತ್ರದಲ್ಲಿ ‘ಕಂದು ಕ್ರಾಂತಿ’ ಆರಂಭಕ್ಕೆ ನಾಂದಿ ಹಾಡಿದೆ. ಕೆಪೆಕ್ ಅಡಿಯಲ್ಲಿ ನಡೆಯುತ್ತಿರುವ ಐದು ಸಾವಿರ ಆಹಾರೋದ್ಯಮೆದಾರರಲ್ಲಿ ಸಿರಿಧಾನ್ಯ, ಎಣ್ಣೆಗಾಣ, ಸಾವಯವ ಬೆಲ್ಲ ಮತ್ತು ಸಂಬಾರ ಉತ್ಪನ್ನಗಳನ್ನು ತಯಾರಿಸಿ, ಮಾರುಕಟ್ಟೆ ಮಾಡುತ್ತಿದ್ದಾರೆ. ಈ ಉತ್ಕೃಷ್ಟ ಪೋಷಕಾಂಶಗಳಿರುವ ಉತ್ಪನ್ನಗಳನ್ನು ಉಪಯೋಗಿಸುವವರ ಆರೋಗ್ಯ ಸುಧಾರಣೆಯಾಗುವ ವಿಶ್ವಾಸವಿದೆ. ಮಾತ್ರವಲ್ಲ, ಭವಿಷ್ಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ಬೆಲ್ಲದ ಗಾಣ, ಎಣ್ಣೆಗಾಣ ಇರುವ ದಿನ ದೂರವಿಲ್ಲ ಎಂದು ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪಿಎಂಎಫ್‌ಎಂಇ ಯೋಜನೆಯ ಘಟಕಗಳು

ಕಳೆದ ನಾಲ್ಕೂವರೆ ವರ್ಷಗಳಲ್ಲಿ ರಾಜ್ಯದಾದ್ಯಂತ 6888 ಉದ್ದಿಮೆಗಳು ಆರಂಭವಾಗಿವೆ. ಇದಕ್ಕಾಗಿ ₹822 ಕೋಟಿ ಬಂಡವಾಳ ಹೂಡಿಕೆ ಮಾಡಲಾಗಿದೆ. ಘಟಕಗಳ ವಿವರ ಈ ಕೆಳಕಂಡಂತಿದೆ.

ಘಟಕಗಳು	ಸಂಖ್ಯೆ
ಸಿರಿಧಾನ್ಯ ಆಧಾರಿತ ಉತ್ಪನ್ನಗಳ ಘಟಕ	2057
ಎಣ್ಣೆ ಬೀಜ ಆಧಾರಿತ ಉತ್ಪನ್ನಗಳ ಘಟಕ	1203
ಬೇಕರಿ ಉತ್ಪನ್ನಗಳ ಘಟಕ	775,
ಬೆಲ್ಲ ಆಧಾರಿತ ಉತ್ಪನ್ನಗಳ ಘಟಕ	362
ಮಸಾಲೆ ಪದಾರ್ಥಗಳು	240
ಮೆಣಸಿನಕಾಯಿ ಆಧಾರಿತ ಉತ್ಪನ್ನಗಳು	199
ಗೋಧಿ ಆಧಾರಿತ ಉತ್ಪನ್ನಗಳು	189
ಅಕ್ಕಿ ಮತ್ತು ಧಾನ್ಯ ಆಧಾರಿತ ಉತ್ಪನ್ನಗಳು	186
ಡೇರಿ ಆಧಾರಿತ ಉತ್ಪನ್ನಗಳ ಘಟಕ	128
ಕಾಫಿ ಆಧಾರಿತ ಉತ್ಪನ್ನಗಳು	111
ಗೋಡಂಬಿ ಉತ್ಪನ್ನಗಳು	86
ತೊಗರಿ ಬೇಳೆ ಉತ್ಪನ್ನಗಳು	75
ಪಶು ಆಹಾರ	71
ಕೋಳಿ ಉತ್ಪನ್ನಗಳು	63
ಬೆಳ್ಳುಳ್ಳಿ ಮತ್ತು ಶುಂಠಿ ಆಧಾರಿತ ಉತ್ಪನ್ನಗಳು	60
ಅಡಿಕೆ/ವೀಳ್ಯದೆಲೆ ಉತ್ಪನ್ನಗಳು	54
ಸಿದ್ಧ ತಿನಿಸುಗಳು	53
ಹಣ್ಣು ಆಧಾರಿತ ಉತ್ಪನ್ನಗಳು	51
ಅರಿಶಿಣ ಉತ್ಪನ್ನಗಳ ಘಟಕ	48
ಸಾಗರೋತ್ಪನ್ನಗಳು	39
ಆಲೂಗಡ್ಡೆ ಆಧಾರಿತ ಉತ್ಪನ್ನಗಳ ಘಟಕ	39
ಜೋಳ ಆಧಾರಿತ ಉತ್ಪನ್ನಗಳ ಘಟಕ	38
ಉಪ್ಪಿನಕಾಯಿ ತಯಾರಿಕೆ ಘಟಕ	36
ನಿಂಬೆ ಆಧಾರಿತ ಉತ್ಪನ್ನಗಳು	31
ಬಾಳೆಹಣ್ಣು ಆಧಾರಿತ ಉತ್ಪನ್ನಗಳು	29
ಅನಾನಸ್ ಉತ್ಪನ್ನಗಳು	29
ಬೇಳೆಕಾಳು ಆಧಾರಿತ ಉತ್ಪನ್ನಗಳು	27
ಅಣಬೆ ಆಧಾರಿತ ಉತ್ಪನ್ನಗಳು	19
ತರಕಾರಿಗಳ ಉತ್ಪನ್ನಗಳು	16
ತೆಂಗಿನಕಾಯಿ ಉತ್ಪನ್ನಗಳು	13
ದ್ರಾಕ್ಷಿ ಆಧಾರಿತ ಉತ್ಪನ್ನಗಳು	10
ಹುಣಸೆಹಣ್ಣು ಉತ್ಪನ್ನಗಳು	9
ಟೊಮ್ಯಾಟೊ ಉತ್ಪನ್ನಗಳು	9
ಜೋಳದ ಉತ್ಪನ್ನಗಳು	8
ಸೋಯಾಬೀನ್ ಉತ್ಪನ್ನಗಳು	7
ಮಾವು ಆಧಾರಿತ ಉತ್ಪನ್ನಗಳು	4
ಶೇಂಗಾ ಉತ್ಪನ್ನಗಳು	3
ಇತರೆ ಉತ್ಪನ್ನಗಳು	51
ಒಟ್ಟು 6888, ಹೂಡಿಕೆಯಾದ ಬಂಡವಾಳ ₹ 822 ಕೋಟಿ	

ಹೊರ ರಾಜ್ಯ, ವಿದೇಶಕ್ಕೂ ಮಾರುಕಟ್ಟೆ ವಿಸ್ತರಣೆ: ಬಿ.ಎಚ್. ಹರೀಶ್ ಕೆಪೆಕ್ ಅಧ್ಯಕ್ಷ



> ಹೊರ ರಾಜ್ಯ, ವಿದೇಶಗಳಲ್ಲಿ ನಮ್ಮ ಯಾವ ಉತ್ಪನ್ನಗಳಿಗೆ ಬೇಡಿಕೆ ಇದೆ ಎಂಬುದನ್ನು ಅರಿತು, ಅವುಗಳನ್ನು ರಫ್ತು ಮಾಡಲು ಬೇಕಾದ ವ್ಯವಸ್ಥೆ ರೂಪಿಸಲಾಗುವುದು’
>
> -ಬಿ.ಎಚ್. ಹರೀಶ್, ಅಧ್ಯಕ್ಷ, ಕೆಪೆಕ್

ಕೆಪೆಕ್ ಅಡಿಯಲ್ಲಿ ಉದ್ದಿಮೆ ಸ್ಥಾಪಿಸಿರುವವರು ಉತ್ಪಾದಿಸುವ ಉತ್ಪನ್ನಗಳ ಮಾರಾಟವನ್ನು ನಮ್ಮ ರಾಜ್ಯದ ಒಳಗಷ್ಟೇ ಅಲ್ಲದೇ, ಹೊರ ರಾಜ್ಯ, ಹೊರ ದೇಶಗಳಿಗೂ ವಿಸ್ತರಿಸಲು ಹೊಸ ಯೋಜನೆಯನ್ನು ರೂಪಿಸುತ್ತಿದ್ದೇವೆ.

ಕೆಪೆಕ್ ಅಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಪಿಎಂಎಫ್‌ಎಂಇ ಯೋಜನೆಯಡಿ ಆರೂ ಮುಕ್ಕಾಲು ಸಾವಿರ ಆಹಾರ ಉದ್ದಿಮೆಗಳು ಆರಂಭವಾಗಿವೆ. ಅವರೆಲ್ಲ ಉತ್ಪಾದಿಸುವ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡಲು ಬೇಕಾದ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ.

ನಮ್ಮ ರಾಜ್ಯದ ಆಹಾರೋದ್ಯಮಿಗಳು ಉತ್ಪಾದಿಸುವ ಉತ್ಪನ್ನಗಳಿಗೆ ವಿದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇದೆ. ಈಗಾಗಲೇ ಈ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೇವೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕೆಪೆಕ್ ಉದ್ಯಮಿಗಳು ಮತ್ತು ರೈತೋದ್ಯಮಿಗಳು ಉತ್ಪಾದಿಸುವ ಉತ್ಪನ್ನಗಳಿಗೆ ವಿದೇಶದಲ್ಲಿ ಮಾರುಕಟ್ಟೆ ಕಲ್ಪಿಸಲು ಯೋಚಿಸಿದ್ದೇವೆ.

ಆಹಾರ ಸಂಸ್ಕರಣೆಗಾಗಿ ಮುಖ್ಯಮಂತ್ರಿಗಳು ಈ ಬಾರಿಯ ಬಜೆಟ್‌ನಲ್ಲಿ ₹206 ಕೋಟಿ ಹಣ ತೆಗೆದಿಟ್ಟಿದ್ದಾರೆ. 5 ಸಾವಿರ ಉದ್ದಿಮೆಗಳನ್ನು ಆರಂಭಿಸುವ ಗುರಿ ನೀಡಿದ್ದಾರೆ. ಇವೆಲ್ಲವನ್ನೂ ಸಾಕಾರಗೊಳಿಸಲು ಮುಖ್ಯಮಂತ್ರಿಗಳು ಹಾಗೂ ಕೃಷಿ ಸಚಿವರ ಮಾರ್ಗದರ್ಶನದಲ್ಲಿ ವಿಶೇಷ ಯೋಜನೆಗಳನ್ನು ರೂಪಿಸುತ್ತಿದ್ದೇವೆ.

ಆಹಾರೋದ್ಯಮಿಯಾಗುವುದು ಹೇಗೆ?

ಪಿಎಂಎಫ್‌ಎಂಇ ಯೋಜನೆಯಡಿ ಆಹಾರೋದ್ಯಮ ಆರಂಭಿಸಲು ಏನು ಮಾಡಬೇಕು? ಪ್ರಕ್ರಿಯೆ ಹೇಗೆ ? ಈ ಕುರಿತ ಮಾಹಿತಿಗಳು ಇಲ್ಲಿವೆ.

ಯಾರು ಅರ್ಜಿ ಸಲ್ಲಿಸಬಹುದು?: ಈಗಾಗಲೇ ಆಹಾರ ಸಂಸ್ಕರಣೆ ಉದ್ಯಮದಲ್ಲಿ ತೊಡಗಿರುವವರು (ಕಂಪನಿಗಳು) ಅಥವಾ ಹೊಸದಾಗಿ ಉದ್ದಿಮೆ ಆರಂಭಿಸುವವರು, ವೈಯಕ್ತಿಕ ಉದ್ದಿಮೆದಾರರು, ರೈತ ಉತ್ಪಾದಕ ಸಂಸ್ಥೆ/ಕಂಪನಿಗಳು (ಎಫ್‌ಪಿಒ/ ಎಫ್‌ಪಿಸಿ), ಪಾಲುದಾರಿಕೆ ಕಂಪನಿಗಳು, ಸಹಕಾರಿ ಸಂಸ್ಥೆಗಳು, ಸ್ವಸಹಾಯ ಸಂಘಗಳು ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ) ಪಿಎಂಎಫ್‌ಎಂಇ ಯೋಜನೆಯಡಿ ಉದ್ದಿಮೆದಾರರಾಗಲು ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸುವ ಬಗೆ : ಕೇಂದ್ರ ಸರ್ಕಾರದ ಆಹಾರ ಸಂಸ್ಕರಣಾ ಸಚಿವಾಲಯದ ಅಧಿಕೃತ ಆನ್‌ಲೈನ್ ಪೋರ್ಟಲ್‌ನಲ್ಲಿಯೇ ಅರ್ಜಿ ಸಲ್ಲಿಸಬೇಕು. ಅರ್ಜಿ ಜೊತೆಗೆ ಸಮಗ್ರ ಯೋಜನಾ ವರದಿ ಸಲ್ಲಿಸಬೇಕು.

ವಯೋಮಿತಿ: 18 ವರ್ಷ ಮೇಲ್ಪಟ್ಟವರು ಅರ್ಜಿ ಸಲ್ಲಿಸಬಹುದು.

ವಿದ್ಯಾರ್ಹತೆ: ಅರ್ಜಿದಾರರಿಗೆ ಯಾವುದೇ ಕನಿಷ್ಠ ವಿದ್ಯಾರ್ಹತೆ ಅಗತ್ಯವಿಲ್ಲ. ಉದ್ದಿಮೆದಾರರು ಉದ್ದಿಮೆಯ ಮಾಲೀಕತ್ವದ ಹಕ್ಕನ್ನು ಹೊಂದಿರಬೇಕು.

ಅರ್ಜಿ ಸಲ್ಲಿಕೆಗೆ ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ರೇಷನ್ ಕಾರ್ಡ್/ವಿದ್ಯುತ್ ಬಿಲ್, ಉದ್ದಿಮೆದಾರರ ಫೋಟೊಗಳು, ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ – ಕಳೆದ 6 ತಿಂಗಳು, ಯಂತ್ರೋಪಕರಣಗಳ ವಿವರಗಳು ಮತ್ತು ಕೊಟೇಷನ್, ಬಾಡಿಗೆ/ ಲೀಸ್ ಕರಾರು ಪತ್ರ, ಸ್ಥಾಪಿಸಬೇಕಿರುವ ಉದ್ದಿಮೆಯ ವಿವರಗಳು.

ಹೆಚ್ಚಿನ ಮಾಹಿತಿಗಾಗಿ ಆಸಕ್ತರು ಸಂಪರ್ಕಿಸಬೇಕಾದ ಕೆಪೆಕ್ ಸಂಸ್ಥೆಯ ದೂರವಾಣಿ ಸಂಖ್ಯೆಗಳು

080-22271192/93/96/97

ಅಥವಾ ಆಯಾ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು, ಕೆಪೆಕ್ ಸಂಸ್ಥೆಯ ಯೋಜನಾ ನಿರ್ವಹಣಾ ಘಟಕವನ್ನು ಸಂಪರ್ಕಿಸಬಹುದು.

₹2 ಕೋಟಿವರೆಗಿನ ಸಾಲಕ್ಕೆ ಅಡಮಾನವಿಲ್ಲ: ಎಂ.ಭಾಸ್ಕರ್ ಚಕ್ರವರ್ತಿ ಅಭಿಮತ



ಪಿಎಂಎಎಫ್‌ಇ ಯೋಜನೆಯಡಿ ಉದ್ದಿಮೆ ಆರಂಭಿಸುವವರಿಗೆ ಸಾಲ ನೀಡಲು ಬ್ಯಾಂಕ್‌ಗಳ ಮುಂದಾಗಿವೆ. ಸಾಲಕ್ಕಾಗಿ ಸಲ್ಲಿಸಿರುವ ಅರ್ಜಿಗಳ ವಿಲೇವಾರಿ ಮತ್ತು ಸಾಲ ಮಂಜೂರಾತಿ ಕುರಿತು **ಎಸ್‌ಎಲ್‌ಬಿಸಿ ಸಂಚಾಲಕ ಎಂ.ಭಾಸ್ಕರ್ ಚಕ್ರವರ್ತಿ** ಅವರು ಇಲ್ಲಿ ಮಾಹಿತಿ ಹಂಚಿಕೊಂಡಿದ್ದಾ ರೆ.

- **ಉದ್ದಿಮೆ ಆರಂಭಿಸುವವರಿಗೆ ಬ್ಯಾಂಕ್‌ಗಳು ತ್ವರಿತವಾಗಿ ಸಾಲ ನೀಡಲು ಎಸ್‌ಎಲ್‌ಬಿಸಿಯ ಕ್ರಮ ಏನು?**

ನವೋದ್ಯಮಿಗಳನ್ನು ಬೆಂಬಲಿಸಲು ಬ್ಯಾಂಕ್‌ಗಳು ಮತ್ತು ರಾಜ್ಯಮಟ್ಟದ ಬ್ಯಾಂಕರ್ ಸಮಿತಿ (ಎಸ್‌ಎಲ್‌ಬಿಸಿ) ಸಿದ್ಧವಿದೆ. ಎಸ್‌ಎಲ್‌ಬಿಸಿ ಸಾಲ ಮಂಜೂರಾತಿ ಪ್ರಕ್ರಿಯೆ ನಿರ್ವಹಿಸಲಿದೆ. ಈ ಕುರಿತು ಬ್ಯಾಂಕಗಳ ಜೊತೆಗೆ ಸಮಾಲೋಚಿಸಲಾಗಿದೆ. ತ್ವರಿತವಾಗಿ ಸಾಲ ದೊರೆಯಲಿದೆ.

- **ಪ್ರಸ್ತುತ ಪಿಎಂಎಫ್‌ಎಂಇ ಯೋಜನೆಯಡಿ ಸಾಲಕ್ಕಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಹೆಚ್ಚುತ್ತಿವೆ. ವಿಲೇವಾರಿಯಾಗದೇ ಉಳಿದಿರುವ ಅರ್ಜಿಗಳ ಸಂಖ್ಯೆ ಹೆಚ್ಚಾಗಿದೆ. ಅವುಗಳ ವಿಲೇವಾರಿ ಯಾವಾಗ?**

ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಈಗಾಗಲೇ ಎಲ್ಲಾ ಬ್ಯಾಂಕ್‌ಗಳಿಗೂ ಎಸ್‌ಎಲ್‌ಬಿಸಿಯಿಂದ ನಿರ್ದೇಶನ ನೀಡಲಾಗಿದೆ. ಆದಾಗ್ಯೂ ನಿರ್ದಿಷ್ಟವಾಗಿ ಇಂಥ ಬ್ಯಾಂಕ್‌ಗಳಲ್ಲಿ ಅರ್ಜಿಗಳು ಬಾಕಿ ಉಳಿದಿವೆ ಎಂಬುದನ್ನು ಗಮನಕ್ಕೆ ತಂದರೆ, ತುರ್ತಾಗಿ ಕ್ರಮ ಕೈಗೊಳ್ಳಲಾಗುತ್ತದೆ.

- **ಸಣ್ಣ ಉದ್ದಿಮೆ ಆರಂಭಿಸುವ ಕೆಲವರಿಗೆ ಸಾಲಕ್ಕಾಗಿ ಶ್ಯೂರಿಟಿ(ಅಡಮಾನ ಇಡುವುದು ಕಷ್ಟ. ಇಂಥ ಸಂದರ್ಭದಲ್ಲಿ ಸಾಲ ನೀಡಲು ಎಸ್‌ಎಲ್‌ಬಿಸಿ ಯಾವ ವ್ಯವಸ್ಥೆ ಮಾಡಿದೆ ?**

ಕೇಂದ್ರ ಸರ್ಕಾರದ ನಿಯಮದ ಪ್ರಕಾರ ಸಣ್ಣ ಉದ್ದಿಮೆದಾರರಿಗೆ ₹2 ಕೋಟಿವರೆಗೂ ನೀಡುವ ಸಾಲಕ್ಕೆ ಯಾವುದೇ ಅಡಮಾನ ಅಗತ್ಯವಿಲ್ಲ. ಅಷ್ಟೇ ಅಲ್ಲ, ಸರ್ಕಾರವು ಸಿಜಿಟಿಎಂಎಸ್‌ಇ (ಕ್ರೆಡಿಟ್ ಗ್ಯಾರಂಟಿ ಟ್ರಸ್ಟ್ ಫಾರ್ ಮೀಡಿಯಮ್ ಆ್ಯಂಡ್ ಸ್ಮಾಲ್ ಎಂಟರ್‌ಪ್ರೈಸಸ್) ಅಡಿ ಸಣ್ಣ ಉದ್ದಿಮೆದಾರರಿಗೆ ವಿಮಾ ಸೌಲಭ್ಯ ಒದಗಿಸಲು ಅವಕಾಶ ಕಲ್ಪಿಸಿದೆ.



ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿ. (ಕೆಪೆಕ್) ಕಳೆದ ನಾಲ್ಕೂವರೆ ವರ್ಷಗಳಿಂದ ಪಿಎಂಎಫ್‌ಇ ಯೋಜನೆ ಮೂಲಕ 6888 ಆಹಾರೋದ್ಯಮಗಳಿಗೆ ಸಾಲಸೌಲಭ್ಯ, ಮಾರ್ಗದರ್ಶನ ನೀಡಿದೆ. ಮತ್ತಷ್ಟು ರೈತರು, ನವೋದ್ಯಮಿಗಳು, ಮಹಿಳೆಯರು ಆಹಾರೋದ್ಯಮಿಗಳಾಗಬೇಕು, ಹೆಚ್ಚು ಹೆಚ್ಚು ಉದ್ದಿಮೆದಾರರು ಆಹಾರ ಸಂಸ್ಕರಣಾ ಉದ್ಯಮವನ್ನು ಪ್ರವೇಶಿಸಬೇಕು ಎಂಬ ಆಶಯದೊಂದಿಗೆ ಕೆಪೆಕ್ ಕಾರ್ಯನಿರ್ವಹಿಸುತ್ತಿದೆ. ಪಿಎಂಎಫ್‌ಎಂಇ ಯೋಜನೆಯ ಅನುಷ್ಠಾನದ ಸಾರಥ್ಯ ವಹಿಸಿರುವ **ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್** ಅವರು, ಯೋಜನೆಯ ಬೆಳವಣಿಗೆ ಮತ್ತು ಭವಿಷ್ಯದ ಯೋಜನೆಗಳ ಕುರಿತು ಇಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾ ರೆ.

ಉತ್ಪಾದನೆಯಿಂದ ಮಾರುಕಟ್ಟೆ, ರಫ್ತಿನವರೆಗೂ ಸಹಾಯಹಸ್ತ

- **ಕೆಪೆಕ್ - ಪಿಎಂಎಫ್‌ಎಂಇ ಯೋಜನೆಯ ಫಲಾನುಭವಿಗಳಿಗೆ ಯಾವ ರೀತಿ ಮಾರ್ಗದರ್ಶನ ಸಿಗುತ್ತದೆ?**
- ಯೋಜನೆಯಡಿ ಕಿರು ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಅರ್ಜಿ ಸಲ್ಲಿಸುವವರಿಗೆ ಕೈಲಾಸರೆ ಬೆಂಬಲವಾಗಿ ಪ್ರತಿ ಜಿಲ್ಲೆಯಲ್ಲಿ ಜಂಟಿ ಕೃಷಿ ನಿರ್ದೇಶಕರ ಅಡಿ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನು (District Resource Persons-DRPs) ನಿಯೋಜಿಸಲಾಗಿರುತ್ತದೆ. ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು ಫಲಾನುಭವಿಗಳಿಗೆ ಅರ್ಜಿಯನ್ನು ಸಿದ್ಧಪಡಿಸುವುದು, ಯೋಜನಾ ವರದಿ ತಯಾರಿಸುವುದು (DPR) ಹಾಗೂ ಅರ್ಜಿ ಸಲ್ಲಿಸುವರೆಗೂ ಉಚಿತವಾಗಿ ಸಹಾಯ ಮಾಡುತ್ತಾರೆ. ಉದ್ದಿಮೆ ಸ್ಥಾಪನೆಗೆ ಅವಶ್ಯಕವಿರುವ ನೋಂದಣಿ/ಪರವಾನಗಿ - FSSAI, Udyam, GST ಇತ್ಯಾದಿ ಪಡೆಯಲು ನೆರವಾಗುತ್ತಾರೆ. ಬ್ಯಾಂಕ್ ಸಾಲ ಮಂಜೂರಾತಿ ಪ್ರಕ್ರಿಯೆ, ತಾಂತ್ರಿಕ ಸಲಹೆ, ಯಂತ್ರೋಪಕರಣಗಳ ಆಯ್ಕೆ, ಸಿವಿಲ್ ಕಾಮಗಾರಿಗಳ ವಿವರಗಳಲ್ಲಿ ಮಾರ್ಗದರ್ಶನ ದೊರೆಯುತ್ತದೆ. ಘಟಕ ಸ್ಥಾಪನೆಗೆ ಮೂರು ದಿನಗಳ ಉಚಿತ ತಾಂತ್ರಿಕ ಹಾಗೂ ಉದ್ಯಮಶೀಲತೆ ತರಬೇತಿ ನೀಡಲಾಗುತ್ತದೆ.
- **ಉದ್ದಿಮೆ ಆರಂಭಿಸಲು ಬ್ಯಾಂಕ್‌ಗಳಲ್ಲಿ ಸಾಲ ಸೌಲಭ್ಯ ಸಿಗುವುದು ಕಷ್ಟ ಎಂದೇ ಹೇಳಲಾಗುತ್ತಿದೆ. ಇದಕ್ಕೆ ಕೆಪೆಕ್ ಯಾವ ಕ್ರಮ ಕೈಗೊಂಡಿದೆ?**
- ಕೆಪೆಕ್ ಕೇಂದ್ರ ಕಚೇರಿಯಲ್ಲಿ ನುರಿತ ತಜ್ಞರನ್ನೊಳಗೊಂಡ ಬ್ಯಾಂಕ್ ಸಲಹಾ ಕೋಶವನ್ನು ಸ್ಥಾಪಿಸಲಾಗಿದ್ದು, ಬ್ಯಾಂಕಿಂಗ್ ಸಂಬಂಧಪಟ್ಟಂತೆ ಎಲ್ಲಾ ಅವಶ್ಯಕ ಮಾಹಿತಿ ಮತ್ತು ಮಾರ್ಗದರ್ಶನವನ್ನು ಸಲಹೆಗಾರರು ಒದಗಿಸುತ್ತಾರೆ. ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಅರ್ಜಿಗಳ ಪರಿಶೀಲಿಸುವುದು, ಫಲಾನುಭವಿಗಳಿಂದ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆಯಲು ತರಬೇತಿ ನೀಡಿರುವುದರಿಂದ ಅರ್ಹ ಅರ್ಜಿದಾರರಿಗೆ ಬ್ಯಾಂಕುಗಳಲ್ಲಿ ತಡವಾಗುವುದಿಲ್ಲ. ರಾಜ್ಯಮಟ್ಟದ ಬ್ಯಾಂಕರ್ಸ್ ಸಮಿತಿ (ಎಸ್‌ಎಲ್ ಬಿಸಿ) ಮೂಲಕ ಎಲ್ಲ ಬ್ಯಾಂಕುಗಳಿಗೆ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸೂಚಿಸಲಾಗಿದೆ. ಕೆಪೆಕ್ ವತಿಯಿಂದ ಆಗಿಂದಾಗ್ಗೆ ಬ್ಯಾಂಕುಗಳಲ್ಲಿ ಬಾಕಿ ಇರುವ ಅರ್ಜಿಗಳ ವಿಲೇವಾರಿಗೆ ಸಂಬಂಧಪಟ್ಟ ಬ್ಯಾಂಕುಗಳ ಹಿರಿಯ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಲಾಗುತ್ತಿದೆ. CGTMSE (Credit Guarantee Trust for MSE) ಮೂಲಕ ಸಾಲ ಭದ್ರತೆ ಒದಗಿಸಲಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಅರ್ಹ ಫಲಾನುಭವಿಗಳಿಗೆ ಸಾಲ ಹಾಗೂ ಸಹಾಯಧನ ಸಿಗುವುದು ತಡವಾಗುವುದಿಲ್ಲ.
- **ಆಹಾರೋದ್ಯಮದಲ್ಲಿ ರಫ್ತು ಮಾರುಕಟ್ಟೆ ವಿಸ್ತರಿಸಲು ಯಾವ್ಯಾವ ಯೋಜನೆಗಳನ್ನು ರೂಪಿಸಿದ್ದೀರಿ?**
- ಕೆಪೆಕ್ ಸಂಸ್ಥೆಯಲ್ಲಿ ನುರಿತ ಅನುಭವಿ ತಜ್ಞರನ್ನೊಳಗೊಂಡ ಕೃಷಿ ರಫ್ತು ಕೋಶವನ್ನು ಸ್ಥಾಪಿಸಲಾಗಿದೆ. ಹೊಸ ಉದ್ದಿಮೆದಾರರು ಮತ್ತು ನವೋದ್ಯಮಿಗಳು ಕೃಷಿ ರಫ್ತು ಚಟುವಟಿಕೆ ಕೈಗೊಳ್ಳಲು ಅವಶ್ಯಕವಿರುವ ಎಲ್ಲಾ ಮಾರ್ಗದರ್ಶನವನ್ನು ಈ ಕೋಶದ ಸಲಹೆಗಾರರಿಂದ ಪಡೆದುಕೊಳ್ಳಬಹುದು. ಕೆಪೆಕ್ ಸಂಸ್ಥೆಯ ವತಿಯಿಂದ ಆಗಿಂದಾಗ್ಗೆ ಕೃಷಿ ರಫ್ತು ತರಬೇತಿ ಕಾರ್ಯಕ್ರಮಗಳನ್ನು ಉಚಿತವಾಗಿ ಆಯೋಜಿಸಲಾಗುತ್ತಿದ್ದು ರಫ್ತು ಕೈಗೊಳ್ಳಲು ಅಗತ್ಯವಿರುವ ಸಮಗ್ರ ಮಾಹಿತಿಯನ್ನು ಇಂತಹ ತರಬೇತಿಗಳಲ್ಲಿ ಅಭ್ಯರ್ಥಿಗಳಿಗೆ ನೀಡಲಾಗುತ್ತಿದೆ. ಕೆಪೆಕ್, ಅಂತರರಾಷ್ಟ್ರೀಯ ವಾಣಿಜ್ಯ ಮೇಳಗಳಲ್ಲಿ ಭಾಗವಹಿಸುತ್ತಿದ್ದು, ಮಳಿಗೆಗಳನ್ನು ತೆರೆಯಲಿದೆ. ಈ ಮಳಿಗೆಗಳಲ್ಲಿ ರಾಜ್ಯದ ನವೋದ್ಯಮಿಗಳಿಗೆ ತಮ್ಮ ಉತ್ಪನ್ನಗಳ ಪ್ರದರ್ಶನ ಮತ್ತು ರಫ್ತು ಮಾರುಕಟ್ಟೆಗೆ ಉಚಿತವಾಗಿ ಸ್ಥಳಾವಕಾಶ ಒದಗಿಸುತ್ತಿದೆ. ಸಂಸ್ಥೆಯ ವತಿಯಿಂದ B2B ಸಭೆಗಳನ್ನು ಆಯೋಜಿಸಲಾಗುತ್ತಿದ್ದು ಉತ್ಪಾದಕರು ಮತ್ತು ರಫ್ತುದಾರರ ನಡುವೆ ಸಭೆಗಳನ್ನು ಏರ್ಪಡಿಸಲಾಗುತ್ತಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದ ಪೂಜೇನಹಳ್ಳಿಯಲ್ಲಿ ಕೆಪೆಕ್ ಸಂಸ್ಥೆಯು ಹಣ್ಣು ಮತ್ತು ತರಕಾರಿಗಳ ರಫ್ತಿಗಾಗಿ ಸಮಗ್ರ ಶೀತಲ ಸರಪಳಿ ಘಟಕವನ್ನು ಸ್ಥಾಪಿಸಿದೆ. ಹುಬ್ಬಳ್ಳಿ, ವಿಜಯಪುರ, ಬಾಗಲಕೋಟೆ, ಗದಗ, ಕುಷ್ಟಗಿ, ಹುಮ್ನಾಬಾದ್ ಈ ಸ್ಥಳಗಳಲ್ಲಿ ರಫ್ತು ಮೂಲಭೂತ ಸೌಕರ್ಯಗಳಾದ ಶೀತಲಗೃಹ, ಪ್ಯಾಕ್‌ಹೌಸ್, ಪ್ರೀಕೂಲಿಂಗ್ ಘಟಕಗಳನ್ನು ಸ್ಥಾಪಿಸಲಾಗಿದೆ. ರಫ್ತುದಾರರು ಇವುಗಳ ಪ್ರಯೋಜನ ಪಡೆದುಕೊಳ್ಳಬಹುದು.

ಕರ್ನಾಟಕವೇ ಮೊದಲು

ಭಾರತದಾದ್ಯಂತ ಪಿಎಂಎಫ್‌ಎಂಇ ಯೋಜನೆ ಅನುಷ್ಠಾನದಲ್ಲಿ ಕರ್ನಾಟಕ ರಾಜ್ಯ ಮುಂದಿದೆ. ನೋಡೆಲ್ ಏಜನ್ಸಿಯಾಗಿ ಕಾರ್ಯನಿರ್ವಹಿಸುತ್ತಿರುವ ಕೆಪೆಕ್ ರಾಜ್ಯದಲ್ಲಿ 93% ಸಾಲ ವಿತರಣೆ ಮಾಡುವಲ್ಲಿ ಯಶಸ್ವಿಯಾಗಿದೆ.

ರಾಜ್ಯವಾರು ಟಾಪ್ 10 - ವಿತರಣೆಯ ಶೇಕಡಾವಾರು

ಸಂಖ್ಯೆ	ರಾಜ್ಯ	ಸಾಲ ಮಂಜೂರು	ಸಾಲ ವಿತರಣೆ	ಶೇಕಡ
1	ಕರ್ನಾಟಕ	7092	6562	93
2	ತಮಿಳುನಾಡು	16493	14910	90%
3	ಉತ್ತರ ಪ್ರದೇಶ	19237	16452	86
4	ಮಹಾರಾಷ್ಟ್ರ	25218	21413	85
5	ಮಧ್ಯಪ್ರದೇಶ	10718	8613	80
6	ಕೇರಳ	7423	5871	79
7	ತೆಲಂಗಾಣ	7080	5579	79
8	ಆಂಧ್ರಪ್ರದೇಶ	7538	5775	77
9	ಜಾರ್ಖಂಡ್	3994	2886	72
10	ಬಿಹಾರ	26562	17755	67

- **ಆಹಾರೋದ್ಯಮಿಗಳ ಉತ್ತೇಜನಕ್ಕೆ ಕೆಪೆಕ್ ಕೈಗೊಂಡಿರುವ ಕಾರ್ಯಕ್ರಮಗಳೇನು?**
- ಆಹಾರ ಉದ್ದಿಮೆಗಳ ಸ್ಥಾಪನೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಾಗಿ ತಾಂತ್ರಿಕ ಸಂಸ್ಥೆಗಳಿಂದ ಉಚಿತ ತರಬೇತಿ ಕಾರ್ಯಕ್ರಮಗಳ ಆಯೋಜನೆ. ಕೆಪೆಕ್ ಸಂಸ್ಥೆಯಲ್ಲಿ ಸಹಾಯವಾಣಿ ಕೇಂದ್ರ ಸ್ಥಾಪನೆ. ಎಲ್ಲಾ ಜಿಲ್ಲೆಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳ ಆಯೋಜನೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯಮಿಗಳಿಗೆ ವಿಶೇಷ ಸಹಾಯವಾಣಿ ಕೇಂದ್ರ. ಫಲಾನುಭವಿಗಳ ಉತ್ಪನ್ನ ಪ್ರದರ್ಶನ ಮತ್ತು ಮಾರುಕಟ್ಟೆಗಾಗಿ ವಾಣಿಜ್ಯ ಮೇಳಗಳ ಆಯೋಜನೆ– ಇವು ಕೆಪೆಕ್ ಕೈಗೊಂಡಿರುವ ಕಾರ್ಯಕ್ರಮಗಳು.

ಜಿಲ್ಲಾ ಸಂಪನ್ಮೂಲ ವ್ಯಕ್ತಿ ನೆರವು

ಹೊಸದಾಗಿ ಉದ್ದಿಮೆ ಆರಂಭಿಸುವವರಿಗೆ ನೆರವಾಗುವುದಕ್ಕಾಗಿ ಪಿಎಂಎಫ್‌ಎಂಇ ಯೋಜನೆಯಿಂದ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನು (ಡಿಆರ್‌ಪಿ) ಕೆಪೆಕ್ ನಿಯೋಜಿಸಿದೆ. ರಾಜ್ಯದಾದ್ಯಂತ 430 ಡಿಆರ್‌ಪಿಗಳಿದ್ದಾರೆ. ಹೊಸದಾಗಿ 89 ಡಿಆರ್‌ಪಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಇದಲ್ಲದೆ ಇನ್ನೂ 100 ಮಂದಿ ಡಿಆರ್‌ಪಿ ನೇಮಿಸುವ ಪ್ರಕ್ರಿಯೆ ನಡೆಯುತ್ತಿದೆ.

ಉದ್ದಿಮೆ ಆರಂಭಿಸುವವರ ಆಸಕ್ತ, ಅಗತ್ಯಕ್ಕೆ ಅನುಗುಣವಾಗಿ ಉದ್ಯಮ ಕುರಿತ ಸಮಗ್ರ ಯೋಜನೆ ವರದಿ ತಯಾರಿಕೆಗೆ ನೆರವಾಗುತ್ತಾರೆ. ಮಾತ್ರವಲ್ಲ, ಕಂಪನಿ ಸ್ಥಾಪನೆ, ನೋಂದಣಿ, ಎಫ್‌ಎಸ್‌ಎಸ್‌ಎಐ, ಉದ್ಯಮ್ ಆಧಾರ್, ಜಿಎಸ್‌ಟಿ ಸರ್ಟಿಫಿಕೇಟ್‌ನಂತಹ ಪರವಾನಗಿ/ಪ್ರಮಾಣ ಪತ್ರ ಪಡೆಯುವ ಜೊತೆಗೆ, ಅರ್ಜಿ ಸಲ್ಲಿಸಲು ಸಹಾಯ ಮಾಡುತ್ತಾರೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ: ಅರ್ಜಿದಾರರು ಕೇಂದ್ರ ಸರ್ಕಾರ ಆಹಾರ ಸಂಸ್ಕರಣಾ ಸಚಿವಾಲಯದ ಆನ್‌ಲೈನ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು.

ಈ ಅರ್ಜಿಯು ಜಿಲ್ಲಾ ಮಟ್ಟದ ಸಮಿತಿಗೆ ರವಾನೆಯಾಗುತ್ತದೆ. ಅಲ್ಲಿ ಅನುಮೋದನೆಗೊಂಡ ಅರ್ಜಿಗಳು ಸಂಬಂಧಿಸಿದ ಬ್ಯಾಂಕ್‌ಗಳಿಗೆ ರವಾನೆಯಾಗುತ್ತದೆ. ದಾಖಲಾತಿಗಳು ಸಮರ್ಪಕವಾಗಿದ್ದರೆ ಬ್ಯಾಂಕ್‌ನವರು ಸಾಲವನ್ನು ಮಂಜೂರು ಮಾಡುತ್ತಾರೆ. ಈ ಎಲ್ಲ ಪ್ರಕ್ರಿಯೆಗಳು ಆನ್‌ಲೈನ್ ಮೂಲಕವೇ ನಡೆಯುತ್ತದೆ.

ಸಾಲ–ಸೌಲಭ್ಯ ಹೇಗೆ ?: ಸಂಬಂಧಿಸಿದ ಬ್ಯಾಂಕ್‌ಗೆ ಅರ್ಜಿ ರವಾನೆಯಾದ ನಂತರ, ಬ್ಯಾಂಕಿನವರು ಉದ್ದಿಮೆಯ ಯೋಜನೆಗಾಗಿ ಕೇಳುತ್ತಿರುವ ಸಾಲದ ಪ್ರಮಾಣ ₹10 ಲಕ್ಷದ ಒಳಗಿದ್ದರೆ, ಯಾವುದೇ ಶ್ಯೂರಿಟಿ/ಗ್ಯಾರಂಟಿ/ಅಡಮಾನ ಕೇಳದೇ ಸಾಲ ನೀಡುತ್ತಾರೆ. ₹10 ಲಕ್ಷ ಮೇಲ್ಪಟ್ಟಿದ್ದರೆ ಅಡಮಾನ ಕೇಳುವ ಸಾಧ್ಯತೆ ಇದೆ. ಜೊತೆಗೆ, ಸ್ಥಾಪಿಸಲಿರುವ ಉತ್ಪಾದನಾ ಘಟಕ / ಹಾಲಿ ಇರುವ ಉತ್ಪಾದನಾ ಘಟಕವನ್ನು ಅಡಮಾನವಾಗಿ ಇರಿಸಿಕೊಂಡು ಸಾಲ ನೀಡುತ್ತವೆ.

ರಕ್ತದಲ್ಲಿ ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿ ಇಡಲು ಪಿಸ್ತಾ ಸೇವನೆ ಉತ್ತಮ



ಕೊಬ್ಬು ಇಳಿಸಿ ಯಕೃತ್ತು ಉಳಿಸಿ

ಅತಿಯಾದ ಆಹಾರ ಸೇವನೆ, ವ್ಯಾಯಾಮ ಇಲ್ಲದ ಜಡಜೀವನ ಫ್ಯಾಟಿ ಲಿವರ್‌ನಂಥ ಆರೋಗ್ಯ ಸಮಸ್ಯೆಯನ್ನು ತಂದೊಡ್ಡಬಹುದು. ಯಕೃತ್ತಿನಲ್ಲಿ ಶೇ 5ಕ್ಕಿಂತ ಹೆಚ್ಚಿನ ಕೊಬ್ಬಿನಂಶ ಸೇರಿಕೊಂಡರೆ ಅದನ್ನು ಫ್ಯಾಟಿ ಲಿವರ್ ಎನ್ನಲಾಗುತ್ತದೆ



• ಡಾ. ವೀಣಾ ಎಸ್. ಭಟ್

ಸಂಪೂರ್ಣ ವೈದ್ಯಕೀಯ ತಪಾಸಣೆ, ಹೊಟ್ಟೆನೋವು, ಮುಟ್ಟಿನ ತೊಂದರೆಯಿಂದಾಗುವ ನೋವಿನಂತಹ ಕಾರಣಗಳಿಗೆ ಸ್ಕ್ಯಾನಿಂಗ್ ಮಾಡಿಸುವ ಪ್ರಕರಣಗಳ ಪೈಕಿ ಶೇ 10ರಿಂದ 20ರಷ್ಟು ಪ್ರಕರಣಗಳಲ್ಲಿ ಫ್ಯಾಟಿ ಲಿವರ್ ಇರುವುದು ಪತ್ತೆಯಾಗುತ್ತಿದೆ. ಫ್ಯಾಟಿ ಲಿವರ್ ಎನ್ನುವುದು ಆಧುನಿಕ ಜೀವನಶೈಲಿಯ ಕೊಡುಗೆಯಾಗಿ ಹಲವು ವರ್ಷಗಳೇ ಕಳೆದಿವೆ.


ಹೆಚ್ಚಿನವರು 'ನಾವು ಒಂದು ಹನಿ ಮದ್ಯವನ್ನೂ ಕುಡಿಯುವುದಿಲ್ಲ. ಒಂದು ಸಿಗರೇಟೂ ಸೇದಿಲ್ಲ. ಆದರೂ ಲಿವರ್‌ನಲ್ಲಿ ಸಮಸ್ಯೆ ಉಂಟಾಗಿದೆಯಲ್ಲ' ಎಂದು ಕಳವಳ ವ್ಯಕ್ತಪಡಿಸುತ್ತಾರೆ. ಆದರೆ, 'ಸಿಟ್ಟಿಂಗ್ ಈಸ್ ದಿ ನ್ಯೂ ಸ್ಮೋಕಿಂಗ್' ಎಂಬುದು ನಿಮಗೆ ತಿಳಿದಿರಲಿ. ಅಂದರೆ, ಚಟುವಟಿಕೆರಹಿತ ಜೀವನಶೈಲಿ ನಿಮ್ಮದಾಗಿದ್ದರೆ ಅದು ಧೂಮಪಾನದಷ್ಟೇ ಅಪಾಯವನ್ನು ತಂದೊಡ್ಡಬಲ್ಲದು ಎಂದರ್ಥ. ಫ್ಯಾಟಿ ಲಿವರ್ ಬಗ್ಗೆ ತಿಳಿಯುವ ಮುನ್ನ ಲಿವರ್ ಅಥವಾ ಯಕೃತ್ತಿನ ಕಾರ್ಯ ವೈಖರಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳೋಣ.

ಯಕೃತ್ತು ದೇಹದಲ್ಲಿ ಎರಡನೇ ಅತಿ ದೊಡ್ಡ ಅಂಗವಾಗಿದ್ದು, ಪುನರುತ್ಪಾದನಾ ಸಾಮರ್ಥ್ಯವುಳ್ಳ ಹೆಪಟೋಸೈಟ್‌ಗಳಿಂದ ಕೂಡಿದೆ. ಹೃದಯಕ್ಕೆ ಪೂರೈಕೆಯಾಗುವ ರಕ್ತದ ಕಾಲು ಭಾಗದಷ್ಟು ರಕ್ತ ಇದಕ್ಕೆ ಪೂರೈಕೆಯಾಗುತ್ತದೆ. ನಾವು ಸೇವಿಸಿದ ಆಹಾರದಿಂದ ಪಡೆದುಕೊಂಡ ಗ್ಲೂಕೋಸ್ ಅನ್ನು ಎಷ್ಟು ಪ್ರಮಾಣದಲ್ಲಿ ರಕ್ತಕ್ಕೆ ಬಿಡುಗಡೆ ಮಾಡಬೇಕು ಎಂಬುದನ್ನು ಯಕೃತ್ತು ನಿರ್ಧರಿಸುತ್ತದೆ. ಚಯಾಪಚಯ ಕ್ರಿಯೆಯಲ್ಲಿಯೂ ಕೊಬ್ಬಿನ ಹೀರುವಿಕೆ ಹಾಗೂ ಸಂಗ್ರಹ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದೇಹದಲ್ಲಿನ ವಿಷ ವಸ್ತುಗಳನ್ನು ಹೊರ ಹಾಕುವುದರಲ್ಲಿ ಯಕೃತ್ತಿನ ಕಾರ್ಯ ದೊಡ್ಡದು. ಹಾಗಾಗಿ, ಮಿದುಳು, ಹೃದಯದ ಆರೋಗ್ಯದ ಕಡೆಗೆ ಗಮನ ಕೊಡುವಂತೆ ಯಕೃತ್ತಿನ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು.

ಫ್ಯಾಟಿ ಲಿವರ್ ಅಂದರೆ...

ಯಕೃತ್ತಿನಲ್ಲಿ ಶೇ 5ಕ್ಕಿಂತ ಹೆಚ್ಚಿನ ಕೊಬ್ಬಿನಂಶ ಸೇರಿಕೊಂಡರೆ ಅದನ್ನು ಫ್ಯಾಟಿ ಲಿವರ್ ಎನ್ನಲಾಗುತ್ತದೆ. ಇದರಲ್ಲಿ ಮೂರು ಹಂತಗಳಿವೆ. ಮೊದಲನೇ ಹಂತದಲ್ಲಿ ಕೇವಲ ಕೊಬ್ಬು ಶೇಖರಣೆಯಾಗುತ್ತದೆ. ಎರಡನೇ ಹಂತದಲ್ಲಿ ಅಂಗಾಂಶ ಹಾನಿ, ಉರಿಯೂತ ಉಂಟಾಗಬಹುದು. ಮೂರನೇ ಹಂತದಲ್ಲಿ ಉರಿಯೂತ ಹಾಗೂ ಫೈಬ್ರೋಸಿಸ್ ಆಗಬಹುದು. ಅದನ್ನು ನಿರ್ಲಕ್ಷಿಸಿದರೆ ಅದು ಸಿರೋಸಿಸ್ ಆಗಿ ಮಾರ್ಪಡುತ್ತದೆ. ಇದು ಯಕೃತ್ತು ಸಂಪೂರ್ಣ ಹಾಳಾದ ಸ್ಥಿತಿಯಾಗಿರುತ್ತದೆ.

ಆರಂಭಿಕ ಹಂತದಲ್ಲಿ ರೋಗಲಕ್ಷಣಗಳು ಕಾಣಿಸಿಕೊಳ್ಳದೇ ಇರಬಹುದು. ಕೆಲವರಿಗೆ ತುಸು ಹೊಟ್ಟೆನೋವು ಕಾಣಿಸಿಕೊಳ್ಳಬಹುದು. ಹನಿಯಷ್ಟು ಮದ್ಯವನ್ನು ಸಹ ಸೇವಿಸದೇ ಇದ್ದರೂ ಲಿವರ್‌ನಲ್ಲಿ ಕೊಬ್ಬು ಹೆಚ್ಚು ಸೇರಿದಾಗ ಅದನ್ನು ನಾನ್ ಆಲ್ಕೋಹಾಲಿಕ್ ಹೆಪಟೋಸ್ಟಿಯಟೋಸಿಸ್ (NASH) ಎನ್ನಲಾಗುತ್ತದೆ. ಈಚೆಗೆ ಮೆಟಬಾಲಿಕ್ ಸಿಂಡ್ರೋಮ್ ಜತೆ ತಳಕು ಹಾಕಿಕೊಂಡಿರುವುದರಿಂದ ಇದನ್ನು ಮೆಟಬಾಲಿಕ್ ಡಿಸ್‌ಫಂಕ್ಷನ್– ಅಸೋಸಿಯೇಟೆಡ್ ಫ್ಯಾಟಿ ಲಿವರ್ ಡಿಸೀಸ್ (MAFLD) ಎನ್ನಲಾಗುತ್ತದೆ.



ಪರೀಕ್ಷೆ ಹೀಗಿರುತ್ತದೆ

ಫ್ಯಾಟಿ ಲಿವರ್ ಇದೆ ಎಂದು ಫಲಿತಾಂಶ ಬಂದಾಗ, ಯಕೃತ್ತಿನ ಕಿಣ್ವಗಳನ್ನು ಮೊದಲಿಗೆ ಪರೀಕ್ಷೆ ಮಾಡಿಸಬೇಕು. ಕೌಟುಂಬಿಕ ಹಿನ್ನೆಲೆಯಿದ್ದರೆ ಅದರ ವಿವರ ಪಡೆಯಬೇಕು. ಎರಡು ಅಥವಾ ಮೂರನೇ ಹಂತದಲ್ಲಿದ್ದಾಗ ಫೈಬ್ರೋಸ್ಕ್ಯಾನ್ ಮಾಡಿಸಬೇಕಾಗುತ್ತದೆ. ಮೆಟಬಾಲಿಕ್ ಸಿಂಡ್ರೋಮ್ ಇದ್ದರೆ, ಏರು ರಕ್ತದೊತ್ತಡ, ಕೆಟ್ಟ ಕೊಲೆಸ್ಟ್ರಾಲ್‌ನಂಥ ಸಮಸ್ಯೆಗಳಿದ್ದರೆ ಅವನ್ನು ಸರಿಪಡಿಸಿಕೊಳ್ಳುವುದು ಒಳ್ಳೆಯದು. ಇಲ್ಲವಾದರೆ ಯಕೃತ್ತಿನ ಜತೆಗೆ ಹೃದಯದ ರಕ್ತನಾಳ, ಮಿದುಳಿಗೂ ತೊಂದರೆ ಉಂಟಾಗಬಹುದು.

ಪರಿಹಾರವೇನು?

ದೇಹದ ತೂಕವನ್ನು ಶೇ 10ರಷ್ಟು ಕಡಿಮೆ ಮಾಡಿಕೊಂಡರೂ ಲಿವರ್ ಫೈಬ್ರೋಸಿಸ್ ಅನ್ನು ಹಿಮ್ಮೆಟ್ಟಿಸಬಹುದಲ್ಲದೆ, ಮೆಟಬಾಲಿಕ್ ಸಿಂಡ್ರೋಮ್ ಅನ್ನು ತಡೆಗಟ್ಟಬಹುದು. ತಿನ್ನುವ ಆಹಾರದ ಪ್ರಮಾಣವನ್ನು ಕಡಿಮೆ ಮಾಡಬೇಕು. ನಿವ್ವಳ ಕ್ಯಾಲೊರಿ ಸೇವನೆಯ ಪ್ರಮಾಣವನ್ನು ಕಡಿತಗೊಳಿಸಬೇಕು. ಶೇ 40ರಷ್ಟು ಶರ್ಕರ ಪಿಷ್ಟಗಳನ್ನು ಸೇವಿಸಿದರೆ, ಕೊಬ್ಬಿನ ಸೇವನೆಯನ್ನು ಶೇಕಡ 10ಕ್ಕಿಂತ ಕಡಿಮೆಗೊಳಿಸಬೇಕು. ಪ್ರೊಟೀನ್ ಸೇವನೆ ಉತ್ತಮವಾಗಿರಲಿ. ಸಕ್ಕರೆ, ಮೈದಾ, ಉಪ್ಪಿನ ಸೇವನೆ ಕಡಿಮೆ ಇರಲಿ. ಒಮೆಗಾ ಸಿಕ್ಸ್ ಮತ್ತು ಒಮೆಗಾ ತ್ರೀ ಹೇರಳವಾಗಿರುವ ಬೆರ್‍ರಿ ಹಣ್ಣುಗಳು, ಮೀನು, ಬಾದಾಮಿಯನ್ನು ಸೇವಿಸಿ. ಅತಿಯಾದ ಜಂಕ್‌ಫುಡ್, ಸಕ್ಕರೆ, ಕರಿದ ತಿಂಡಿಗಳ ಸೇವನೆ, ಬೇಕರಿ ತಿನಿಸುಗಳು, ರಾಸಾಯನಿಕವನ್ನು ಸಿಂಪಡಿಸಿದ ಹಣ್ಣುಗಳು, ಕೃತಕ ಪಾನೀಯಗಳ ಸೇವನೆ, ಅತಿಯಾದ ಔಷಧ ಸೇವನೆಯಿಂದ ದೂರ ಉಳಿಯಿರಿ.

ಯಾವುದೇ ಸೊಪ್ಪು, ತರಕಾರಿ, ಹಣ್ಣುಗಳನ್ನು ಸೇವಿಸುವ ಮೊದಲು ಅರ್ಧ ಗಂಟೆ ಉಪ್ಪಿನ ನೀರಿನಲ್ಲಿ ನೆನೆಸಿಟ್ಟು, ಸ್ವಚ್ಛವಾಗಿ ತೊಳೆದು ಬಳಸಬೇಕು. ಆರರಿಂದ ಎಂಟು ತಾಸು ನಿದ್ರೆ ಅವಶ್ಯಕ. ವಿಟಮಿನ್ 'ಇ' ಮತ್ತು 'ಡಿ' ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಿ. ವಿಟಮಿನ್ 'ಸಿ' ಇರುವ ನೆಲ್ಲಿಕಾಯಿ, ನಿಂಬೆಹಣ್ಣು, ಒಣದ್ರಾಕ್ಷಿ, ಕಬ್ಬಿನಹಾಲು, ಹಾಗಲಕಾಯಿ, ಕರಿಬೇವು, ಶುಂಠಿ ಸೇವನೆ ಉತ್ತಮ.

ನಿತ್ಯ ಒಂದು ಗಂಟೆಯಾದರೂ ವ್ಯಾಯಾಮ ಮಾಡಲೇಬೇಕು. ಜಾಗಿಂಗ್, ರನ್ನಿಂಗ್, ಈಜು ಹೀಗೆ ಇಷ್ಟವಾದ ವ್ಯಾಯಾಮವನ್ನು ಆಯ್ದುಕೊಳ್ಳಿ. ಸೂರ್ಯನಮಸ್ಕಾರದಂಥ ಯೋಗಾಸನವು ಕೊಬ್ಬನ್ನು ಕರಗಿಸುತ್ತದೆ. ಮೆಟ್ಟಿಲು ಹತ್ತಿ, ಇಳಿಯುವುದು, ನೆಲ ಒರೆಸುವಂಥ ಚಟುವಟಿಕೆಗಳನ್ನು ರೂಢಿಸಿಕೊಳ್ಳಿ. ವೈದ್ಯರ ಸಲಹೆಯ ಮೇರೆಗೆ ತೂಕ ಕಡಿಮೆ ಮಾಡಿಕೊಳ್ಳಲು ಔಷಧ ಸೇವಿಸಬೇಕೆ ಹೊರತು ಸ್ವಯಂ ಔಷಧ ಮಾಡಿಕೊಳ್ಳಬೇಡಿ.



ಮಕ್ಕಳಲ್ಲಿ ಅಜೀರ್ಣ ಕಾರಣ ಗೊತ್ತೇ?

• ಡಾ. ದಿವ್ಯಶ್ರೀ ಎಂ.ಆರ್.

ನಾಲ್ಕು ವರ್ಷದ ಮಗುವೊಂದು ಏನು ತಿಂದರೂ ವಾಂತಿ ಮಾಡಿಕೊಳ್ಳುತ್ತಿತ್ತು. ನೀರು ಕುಡಿದರೂ ವಾಂತಿಯಾಗುತ್ತಿತ್ತು. ಪೋಷಕರ ಪ್ರಶ್ನೆ ಒಂದೇ: 'ಯಾಕೆ ಹೀಗಾಗುತ್ತದೆ?' ಜೀರ್ಣಕ್ರಿಯೆಯಲ್ಲಿ ಅತೀವ ಸಮಸ್ಯೆಯಾದಾಗ, ಹೈಪರ್ ಅಸಿಡಿಟಿಯಂಥ ಸಮಸ್ಯೆ ಕಾಣಿಸಿಕೊಂಡಾಗ ಮಕ್ಕಳು ಏನು ತಿಂದರೂ ಕಕ್ಕಿಕೊಳ್ಳುವುದು ಸಹಜವಾಗಿರುತ್ತದೆ.

ಎದೆಯುರಿ, ಹೊಟ್ಟೆ ಉಬ್ಬರ, ಅಸ್ವಸ್ಥತೆ, ಹೊಟ್ಟೆನೋವು, ಮಲ ವಿಸರ್ಜನೆ ಮಾಡಬೇಕು ಎಂದು ಪದೇಪದೇ ಅನ್ನಿಸುವುದು, ವಾಕರಿಕೆ, ಹಸಿವು ಕಡಿಮೆಯಾಗುವುದು ಅಜೀರ್ಣದ ಲಕ್ಷಣಗಳಾಗಿರುತ್ತವೆ. ಮಕ್ಕಳಲ್ಲಿ ಇಂಥ ಲಕ್ಷಣಗಳು ಕಂಡುಬಂದಾಗ ಪೋಷಕರು ಕಳವಳಗೊಳ್ಳುವುದು ಸಹಜವೇ. ಮಲಬದ್ಧತೆ, ಅಸಿಡಿಟಿ ಹಾಗೂ ಅಜೀರ್ಣ ಸಮಸ್ಯೆಗಳು ಮಕ್ಕಳ ದೈನಂದಿನ ಚಟುವಟಿಕೆಗಳಿಗೂ ತೊಂದರೆ ಉಂಟುಮಾಡಬಲ್ಲವು.

ಕಾರಣಗಳೇನು?


ಅತಿಯಾಗಿ ತಿನ್ನುವುದು, ಬೇಗ ತಿನ್ನುವುದು, ನಾರಿನಂಶವಿರುವ ಕೆಲವು ಉಪಯುಕ್ತವಾದ ಆಹಾರಗಳನ್ನು ತಿನ್ನದೇ ಇರುವುದು, ಸ್ವಚ್ಛತೆ ಕಾಪಾಡಿಕೊಳ್ಳದೇ ಇರುವುದು, ಹೋಟೆಲ್ ಆಹಾರದ ಮೇಲೆ ಅತಿಯಾದ ಅವಲಂಬನೆ, ಜಂಕ್‌ಫುಡ್ ಸೇವಿಸುವುದು, ಮಸಾಲೆಯುಕ್ತ, ಜಿಡ್ಡಿನ ಅಥವಾ ಸಕ್ಕರೆಯಿಂದ ಮಾಡಿದ ಪದಾರ್ಥಗಳನ್ನು ಹೆಚ್ಚು ಸೇವಿಸುವುದು. ಸೋಡಾ, ಕಾರ್ಬೊನೇಟೆಡ್ ಪಾನೀಯಗಳನ್ನು ಸೇವಿಸುವುದರಿಂದಲೂ ಅಜೀರ್ಣ ಸಮಸ್ಯೆಗಳು ಉಂಟಾಗಬಹುದು.

ವಿರಳ ಕಾರಣಗಳು ಹೀಗಿವೆ: ಹಾಲಿನ ಉತ್ಪನ್ನಗಳು (ಲ್ಯಾಕ್ಟೋಸ್), ಇತರೆ ಆಹಾರ ಪದಾರ್ಥಗಳ ಸೇವನೆಯಿಂದಾಗುವ ಅಲರ್ಜಿಯಿಂದ ಅಜೀರ್ಣ ಉಂಟಾಗಬಹುದು. ಮಾನಸಿಕ ಒತ್ತಡ, ಮಲಬದ್ಧತೆ, ಆಮ್ಲದ ಹಿಮ್ಮುಖ ಹರಿವು (Reflux) ಅಂದರೆ ಹೊಟ್ಟೆಯ ಆಮ್ಲವು ಅನ್ನನಾಳಕ್ಕೆ ಹಿಮ್ಮುಖವಾಗಿ ಹರಿದು ಅಜೀರ್ಣವನ್ನು ಉಂಟುಮಾಡುವ ಸಾಧ್ಯತೆ ಇರುತ್ತದೆ.

ಮಗುವು ಅಜೀರ್ಣದಿಂದ ಪದೇ ಪದೇ ವಾಂತಿ ಮಾಡಿಕೊಳ್ಳುತ್ತಿದ್ದರೆ, ಸುಸ್ತಾಗಿದ್ದರೆ ಪೋಷಕರು ಗಾಬರಿಯಾಗದೆ, ಮೊದಲಿಗೆ ಮಗುವಿಗೆ ಲಘುವಾದ ಆಹಾರವನ್ನು ತಿನ್ನಿಸಬೇಕು. ನಂತರ ಎಳನೀರಿನಂಥ ದ್ರವ ಆಹಾರವನ್ನು ನೀಡಬೇಕು. ಖಾಲಿ ಹೊಟ್ಟೆಗೆ ನೀರು ಕುಡಿಸಿದರೆ, ಮತ್ತೆ ವಾಂತಿಯಾಗುವ ಸಾಧ್ಯತೆಯೇ ಹೆಚ್ಚು. ಲಘು ಆಹಾರವನ್ನು ಮಗು ನಿಧಾನವಾಗಿ ತಿನ್ನುವಂತೆ ನೋಡಿಕೊಳ್ಳಿ. ಕಾರ್ಬೊನೇಟೆಡ್ ಪಾನೀಯಗಳಿಂದ ದೂರ ಇರಿಸಿ.

ಮಗುವಿನ ಜೀರ್ಣಕ್ರಿಯೆಗೆ ಹೊಂದಿಕೆಯಾಗದ ಆಹಾರವನ್ನು ನೀಡಬೇಡಿ. ಚಾಕೊಲೇಟ್ ಹಾಗೂ ಕಾಫಿ, ಟೀ ಅಭ್ಯಾಸ ಮಾಡಿಸಬೇಡಿ. ಸಿಟ್ರಸ್‌ನಂಥ ಹುಳಿ ಅಂಶವಿರುವ ಹಣ್ಣುಗಳಲ್ಲಿರುವ ಆಮ್ಲವು ಜೀರ್ಣಾಂಗದ ಕಾರ್ಯವೈಖರಿಯ ಮೇಲೆ ಪ್ರಭಾವ ಬೀರುತ್ತದೆ. ಹಾಗಾಗಿ, ಇಂಥ ಹಣ್ಣುಗಳ ಸೇವನೆಯನ್ನು ಸೀಮಿತಗೊಳಿಸಿ. ಊಟವಾಗಿ ಎರಡು ತಾಸಿನ ನಂತರ ಮಗು ಮಲಗಿಕೊಳ್ಳುವಂತೆ ಮಾಡಿ.

ಜೀರ್ಣಕ್ರಿಯೆಗೆ ನೆರವಾಗುವ ಆಹಾರಗಳು: ಎಳನೀರು, ಸೂಪ್, ಮಜ್ಜಿಗೆ, ಶುಂಠಿ ಬೆರೆಸಿದ ನೀರು, ಜೀರಿಗೆನೀರು ಮಗುವಿನ ಜೀರ್ಣಕ್ರಿಯೆಯನ್ನು ಸರಾಗ ಮಾಡುತ್ತವೆ. ಮಗು ಸಾಕಷ್ಟು ವಿಶ್ರಾಂತಿ ಪಡೆಯುವಂತೆ ನೋಡಿಕೊಳ್ಳಿ. ಮಕ್ಕಳ ಪರಿಸರವು ಒತ್ತಡಮುಕ್ತ ಆಗಿರುವಂತೆ ನೋಡಿಕೊಳ್ಳುವುದು ಪೋಷಕರ ಆದ್ಯ ಕರ್ತವ್ಯವಾಗಲಿ. ಮಾನಸಿಕ ಒತ್ತಡ ಹಾಗೂ ವರ್ತನೆಯ ಕಾರಣಗಳಿಂದಲೂ ಮಕ್ಕಳಲ್ಲಿ ಅಜೀರ್ಣ ಸಮಸ್ಯೆ ಉಂಟಾಗಬಹುದು. ಅಜೀರ್ಣದ ಜತೆಗೆ ತೀವ್ರವಾದ ಹೊಟ್ಟೆನೋವು, ವಾಂತಿ ಅಥವಾ ಜ್ವರದಂಥ ಸಮಸ್ಯೆಗಳು ಕಾಣಿಸಿಕೊಂಡರೆ, ಮಕ್ಕಳು ಅಸಹಜ ನಡವಳಿಕೆಯನ್ನು ತೋರುತ್ತಿದ್ದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ, ಅವಶ್ಯ ಔಷಧಗಳನ್ನು ಪಡೆಯಿರಿ.



ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ವರ್ಗ ಸಮೀಕರಣ

ಅಭ್ಯಾಸ 4.1

2) ಈ ಸನ್ನಿವೇಶಗಳನ್ನು, ವರ್ಗ ಸಮೀಕರಣಗಳ ರೂಪದಲ್ಲಿ ವ್ಯಕ್ತಪಡಿಸಿ.

(i) ಒಂದು ಆಯತಾಕಾರದ ನಿವೇಶನದ ವಿಸ್ತೀರ್ಣವು **528m²** ಆಗಿದೆ. ನಿವೇಶನದ ಉದ್ದವು (ಮೀಟರ್‌ಗಳಲ್ಲಿ) ಅದರ ಅಗಲದ ಎರಡಷ್ಟಕ್ಕಿಂತ ಒಂದು ಹೆಚ್ಚಾಗಿದೆ. ಆ ನಿವೇಶನದ ಉದ್ದ ಮತ್ತು ಅಗಲಗಳನ್ನು ನಾವು ಕಂಡುಹಿಡಿಯಬೇಕಾಗಿದೆ.

(ii) ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ. ನಾವು ಆ ಪೂರ್ಣಾಂಕಗಳನ್ನು ಕಂಡುಹಿಡಿಯಬೇಕಾಗಿದೆ.

(iii) ರೋಹನನ ತಾಯಿಯು ಅವನಿಗಿಂತ 26 ವರ್ಷ ದೊಡ್ಡವಳಾಗಿದ್ದಾಳೆ. 3 ವರ್ಷಗಳ ನಂತರ ಅವರ ವಯಸ್ಸುಗಳ (ವರ್ಷಗಳಲ್ಲಿ) ಗುಣಲಬ್ಧವು 360 ಆಗುತ್ತದೆ. ನಾವು ರೋಹನನ ಈಗಿನ ವಯಸ್ಸನ್ನು ಕಂಡುಹಿಡಿಯಲು ಬಯಸುತ್ತೇವೆ

(iv) ಒಂದು ರೈಲು ಏಕರೂಪದ ಜವದಲ್ಲಿ ಚಲಿಸಿ, **480km** ದೂರವನ್ನು ಕ್ರಮಿಸುತ್ತದೆ. ಅದರ ಜವವು **8km/h** ಕಡಿಮೆ ಆಗಿದ್ದರೆ, ಅಷ್ಟೇ ದೂರವನ್ನು ಕ್ರಮಿಸಲು ರೈಲು 3 ಘಂಟೆ ಹೆಚ್ಚಾಗಿ ತೆಗೆದುಕೊಳ್ಳುತ್ತಿತ್ತು. ನಾವು ರೈಲಿನ ಜವವನ್ನು ಕಂಡುಹಿಡಿಯಲು

ಪರಿಹಾರ:–

1) ಆಯತದ ವೀಸ್ತೀರ್ಣ = ಉದ್ದ x ಅಗಲ
ಉದ್ದವು ಅಗಲಕ್ಕಿಂತ ಎರಡರಷ್ಟು ಹೆಚ್ಚಾಗಿದೆ
ಆಯತಾಕಾರದ ನಿವೇಶನದ ವಿಸ್ತೀರ್ಣವು = Length x Breadth
$= (2x+1) \times m^2$
ದತ್ತ ಸಮಸ್ಯೆಯ ಪ್ರಕಾರ ದತ್ತ ಸಮಸ್ಯೆಯ ಪ್ರಕಾರ

$$(2x+1)\,x\;x = 528$$
$$2x^2 + x = 528$$
$$2x^2 + x - 528 = 0$$

ಒಂದು ಆಯತಾಕಾರದ ನಿವೇಶನದ ವಿಸ್ತೀರ್ಣವನ್ನು ವರ್ಗ ಸಮೀಕರಣಗಳ ರೂಪದಲ್ಲಿ ಕೆಳಗಿನಂತೆ ವ್ಯಕ್ತಪಡಿಸಬಹುದಾಗಿದೆ

$$2x^2 + x - 528 = 0$$

2) ಎರಡು ಅನುಕ್ರಮ ಧನ ಪೂರ್ಣಾಂಕಗಳು x ಮತ್ತು $x + 1$ ಆಗಿರಲಿ
ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು = $x(x+1)$ ಆಗಿರಲಿ
ನೀಡಿರುವ ಸಮಸ್ಯೆಯ ಪ್ರಕಾರ

$$x(x+1) = 306$$
$$x^2 + x - 306 = 0$$

ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ.
ನಾವು ಆ ಪೂರ್ಣಾಂಕಗಳನ್ನು ಕಂಡುಹಿಡಿಯಬೇಕಾದಾಗ ಬಳಸಬಹುದಾದ ವರ್ಗ ಸಮೀಕರಣ $x^2 + x - 306 = 0$

3) ರೋಹನನ ಪ್ರಸ್ತುತ ವಯಸ್ಸು x ಆಗಿರಲಿ
ರೋಹನನ ತಾಯಿಯ ಪ್ರಸ್ತುತ ವಯಸ್ಸು $(x+26)$ ವರ್ಷಗಳು
3 ವರ್ಷಗಳ ನಂತರ ರೋಹನನ ವಯಸ್ಸು= $(x+3)$ ವರ್ಷಗಳು
3 ವರ್ಷಗಳ ನಂತರ ರೋಹನನ ತಾಯಿಯ ವಯಸ್ಸು
$= (x + 26 + 3)$ ವರ್ಷಗಳು
3 ವರ್ಷಗಳ ನಂತರ ಅವರ ವಯಸ್ಸುಗಳ (ವರ್ಷಗಳಲ್ಲಿ) ಗುಣಲಬ್ಧವು $= (x + 26 + 3)$
$= (x+3)(x+29)$

ಸಮಸ್ಯೆಯ ಪ್ರಕಾರ

$$(x+3)(x+29) = 360$$
$$x^2 + 29x + 3x + 87 = 360$$
$$x^2 + 32x - 273 = 0$$

ರೋಹನನ ತಾಯಿಯು ಅವನಿಗಿಂತ 26 ವರ್ಷ ದೊಡ್ಡವಳಾಗಿದ್ದಾಳೆ. 3 ವರ್ಷಗಳ ನಂತರ ಅವರ ವಯಸ್ಸುಗಳ (ವರ್ಷಗಳಲ್ಲಿ) ಗುಣಲಬ್ಧವು 360 ಆಗುತ್ತದೆ. ನಾವು ರೋಹನನ ಈಗಿನ ವಯಸ್ಸನ್ನು ಕಂಡುಹಿಡಿಯಲು ಬಳಸಬಹುದಾದ ವರ್ಗ ಸಮೀಕರಣ

$$x^2 + 32x - 273 = 0$$

4) ಒಂದು ರೈಲು ಏಕರೂಪದ ಜವದಲ್ಲಿ ಚಲಿಸಿದಾಗ x km/h ಆಗಿರಲಿ
480 ಕಿ.ಮೀ ದೂರ ಚಲಿಸಲು ಬೇಕಾಗುವ ಸಮಯ

$$= \frac{480}{x} \text{ hours}$$
$$\left(\text{Time} = \frac{\text{Distance}}{\text{Speed}}\right)$$

ಅದರ ಜವವು 8km/h ಕಡಿಮೆ ಆಗಿದ್ದರೆ ರೈಲ್ವೆಯ ವೇಗ =
$= (x-8)$ km/h
ಈಗ 480 ಕಿ.ಮೀ ದೂರ ಚಲಿಸಲು ಬೇಕಾಗುವ ಸಮಯ

$$= \frac{480}{x-8} \text{ hours}$$
$$\left(\text{Time} = \frac{\text{Distance}}{\text{Speed}}\right)$$

ಸಮಸ್ಯೆಯ ಪ್ರಕಾರ

$$= \frac{480}{x-8} = \frac{480}{x} + 3$$
$$= \frac{480}{x-8} - \frac{480}{x} + 3$$
$$\Rightarrow 480\left(\frac{1}{x-8} - \frac{1}{x}\right) = 3$$
$$\frac{1}{x-8} - \frac{1}{x} = \frac{3}{480}$$
$$\frac{x-(x-8)}{(x-8)x} = \frac{1}{160}$$
$$\frac{x-x+8}{x^2-8x} = \frac{1}{160}$$
$$\frac{8}{x^2-8x} = \frac{1}{160}$$
$$x^2 - 8x = (8)(160)$$
$$x^2 - 8x = 1280$$
$$x^2 - 8x - 1280 = 0$$

ಒಂದು ರೈಲು ಏಕರೂಪದ ಜವದಲ್ಲಿ ಚಲಿಸಿ, 480 km ದೂರವನ್ನು ಕ್ರಮಿಸುತ್ತದೆ. ಅದರ ಜವವು 8km/h ಕಡಿಮೆ ಆಗಿದ್ದರೆ, ಅಷ್ಟೇ ದೂರವನ್ನು ಕ್ರಮಿಸಲು ರೈಲು 3 ಘಂಟೆ ಹೆಚ್ಚಾಗಿ ತೆಗೆದುಕೊಳ್ಳುತ್ತಿತ್ತು. ನಾವು ರೈಲಿನ ಜವವನ್ನು ಕಂಡುಹಿಡಿಯಲು ಬಳಸಬಹುದಾದ **ವರ್ಗ ಸಮೀಕರಣ**

$$x^2 - 8x - 1280 = 0$$

<u>ಅಪವರ್ತನ ವಿಧಾನದಿಂದ ಒಂದು ವರ್ಗ ಸಮೀಕರಣವನ್ನು ಬಿಡಿಸುವುದು</u>

ಅಪವರ್ತನ ವಿಧಾನದಿಂದ **$2x^2 - 5x + 3=0$** ಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

DIFFERENTIABILITY

5. Differentiate $\frac{\sec x}{\operatorname{cosec} x}$

Given that $\frac{\sec x}{\operatorname{cosec} x} = \tan x$

and $\frac{d}{dx}\tan x = \sec^2 x$ by Quotient Rule.

$$\text{Soln:- } \frac{d}{dx}\left(\frac{\sec x}{\operatorname{cosec} x}\right) = \frac{\left(\operatorname{cosec} x \frac{d}{dx}(\sec x) - \sec x \frac{d}{dx}(\operatorname{cosec} x)\right)}{\operatorname{cosec}^2 x}$$
$$= \frac{\left(\operatorname{cosec} x(\sec x \tan x) - \sec x(-\operatorname{cosec} x \cot x)\right)}{\operatorname{cosec}^2 x}$$
$$= \frac{\sec x \operatorname{cosec} x(\tan x + \cot x)}{\operatorname{cosec}^2 x}$$
$$= \frac{\sec x(\tan x + \cot x)}{\operatorname{cosec} x}$$
$$= \frac{\sin x}{\cos x}\left\{\frac{\sin x}{\cos x} + \frac{\cos x}{\sin x}\right\}$$
$$= \frac{\sin x}{\cos x}\left\{\frac{\sin^2 x + \cos^2 x}{\sin x \cos x}\right\}$$
$$= \frac{1}{\cos^2 x}$$
$$= \sec^2 x.$$

6. Differentiate the following functions w.r.t.x:

(i) $(ax+b)^n$ (ii) $\frac{1}{\sqrt{a^2 - x^2}}$

(iii) $\sqrt{ax^2 + bx + c}$

Soln:- (i) Let $y = (ax+b)^n$
Put $ax + b = u$, $\therefore y = u^n$ and $u = ax + b$
Now $y = u^n$ | $u = ax + b$

$$\Rightarrow \frac{d}{du}y = \frac{d}{du}u^n \qquad \Rightarrow \frac{d}{dx}u = \frac{d}{dx}(ax+b)$$
$$\Rightarrow \frac{dy}{du} = nu^n - 1 \qquad \Rightarrow \frac{du}{dx} = a.1 + 0 = a$$
$$\therefore \frac{dy}{dx} = \frac{dy}{du}.\frac{du}{dx} = nu^{n-1}.a$$
$$\Rightarrow \frac{d}{dx}(ax+b)^n = n(ax+b)^{n-1}.a$$

(ii) $$\frac{d}{dx}\left(\frac{1}{\sqrt{a^2 - x^2}}\right)$$
$$\Rightarrow \frac{d}{dx}(a^2 - x^2)^{-1/2}$$
$$= -\frac{1}{2}(a^2 - x^2)^{-3/2}\frac{d}{dx}(a^2 - x^2)$$
$$\Rightarrow \left(\frac{-1}{2}\right)\frac{1}{(a^2 - x^2)^{3/2}}.(0 - 2x)$$
$$\Rightarrow \frac{x}{(a^2 - x^2)^{3/2}}$$

(iii) $$\frac{d}{dx}\sqrt{ax^2 + bx + c}$$
$$= \frac{d}{dx}(ax^2 + bx + c)^{1/2}$$
$$\Rightarrow \left(\frac{1}{2}\right)(ax^2 + bx + c)^{1/2}.\frac{d}{dx}(ax^2 + bx + c)$$

[Chain Rule]

$$= \frac{1}{2\sqrt{ax^2 + bx + c}}.\left\{\frac{d}{dx}ax^2 + \frac{d}{dx}bx + \frac{d}{dx}c\right\}$$
$$= \frac{1}{2\sqrt{ax^2 + bx + c}}.\{a(2x) + b(1) + 0\}$$
$$= \frac{2ax + b}{2\sqrt{ax^2 + bx + c}}.$$

7. Differentiate w.r.t.x:
i) $e^{\cos x}$ ii) $\sin^3 x$ iii) $\sin x^3$ iv) e^{x^2}

$$\text{Soln:- i) } \frac{d}{dx}e^{\cos x} = e^{\cos x}.\frac{d}{dx}\cos x$$
$$= e^{\cos x}.(-\sin x)$$
$$= (-e^{\cos x}.\sin x).$$

$$\text{ii) } \frac{d}{dx}\sin^3 x = \frac{d}{dx}(\sin x)^3 = 3(\sin x)^2.\frac{d}{dx}\sin x$$
$$= 3(\sin x)^2(\cos x)$$

$$\text{iii) } \frac{d}{dx}\sin(x)^3 = \cos x^3.\frac{d}{dx}x^3$$
$$= (\cos x)^3.(3x^2) = 3x^2\cos x^3.$$

$$\text{iv) } \frac{d}{dx}e^{x^2} = e^{x^2}.\frac{d}{dx}x^2 = e^{x^2}.2x$$

8. Differentiate w.r.t. x:

i) $\sqrt{a + \sqrt{a+x}}$ ii) $\frac{\sqrt{1-x^2}}{1+x^2}$ iii) $\frac{\sqrt{a+x} - \sqrt{a-x}}{\sqrt{a+x} + \sqrt{a-x}}$

iv) $x + \sqrt{x^3 - 1}$ v) $e^{\sin\sqrt{x}}$ vi) $\log\left(x + \sqrt{x^2 + a^2}\right)$

vii) $\frac{\sin x}{\sqrt{\cos x}}$

$$\text{Soln:- i) } \frac{d}{dx}\sqrt{a + \sqrt{a+x}} = \frac{d}{dx}\left\{a + \sqrt{a+x}\right\}^{1/2}$$
$$\Rightarrow \frac{1}{2}\left\{a + \sqrt{a+x}\right\}^{-1/2}.\frac{d}{dx}\left\{a + \sqrt{a+x}\right\}$$
$$\Rightarrow \frac{1}{2\sqrt{a + \sqrt{a+x}}}.\left\{\frac{d}{dx}a + \frac{d}{dx}(a+x)^{1/2}\right\}$$
$$\Rightarrow \frac{1}{2\sqrt{a + \sqrt{a+x}}}.\left\{0 + \frac{1}{2}(a+x)^{-1/2}.\frac{d}{dx}(a+x)\right\}$$
$$\Rightarrow \frac{1}{2\sqrt{a + \sqrt{a+x}}}\left\{\frac{1}{2\sqrt{a+x}}.(0+1)\right\}$$
$$\Rightarrow \frac{1}{4\sqrt{a + \sqrt{a+x}}\left(\sqrt{a+x}\right)}$$

(Contd........)

ಗುಲ್ವಾಡಿ ಪ್ರಶಸ್ತಿಗೆ ಧರಣಿದೇವಿ, ಮೊಹಮ್ಮದ್ ರಫೀ ಆಯ್ಕೆ

ಉಡುಪಿ: 2024ನೇ ಸಾಲಿನ 'ಗುಲ್ವಾಡಿ ವೆಂಕಟರಾವ್' ಪ್ರಶಸ್ತಿಗೆ ಲೇಖಕಿ ಧರಣಿದೇವಿ ಮಾಲಗತ್ತಿ ಹಾಗೂ 'ಸಂತೋಷ ಕುಮಾರ್ ಗುಲ್ವಾಡಿ ಪ್ರಶಸ್ತಿ'ಗೆ ಲೇಖಕ ಮೊಹಮ್ಮದ್ ರಫೀ ಪಾಷ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಒಳಗೊಂಡಿದೆ. ಇದೇ 13 ರಂದು ಉಡುಪಿಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.


ಮೊಹಮ್ಮದ್ ರಫೀ ಪಾಷ


ಧರಣಿದೇವಿ ಮಾಲಗತ್ತಿ

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಸಂಖ್ಯೆ: ಲೋ.ಇ./ಬಾ.ವಿ./ಪಿ.ಬಿ./ಕೆ.ಡಬ್ಲ್ಯೂ./2024-25/02004 ದಿನಾಂಕ: 06-09-2025

ತಿದ್ದುಪಡಿ ಟೆಂಡರ್ ಪ್ರಕಟಣೆ

ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಲೋ.ಇ./ಬಾ.ವಿ./ಪಿ.ಬಿ./ಕೆ.ಡಬ್ಲ್ಯೂ./2025-26/01925 ದಿನಾಂಕ : 02-09-2025 ರಂದು ಪ್ರಕಟಿಸಲಾದ ಸಾಮಾನ್ಯ ವರ್ಕ ಇಂಡೆಂಟ್ ನಂ. : 26414 ರ ಬದಲಾಗಿ 27565 ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳಲು ಈ ಮೂಲಕ ಪ್ರಕಟಿಸಲಾಗಿದೆ.

ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/263/ಮಣಿಪಾಲ್/2025–26

ಬಾಲಕಿಗೆ ಪ್ರಸವ: ಪತಿ ಸೇರಿ ಐವರ ವಿರುದ್ಧ ಪ್ರಕರಣ

ಯಾದಗಿರಿ: ಹುಣಸಗಿ ತಾಲ್ಲೂಕಿನ ಕೊಡೆಕಲ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ 15 ವರ್ಷದ ಬಾಲಕಿಗೆ ಪ್ರಸವವಾಗಿದ್ದು, ಆಕೆಯ ಪತಿ ಐವರ ವಿರುದ್ಧ ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಸದಾಶಿವ ಮಲ್ಲೇಶಿ ದೂರು ನೀಡಿದ್ದರು.

ಬಾಲಕಿ ಪತಿ, ಅತ್ತೆ, ಮಾವ, ತಾಯಿ-ತಂದೆ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'2021ರ ಜೂನ್ 21ರಂದು ಬಾಲಕಿಗೆ ಮದುವೆಯಾಗಿದೆ. ಹೆರಿಗೆ ಆಗಿರುವುದು ಆರ್‌ಸಿಎಚ್ ಪೋರ್ಟಲ್ ಮೂಲಕ ಗೊತ್ತಾಗಿದೆ' ಎಂದು ಸದಾಶಿವ ಅವರು ಮಾಹಿತಿ ನೀಡಿದರು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಚಾಮುಂಡಿಬೆಟ್ಟ, ಮೈಸೂರು–570010.

ದೂರವಾಣಿ ಸಂಖ್ಯೆ : 0821–2590027, ಇ–ಮೇಲ್ : eochamunditemple@gmail.com

ಪತ್ರ ಸಂಖ್ಯೆ : ಶ್ರೀಚಾಕ್ಷೇಅಪ್ರಾ (5) ಸಿಆರ್/2025–26 ದಿನಾಂಕ : 08.09.2025

ಇ–ಟೆಂಡರ್ ಪ್ರಕಟಣೆ (ದ್ವಿ ಲಕೋಟೆ)

ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ವಿವಿಧ ಸ್ಥಳಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ನಿರ್ಧರಿಸಿದ್ದು ಕಛೇರಿಯ ಬೇಡಿಕೆಗೆ ಅನುಗುಣವಾಗಿ ಮಾಸ್ಟರ್ ಪ್ಲಾನ್ ತಯಾರಿಸಿಕೊಡಲು ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ (http://kppp.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical Bid / Qualification Criteria) ದ ಮೂಲಕ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಮೂಲಕ ಮಾಹಿತಿ ಪಡೆಯಬಹುದಾಗಿದೆ. ಮಾಹಿತಿಯು ಕೆಳಕಂಡಂತೆ ಇರುತ್ತದೆ. ಇ.ಎಂ.ಡಿ. ಟೆಂಡರ್ ನ್ಯಾಯ ಮಾನ್ಯತಾ ಅವಧಿಗಿಂತ (Validity Period) 45 ನಂತರ ವರೆಗೆ ಮಾನ್ಯತೆ ಇರತಕ್ಕದ್ದು.

ಕ್ರ. ಸಂ.	ಟೆಂಡರ್ ವಿವರ	ಅಂದಾಜು ಮೊತ್ತ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ವಿವಿಧ ಸ್ಥಳಗಳಲ್ಲಿ / ಆಸ್ತಿಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಮಾಸ್ಟರ್ ಪ್ಲಾನ್ ತಯಾರಿಸಿ ಕೊಡುವ ಟೆಂಡರ್	50,00,000.00	1,00,000

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ

ಕ್ರ. ಸಂ	ವಿವರ	ದಿನಾಂಕಗಳು (1 ರಿಂದ 4)	ಸಮಯ
1	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವುದು	08.09.2025	ರ ಸಂಜೆ 5.00 ಗಂಟೆಯ ನಂತರ
2	ಟೆಂಡರ್ ಸಂಬಂಧಿಸಿದ ವಿಚಾರಣೆಗಾಗಿ	18.09.2025	ರ ಸಂಜೆ 5.00 ಗಂಟೆಯ ವರೆಗೆ
3	ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ	22.09.2025	ರ ಸಂಜೆ 5.00 ಗಂಟೆ
4	ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ	23.09.2025	ರ ಸಂಜೆ 5.00 ಗಂಟೆ
5	ಹಣಕಾಸಿನ ಟೆಂಡರ್‌ಗಳನ್ನು ತೆರೆಯುವ ದಿನಾಂಕ	26.09.2025	ಬೆಳಿಗ್ಗೆ 11.00 ಗಂಟೆಯ ನಂತರ

ಸಹಿ/– ಕಾರ್ಯದರ್ಶಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಚಾಮುಂಡಿಬೆಟ್ಟ.

ವಾಸಾಸಂಇ/ಮೈಸೂರು/931/ಎಸ್‌ಎಸ್‌ಸಿ/2025–26

ಬೆಂಗಳೂರು ವಿಶ್ವವಿದ್ಯಾಲಯ

Recognised by UGC, Accredited by NAAC with 'A+' Grade

ಜ್ಞಾನಭಾರತಿ, ಬೆಂಗಳೂರು – 560056.

ಸಂಖ್ಯೆ: ಸಿಬ್ಬಂದಿ–2:ಅ3:ಜಿಎಫ್:ನೋಟಿ:2025 ದಿನಾಂಕ: 02.09.2025

ಪ್ರಕಟಣೆ

2025–26ನೇ ಶೈಕ್ಷಣಿಕ ವರ್ಷಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ, ರಾಮನಗರದಲ್ಲಿ ಬೋಧಿಸಲು ಪೂರ್ಣ ಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. UGC ನಿಯಮಗಳ ಪ್ರಕಾರ ಆಯಾ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿ ಸಲ್ಲಿಸಲು ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ **https://bangaloreuniversity.karnataka.gov.in** ಭೇಟಿ ನೀಡಬಹುದಾಗಿದೆ. ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯದ ಪೋರ್ಟಲ್ **ದಿನಾಂಕ: 04.09.2025 ಬೆಳಗ್ಗೆ 10.00 ಗಂಟೆಯಿಂದ 14.09.2025 ಸಂಜೆ 5.00 ರವರೆಗೆ** ಲಭ್ಯವಿರುತ್ತದೆ.

ಸಹಿ/–, ಕುಲಸಚಿವರು

DIPR/CP/RO2688/AAPL/2025-26

ಕರ್ನಾಟಕ ಸರ್ಕಾರ

ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ದೂ.ಸಂಖ್ಯೆ:08172–234839 E-mail: pdhassandudc@gmail.com

ನಂ:ಮುನಿಸಿ(3)/ಸಿ.ಆರ್/27/2025–26(ಭಾಗ–1 ರಿಂದ 4) ದಿನಾಂಕ: 06–09–2025

: ಟೆಂಡರ್ ಪ್ರಕಟಣೆ :

ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಹಾಸನಾಂಬ ದೇವಾಲಯದ–2025ನೇ ಸಾಲಿನ ಜಾತ್ರಾ ಮಹೋತ್ಸವದ ಪ್ರಯುಕ್ತ ಈ ಕೆಳಗೆ ತಿಳಿಸಿರುವ ಕಾಮಗಾರಿ ಹಾಗೂ ಸೇವೆಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮಗಳು–2000 ರಂತೆ ನೊಂದಾಯಿತ ಅರ್ಹ ನೊಂದಾಯಿತ ಗುತ್ತಿಗೆದಾರರು ಹಾಗೂ ಸೇವಾದಾರರಿಂದ ಕೆಡಬ್ಲ್ಯೂ–3 ಮತ್ತು ಕೆಸಿ–4 ರ ಟೆಂಡರ್ ದಸ್ತಾವೇಜಿನಂತೆ ದ್ವಿ–ಲಕೋಟೆ ಪದ್ಧತಿಯಡಿ ಕೆ.ಪಿ.ಪಿ.ಪಿ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. (ವಿವರ ಕೆಳಗಿನಂತಿದೆ.) ಕ್ರ.ಸಂ.ಇಂಡೆಂಟ್ ನಂ.1)DMA/2025-26/EL/WORK_INDENT48936 ಕಾಮಗಾರಿ ವಿವರ: ಹಾಸನಾಂಬ ಜಾತ್ರಾ ಮಹೋತ್ಸವ 2025 ಕ್ಕೆ ನಗರ ಪ್ರದೇಶಗಳ ವಿವಿಧ ರಸ್ತೆಗಳಲ್ಲಿ ಹಾಗೂ ವೃತ್ತಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡುವ ಕಾಮಗಾರಿ ಟೆಂಡರ್ ಮೊತ್ತ (ಜಿ.ಎಸ್.ಟಿ.ಹೊರತುಪಡಿಸಿ) (ರೂ.ಲಕ್ಷಗಳಲ್ಲಿ)67.35 2)DMA/2025-26/OW/WORK_ INDENT47545 ಕಾಮಗಾರಿ ವಿವರ: ಹಾಸನಾಂಬ ಜಾತ್ರಾ ಮರ್ಹೋತ್ಸವ 2025 ಕ್ಕೆ ಮುದ್ರಣ ಸಾಮಗ್ರಿ ಸರಬರಾಜು ಹಾಗೂ ಇತರೆ ಕೆಲಸಗಳು ಟೆಂಡರ್ ಮೊತ್ತ (ಜಿ.ಎಸ್.ಟಿ.ಹೊರತುಪಡಿಸಿ) (ರೂ.ಲಕ್ಷಗಳಲ್ಲಿ)50.45 3)DMA/2025-26/OW/WORK_INDENT48937 ಕಾಮಗಾರಿ ವಿವರ: ಹಾಸನಾಂಬ ಜಾತ್ರಾ ಮಹೋತ್ಸವ 2025 ಕ್ಕೆ ಮೊಬೈಲ್ ಶೌಚಾಲಯಗಳನ್ನು ಸರಬರಾಜು ಮಾಡಿ ನಿರ್ವಹಣೆ ಮಾಡುವ ಕೆಲಸ ಟೆಂಡರ್ ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ) (ರೂ.ಲಕ್ಷಗಳಲ್ಲಿ)41.73 4)DMA/2025-26/SE6153 ಕಾಮಗಾರಿ ವಿವರ: ಹಾಸನಾಂಬ ಜಾತ್ರಾ ಮಹೋತ್ಸವ 2025 ಕ್ಕೆ ದೇವಸ್ಥಾನದ ಹತ್ತಿರ ಸ್ವಚ್ಛತೆ ಕೆಲಸ ನಿರ್ವಹಿಸಲು ಸ್ವಚ್ಛತಾ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವ ಕೆಲಸ ಟೆಂಡರ್ ಮೊತ್ತ (ಜಿ.ಎಸ್.ಟಿ.ಹೊರತುಪಡಿಸಿ) (ರೂ.ಲಕ್ಷಗಳಲ್ಲಿ)4.69 (including GST) ಆಸಕ್ತ ಗುತ್ತಿಗೆದಾರರು ಹಾಗೂ ಸೇವಾದಾರರು ಟೆಂಡರ್‌ನಲ್ಲಿ ಭಾಗವಹಿಸಲು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳುವುದು. ಗುತ್ತಿಗೆದಾರರು ಹಾಗೂ ಸೇವಾದಾರರು ಟೆಂಡರ್ ದಾಸ್ತಾವೇಜುಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಪಡೆಯಬಹುದಾಗಿದೆ. (www.kppp.karnataka.gov.in). ಟೆಂಡರ್‌ಗಳನ್ನು ವಿದ್ಯುನ್ಮಾನ ಸಂಗ್ರಹಣೆ ಮೂಲಕ www.kppp.karnataka.gov.in ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿದೆ. ಇ.ಎಂ.ಡಿ. ಮೊತ್ತ ಹಾಗೂ ಟೆಂಡರ್ ಶುಲ್ಕವನ್ನು ವಿದ್ಯುನ್ಮಾನ ಸಂಗ್ರಹಣೆ ಪೋರ್ಟಲ್‌ನಲ್ಲಿ ಪಾವತಿಸುವುದು. ಟೆಂಡರ್‌ನ ವೇಳಾಪಟ್ಟಿ ಮತ್ತು ಇತರೆ ಮಾಹಿತಿಗಳ ವಿವರ ಈ ಕೆಳಕಂಡಂತಿದೆ. ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ ಇಂಡೆಂಟ್ ಸಂಖ್ಯೆ DMA/2025-26/EL/WORK_INDENT48936 ಇ.ಎಂ.ಡಿ ಮೊತ್ತ Rs. 1.68Lakhs ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 15–09–2025 ತಾಂತ್ರಿಕ ಬಿಡ್ ತೆರೆಯುವ ದಿನಾಂಕ 17–09–2025 DMA/2025-26/OW/WORK_ INDENT47545 ಇ.ಎಂ.ಡಿ ಮೊತ್ತ Rs. 1.26 akhs ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 15–09–2025 ತಾಂತ್ರಿಕ ಬಿಡ್ ತೆರೆಯುವ ದಿನಾಂಕ 17–09–2025 DMA/2025-26/OW/WORK_INDENT48937 ಇ.ಎಂ.ಡಿ ಮೊತ್ತ Rs. 1.04 akhs ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 15–09–2025 ತಾಂತ್ರಿಕ ಬಿಡ್ ತೆರೆಯುವ ದಿನಾಂಕ 17–09–2025 DMA/2025-26/SE6153 ಇ.ಎಂ.ಡಿ ಮೊತ್ತ Rs.0.12 Lakhs ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 15–09–2025 ತಾಂತ್ರಿಕ ಬಿಡ್ ತೆರೆಯುವ ದಿನಾಂಕ 17–09–2025 ಟೆಂಡರ್‌ನ ನಿಬಂಧನೆಗಳಲ್ಲಿ ಹಾಗೂ ಟೆಂಡರ್ ಸಲ್ಲಿಸುವ ಅವಧಿಯ ಮುಂದೂಡಿಕೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ, ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಪ್ರಚುರಪಡಿಸಲಾಗುವುದು ಮತ್ತು ಈ ಬಗ್ಗೆ ಯಾವುದೇ ಪತ್ರಿಕಾ ಪ್ರಕಟಣೆಯನ್ನು ನೀಡಲಾಗುವುದಿಲ್ಲ.

ಸಹಿ/–ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿಕೋಶ, ಹಾಸನ

ವಾಸಾಸಂಇ/ಹಿಸನಿ/ಹಾಸನ/524/ಕೆಎಸ್‌ಎಂಸಿಎ/2025–26

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ – ಸಮುದಾಯದ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/2025–26 ದಿನಾಂಕ: 06–09–2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಸೂರ್ಯನಗರ 4ನೇ ಹಂತದ ವಸತಿ ಯೋಜನೆಗಾಗಿ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಾಡುಜಕ್ಕನಹಳ್ಳಿ ಗ್ರಾಮದ ಸರ್ವೆ ನಂ.1/1ರ ಪೈಕಿ, 3/1, 3/2 ಮತ್ತು ಇತರೆ ಸರ್ವೆ ನಂಬರ್‌ಗಳಲ್ಲಿ ಒಟ್ಟು 837ಎಕರೆ 35ಗುಂಟೆ ಜಮೀನು, ಇಂಡ್ಲವಾಡಿ ಗ್ರಾಮದ ಸ.ನಂ.9/1ರ ಪೈಕಿ, 9/2, 10ರ ಪೈಕಿ, 11, 12, 15, 16, 17, 18/1, 18/2, 18/3 ಮತ್ತು ಇತರೆ ಸರ್ವೆ ನಂಬರ್‌ಗಳಲ್ಲಿ ಒಟ್ಟು 401 ಎಕರೆ 31 ಗುಂಟೆ ಜಮೀನು ಹಾಗೂ ಬಗ್ಗನದೊಡ್ಡಿ ಗ್ರಾಮದ 1, 2/1, 3/1, 5, 7/1, 8/1 ಮತ್ತು ಇತರೆ ಸರ್ವೆ ನಂಬರ್‌ಗಳ 259 ಎಕರೆ 13 ಗುಂಟೆ ಜಮೀನು ಒಟ್ಟಾರೆ 1498 ಎಕರೆ 39ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಭೂಸ್ವಾಧೀನ ಕಾಯ್ದೆ ಕಲಂ 6(1) ರ ಅಧಿಸೂಚನೆಯಂತೆ ಭೂಸ್ವಾಧೀನಪಡಿಸಲಾಗಿರುತ್ತದೆ.

ಈ ಯೋಜನೆಯನ್ನು ಶೇಕಡ 50:50 (ಮಂಡಳಿ:ಭೂಮಾಲೀಕರು) ಅನುಪಾತದ ಪಾಲುದಾರಿಕೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ. ಸದರಿ ವಸತಿ ಯೋಜನೆ ಸೂರ್ಯನಗರ 4ನೇ ಹಂತದ ಬಡಾವಣೆಯ ಸಮಗ್ರ ಅಭಿವೃದ್ಧಿ ಯೋಜನೆಯಡಿ ಇಂಡ್ಲವಾಡಿ ಗ್ರಾಮದ ಸರ್ವೆ ನಂ. 153, 154/1, 154/2, 154/3, 155, 171/1ಪಿ, 171/2ಪಿ, 171/3ಪಿ, 172/1, 172/2, 172/3, 173/3, 173, 174/1, 174/2, 174/3, 175, 176, 177, 178/1, 178/2, 178/3, 179/1, 179/2, 180/1, 180/2, 181/1, 181/2, 182, 183, 184, 185/1, 185/2, 188, 264 ರಲ್ಲಿ 53 ಎಕರೆ ಜಮೀನನ್ನು ಅಂತರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ಮತ್ತು ಕ್ರೀಡಾಂಗಣ ಸಂಕೀರ್ಣ ನಿರ್ಮಾಣದ ಉದ್ದೇಶಕ್ಕಾಗಿ ಕಾಯ್ದಿರಿಸಿದೆ. ಸದರಿ ಜಮೀನಿನ ಭೂಮಾಲೀಕರಿಗೆ ಶೇ.50:50ರ ಅನುಪಾತದ ಪಾಲುದಾರಿಕೆಯಡಿ ಭೂಮಾಲೀಕರ ಪಾಲಿನ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳಲು ಕಾರ್ಯಪಾಲಕ ಅಭಿಯಂತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಸೂರ್ಯನಗರ 4ನೇ ಹಂತ, ಸ್ವಾಮಿ ವಿವೇಕಾನಂದ ಯೋಗ ವಿಶ್ವವಿದ್ಯಾಲಯ ರಸ್ತೆ, ನಂ.52, ಬಿ.ಎಸ್.ಆರ್. ಲೇಔಟ್, ಕೋನಸಂದ್ರ, ಜಿಗಣಿ, ಬೆಂಗಳೂರು–560105. ಇಲ್ಲಿ ದಿನಾಂಕ : 25–09–2025 ರಂದು ಬೆಳಗ್ಗೆ 10.00 ಗಂಟೆಯಿಂದ ಸಂಜೆ:5.30 ರವರೆಗೆ ನಿಗದಿಪಡಿಸಲಾಗಿದೆ. ಉದ್ದೇಶಿತ ಕ್ರೀಡಾಂಗಣಕ್ಕೆ ಕಾಯ್ದಿರಿಸಿದ ಇಂಡ್ಲವಾಡಿ ಗ್ರಾಮದ ಮೇಲೆ ತಿಳಿಸಿರುವ ಸರ್ವೆ ನಂಬರ್‌ಗಳ ಭೂಮಾಲೀಕರು ಜಮೀನುಗಳ ಮೂಲ ದಾಖಲಾತಿಗಳೊಂದಿಗೆ ತಪ್ಪದೇ ಹಾಜರಾಗಿ ನಿಯಮಾನುಸಾರ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ. ತಪ್ಪಿದಲ್ಲಿ ಭೂಮಾಲೀಕರಿಗೆ ನಿಯಮಾನುಸಾರ ಅನುಪಾತದ ಪಾಲುದಾರಿಕೆಯಲ್ಲಿ ನೀಡಬೇಕಾದ ನಿವೇಶನಗಳನ್ನು ಗೃಹ ಮಂಡಳಿಯೇ ಕಾಯ್ದಿರಿಸಿ ಉಳಿಕೆ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

–: ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಭೂಮಾಲೀಕರು ಅನುಸರಿಸಬೇಕಾದ ಅಂಶಗಳು :–

1. ಮೂಲೆ ನಿವೇಶನ/ವಾಣಿಜ್ಯ ನಿವೇಶನ/ಸಿ.ಎ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಇರುವುದಿಲ್ಲ.
2. ಕ್ರೀಡಾಂಗಣಕ್ಕೆ ಕಾಯ್ದಿರಿಸಿದ ಇಂಡ್ಲವಾಡಿ ಗ್ರಾಮದ ಸರ್ವೆ ನಂಬರ್‌ಗಳ ಭೂಮಾಲೀಕರಿಗೆ ಸೂರ್ಯನಗರ 4ನೇ ಹಂತದ ಸೆಕ್ಟರ್–1, ಸೆಕ್ಟರ್–2, ಸೆಕ್ಟರ್–3ರಲ್ಲಿ ಮಾತ್ರ ಈಗಾಗಲೇ ಆಯ್ಕೆ ಮಾಡಿಕೊಂಡು ಉಳಿದಿರುವ ನಿವೇಶನಗಳನ್ನು ಆಯ್ಕೆಗೆ ಅವಕಾಶ ನೀಡಲಾಗುವುದು ಅಥವಾ ಬಡಾವಣೆಯ ಇತರೆ ಭಾಗದಲ್ಲಿ ಸದರಿ ಭೂಮಾಲೀಕರ ಜಮೀನು ಇದ್ದಲ್ಲಿ ಆ ಜಮೀನು/ಅಕ್ಕಪಕ್ಕದ ಜಮೀನುಗಳಲ್ಲಿ ಲಭ್ಯವಿರುವ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.
3. ನಿಗಧಿಯಾದ ದಿನಾಂಕದಂದು ಭೂಮಾಲೀಕರು ನಿಗಧಿಪಡಿಸಿದ ಸ್ಥಳ ಮತ್ತು ವೇಳೆಯಲ್ಲಿ ಹಾಜರಾಗಿ ಮಂಡಳಿಯ ಅಧಿಕಾರಿಗಳಿಂದ ಟೋಕನ್ ಪಡೆಯತಕ್ಕದ್ದು. ಟೋಕನ್ ನಂಬರಿನ ಅನುಸಾರ ಭೂಮಾಲೀಕರಿಗೆ ನಿವೇಶನಗಳ ಆಯ್ಕೆಗೆ ಅವಕಾಶ ನೀಡಲಾಗುವುದು.
4. ಆಯ್ಕೆಗೆ ನಿಗಧಿಪಡಿಸಿದ ದಿನದಂದು ಜಮೀನು ನೀಡಿದ ಭೂಮಾಲೀಕರು ಹಾಜರಾಗದಿದ್ದಲ್ಲಿ ಅಥವಾ ನಿವೇಶನಗಳನ್ನು ಆಯ್ಕೆ ಮಾಡದೇ ಇದ್ದ ಪಕ್ಷದಲ್ಲಿ ಮಂಡಳಿಯ ವತಿಯಿಂದಲೇ ನಿವೇಶನಗಳನ್ನು ಕಾಯ್ದಿರಿಸಲಾಗುವುದು. ಕಾಯ್ದಿರಿಸಿದ ನಿವೇಶನಗಳಲ್ಲಿ ಮುಂದೆ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.
5. ಭೂಸ್ವಾಧೀನಕ್ಕೆ ಒಳಪಟ್ಟ 50:50ರ ಅನುಪಾತದಲ್ಲಿ ಭೂಪರಿಹಾರದ ನಿವೇಶನಗಳನ್ನು ಆಯ್ಕೆ ಮಾಡಲು ಭೂಮಾಲೀಕರು ಅಥವಾ ಭೂಮಾಲೀಕರ ಅಧಿಕಾರ ಪತ್ರ ಹೊಂದಿದವರ ಹೊರತು ಬೇರೆಯವರಿಗೆ ನಿವೇಶನ ಆಯ್ಕೆ ಮಾಡುವ ಅವಕಾಶ ಇರುವುದಿಲ್ಲ.
6. ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಸಿವಿಲ್/ಉಚ್ಚನ್ಯಾಯಾಲಯದಲ್ಲಿ ಪ್ರಕರಣವಿದ್ದಲ್ಲಿ ಅಂತಹ ಜಮೀನಿಗೆ ಸಂಬಂಧಿಸಿದಂತೆ ನಿವೇಶನಗಳನ್ನು ಗೃಹ ಮಂಡಳಿಯೇ ಕಾಯ್ದಿರಿಸಿ ಮಾನ್ಯ ನ್ಯಾಯಾಲಯದ ಆದೇಶದ ನಂತರ ಮಂಡಳಿಯ ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುವುದು.
7. ಪಾಲುದಾರಿಕೆಯಡಿ ನೀಡುವ ಅಭಿವೃದ್ಧಿಪಡಿಸಿದ ವಿಸ್ತೀರ್ಣವು ಹೊರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗುವ ಅಂತಿಮ ವಿನ್ಯಾಸ ನಕ್ಷೆಯಲ್ಲಿನ ಭೂವಿಶ್ಲೇಷಣೆ (ವಸತಿ ಮತ್ತು ವಾಣಿಜ್ಯ) ಮಿತಿಗೆ ಒಳಪಟ್ಟಿರುತ್ತದೆ.
8. ಭೂಮಾಲೀಕರಿಂದ ನಿವೇಶನಗಳ ಆಯ್ಕೆಯು ಅನುಪಾತದ ಪಾಲುದಾರಿಕೆಯಡಿ ನಿರ್ವಹಿಸಲಾದ ಒಡಂಬಡಿಕೆ **(MOU)** ಯಲ್ಲಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಸೂರ್ಯನಗರ 4ನೇ ಹಂತ ದೂರವಾಣಿ ಸಂಖ್ಯೆ:080–24482702, ಮೊ.9845139612, 9448214736, ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ಮೊ.9480019136, 9902273111, 9448844216, 9448266499. ಇವರನ್ನು ಸಂಪರ್ಕಿಸಬಹುದು.

ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/2687/Zen/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಮುಇಂವಿ/ಟಿಮತ್ತುಪಿ/ಅಇಂ(ವಿ)–1/ಅಇಂ(ವಿ)–2/2025–26/5346–74 ದಿನಾಂಕ: 08.09.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್ ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.

ವಿಚಾರಣೆ ಸಂಖ್ಯೆಗಳು/ ಕಾಮಗಾರಿಗಳ ವಿವರ

1) ಕೆಪಿಟಿಸಿಎಲ್/2025–26/ಎಸ್‌ಎಸ್ /ವರ್ಕ್_ಇಂಡೆಂಟ್2651

ಕೆಳಗಿನ ಕಾಮಗಾರಿಗಳು ಸಂಯೋಜಿತ ಪ್ಯಾಕೇಜ್‌ನ ಅಡಿಯಲ್ಲಿ:

ಕಾಮಗಾರಿ–ಎ): ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ **ಬ್ಯಾಡಗಿ (ಲಕಮಜಿಕೊಪ್ಪ)**ಯಲ್ಲಿ **2x160ಎಂವಿಎ, 220/110/11ಕೆವಿ & 1x10ಎಂವಿಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಮತ್ತು 0.752 ಕಿ.ಮೀಗಳ 220ಕೆವಿ ಪ್ರಸರಣ ಮಾರ್ಗ ಮತ್ತು **56.58 ಕಿ.ಮೀಗಳ** 110ಕೆವಿ ಪ್ರಸರಣ ಮಾರ್ಗ ಹಾಗೂ 4 ಸಂಖ್ಯೆಗಳ 110ಕೆವಿ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು.

ಕಾಮಗಾರಿ–ಬಿ): ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕಿನ ಬೊಮ್ಮನಹಳ್ಳಿಯಲ್ಲಿ **2x5ಎಂವಿಎ, 33/11ಕೆವಿ** ವಿದ್ಯುತ್ ಉಪಕೇಂದ್ರವನ್ನು **2x20ಎಂವಿಎ, 110/11ಕೆವಿ** ಉಪಕೇಂದ್ರಕ್ಕೆ ಉನ್ನತೀಕರಿಸುವುದು ಹಾಗೂ 110ಕೆ.ವಿ ಅಕ್ಕಿಆಲೂರು (ಬಾಳಂಬೀಡ) ಉಪಕೇಂದ್ರದಿಂದ ಪ್ರಸ್ತಾವಿತ 110/11ಕೆವಿ ಬೊಮ್ಮನಹಳ್ಳಿ ಉಪಕೇಂದ್ರದವರೆಗೆ ಪ್ಯಾಂಥರ್(Panther) ವಾಹಕದಿಂದ **16.626 ಕಿ.ಮೀಗಳ** ಉದ್ದಕ್ಕೆ 110ಕೆವಿ ಡಿಸಿ (DC) ಪ್ರಸರಣ ಮಾರ್ಗ ನಿರ್ಮಾಣ ಮತ್ತು ಪ್ರಗತಿಯಲ್ಲಿರುವ 110ಕೆವಿ ಅಕ್ಕಿಆಲೂರು (ಬಾಳಂಬೀಡ) ಉಪಕೇಂದ್ರದಲ್ಲಿ ಎರಡು ಸಂಖ್ಯೆಯ 110ಕೆವಿ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು.

ಕಾಮಗಾರಿ–ಸಿ): ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕಿನ ಬೆಳಗಲಪೇಟೆಯಲ್ಲಿ **2x5ಎಂವಿಎ, 33/11ಕೆವಿ** ಉಪಕೇಂದ್ರವನ್ನು **2x20ಎಂವಿಎ, 110/11ಕೆವಿ** ಉಪಕೇಂದ್ರಕ್ಕೆ ಉನ್ನತೀಕರಿಸುವುದು ಹಾಗೂ 110ಕೆ.ವಿ ಅಕ್ಕಿಆಲೂರು (ಬಾಳಂಬೀಡ) ಉಪಕೇಂದ್ರದಿಂದ ಪ್ರಸ್ತಾವಿತ 110ಕೆವಿ ಬೆಳಗಲಪೇಟೆ ಉಪಕೇಂದ್ರದವರೆಗೆ **8.664 ಕಿ.ಮೀಗಳ** ಉದ್ದಕ್ಕೆ 110ಕೆವಿ ಡಿಸಿ (DC) ಪ್ರಸರಣ ಮಾರ್ಗವನ್ನು ಪ್ಯಾಂಥರ್(Panther) ವಾಹಕದಿಂದ ನಿರ್ಮಿಸುವುದು ಹಾಗೂ ಪ್ರಸ್ತಾವಿತ 110/11ಕೆವಿ ಬೆಳಗಲಪೇಟೆ ಉಪಕೇಂದ್ರದಿಂದ, ಪ್ರಸ್ತಾವಿತ 110ಕೆವಿ ಡಿಸಿ (DC) ಪ್ರಸರಣ ಮಾರ್ಗವನ್ನು ಕೊನೆಗೊಳಿಸುವ ಸಲುವಾಗಿ 02 ಸಂಖ್ಯೆಯ 110ಕೆವಿ ಟರ್ಮಿನಲ್ ಬೇಗಳನ್ನು ಪ್ರಗತಿಯಲ್ಲಿರುವ 110ಕೆವಿ ಅಕ್ಕಿಆಲೂರು (ಬಾಳಂಬೀಡ) ಉಪಕೇಂದ್ರದಲ್ಲಿ ನಿರ್ಮಿಸುವುದು.

ಕಾಮಗಾರಿ–ಡಿ): ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಹನುಮನಮಟ್ಟಿಯಲ್ಲಿ **2x20ಎಂವಿಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆವಿ ರಾಣೆಬೆನ್ನೂರು–ಬ್ಯಾಡಗಿ ಎಸ್‌ಸಿ(SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆವಿ ಹನುಮನಮಟ್ಟಿ ಉಪಕೇಂದ್ರದವರೆಗೆ **2.414 ಕಿ.ಮೀಗಳ** ಉದ್ದಕ್ಕೆ 110ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

2) ಕೆಪಿಟಿಸಿಎಲ್/2025–26/ಎಸ್‌ಎಸ್ /ವರ್ಕ್_ಇಂಡೆಂಟ್2620

ಕೆಳಗಿನ ಕಾಮಗಾರಿಗಳು ಸಂಯೋಜಿತ ಪ್ಯಾಕೇಜ್‌ನ ಅಡಿಯಲ್ಲಿ:

ಕಾಮಗಾರಿ–ಎ): ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ **ಸೀಗೂರು ಮಿತಿ(ಕಗ್ಗುಂಡಿ)**ಯಲ್ಲಿ 2x150ಎಂವಿಎ ಮತ್ತು 1x12.5ಎಂವಿಎ, 220/66/11ಕೆವಿ ಉಪಕೇಂದ್ರವನ್ನು ಈ ಕೆಳಗಿನ ಪ್ರಸರಣ ಮಾರ್ಗಗಳ ನಿರ್ಮಾಣದೊಂದಿಗೆ ಸ್ಥಾಪಿಸುವುದು.

i. ಹಾಲಿಯಿರುವ 220ಕೆವಿ ಬಸ್ತಿಪುರ– ಕುಶಾಲನಗರ ಡಿಸಿ ಮಾರ್ಗದಿಂದ ಪ್ರಸ್ತಾವಿತ 220/66/11ಕೆವಿ ಸೀಗೂರು ಮಿತಿ(ಕಗ್ಗುಂಡಿ) ಉಪ–ಕೇಂದ್ರದವರೆಗೆ **3.553 ಕಿ.ಮೀ** ಉದ್ದಕ್ಕೆ ಡ್ರೇಕ್ ಕಂಡಕ್ಟರ್‌ನೊಂದಿಗೆ ಎಂಸಿ ಗೋಪುರಗಳ ಮೇಲೆ 220ಕೆವಿ ಡಬಲ್ ಸರ್ಕ್ಯೂಟ್ ಲಿಲೋ ಮಾರ್ಗದ ನಿರ್ಮಾಣ.

ii. ಹಾಲಿಯಿರುವ 66ಕೆವಿ ಕುಶಾಲನಗರ–ಮೈಸೂರು 1 ಮತ್ತು 2 ಡಿಸಿ ಮಾರ್ಗದಿಂದ ಪ್ರಸ್ತಾವಿತ 220/66/11ಕೆವಿ ಸೀಗೂರು ಮಿತಿ(ಕಗ್ಗುಂಡಿ) ಉಪ–ಕೇಂದ್ರದವರೆಗೆ **19.446 ಕಿ.ಮೀ** ಉದ್ದಕ್ಕೆ ಕೊಯೋಟ್ ಕಂಡಕ್ಟರ್‌ನೊಂದಿಗೆ ಎಂಸಿ ಗೋಪುರಗಳ ಮೇಲೆ 66ಕೆವಿ ಡಬಲ್ ಸರ್ಕ್ಯೂಟ್ ಲಿಲೋ ಮಾರ್ಗದ ನಿರ್ಮಾಣ.

iii. ಹಾಲಿಯಿರುವ 66ಕೆವಿ ಕುಶಾಲನಗರ–ಪಿರಿಯಾಪಟ್ಟಣ 1 ಮತ್ತು 2 ಡಿಸಿ ಮಾರ್ಗದಿಂದ ಪ್ರಸ್ತಾವಿತ 220/66/11ಕೆವಿ ಸೀಗೂರು ಮಿತಿ(ಕಗ್ಗುಂಡಿ) ಉಪ–ಕೇಂದ್ರದವರೆಗೆ **3.463 ಕಿ.ಮೀ** ಉದ್ದಕ್ಕೆ ಕೊಯೋಟ್ ಕಂಡಕ್ಟರ್‌ನೊಂದಿಗೆ ಎಂಸಿ ಗೋಪುರಗಳ ಮೇಲೆ 66ಕೆವಿ ಡಬಲ್ ಸರ್ಕ್ಯೂಟ್ ಲಿಲೋ ಮಾರ್ಗದ ನಿರ್ಮಾಣ.

ಕಾಮಗಾರಿ–ಬಿ): ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕಿನ **ಚಿಕ್ಕನೇರಳೆ (ದೊಡ್ಡನೇರಳೆ)ಯಲ್ಲಿ** 2x20ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಕುಶಾಲನಗರ–ಚುಂಚನಕಟ್ಟೆ–ಕೆ.ಆರ್.ನಗರ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11ಕೆವಿ ಚಿಕ್ಕನೇರಳೆ (ದೊಡ್ಡನೇರಳೆ) ಉಪಕೇಂದ್ರದವರೆಗೆ 110ಕೆವಿ ಡಿಸಿ ಗೋಪುರಗಳ ಮೇಲೆ **0.335 ಕಿ.ಮೀ** ಉದ್ದಕ್ಕೆ 66ಕೆವಿ ಲಿಲೋ ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

ಕಾಮಗಾರಿ–ಸಿ): ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕಿನ **ಪಂಚವಳ್ಳಿ (ಚೌಕೂರು)ಯಲ್ಲಿ** 2x20ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಪಿರಿಯಾಪಟ್ಟಣ–ಹನಗೋಡು ಎಸ್‌ಸಿ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11ಕೆವಿ ಪಂಚವಳ್ಳಿ (ಚೌಕೂರು) ಉಪಕೇಂದ್ರದವರೆಗೆ 110ಕೆವಿ ಗೋಪುರಗಳ ಮೇಲೆ **2.01 ಕಿ.ಮೀ** ಉದ್ದಕ್ಕೆ 66ಕೆವಿ ಲಿಲೋ ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

3) ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2652

ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು **ತೇಗೂರಿನಲ್ಲಿ 2x20ಎಂವಿಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆವಿ ನರೇಂದ್ರ–ಶಡ್ಬಾಲ್–ಕಿತ್ತೂರು ಎಸ್‌ಸಿ(SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆವಿ ತೇಗೂರು ಉಪಕೇಂದ್ರದವರೆಗೆ ಲಿಂಕ್ಸ್(Lynx) ವಾಹಕದಿಂದ **6.296 ಕಿ.ಮೀಗಳ** ಉದ್ದಕ್ಕೆ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

4) ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2650

ಉತ್ತರಕನ್ನಡ ಜಿಲ್ಲೆ, ಸಿದ್ದಾಪುರ ತಾಲ್ಲೂಕಿನ **ಕನಸೂರಿನಲ್ಲಿ 2x20ಎಂವಿಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆವಿ ಜೋಗ–ಶಿರಸಿ ಡಿಸಿ(DC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆವಿ ಕನಸೂರು ಉಪಕೇಂದ್ರದವರೆಗೆ ಡಿಸಿ(DC) ಗೋಪುರಗಳ ಮೇಲೆ ಲಿಂಕ್ಸ್(Lynx) ವಾಹಕದಿಂದ **0.208 ಕಿ.ಮೀಗಳ** ಉದ್ದಕ್ಕೆ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

5) ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2678

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು **ರಾಯಲ್ ಕೌಂಟಿ (ಕೊತ್ತನೂರು)ಯಲ್ಲಿ 2x31.5ಎಂವಿಎ, 66/11ಕೆವಿ** GIS ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ 1000sqmm ಖೋಡೇಸ್–ಸೌತ್ ಸಿಟಿ ಎಸ್‌ಸಿ ಭೂಗತ ಕೇಬಲ್ ಮಾರ್ಗದಿಂದ 0.145ಕಿಮೀ 66ಕೆವಿ, 1000sqmm ಡಿಸಿ(ಲಿಲೋ) ಕೇಬಲ್ ಮಾರ್ಗವನ್ನು ನಿರ್ಮಿಸುವುದು.

6) ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2679

ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು **ಹೊನ್ನೇಬಾಗಿ (ವಡ್ನಾಳ್)ಯಲ್ಲಿ 2x20ಎಂವಿಎ, 66/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು, ಹಾಗೂ ಹಾಲಿಯಿರುವ 66ಕೆ.ವಿ ಬೆಂಕಿಕೆರೆ–ಗೊಪ್ಪೇನಹಳ್ಳಿ ಎಸ್‌ಸಿ(SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66ಕೆವಿ ಹೊನ್ನೇಬಾಗಿ (ವಡ್ನಾಳ್) ಉಪಕೇಂದ್ರದವರೆಗೆ ಕೊಯೋಟ್ (Coyote) ವಾಹಕದಿಂದ **0.757ಕಿಮೀಗಳ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

7) ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2680

ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, **ಬೆಳಗಲ್ ತಾಂಡಾದಲ್ಲಿ 2x20ಎಂ.ವಿ.ಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆವಿ ಅಲ್ಲಿಪುರ– ಬಳ್ಳಾರಿ ದಕ್ಷಿಣ ಎಸ್‌ಸಿ(SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆ.ವಿ ಬೆಳಗಲ್ ತಾಂಡಾ ಉಪಕೇಂದ್ರದವರೆಗೆ ಲಿಂಕ್ಸ್(Lynx) ವಾಹಕದಿಂದ **8.226ಕಿ.ಮೀಗಳ** ಉದ್ದಕ್ಕೆ 110ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in**ನ ಹೈಪರ್‌ಲಿಂಕ್ **"E Procurement KPTCL"** ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 11.09.2025 ರಂದು 15.00 ಗಂಟೆ ಅಥವಾ ನಂತರದಿಂದ** ಪಡೆಯಬಹುದು. ಬಿಡ್ ಸಲ್ಲಿಕೆಯ ಕೊನೆಯ **ದಿನಾಂಕ 29.09.2025 ರಂದು 15.00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು**. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560 009. ದೂ: 080–22274744.

ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ, ಬೆಂಗಳೂರು

KOF Since: 1984

ದಾವಣಗೆರೆ ಎಣ್ಣೆ ಸಂಕೀರ್ಣ, ಎ.ಪಿ.ಎಂ.ಸಿ ರಸ್ತೆ, ದಾವಣಗೆರೆ

ಮೊಬೈಲ್:8762588632, 7975442667 ಇ–ಮೇಲ್: doc@kof.coop, aatc@kof.coop

ಕ್ರ.ಸಂ: ಕೆಓಎಫ್:ಡಿಓಸಿ/2025–26 ದಿನಾಂಕ : 08.09.2025

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ, ಇವರು ಕೃಷಿ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಪೂರೈಸಲು ರಾಸಾಯಿನಿಕ ಬೀಜೋಪಚಾರಿತ (seed treated with chemical) ಸೂರ್ಯಕಾಂತಿ ಕೆ.ಬಿ.ಎಸ್.ಹೆಚ್–78 ಪ್ರಮಾಣಿತ ಬಿತ್ತನೆ ಬೀಜವನ್ನು ಬೀಜ ಉತ್ಪಾದನೆ ಮಾಡಿದ್ದು, ಕಾರಣಾಂತರಗಳಿಂದ ರೈತರಿಗೆ ವಿತರಣೆಯಾಗದೇ ಉಳಿದ ದಾಸ್ತಾನುಗಳನ್ನು ಕೆಓಎಫ್ ಶಾಖಾ ಕಛೇರಿ ದಾವಣಗೆರೆ ಎಣ್ಣೆ ಸಂಕೀರ್ಣ (ಡಿಓಸಿ), ದಾವಣಗೆರೆಯಲ್ಲಿ 352.94 ಕ್ವಿಂಟಾಲ್ ಹಾಗೂ ಎ.ಎ.ಟಿ.ಸಿ, ಕೇರಿಮತ್ತಿಹಳ್ಳಿ, ಹಾವೇರಿಯಲ್ಲಿ 87.6 ಕ್ವಿಂಟಾಲ್ ಗೋದಾಮುಗಳಲ್ಲಿ ದಾಸ್ತಾನುಕರಿಸಲಾಗಿದೆ. ಆದ ಕಾರಣ, ಆಸಕ್ತಿಯುಳ್ಳ ಖರೀದಿದಾರರಿಗೆ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

(1) ಟೆಂಡರ್ ಅರ್ಜಿಯನ್ನು ಅರ್ಜಿ ಶುಲ್ಕದೊಂದಿಗೆ ರೂ. 300/– + ಜಿಎಸ್‌ಟಿ ಪಾವತಿಸಿ ಮೇಲ್ಕಾಣಿಸಿದ ಕಛೇರಿಯಿಂದ ಪಡೆಯಲು ಕೊನೆಯ ದಿನಾಂಕ: **15.09.2025** (2) ಭರ್ತಿ ಮಾಡಿದ ಟೆಂಡರ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **16.09.2025. ಮಧ್ಯಾಹ್ನ 1.00 ಘಂಟೆಯವರೆಗೆ** (3) ಟೆಂಡರ್ ಅನ್ನು ತೆರೆಯುವ ದಿನಾಂಕ: **16.09.2025 ರ ಮಧ್ಯಾಹ್ನ 3.00 ಘಂಟೆಗೆ.**

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಮೇಲ್ಕಾಣಿಸಿದ ಕಛೇರಿಯನ್ನು ಸಂಪರ್ಕಿಸಬಹುದು. ಯಾವುದಾದರೂ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆಓಎಫ್ ಹೊಂದಿರುತ್ತಾರೆ. ಟೆಂಡರ್‌ದಾರರು ಟೆಂಡರ್ ಮೊತ್ತದ 2.5% ಇ.ಎಂ.ಡಿ. ಮೊತ್ತವನ್ನು ಟೆಂಡರ್ ಫಾರಂ ಜೊತೆ ಲಗತ್ತಿಸಬೇಕು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆಓಎಫ್

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

Karnataka One State, Many worlds

(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ

ಕೇಂದ್ರ ಕಚೇರಿ, 5ನೇ ಮಹಡಿ, ಇಂಧನ ಭವನ, ರೇಸ್‌ಕೋರ್ಸ್ ರಸ್ತೆ, ಆನಂದರಾವ್ ವೃತ್ತ, ಬೆಂಗಳೂರು–560 009.

ದೂ:080–42775575 ಫ್ಯಾಕ್ಸ್: 080–42775589 ವೆಬ್‌ಸೈಟ್: www.kstdc.co

ಸಂಖ್ಯೆ: ಕರಾಪ್ರಅನಿ/2025–26/ಐಎನ್‌ಡಿ0035 ದಿನಾಂಕ:08.09.2025

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೊಸ ಕುಮಾರ ಕೃಪ ಅತಿಥಿ ಗೃಹಕ್ಕೆ ಡಿಜಿಟಲ್ ಲಾಕ್ಸ್‌ಗಳನ್ನು ಸರಬರಾಜು ಮಾಡಲು ಅರ್ಹ/ಆಸಕ್ತ ಸೇವಾ ಪೂರೈಕೆದಾರರನ್ನು ಆಯ್ಕೆ ಮಾಡುವ ಕುರಿತು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ಟೆಂಡರ್ ಸಂಖ್ಯೆ: ಕರಾಪ್ರಅನಿ/2025–26/ಐಎನ್‌ಡಿ0035 ವಿವರಣೆ: **ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೊಸ ಕುಮಾರ ಕೃಪ ಅತಿಥಿ ಗೃಹಕ್ಕೆ ಡಿಜಿಟಲ್ ಲಾಕ್ಸ್‌ಗಳ ಸರಬರಾಜು, ಅಳವಡಿಕೆ ಹಾಗೂ ನಿರ್ವಹಣೆ ಮಾಡಲು ಅರ್ಹ/ಆಸಕ್ತ ಸೇವಾ ಪೂರೈಕೆದಾರರನ್ನು ಆಯ್ಕೆ ಮಾಡುವ ಕುರಿತು**. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **25.09.2025 ರಂದು 17.00 ಗಂಟೆವರೆಗೆ.**

ಆಸಕ್ತ/ಅರ್ಹ ಸೇವಾ ಪೂರೈಕೆದಾರರು ಟೆಂಡರ್ ದಾಖಲೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಜಾಲತಾಣ:**https://kppp.karnataka.gov.in** ನ್ನು ಭೇಟಿ ನೀಡಲು ಕೋರಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:+91 80 23010900/01 ಇ–ಮೇಲ್: **hphelpdesk.blr@intarvo.com** ನ್ನು ಸಂಪರ್ಕಿಸುವುದು.

ಸಹಿ/–ಪ್ರಧಾನ ವ್ಯವಸ್ಥಾಪಕರು(ಆಡಳಿತ), ಕೆಎಸ್‌ಟಿಡಿಸಿ

ಕರ್ನಾಟಕ ಸರ್ಕಾರ

ಉಡುಪಿ ಜಿಲ್ಲಾ ಪಂಚಾಯತ್

ಮೊದಲನೇ ಮಹಡಿ, ರಜತಾದ್ರಿ, "ಸಿ" ಬ್ಲಾಕ್, ಮಣಿಪಾಲ, ಉಡುಪಿ–576104

ದೂರವಾಣಿ: 0820–2574945 Fax No: 0820-2574880 Email: zpudupi@gmail.com

ಸಂ:ಉಜಿಪಂ:ಅಭಿವೃದ್ಧಿ:ನರೇಗಾ:2025–26/ಹೊರಗುತ್ತಿಗೆ ಸಿಬ್ಬಂದಿ/E-147070 ದಿನಾಂಕ: 29.08.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

(E-Procurement Portal ಮುಖಾಂತರ ಮಾತ್ರ)

ಆಯುಕ್ತಾಲಯದ ಪತ್ರ ಸಂ/RDP 568 EGS 2023 Part (1) C.No. 1483352 ದಿನಾಂಕ: 14–07–2025ರ ಪತ್ರದಲ್ಲಿ ನರೇಗಾ ಯೋಜನೆಯಡಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಲು ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಮಾನವ ಸಂಪನ್ಮೂಲ ಸಂಸ್ಥೆಗಳ ಆಯ್ಕೆಗೆ ಜಿಲ್ಲಾ ಮಟ್ಟದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆನ್‌ಲೈನ್ ಟೆಂಡರ್ ಕರೆಯಲು ಷರತ್ತುಗೊಳಪಟ್ಟು ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ಉಡುಪಿ ಜಿಲ್ಲಾ ಪಂಚಾಯತ್ ನರೇಗಾ ಯೋಜನೆಯನ್ನು ಅನುಷ್ಠಾನಿಸುವ ಸಲುವಾಗಿ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಮಾನವ ಸಂಪನ್ಮೂಲ ಸಂಸ್ಥೆಗಳ ಮೂಲಕ ಆಯುಕ್ತಾಲಯದ ನಿರ್ದೇಶನದಂತೆ 3 ವರ್ಷದ ಅವಧಿಗೆ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ಮಾನವ ಸಂಪನ್ಮೂಲ ಒದಗಿಸುವ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆ/ಏಜೆನ್ಸಿಗಳು **Website: https://kppp.karnataka.gov.in** ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

(1) ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: 29.08.2025 ರ ಸಂಜೆ 3.00 ರ ನಂತರ. (2) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ: 27.09.2025 ಸಂಜೆ 3.00 ರ ವರೆಗೆ. (3) ಟೆಂಡರ್ ನ್ನು ತೆರೆಯುವ ದಿನಾಂಕ: 29.09.2025 ರ ಪೂರ್ವಾಹ್ನ 11.00 ಗಂಟೆಗೆ.

ಸಹಿ/– (ಪ್ರತೀಕ್ ಬಾಯಲ್ ಭಾ.ಆ.ಸೇ) ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ.

ವಾಸಾಇ/ಸನಿಉ/ಕೆಎಸ್‌ಎಂಸಿಎ/369/25–26 ದಿ: 08.09.2025

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ.

ದೂ: ಸಂ: 08194–235464 ಇ–ಮೇಲ್: dhochitradurga@gmail.com

ಸಂ.ಸಾರಿಗೆ:37/2025–26 ದಿನಾಂಕ:–03–09–2025

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2025–26 ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ವಿವಿಧ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಆಂಬುಲೆನ್ಸ್ ವಾಹನಗಳನ್ನು ಮತ್ತು ಇತರೆ ಮಾದರಿಯ ವಾಹನಗಳನ್ನು ಚಲಿಸಲು ಒಟ್ಟು 35 ವಾಹನ ಚಾಲಕರ ಹುದ್ದೆಗಳ ಸೇವೆಯನ್ನು ಕಾರ್ಮಿಕ ಇಲಾಖೆಯಲ್ಲಿ ನೊಂದಣಿ ಆಗಿರುವ ಹೊರ ಸಂಪನ್ಮೂಲ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ–1999 ಮತ್ತು ನಂತರದ ತಿದ್ದುಪಡಿ ಆದೇಶಗಳ ಅನ್ವಯ ಸ್ಪರ್ಧಾತ್ಮಕ ಟೆಂಡರ್‌ಗಳನ್ನು "ಇ– ಪ್ರಕ್ಯೂರ್‌ಮೆಂಟ್" ಮೂಲಕ "ದ್ವಿ–ಲಕೋಟೆ ಪದ್ಧತಿಯಲ್ಲಿ" ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ–76,00,000/– ಟೆಂಡರ್ ಸಂಖ್ಯೆ:–DHFWS/2025-26/SE1684

ಟೆಂಡರ್ ಹೆಸರು:–Procurement of 35 Ambulance & other vehicle Driver's service for various Health Institutions working under Dist. Health & F.W. officer, chitradurga in chitradurga District

ಇಎಂಡಿ ಮೊತ್ತ:–1,80,000/– ಸಂಪೂರ್ಣ ವಿವರಗಳನ್ನು ಮತ್ತು ಟೆಂಡರ್ ಅರ್ಜಿಗಳನ್ನು ಇ–ಪ್ರಕ್ಯೂವೆಂಟ್ ವೆಬ್‌ಸೈಟ್ https://kppp.karnataka.gov.inನಲ್ಲಿ ಪಡೆಯಬಹುದು. ಟೆಂಡರ್ ಪಾರಂ ಬೆಲೆ & ಇಎಂಡಿ ಮೊತ್ತಗಳನ್ನು ಇ– ಪ್ರಕ್ಯೂಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಸೂಚಿಸಲಾಗಿದೆ.

(1) ಖಾಲಿ ಟೆಂಡರ್ ಅರ್ಜಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ನಲ್ಲಿ ಡೌನ್ ಲೋಡ್ ಮಾಡುವ ಪ್ರಾರಂಭದ ದಿನಾಂಕ:–03–09–2025

(2) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ಲಿ ಅಪ್ ಲೋಡ್ ಮಾಡುವ ಕೊನೆಯ ದಿನಾಂಕ:–22–09–2025 ರಂದು 17.00 ಗಂಟೆಯವರೆಗೆ


(3) ಭರ್ತಿ ಮಾಡಿದ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿ:–23–09–2025 ರಂದು 5.01 ಗಂಟೆ ನಂತರ (4) ಭರ್ತಿ ಮಾಡಿದ ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ:–24–09–2025 ರಂದು 11.00 ಗಂಟೆ ನಂತರ

ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಮೇಲ್ಕಂಡ ಕಚೇರಿಯಲ್ಲಿ ಮತ್ತು ವೆಬ್ ಸೈಟ್ https://kppp.karnataka.gov.inನಲ್ಲಿ ಪಡೆಯಬಹುದು

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

DIPR/CTA/KSMCA/333/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಗುಣವನ್ನು ತಿಳಿದರೆ ಸಾಲದು. ಅದನ್ನು ಉಳ್ಳವನಾಗಲು ಯತ್ನಿಸಬೇಕು. ಅದನ್ನು ಅನುಷ್ಠಾನಕ್ಕೆ ತರಬೇಕು.

–ಅರಿಸ್ಟಾಟಲ್

ಸಂಪಾದಕೀಯ

ಅಂಚಿಗೆ ಸರಿಸಲಾದವರ ಸಮೀಕ್ಷೆ ಸಾಮಾಜಿಕ ನ್ಯಾಯದ ನಿರೀಕ್ಷೆ

ದೇವದಾಸಿಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಸಮಗ್ರ ಸಮೀಕ್ಷೆಯನ್ನು ನಡೆಸುವ ರಾಜ್ಯ ಸರ್ಕಾರದ ತೀರ್ಮಾನವು, ಬಹುಕಾಲದ ಆಗ್ರಹವೊಂದಕ್ಕೆ ಸ್ಪಂದಿಸುವಂತಿದೆ. ಎಲ್ಲರನ್ನೂ ಒಳಗೊಳ್ಳುವ ಆಡಳಿತ ಹಾಗೂ ಸಾಮಾಜಿಕ ನ್ಯಾಯದ ಕಣ್ಣಿನಿಂದ ನೋಡಿದಾಗ ಈ ಸಮೀಕ್ಷೆಯು ಸ್ವಾಗತಾರ್ಹವಾಗಿ ಕಾಣುತ್ತದೆ. ಸೆಪ್ಟೆಂಬರ್ 15ರಿಂದ ಶುರುವಾಗಲಿರುವ ಸಮೀಕ್ಷೆಯು ಈ ವರ್ಗಗಳಿಗೆ ಸೇರಿದವರ ಸಾಮಾಜಿಕ–ಆರ್ಥಿಕ ಸ್ಥಿತಿಯ ಬಗ್ಗೆ ನಿಖರ ಮಾಹಿತಿಯನ್ನು ಕಲೆಹಾಕುವ ಉದ್ದೇಶ ಹೊಂದಿದೆ; ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಿಂದ ಅವರು ಹೊರಗುಳಿಯದಂತೆ ನೋಡಿಕೊಳ್ಳುವ ಗುರಿಯನ್ನು ಹೊಂದಿದೆ. ಈ ಎರಡೂ ಸಮುದಾಯಗಳು ಬಹುಕಾಲದಿಂದ ಸಮಾಜದ ಅಂಚಿನಲ್ಲಿ ಬದುಕುತ್ತಿವೆ, ನೀತಿ ನಿರೂಪಕರು ಈ ಸಮುದಾಯಗಳನ್ನು ನಿರ್ಲಕ್ಷಿಸಿದ್ದಾರೆ, ಸಾಮಾಜಿಕ ಸಂರಚನೆಗಳು ಇವರನ್ನು ಶೋಷಣೆಗೆ ಒಳಪಡಿಸಿವೆ. ಸಮುದಾಯಗಳಿಗೆ ಪುನರ್ವಸತಿ ಕಲ್ಪಿಸುವ ಹಾಗೂ ಅವರಿಗೆ ಬಲ ತುಂಬುವ ಕೆಲಸಕ್ಕೆ ಬಲಿಷ್ಠ ನೆಲೆಗಟ್ಟು ನಿರ್ಮಿಸಿಕೊಡುವ ಕೆಲಸವನ್ನು ವೈಜ್ಞಾನಿಕ ಸಮೀಕ್ಷೆಯೊಂದು ಮಾಡಬಲ್ಲದು.

ಸಮೀಕ್ಷೆಯು ಮಹತ್ವದ್ದಾಗುವುದು ಏಕೆ ಮತ್ತು ಅದನ್ನು ತ್ವರಿತವಾಗಿ ಏಕೆ ನಡೆಸಬೇಕಿದೆ ಎಂಬುದನ್ನು ದೇವದಾಸಿ ಪದ್ಧತಿಯ ಇತಿಹಾಸವೇ ಹೇಳುತ್ತದೆ. ದೇವದಾಸಿಯರನ್ನು ಶಾಸ್ತ್ರೀಯ ಸಂಗೀತ ಮತ್ತು ನೃತ್ಯದ ಸಂರಕ್ಷಕರು ಎಂದು ಹಿಂದೊಂದು ಕಾಲಘಟ್ಟದಲ್ಲಿ ಗೌರವದಿಂದ ಕಾಣಲಾಗುತ್ತಿತ್ತು ಎಂದು ಹೇಳಲಾಗುತ್ತದಾದರೂ, ಅವರು ಸಾಮಾಜಿಕ ಗೌರವವನ್ನು ನಿಧಾನವಾಗಿ ಕಳೆದುಕೊಂಡರು. ದೇವದಾಸಿ ಪದ್ಧತಿಯು ಶೋಷಣೆ, ದೌರ್ಜನ್ಯ ಮತ್ತು ಮಾನವಹಕ್ಕುಗಳ ಉಲ್ಲಂಘನೆಯ ರೂಪವಾಗಿ ಮಾರ್ಪಾಡಾಯಿತು. 'ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಕಾಯ್ದೆ–1982'ರ ಪ್ರಕಾರ, ಈ ಪದ್ಧತಿಯು ನಿಷೇಧಕ್ಕೆ ಒಳಗಾಗಿದ್ದರೂ ರಾಜ್ಯದ ಉತ್ತರ ಭಾಗ ಹಾಗೂ ಮಧ್ಯ ಭಾಗದ ಕೆಲವೆಡೆ ಇನ್ನೂ ಆಚರಣೆಯಲ್ಲಿದೆ. ಕುಟುಂಬ ಹಾಗೂ ಸಮಾಜದಿಂದ ದೂರವಾದ ಹಲವಾರು ಮಹಿಳೆಯರು ಇಂದಿಗೂ ಬಡತನದಲ್ಲಿ ಕಾಲ ತಳ್ಳುತ್ತಿದ್ದಾರೆ. ಈ ಪದ್ಧತಿಯ ಹಿಡಿತಕ್ಕೆ ಸಿಲುಕಿರುವವರನ್ನು ಗುರುತಿಸಲು, ಅವರನ್ನು ಸಮಾಜದ ಮುಖ್ಯವಾಹಿನಿಗೆ ತಂದು ಘನತೆಯ ಬದುಕನ್ನು ನೀಡಲು 15 ಜಿಲ್ಲೆಗಳಲ್ಲಿ ನಡೆಯಲಿರುವ ಸಮೀಕ್ಷೆಯು ನೆರವಾಗಬಹುದು. ಲೈಂಗಿಕ ಅಲ್ಪಸಂಖ್ಯಾತ ಸಮುದಾಯದವರು ಎದುರಿಸುತ್ತಿರುವ ಸಮಸ್ಯೆಗಳು ಕೂಡ ಬಹಳ ತೀವ್ರವಾದುವೇ ಆಗಿವೆ. ಸಾಮಾಜಿಕ ಬಹಿಷ್ಕಾರ, ಆರ್ಥಿಕ ತಾರತಮ್ಯ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳುವಲ್ಲಿ ವ್ಯವಸ್ಥೆಯು ಸೃಷ್ಟಿಸಿರುವ ಅಡ್ಡಿ ಆತಂಕಗಳು ಇವರನ್ನು ಕಾಡುತ್ತಿವೆ. ಈ ಸಮುದಾಯವು ನೆಲೆ ಕಳೆದುಕೊಂಡಿದೆ, ನಿರುದ್ಯೋಗಕ್ಕೆ ತುತ್ತಾಗಿದೆ, ಹಿಂಸೆಗೆ ಗುರಿಯಾಗಿದೆ. 'ಲೈಂಗಿಕ ಅಲ್ಪಸಂಖ್ಯಾತ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆ 2019' ಕಡತಗಳಲ್ಲಿ ಇದೆಯಾದರೂ, ಅನುಷ್ಠಾನದಲ್ಲಿನ ಲೋಪಗಳ ಕಾರಣದಿಂದಾಗಿ ಕಾಯ್ದೆಯು ಪರಿಣಾಮಕಾರಿ ಆಗಿ ಉಳಿದಿಲ್ಲ.



ದೇವದಾಸಿಯರು ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಸಮಗ್ರ ಸಮೀಕ್ಷೆ ಸ್ವಾಗತಾರ್ಹ. ಸಮಾಜದ ಅಂಚಿಗೆ ಸರಿಸಲಾದವರಿಗೆ ನ್ಯಾಯ ದೊರಕಿಸಲು ಸಮೀಕ್ಷೆ ಅವಕಾಶ ಕಲ್ಪಿಸಲಿದೆ.

ವಿಶ್ವಾಸಾರ್ಹವಾದ ದತ್ತಾಂಶದ ಕೊರತೆಯು ಸಮಸ್ಯೆಯನ್ನು ಉಲ್ಬಣಗೊಳಿಸಿದೆ. ಈ ಸಮುದಾಯಗಳನ್ನು ಗುರಿಯಾಗಿಸಿಕೊಂಡು ಪರಿಹಾರ ಕಾರ್ಯಕ್ರಮಗಳನ್ನು ರೂಪಿಸುವುದು ಕಷ್ಟಸಾಧ್ಯವಾಗಿದೆ. ಈಗ ನಡೆಯಲಿರುವ ಸಮೀಕ್ಷೆಯು ಲೈಂಗಿಕ ಅಲ್ಪಸಂಖ್ಯಾತರ ಮೊದಲ ಎಣಿಕೆ ಕಾರ್ಯದಂತೆ ಇರಲಿದೆ. ಇದೊಂದು ಮೈಲಿಗಲ್ಲು. ತಂತ್ರಜ್ಞಾನದ ನೆರವು ಪಡೆದು, ಮನೆ ಮನೆಗೆ ಭೇಟಿ ನೀಡಿ ನಡೆಸಲಿರುವ ಸಮೀಕ್ಷೆಯು ಈ ಸಮುದಾಯಗಳ ನಿಖರ ಸಂಖ್ಯೆಯನ್ನು ಗುರುತಿಸಬಹುದು. ಅಲ್ಲದೆ, ಈ ಸಮುದಾಯಗಳನ್ನು ನೆಚ್ಚಿಕೊಂಡಿರುವವರ ಸಮಸ್ಯೆಗಳೂ ನೀತಿ ನಿರೂಪಕರ ಗಮನಕ್ಕೆ ಬರುವಂತೆ ಆಗಬಹುದು. ಇದೆಲ್ಲಕ್ಕೂ ಮಿಗಿಲಾಗಿ, ಅಭಿವೃದ್ಧಿ ಕಾರ್ಯಕ್ರಮಗಳು ಅರ್ಹರನ್ನು ಸರಿಯಾಗಿ ತಲುಪುವಂತೆ ಮಾಡಲು ಸಮೀಕ್ಷೆಯು ಸರ್ಕಾರಕ್ಕೆ ನೆರವಾಗಲಿದೆ. ಸಮೀಕ್ಷೆಯು ಆರಂಭಿಕ ಹೆಜ್ಜೆ ಮಾತ್ರ. ಸಮೀಕ್ಷೆಯ ಮೂಲಕ ಸಂಗ್ರಹ ಆಗುವ ದತ್ತಾಂಶವನ್ನು ಬಳಸಿಕೊಂಡು ಅರ್ಥಪೂರ್ಣವಾದ ಕಾರ್ಯಗಳನ್ನು ಕೈಗೊಳ್ಳಬೇಕು. ಅದು ಅರ್ಹರಿಗೆ ಪಿಂಚಣಿ ನೀಡುವುದಾಗಿರಬಹುದು, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ನೆರವು ನೀಡುವುದಾಗಿರಬಹುದು ಅಥವಾ ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸುವುದಾಗಿರಬಹುದು. ಸರ್ಕಾರವು ಈ ಸಮುದಾಯಗಳ ನಾಯಕರ ಜೊತೆ ಸಮಾಲೋಚನೆ ನಡೆಸಿ, ಸಮೀಕ್ಷೆಯಲ್ಲಿ ಎಲ್ಲರೂ ಭಾಗಿಯಾಗುವಂತೆ ಮಾಡಬೇಕು. ಸಮಾಜದ ಅಂಚಿಗೆ ತಳ್ಳಲಾಗಿರುವ ಸಮುದಾಯಗಳ ಸ್ಥಿತಿ–ಗತಿಯ ಮೇಲೆ ಬೆಳಕು ಚೆಲ್ಲಲು ಮುಂದಾಗುವ ಮೂಲಕ ರಾಜ್ಯ ಸರ್ಕಾರವು ಪ್ರಗತಿಪರವಾದ ಹೆಜ್ಜೆಯೊಂದನ್ನು ಇರಿಸಿದೆ.

ಜಾಲತಾಣ


ಧರ್ಮಗಳ ನಡುವಿನ ಜಗಳ



ಧರ್ಮಗಳ ನಡುವಿನ ಜಗಳ ಕರಾವಳಿ ಜಿಲ್ಲೆಗಳಿಗೆ ತಂದಿಟ್ಟಿರುವ ದುರಂತವನ್ನು ಮಂಡ್ಯದ ಜನತೆ ಅರ್ಥ ಮಾಡಿಕೊಳ್ಳಬೇಕು. ಧರ್ಮಗಳ ನಡುವಿನ ಪರಸ್ಪರ ಪ್ರಚೋದನೆ, ಕಲ್ಲುತೂರಾಟ, ಘರ್ಷಣೆ ತಾತ್ಕಾಲಿಕವಾಗಿ ರೋಚಕ ಅನ್ನಿಸಬಹುದು. ಅದರ ಪರಿಣಾಮಗಳು ಘೋರ. ದುಃಖ, ವಿಷಾದ, ಭಯ, ಅಭದ್ರತೆ, ಕಷ್ಟ, ನಷ್ಟ, ಸಾವು, ನೋವು... ಇಷ್ಟೆ.

ಮುನೀರ್ ಕಾಟಿಪಳ್ಳ, ಸಾಮಾಜಿಕ ಹೋರಾಟಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಕಷ್ಟ ಹೇಳಿಕೊಳ್ಳಲು ಬಂದ ರೈತನ ಮೇಲೆ ಮಲ್ಲಿಕಾರ್ಜುನ ಖರ್ಗೆ ಅವರು ದರ್ಪ ತೋರುವ ಅಗತ್ಯವಿರಲಿಲ್ಲ. ಖರ್ಗೆ ಅವರೂ ತೊಗರಿ ರೈತರೇ ಆಗಿರಬಹುದು. ಆದರೆ, 40 ಎಕರೆಯಲ್ಲಿ ಬೆಳೆಯುವ ಅವರಿಗೂ, ಒಂದು ಅಥವಾ ಎರಡು ಎಕರೆಯಲ್ಲಿ ಬೆಳೆಯುವ ಬಡರೈತನಿಗೂ ಹೋಲಿಕೆಯೇ? ನಷ್ಟ ಭರಿಸುವ ಶಕ್ತಿ ಅವರಿಗಿರುತ್ತದೆ, ರೈತನಿಗೆ ಆ ಶಕ್ತಿ ಇರಬೇಕಲ್ಲವೇ?

ಎಚ್‌.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಶನಿವಾರ, 9-9-2000

• ಏರದ ಧಾರಣೆ; ಸಂಕಷ್ಟದಲ್ಲಿ ಅಡಿಕೆ ಬೆಳೆಗಾರ

ಮಂಗಳೂರು, ಸೆಪ್ಟೆಂಬರ್ 8– ಬೆಳೆಗಾರರ ತೀವ್ರ ಒತ್ತಾಸೆಯ ಮೇರೆಗೆ ಅಡಿಕೆ ಮೇಲಿನ ಆಮದು ಸುಂಕದ ಪ್ರಮಾಣವನ್ನು ಶೇ 35ರಿಂದ ಶೇ 100ಕ್ಕೆ ಹೆಚ್ಚಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿ ಎರಡು ತಿಂಗಳಾದರೂ, ಅಡಿಕೆ ಧಾರಣೆಯ ಮೇಲೆ ಯಾವುದೇ ಪರಿಣಾಮ ಬೀರದಿರುವುದು ಸಣ್ಣ, ಮಧ್ಯಮ ಪ್ರಮಾಣದ ಅಡಿಕೆ ಬೆಳೆಗಾರರಲ್ಲಿ ಆತಂಕ ಮೂಡಿಸಿದೆ.

ಕೇಂದ್ರ ಸರ್ಕಾರ 715 ವಸ್ತುಗಳ ಮುಕ್ತ ಆಮದಿಗೆ ಪ್ರಸಕ್ತ ಸಾಲಿನಲ್ಲಿ ನಿರ್ಧಾರ ಕೈಗೊಂಡ ದಿನದಿಂದ ಅಡಿಕೆ ಧಾರಣೆ ಕುಸಿದು ಬೆಳೆಗಾರರು ಕಂಗಾಲಾಗಿದ್ದಾಗ ಬೆಳೆಗಾರರ ಹಿತರಕ್ಷಣೆಗಾಗಿ ಅಸ್ತಿತ್ವಕ್ಕೆ ಬಂದಿರುವ ಕ್ಯಾಂಪ್ಕೊ, ದೆಹಲಿಯಲ್ಲಿ ನಡೆಸಿದ ತೀವ್ರ ಯತ್ನದ ಪರಿಣಾಮವಾಗಿ ಅಡಿಕೆ ಮೇಲಿನ ಆಮದು ಸುಂಕವನ್ನು ಶೇ 100ಕ್ಕೆ ಏರಿಸಲಾಗಿತ್ತು.

75 ವರ್ಷಗಳ ಹಿಂದೆ

ಶನಿವಾರ, 9-9-1950

• ಪೊಲೀಸರ ಲಾಠಿ ಪ್ರಹಾರ; ಮೂವರಿಗೆ ಗಾಯ

ಮುಂಬಯಿ, ಸೆಪ್ಟೆಂಬರ್ 8– ಇಲ್ಲಿನ ಕಾಮ್‌ಗಾರ್ ಮೈದಾನದಲ್ಲಿ ಘರ್ಷಣೆಯಲ್ಲಿ ತೊಡಗಿದ್ದ ಗುಂಪಿನ ಮೇಲೆ ಪೊಲೀಸರು ನಡೆಸಿದ ಲಾಠಿ ಪ್ರಹಾರ ಹಾಗೂ ಗುಂಡಿನ ದಾಳಿಯಲ್ಲಿ ಮೂವರು ಗಾಯಗೊಂಡಿದ್ದಾರೆ. ಗುಂಪನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿದರು.

ಗ್ರೇಟರ್ ಬೊಂಬಾಯಿ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಸಭೆ ಮತ್ತು ಮೆರವಣಿಗೆ ನಡೆಸದಂತೆ ಪೊಲೀಸ್ ಆಯುಕ್ತರು ನಿರ್ಬಂಧ ಹೇರಿದ್ದರು. ಈ ನಡುವೆಯೂ ಮಜ್ದೂರ್ ಸಭಾವು ಕಾಮ್‌ಗಾರ್ ಮೈದಾನದಲ್ಲಿ ಬೃಹತ್ ಸಭೆ ಹಮ್ಮಿಕೊಂಡಿತ್ತು.

ಉದುರಿ ಬೀಳುತ್ತಿರುವ ನಕ್ಷತ್ರ



ವಿಶ್ಲೇಷಣೆ

ಯೋಗೇಂದ್ರ ಯಾದವ್

> ಬಂಧನದಲ್ಲಿರುವ ಯುವ ಹೋರಾಟಗಾರ ಉಮರ್ ಖಾಲಿದ್‌ಗೆ ಜಾಮೀನು ನಿರಾಕರಣೆ ಆಗುತ್ತಿರುವುದು ವ್ಯಕ್ತಿಯೊಬ್ಬನಿಗೆ ಆಗುತ್ತಿರುವ ನ್ಯಾಯವಂಚನೆ ಮಾತ್ರವಲ್ಲ; ಅದು, ಸಮುದಾಯವೊಂದಕ್ಕೆ ದಕ್ಕಬಹುದಾಗಿದ್ದ ಪ್ರತಿಭಾಶಾಲಿ ನಾಯಕತ್ವವನ್ನು ಹತ್ತಿಕ್ಕುತ್ತಿರುವ ಪ್ರಯತ್ನವೂ ಹೌದು. ನ್ಯಾಯದಾನದ ವಿಳಂಬವನ್ನು ಚರಿತ್ರೆ ಮುಂದೆಂದಾದರೂ ದಾಖಲಿಸಬಹುದು.

ಭಿವಾಂಡಿಯಲ್ಲಿ 2020ರ ಜನವರಿಯಲ್ಲಿ ಅನಾವರಣಗೊಂಡಿದ್ದ ನಕ್ಷತ್ರಗಳ ಹೊಳಪಿನ ಸಂಜೆ ನೆನಪಾಗುತ್ತಿದೆ. ಆ ದಿನ ಕ್ರೀಡಾಂಗಣದಲ್ಲಿ ತುಂಬಿದ್ದ ಒಂದು ಲಕ್ಷಕ್ಕೂ ಹೆಚ್ಚು ಜನರ ಎದುರು ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಕುರಿತು ತರ್ಕಬದ್ಧವೂ ಆವೇಶಭರಿತವೂ ಆದ ಮಾತುಗಳಿಂದ ಉಮರ್ ಖಾಲಿದ್ ನಮ್ಮನ್ನು ಪುಳಕಿತರನ್ನಾಗಿಸಿದ್ದರು. 'ಇಂಕಿಲಾಬಿ ಇಸ್ತಕ್‌ಬಾಲ್' (ಕ್ರಾಂತಿಕಾರಿ ಸ್ವಾಗತ) ಎಂದು ಮಾತು ಪ್ರಾರಂಭಿಸಿ, ಭಗತ್‌ಸಿಂಗ್, ಅಂಬೇಡ್ಕರ್, ಗಾಂಧೀಜಿ ಎಲ್ಲರ ಮಾದರಿಗಳನ್ನು ಆವಾಹಿಸಿಕೊಂಡು 'ಸಿಎಎ' ವಿರುದ್ಧ ಅಹಿಂಸಾ ಹೋರಾಟಕ್ಕೆ ಕರೆ ಇತ್ತರು. ಮುಸ್ಲಿಮರನ್ನು 'ಸಿಎಎ' ಹೇಗೆ ಎರಡನೇ ಮೆಟ್ಟಿಲಿನ ಮೇಲೆ ತಂದು ಕೂರಿಸುತ್ತದೆ ಎಂದೂ ವಿಶ್ಲೇಷಿಸಿದರು.

ತಮ್ಮ ಭಾಷಣದ ಕೊನೆಯಲ್ಲಿ ಉಮರ್ ಅಲ್ಲಿದ್ದ ಎಲ್ಲರಿಗೂ ತಂತಮ್ಮ ಮೊಬೈಲ್ ಫೋನ್‌ಗಳ ಟಾರ್ಚ್ ಬೆಳಗುವಂತೆ ಕರೆ ಕೊಟ್ಟು, 'ಆಜಾದಿ' ಪಠಣಕ್ಕೆ ತಮ್ಮೊಡನೆ ದನಿಗೂಡಿಸುವಂತೆ ಕೇಳಿಕೊಂಡರು. 'ನಾವು ಕೇಳಿದ್ದೇನು... ಸ್ವಾತಂತ್ರ್ಯ... ಸಿಎಎಯಿಂದ ಸ್ವಾತಂತ್ರ್ಯ... ಹಸಿವಿನಿಂದ ಹೊರಬರಲು ಸ್ವಾತಂತ್ರ್ಯ... ಅಂಬೇಡ್ಕರ್ ಮಾದರಿಯ ಸ್ವಾತಂತ್ರ್ಯ' ಎಂದು ಲಯಬದ್ಧವಾಗಿ ಪಠಿಸಿದರು. ಸ್ವಾತಂತ್ರ್ಯ ಬೇಡಿಕೆಯ ಆ ಸಾಲುಗಳು ಆ ದಿನ ಕ್ರೀಡಾಂಗಣದಲ್ಲಿ ಅನುರಣಿಸಿದವು. ಎಲ್ಲರೂ ಉಮರ್ ಜೊತೆ ದನಿಗೂಡಿಸಿದರು. ಆ ಸ್ವಾತಂತ್ರ್ಯವು ಯಾರಿಂದಲೋ ಅಥವಾ ಯಾವುದರಿಂದಲೋ ಪಡೆಯುವುದು ಆಗಿರಲಿಲ್ಲ. ಸಮಾನ ನಾಗರಿಕ ಪ್ರಜ್ಞೆ ಮೂಡಿಸುವ ಸ್ವಾತಂತ್ರ್ಯಕ್ಕಾಗಿ ಆಗ್ರಹ ಅದಾಗಿತ್ತು. ಎಲ್ಲರೊಳಗೊಂದಾಗುವ ಸ್ವಾತಂತ್ರ್ಯ ಅದು; ಸಮಾನತೆಗಾಗಿ ಒತ್ತಾಯಿಸುವ ಸ್ವಾತಂತ್ರ್ಯ. ಆ ಸಂದರ್ಭವನ್ನು ನಾನು ಎಂದಿಗೂ ಮರೆಯಲಾರೆ. ಕಗ್ಗತ್ತಲಲ್ಲಿ ತಾರೆಗಳು ಹಿಂಡುಹಿಂಡಾಗಿ ಇದ್ದಂತೆ ನನಗೆ ಭಾಸವಾಗಿತ್ತು. ಆ ತಾರೆಗಳ ನಡುವೆ ಭಾರತಕ್ಕೆ ಅಗತ್ಯವಿರುವಂತಹ ನಾಯಕ, ಮುಸ್ಲಿಮರು ಕಾಯುತ್ತಿದ್ದ ನಾಯಕ ಇದ್ದಾನೆ ಎಂದೇ ಅನಿಸಿತ್ತು.

ದೆಹಲಿಯಲ್ಲಿ ನಡೆದ ಗಲಭೆಗಳ ಪಿತೂರಿಯ ಆರೋಪದಲ್ಲಿ ಬಂಧನದಲ್ಲಿರುವ ಉಮರ್ ಖಾಲಿದ್‌ಗೆ ದೆಹಲಿ ಹೈಕೋರ್ಟ್ ಜಾಮೀನು ನಿರಾಕರಿಸಿದೆ. ದೆಹಲಿ ಹೈಕೋರ್ಟ್‌ನ ಚಿತ್ರಹಿಂಸಾ ಸ್ವರೂಪದ ವಾದಗಳನ್ನು ಸೂಕ್ಷ್ಮವಾಗಿ ದಣಿದ ಮನಸ್ಸಿನಿಂದ ಗಮನಿಸಿದಾಗ, ಭಿವಾಂಡಿಯಲ್ಲಿ ಕಂಡ ಆ ತಾರೆಗಳು ಒಂದೊಂದಾಗಿ ಉದುರಿ ಬೀಳುತ್ತಿರುವಂತೆ ಭಾಸವಾಯಿತು. ಸಾಂತ್ವನಕ್ಕಾಗಿ ನಾನು ಮತ್ತೆ ಆಮೀರ್ ಅಜೀಜ್ ಸಾಲುಗಳನ್ನು ತಿರುವಿ ಹಾಕಿದೆ: 'ನೀನು ಕತ್ತಲನ್ನು ಬರೆದರೆ ನಾವು ಚಂದ್ರನನ್ನು ಬರೆಯುವೆವು/ ನೀನು ಜೈಲಿಗೆ ತಳ್ಳಿದರೆ ನಾವು ಗೋಡೆ ಕಿತ್ತು ಬರುವಂತೆ ಬರೆಯುವೆವು'. ಆ ಚಂದ್ರನನ್ನು ಕಣ್ತುಂಬಿಕೊಳ್ಳಲು ನಾನು ಕಾಯುತ್ತಿರುವೆ. ಇತಿಹಾಸವು ಈ 133 ಪುಟಗಳ ತೀರ್ಪನ್ನು ಹೇಗಾದರೂ ನೆನಪಿಟ್ಟುಕೊಂಡೀತು ಎಂಬ ಸಖೇದಾಶ್ಚರ್ಯ ನನ್ನದು. ಕಾನೂನು ಪರಿಣತ ಗೌತಮ್ ಭಾಟಿಯಾ ಅವರ ಬ್ಲಾಗ್‌ನಲ್ಲಿನ ಪೋಸ್ಟ್‌ಗಳು (ಇಂಡಿಯನ್ ಕಾನ್‌ಸ್ಟಿಟ್ಯೂಷನಲ್ ಲಾ ಅಂಡ್ ಫಿಲಾಸಫಿ) ಈ ಅಸಾಮಾನ್ಯವಾದ ಪ್ರಕರಣದ ವಿಚಾರಣೆಯ ಪಥವನ್ನು ಬಗೆದು ನೋಡಿವೆ. 'ಕಣ್ಮುಚ್ಚಿದ' ಧೋರಣೆಯಲ್ಲಿ 'ಕಾನೂನು ಕ್ರಮ ಜರುಗಿಸಲೆಂದೇ ಸ್ಟೆನೊಗ್ರಾಫರ್' ಆಗುವ ಕ್ರಮವಿದು ಎಂದು ಭಾಟಿಯಾ ವಿಶ್ಲೇಷಿಸಿದ್ದಾರೆ. ಈಗಿನ ತೀರ್ಪಿನ ಅಚ್ಚರಿಯ ತರ್ಕವೊಂದನ್ನು ಅವರು ಹೀಗೆ ವಿವರಿಸಿದ್ದಾರೆ: 'ಪಿತೂರಿಗೆ ಪ್ರೇರಣೆ ನೀಡಲಾಗುತ್ತಿದೆ ಎಂದು ಹೇಳುವ ಮಾಸ್ಕೊ ವಿಚಾರಣಾ ಶೈಲಿಯನ್ನು ಕೋರ್ಟ್ ತನ್ನದಾಗಿಸಿಕೊಂಡಿದೆ. ಸಂರಕ್ಷಿಸಲಾದ ಸಾಕ್ಷಿಯೊಬ್ಬ ನೀಡಿದ ಅಸ್ಪಷ್ಟವೂ ದೃಢೀಕೃತವೂ ಅಲ್ಲದ ಹೇಳಿಕೆ ಆಧರಿಸಿ, ತನ್ನದೇ ಕಾಲ್ಪನಿಕ ತೀರ್ಮಾನಗಳನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಹೇರಿದೆ'. ಈ ತೀರ್ಪಿನ ಕುರಿತು ಬೇರೇನನ್ನೂ ಹೇಳುವ ಅಗತ್ಯವಿಲ್ಲ. ಸುಪ್ರೀಂ ಕೋರ್ಟ್‌ನ ಕುಖ್ಯಾತ ಎಡಿಎಂ ಜಬಲ್‌ಪುರ ಪ್ರಕರಣಕ್ಕೆ ಸಂಬಂಧಿಸಿದ, ನ್ಯಾಯದಾನ ಹೇಗಿರಬಾರದು ಎನ್ನುವುದಕ್ಕೆ ಕನ್ನಡಿ ಹಿಡಿಯುವ, ಆದೇಶದ ಪಠ್ಯ ಸ್ವರೂಪಿ ಉದಾಹರಣೆಯ ಪಕ್ಕದಲ್ಲಿ ಇದನ್ನೂ ಇರಿಸಬೇಕಷ್ಟೆ.

ಮುಂದೊಂದು ದಿನ, ಇತಿಹಾಸಕಾರರೊಬ್ಬರು ದೆಹಲಿ ಗಲಭೆಯ ಪಿತೂರಿ ಸಿದ್ಧಾಂತವನ್ನು ದಾಖಲಿಸಬಹುದು. ಆಗ ಸಂತ್ರಸ್ತರನ್ನು ಅಪರಾಧಿಗಳಾಗಿಸುವ, ಪ್ರತಿಭಟನಕಾರರನ್ನು ಸಂಚುಕೋರರನ್ನಾಗಿಸುವ; ಸಿ–ಗ್ರೇಡ್ ಚಿತ್ರಕಥೆಯಂತಹ, ವಿಶ್ವಾಸಾರ್ಹತೆಯೇ ಇಲ್ಲದ ಅಸಂಬದ್ಧ ಪ್ರಕರಣ ಎಂದು ಬರೆದಾರು. 2018ರಿಂದ ದಿನದ 24 ಗಂಟೆ ಪೊಲೀಸರ ಕಣ್ಗಾವಲಿನಲ್ಲೇ ಇರುವ ಹಾಗೂ ಸದಾ ವಿದ್ಯುನ್ಮಾನ ಮಾಧ್ಯಮಗಳ ಕ್ಯಾಮೆರಾ ಕಣ್ಣು ತಮ್ಮ ಮೇಲೆ ನೆಟ್ಟಿದೆ ಎಂದು ತಿಳಿದಿರುವ ಉಮರ್ ಖಾಲಿದ್ ಅವರಂತಹವರು ದೆಹಲಿ ಗಲಭೆಯ ಪಿತೂರಿ ಮಾಡುತ್ತಾರೆ ಎಂದು ಭಾವಿಸುವುದಕ್ಕೆ ದೊಡ್ಡ ಕಲ್ಪನಾ ಶಕ್ತಿ ಬೇಕಾಗುತ್ತದೆ. ಅದರಲ್ಲೂ 100ಕ್ಕೂ ಹೆಚ್ಚು ಸದಸ್ಯರಿರುವ ವಾಟ್ಸ್‌ಆ್ಯಪ್ ಗ್ರೂಪ್ ಮೂಲಕ ಈ ಮುಸ್ಲಿಂ ಹೋರಾಟಗಾರರು ಹಿಂಸಾಕೃತ್ಯ ರೂಪಿಸಿ, ಅದರಿಂದಾಗಿ ದೊಡ್ಡ ಪ್ರಮಾಣದಲ್ಲಿ ಮುಸ್ಲಿಮರೇ ಕೊಲ್ಲಲ್ಪಡುತ್ತಾರೆ ಎನ್ನುವ ಸಂಕಥನಕ್ಕೆ ಏನನ್ನಬೇಕು?

ಈ ಪ್ರಕರಣದ ಇಬ್ಬರು ಆರೋಪಿಗಳನ್ನು ನಾನು ಬಲ್ಲೆ ಹಾಗೂ ಸಿಎಎ ವಿರೋಧಿ ಹೋರಾಟದಲ್ಲಿ ಅವರೊಟ್ಟಿಗೆ ಕೆಲಸ ಮಾಡಿರುವೆ. ಉಮರ್ ಖಾಲಿದ್ ಅವರನ್ನು ಬಲ್ಲವರು, ಗಮನಿಸಿದವರು ಹಾಗೂ ಅವರ ಬಗ್ಗೆ ಕೇಳಿದ ಯಾರೇ ಆಗಲಿ, ಅವರು ಕೋಮುದಳ್ಳುರಿ ಹಚ್ಚುವವರ ಪೈಕಿ ಎಂದು ಒಪ್ಪಲಾರರು. 2020ರ ಜನವರಿ ಹಾಗೂ ಫೆಬ್ರುವರಿಯಲ್ಲಿ ಅವರು ದೆಹಲಿಯಿಂದ ಹೊರಗೇ ಇದ್ದರು. ಆ ಸಂದರ್ಭದಲ್ಲೇ ದೆಹಲಿಯಲ್ಲಿ ಪ್ರತಿಭಟನೆ ನಡೆದದ್ದು. ಅದೇ ರೀತಿ, ಖಾಲಿದ್ ಸೈಫಿ ಕೂಡ ಪೂರ್ವ ದೆಹಲಿಯಲ್ಲಿ ಹಿಂದೂ–ಮುಸ್ಲಿಮರ ನಡುವೆ ಜನಪ್ರಿಯರು. ಎಂತಹ ಸವಾಲು ಎದುರಾದರೂ ಸಂಘರ್ಷವು ಹಿಂಸೆಗೆ ತಿರುಗಬಾರದು ಎಂದೇ ಪ್ರತಿಪಾದಿಸುತ್ತಿದ್ದರು. ಅವರಿಬ್ಬರು ದೂರದಿಂದಲೇ ಯಾವುದೋ ಕೋಮುಸಂಘರ್ಷಕ್ಕೆ ಇಂಬುಗೊಡುತ್ತಾರೆ ಎನ್ನುವುದನ್ನು ನಾನಂತೂ ಒಪ್ಪುವುದಿಲ್ಲ.

ಸಿಎಎ ಮುಸ್ಲಿಂ ವಿರೋಧಿ ಎಂದು ಹೇಳಿದ್ದಕ್ಕಾಗಿ ಉಮರ್ ಜೈಲಿನಲ್ಲಿ ಇದ್ದಾರೆ ಎಂದಾದರೆ, ನಾನೂ ಜೈಲು ಸೇರಬೇಕಿತ್ತು. ಸಿಎಎ ವಿರೋಧಕ್ಕೆ ಸ್ಥಳೀಯ ಪ್ರತಿಭಟನೆ ಸಂಘಟಿಸಿದ ಕಾರಣಕ್ಕೆ ಖಾಲಿದ್ ಜೈಲಿನಲ್ಲಿ ಇದ್ದಾರೆ ಎಂದಾದರೆ, ನನಗೂ ಅದೇ ಗತಿ ಬರಬೇಕಿತ್ತು. ದೆಹಲಿ ಪೊಲೀಸರ ಆರೋಪಪಟ್ಟಿಯಲ್ಲಿ ನನ್ನನ್ನು ಪ್ರಮುಖ ಸಂಚುಕೋರರಲ್ಲಿ ಒಬ್ಬ ಎಂದು ನಮೂದಿಸಲಾಗಿದೆ ಹಾಗೂ ಮೊಗ್ಯಾಂಬೊ ಶೈಲಿಯ ಕೆಲವು ಮಾತನ್ನು ನಾನು ಆಡಿದ್ದೇನೆ ಎಂದು ಆರೋಪಿಸಲಾಗಿದೆ. ದೆಹಲಿ ಪೊಲೀಸರು ಸಂಚಿನ ಕುರಿತು ಹೊಸೆದಿರುವ ಸಿದ್ಧಾಂತವನ್ನು ಗಂಭೀರವಾಗಿ ಪರಿಗಣಿಸಿದ್ದಿದ್ದರೆ, ನನ್ನ ವಿರುದ್ಧ ಯಾಕೆ ಕ್ರಮ ಜರುಗಿಸಲಿಲ್ಲ ಹಾಗೂ ಐದು ವರ್ಷಗಳಲ್ಲಿ ಒಮ್ಮೆಯಾದರೂ ಯಾಕೆ ನನ್ನನ್ನು ವಿಚಾರಣೆಗೆ ಕರೆಯಲಿಲ್ಲ ಎಂದು ನ್ಯಾಯಮೂರ್ತಿಗಳು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳಬಹುದಿತ್ತು.

ಲಭ್ಯ ಪಠ್ಯಕ್ಕಿಂತ ಹೆಚ್ಚಾಗಿ ಈ ಪ್ರಕರಣದಲ್ಲಿನ ಕುತೂಹಲಕಾರಿಯಾದ ಕಾಕತಾಳೀಯ ಸರಣಿ ವಿದ್ಯಮಾನಗಳನ್ನು ಇತಿಹಾಸ ನೆನಪಿಟ್ಟುಕೊಳ್ಳಬಹುದು. ಒಂದೇ ವಾರದಲ್ಲಿ ನಿರ್ಧರಿಸಬಹುದಾಗಿದ್ದ ಜಾಮೀನು ಅರ್ಜಿಯ ವಿಚಾರಣೆಯನ್ನು ತಿಂಗಳುಗಟ್ಟಲೆ ಹಿಗ್ಗಿಸಲಾಯಿತು, ಒಂದು ಬಾರಿಯಷ್ಟೇ ಅಲ್ಲ; ಮೂರು ಬಾರಿ. ಒಬ್ಬರಾದ ಮೇಲೆ ಒಬ್ಬರಂತೆ ಇಬ್ಬರು ನ್ಯಾಯಮೂರ್ತಿಗಳು ವಾದ–ಪ್ರತಿವಾದ ಆಲಿಸಿದ ನಂತರವೂ ತೀರ್ಪು ಕಾಯ್ದಿರಿಸಿ ಕುಳಿತರು. ಆ ಇಬ್ಬರಿಗೂ ಮುಖ್ಯ ನ್ಯಾಯಮೂರ್ತಿಗಳಾಗಿ ಬಡ್ತಿ ನೀಡಿ, ಬೇರೆ ಹೈಕೋರ್ಟ್‌ಗಳಿಗೆ ವರ್ಗಾವಣೆ ಮಾಡಲಾಯಿತು. ಅಷ್ಟು ಹೊತ್ತಿಗೆ ಈ ಪ್ರಕರಣದ ಕುರಿತು ಅವರು ತೀರ್ಪನ್ನು ಪ್ರಕಟಿಸಿರಲಿಲ್ಲ. ವಿಚಾರಣೆ ಮುಗಿದು ಎರಡು ತಿಂಗಳ ನಂತರ ತೀರ್ಪು ಪ್ರಕಟಿಸಲಾಯಿತು. ಅದೂ ನ್ಯಾಯಮೂರ್ತಿ ಶೈಲೇಂದ್ರ ಕೌರ್ ಅವರು ನಿವೃತ್ತರಾಗುವ ಮೂರು ದಿನ ಮೊದಲು.

ಉಮರ್ ಖಾಲಿದ್ ಭಾಷಣದಲ್ಲಿ ಜನಾಂಗೀಯ ದ್ವೇಷ ಹರಡುವ ಅಂಶಗಳು ಯಾವ್ಯಾವುದಿವೆ ಎಂದು ಹೆಕ್ಕಲು ನ್ಯಾಯಮೂರ್ತಿಗಳು ಯತ್ನಿಸುತ್ತಿರುವಾಲೇ ರಾಗಿಣಿ ತಿವಾರಿ, ಪ್ರದೀಪ್ ಸಿಂಗ್, ಯತಿ ನರಸಿಂಹಾನಂದ ಹಾಗೂ ಮಾನ್ಯ ಸಚಿವರಾದ ಕಪಿಲ್ ಮಿಶ್ರ ಮತ್ತು ಅನುರಾಗ್ ಠಾಕೂರ್ ಮಾಡಿದ ದ್ವೇಷ ಭಾಷಣಗಳೂ ಇತಿಹಾಸದಲ್ಲಿ ದಾಖಲಾಗುತ್ತವೆ. ಆ ಭಾಷಣಗಳ ವಿಡಿಯೊಗಳಲ್ಲಿನ ಅಂಶಗಳು ನ್ಯಾಯಮೂರ್ತಿಗಳ ಕಣ್ಣಿಗೆ ಬೀಳುವುದೇ ಇಲ್ಲ. ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿಯಾಗಿರುವ ಗುರ್ಮೀತ್ ರಾಮ್ ರಹೀಂ ಕಳೆದ 8 ವರ್ಷಗಳಲ್ಲಿ 14 ಸಲ ಜೈಲಿನಿಂದ ಹೊರಬಂದಿರುವ ನಮ್ಮ ದೇಶದಲ್ಲಿ ಹೋರಾಟಗಾರರಿಗೆ 5 ವರ್ಷ ಜಾಮೀನನ್ನು ನಿರಾಕರಿಸಲಾಗುತ್ತಿದೆ. ಇದೂ ಇತಿಹಾಸದಲ್ಲಿ ದಾಖಲಾಗುತ್ತದೆ.

ಅಂತಿಮವಾಗಿ, ಒಂದು ಅಡಿ ಟಿಪ್ಪಣಿ. ಐದು ವರ್ಷಗಳಿಗೂ ಹೆಚ್ಚು ಅವಧಿ ಜೈಲಿನಲ್ಲಿರುವ ಆರೋಪಿಗಳು ಹಾಕಿರುವ ಅರ್ಜಿಗಳ ವಿಚಾರಣೆಗೆ ಬಸವನಹುಳುವಿನ ವೇಗ. ಆರೋಪಕ್ಕೆ ಸಂಬಂಧಿಸಿದ ವಿಚಾರಣೆಯು ಇನ್ನೂ ಪ್ರಾರಂಭವಾಗಬೇಕಿದ್ದು, ಮುಗಿಯಲು ಹತ್ತು ವರ್ಷಗಳಾದರೂ ಆಗಬಹುದು. ಪ್ರಕರಣ ಮುಂದುವರಿದಿದೆ ಎನ್ನುವುದನ್ನು ತೀರ್ಪು ಖಾತರಿಪಡಿಸುತ್ತದೆ. ವಿಚಾರಣೆಯ ವೇಗವು ಸಹಜವಾಗಿಯೇ ಇದೆ ಎಂದೂ ನಂಬಿಸುತ್ತದೆ. ಅಷ್ಟೇ ಅಲ್ಲ, 'ಧಾವಂತದಲ್ಲಿ ವಿಚಾರಣೆ ನಡೆಸುವುದು ಮೇಲ್ಮನವಿದಾರರು ಹಾಗೂ ಸರ್ಕಾರ ಎರಡಕ್ಕೂ ಹಾನಿಕರ' ಎನ್ನುವ ಕರುಣೆಯ ಖಾತರಿಯನ್ನೂ ತೀರ್ಪು ನೀಡುತ್ತದೆ.

ಕವಿ ಹೃದಯವು ಇಲ್ಲಿ ಅರ್ಥಪೂರ್ಣ: ನೀನು ನ್ಯಾಯಾಲಯಗಳಿಂದ ಚುಟುಕುಗಳನ್ನು ಬರೆಸು/ ನಾವು ಬೀದಿಗಳಲ್ಲಿ, ಗೋಡೆಗಳ ಮೇಲೆ ನ್ಯಾಯದ ಸಾಲುಗಳನ್ನು ಬರೆಯುತ್ತೇವೆ.



ವಾಚಕರ ವಾಣಿ

ಅನುದಾನಿತ ಶಾಲೆಗಳ ಉಪೇಕ್ಷೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳ ಜೊತೆಗೆ ನೋಟ್‌ಬುಕ್ ವಿತರಿಸುವ ಬಗ್ಗೆ ಪ್ರಸ್ತಾಪಿಸಿರುವುದು ಸ್ವಾಗತಾರ್ಹ. ಅನುದಾನಿತ ಶಾಲೆಗಳಲ್ಲಿನ ಬಡಮಕ್ಕಳಿಗೂ ಈ ಸೌಲಭ್ಯ ಕಲ್ಪಿಸಬೇಕಿದೆ. ಈಗಾಗಲೇ ಸಮವಸ್ತ್ರ, ಶೂ, ಪ್ರವಾಸ ಸೇರಿ ಹಲವು ಸೌಲಭ್ಯಗಳಿಂದ ವಂಚಿತರಾಗಿರುವ ಈ ವಿದ್ಯಾರ್ಥಿಗಳು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ನೀಡುವ ಎಲ್ಲಾ ಸವಲತ್ತುಗಳಿಗೂ ಅರ್ಹರಿದ್ದಾರೆ. ಮಕ್ಕಳಿಗೆ ಕಲ್ಪಿಸುವ ಶೈಕ್ಷಣಿಕ ಸವಲತ್ತಿನಲ್ಲಿ ತಾರತಮ್ಯ ಮಾಡಬಾರದು.

ಪ್ರಸಾದ್ ನಿಡಸಾಲೆ, ಕುಣಿಗಲ್

ಇವಿಎಂ ವಿರೋಧ: ರಾಟೆ ಇಲ್ಲ ಜಾಣ?

ರಾಜ್ಯದಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಬಳಸಿ ನಡೆದಿರುವ ಚುನಾವಣೆಗಳಲ್ಲಿ ವ್ಯತಿರಿಕ್ತ ಫಲಿತಾಂಶ ಬಂದಿಲ್ಲ. ರಾಜ್ಯದ ಮತದಾರರು ಇವಿಎಂ ಬಳಕೆಯಲ್ಲಿ ಸಮರ್ಥರಿದ್ದಾರೆ ಮತ್ತು ಅದರ ಬಗ್ಗೆ ಅಚಲ ವಿಶ್ವಾಸವಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ಆರೋಪಿಸುವವರೆಗೂ ವಿರೋಧ ವ್ಯಕ್ತವಾಗಿಲ್ಲ. ಪಕ್ಕದ ಮನೆ ಸಾರಿನ ವಾಸನೆಗೆ ಮರುಳಾಗಿ ಹೆಂಡತಿ ಮಾಡಿದ ಅಡುಗೆ ಜರಿದಂತೆ ಜನರ ವಿಶ್ವಾಸಗಳಿಸಿರುವ ಇವಿಎಂ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ.

ಟಿ. ನಾರಾಯಣ ಗೌಡ, ಬೆಂಗಳೂರು

ಗ್ರಹಣ ಮತ್ತು ಮದ್ಯದಂಗಡಿ

ಚಂದ್ರಗ್ರಹಣದ ಸಂಜೆ ಮನೆಯಾಕೆ ತರಕಾರಿ ತರಲು ಹೇಳಿದ್ದರಿಂದ ಅಂಗಡಿಯತ್ತ ಹೆಜ್ಜೆ ಹಾಕಿದೆ. ಅಂಗಡಿಯಾತ ತರಾತುರಿಯಲ್ಲಿ ಅಂಗಡಿ ಮುಚ್ಚುವ ಧಾವಂತದಲ್ಲಿದ್ದ. ಬೇಗ ಮನೆಗೆ ಹೋಗಿ ಫಲಾಹಾರ ಮಾಡಬೇಕು; ಗ್ರಹಣ ಅಲ್ವಾ? ಎಂದು ಹೇಳಿದ. ಬೀದಿಯ ಕೆಲ ಹೋಟೆಲ್, ಕ್ಯಾಂಟೀನ್‌ನಲ್ಲಿ ಬೆರಳೆಣಿಕೆಯಷ್ಟು ಜನರಿದ್ದರು. ಗ್ರಹಣ ಕುರಿತು ಮಾಧ್ಯಮಗಳು ಹೆಚ್ಚು ಪ್ರಚಾರ ಮಾಡಿದ್ದರ ಪ್ರಭಾವ ಜೋರಾಗಿದೆ ಎನಿಸಿತು. ಹಾಗೆಯೇ, ಮದ್ಯದಂಗಡಿಯತ್ತಲೂ ಕಣ್ಣು ಹಾಯಿಸಿದೆ. ಅಲ್ಲಿ ಮಾತ್ರ ಎಂದಿನಂತೆ ಜನಜಾತ್ರೆ! ಅಲ್ಲಿದ್ದವರು ಗ್ರಹಣದ ಬಗ್ಗೆ ತಲೆಕೆಡಿಸಿಕೊಂಡಂತೆ ಕಾಣಲಿಲ್ಲ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಅಪಾರ್ ಐಡಿ ಗೊಂದಲ ನಿವಾರಿಸಿ

ಸಿಬಿಎಸ್‌ಇಯಿಂದ ಈ ಬಾರಿಯ ವಾರ್ಷಿಕ ಪರೀಕ್ಷೆ ನೋಂದಣಿಗೆ 'ಅಪಾರ್ ಐಡಿ'ಯನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ರಾಜ್ಯದಲ್ಲಿ ಸಿಬಿಎಸ್‌ಇ ಹತ್ತನೇ ತರಗತಿ ವ್ಯಾಸಂಗ ಮಾಡುತ್ತಿರುವ ಶೇ 40ರಷ್ಟು ವಿದ್ಯಾರ್ಥಿಗಳು ಪರೀಕ್ಷೆಯಿಂದ ವಂಚಿತರಾಗುವ ಆತಂಕ ಎದುರಿಸುತ್ತಿದ್ದಾರೆ. ಈ ಐಡಿ ರಚಿಸಲು ವಿದ್ಯಾರ್ಥಿಯ ವರ್ಗಾವಣೆ ಪ್ರಮಾಣ ಪತ್ರ/ ಜನನ ಪ್ರಮಾಣ ಪತ್ರ ಹಾಗೂ ವಿದ್ಯಾರ್ಥಿಯ ಆಧಾರ್ ಕಾರ್ಡ್‌ನಲ್ಲಿರುವ ಮಾಹಿತಿ ಹೊಂದಾಣಿಕೆಯಾಗಬೇಕು.

ದಾಖಲೆಗಳೆಲ್ಲವೂ ಹೊಂದಾಣಿಕೆಯಾದರೂ ಯುಡೈಸ್ ಪ್ಲಸ್‌ನಲ್ಲಿ ಈಗಾಗಲೇ ದಾಖಲಾಗಿರುವ ಮಗುವಿನ ಹೆಸರು ಬೇರೆ ಇದ್ದಲ್ಲಿ ಅಪಾರ್ ಐಡಿ ರಚಿಸಲು ಸಾಧ್ಯವಾಗುವುದಿಲ್ಲ. ಇನ್ನು ಯುಡೈಸ್ ಪ್ಲಸ್‌ನಲ್ಲಿ ಹೆಸರು ತಿದ್ದುಪಡಿಗೆ ಶಾಲೆ, ಬಿಇಒ ಕಚೇರಿಗೆ ಅನುಮತಿ ನೀಡಿಲ್ಲ. ತಿದ್ದುಪಡಿಯಾಗದ ಕಾರಣ ಅಪಾರ್ ಐಡಿ ರಚಿಸಲಾಗದೆ ಶಾಲೆಗಳು ತೊಂದರೆಗೆ ಸಿಲುಕಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ತ್ವರಿತವಾಗಿ ಈ ಸಮಸ್ಯೆಯನ್ನು ಬಗೆಹರಿಸಬೇಕಿದೆ.

ಸುರೇಂದ್ರ ಪೈ, ಭಟ್ಕಳ

ಸಿ.ಎಂ. ಮಾತುಗಳು ಸ್ಫೂರ್ತಿಯಾಗಲಿ

ಇತ್ತೀಚೆಗೆ ಸಮಾರಂಭವೊಂದರಲ್ಲಿ ಮಾತನಾಡುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ನನ್ನ ಒಡಹುಟ್ಟಿದವರು ಶಿಕ್ಷಣ ಪಡೆಯಲಿಲ್ಲ. ನಾನು ಶಾಲೆಗೆ ಹೋಗಿದ್ದರಿಂದ ಶಿಕ್ಷಣ ಪಡೆದೆ. ನೀವು ವಿದ್ಯೆ ಪಡೆಯಬೇಡಿ ಎಂದು ನನ್ನ ಒಡಹುಟ್ಟಿದವರ ಹಣೆಯ ಮೇಲೆ ದೇವರು ಬರೆದಿದ್ದಾನೆಯೇ? ಒಬ್ಬರಿಗೆ ವಿದ್ಯೆ, ಮತ್ತೊಬ್ಬರಿಗೆ ವಿದ್ಯೆ ಇಲ್ಲ ಎಂದು ಬರೆಯುವುದಾದರೆ ಅವನನ್ನು ದೇವರು ಎಂದು ಕರೆಯಬೇಕೇ?' ಎಂದು ಪ್ರಶ್ನಿಸಿದರು.

ತರಗತಿಯಲ್ಲಿ ಅನುತ್ತೀರ್ಣಗೊಂಡರೆ ಇದು ನನ್ನ ಹಣೆಬರಹ ಎಂದು ಹೇಳುವವರು ಹೆಚ್ಚಿದ್ದಾರೆ. ವಿದ್ಯೆ ಯಾರೊಬ್ಬರ ಸ್ವತ್ತಲ್ಲ, ಎಲ್ಲರಿಗೂ ಸಾಮರ್ಥ್ಯ ಇರುತ್ತದೆ. ಅವಕಾಶ ಸಿಗಬೇಕಷ್ಟೆ, ಅಂತಹ ಅವಕಾಶವನ್ನು ಸಂವಿಧಾನ ಕೊಟ್ಟಿದೆ. ಸಿದ್ದರಾಮಯ್ಯ ಅವರ ಮಾತುಗಳು ನಮಗೆಲ್ಲರಿಗೂ ಸ್ಫೂರ್ತಿಯಾಗಬೇಕು.

ಐಶ್ವರ್ಯ ಚೆಲುವರಾಜು, ಪಾಂಡವಪುರ

ಧೂಮಪಾನ, ಮದ್ಯಪಾನದ ವೈಭವೀಕರಣ

ಇತ್ತೀಚೆಗೆ ಕೆಲವು ಕನ್ನಡ ಸಿನಿಮಾಗಳು ಯಶಸ್ವಿಯಾಗುತ್ತಿರುವುದು ಸಂತಸದ ವಿಚಾರ. ಆದರೆ, ಬಹುತೇಕ ಸಿನಿಮಾಗಳಲ್ಲಿ ಧೂಮಪಾನ ಹಾಗೂ ಮದ್ಯಪಾನ ಮಾಡುತ್ತಿರುವ ದೃಶ್ಯಗಳು ಹೆಚ್ಚಾಗಿರುವುದು ಸಮಾಜದ ಮೇಲೆ ಕೆಟ್ಟ ರೀತಿಯ ಪರಿಣಾಮ ಬೀರಲಿದೆ ಎಂಬ ಬಗ್ಗೆ ನಿರ್ದೇಶಕರಿಗೆ ಅರಿವು ಇದ್ದಂತಿಲ್ಲ. ಸಿನಿಮಾ ಆರಂಭಕ್ಕೂ ಮೊದಲು ಧೂಮಪಾನ ಹಾಗೂ ಮದ್ಯಪಾನದಿಂದ ಆಗುವ ಅನಾಹುತ ಕುರಿತಂತೆ ಚಿಕ್ಕದಾದ ವಿಡಿಯೊ ತುಣುಕುಗಳ ಮೂಲಕ ತೋರಿಸಲಾಗುತ್ತದೆ. ಪ್ರೇಕ್ಷಕರು ಅದನ್ನು ನೋಡಿದರೂ ಆ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಸಿನಿಮಾ ಪ್ರಬಲವಾದ ಮಾಧ್ಯಮ. ಪ್ರೇಕ್ಷಕರು ಇಲ್ಲಿ ಎಲ್ಲವನ್ನೂ ಮನರಂಜನಾ ದೃಷ್ಟಿಯಿಂದ ನೋಡುತ್ತಾರೆ. ಸಿನಿಮಾ ನೋಡುತ್ತಾ ಅದರ ಜೊತೆಗೆ ನಾಯಕ ನಟರನ್ನು ಹಿಂಬಾಲಿಸುತ್ತಾರೆ. ಹಾಗಾಗಿ, ಸಮಾಜಕ್ಕೆ ಮಾರಕವಾಗುವ ದೃಶ್ಯಗಳನ್ನೇ ವೈಭವೀಕರಿಸುವುದು ಸರಿಯಲ್ಲ. ಯುವಜನರಿಗೆ ಮಾರ್ಗದರ್ಶನ ನೀಡುವಂತಹ ಸದಭಿರುಚಿ ಸಿನಿಮಾಗಳತ್ತ ನಿರ್ದೇಶಕರು ಚಿತ್ತ ಹರಿಸಬೇಕಿದೆ. ಇದು ಚಂದನವನದ ಅಭಿವೃದ್ಧಿಗೂ ಸಹಕಾರಿಯಾಗಲಿದೆ.

ಹರವೆ ಸಂಗಣ್ಣ ಪ್ರಕಾಶ್, ಚಾಮರಾಜನಗರ

ಚುರುಮುರಿ



ಗ್ರೇಟರ್ ಗಾರುಡಿ

• ಡಿ.ಎಸ್. ಲಿಂಗರಾಜು

ಶಿವತನಯನು ಬೆಂಗಳೂರನ್ನು ಕೇಂದ್ರ, ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣಗಳೆಂಬ ಐದು ತುಂಡುಗಳಾಗಿ ಮಾಡಿ ಗ್ರೇಟರ್ ಬೆಂಗಳೂರೆಂದು ಮಾನಕರಣ ಮಾಡಿದ್ದನು. ಮರಿರಾಜಕಾರಣಿಗಳು ತಮಗೂ ಕೂಡ ಮತಗಳ್ಳತನ, ಬೂತುಚೇಷ್ಟೆಗೆ ಅವಕಾಶ ಸಿಗಲಿದೆ ಎಂದು ಡ್ರಾಮಾಂಚಿತರಾಗಿದ್ದರು. ಈ ಪ್ರಯುಕ್ತ ನಗರದಲ್ಲಿ ಡೌರಾಣಿಕ ನಾಟಕ 'ಗ್ರೇಟರ್ ಗಾರುಡಿ' ಏರ್ಪಡಿಸಲಾಗಿತ್ತು.

ಸೂತ್ರಧಾರನಾದ ತುರೇಮಣೆಯು ರಂಗಪ್ರವೇಶ ಮಾಡಿ, 'ಸುಜನ ವಂದಿತ ಮುದವನೀಡು ಪಾಲಿಕೆ ತನಯನೇ ನಮಗಿನ್ನು ಶುಭದಿನ' ಎಂದು ಹಾಡಿ ತೆರಳಿದೊಡನೆ ಐದೂ ಜನ ಪ್ರಾಂತ್ಯಾಧಿಕಾರಿಗಳು ಪ್ರವೇಶಿಸಿ ರಾಜ್ಯಭಾರ ಆರಂಭಿಸುವ ಮುನ್ನ ಇಷ್ಟಕ್ಕೆಲ್ಲಾ ಕಾರಣನಾದ ಡಿಕೆ ಪರಮಾತ್ಮನನ್ನು ಒಟ್ಟಾಗಿ ಕೊಂಡಾಡಿದರು.

'ದೇವಾ, ನಿನ್ನ ಕೃಪೆಯಿಂದಾಗಿ ನಮಗೆ ಐದು ವಲಯಗಳು ದಕ್ಕಿವೆ. ಇವನ್ನು ಪಾಲಿಸಿಕೊಂಡು ಬಲಿ ಹಾಕುವ ರಹಸ್ಯವನ್ನು ತಿಳಿಸು ಕನಕವರಾಧೀಶ್ವರ' ಎಂಬುದಾಗಿ ಬೇಡಿದರು.

'ಹೇಡಿತನವು ಕಾಡದಿರಲಿ, ಮೂಢತನವು ತೊಲಗಲಿ. ಕಮಲಪ್ರಿಯರೆಲ್ಲರ ತೇಜವನೆ ಕಳೆಯಲಿ. ನಿಮ್ಮ ಗಾರುಡಿ ಆರಂಭವಾಗಲಿ. ತೆರಿಗೆ ಮಂತ್ರ, ತಂತ್ರದಿಂ ಜನರಂ ಭ್ರಾಂತರನ್ನಾಗಿಸಿ ತೋರಿರಿ ಯಕ್ಷಿಣಿಯಾ' ಎಂದು ಪರಮಾತ್ಮನು ಆಶೀರ್ವದಿಸಿದನು.

ಗ್ರೇಟರ್ ಸಾಮಂತರು ಖುಷಿಯಿಂದ 'ಪಿಡಿವೆನು ಬಡಿವೆನು ಹೊಡೆದು ಬಡಿದು ಗೋಣ ಮುರಿವೆನು ಭಲಾರೆ' ಎಂದು ನಗರ ಪ್ರದಕ್ಷಿಣೆಗೆ ಹೊರಟರು. ರಸ್ತೆಗಳೆಲ್ಲಾ ಅವ್ಯವಸ್ಥೆಯಾಗಿದ್ದು ಕಂಡು ದೂರು ನೀಡಿದವರಿಗೆ 'ತಾಪವೇಕೆ. ಗ್ಯಾರಂಟಿಯ ಸೊಬಗಿಗೆ ತುಂಬು ತೆರಿಗೆಯಾ, ತೆರಳು ಮಂದಕುಮಾರ. ಕೇಳದಿರು ಇನ್ನೇನೂ' ಎಂದು ಹೇಳಿ 'ಮಾಯಕಾರ ಗಾರುಡಿ, ತಂತ್ರಕಾರ ಗಾರುಡಿ' ಎಂಬ ಯುಗಳ ಗೀತೆ ಹಾಡುತ್ತಾ ತೆರಳಿದರು.

ಇದನ್ನು ಕಂಡ ಬಡ ಪ್ರಜೆಗಳು, 'ಜಗಕದಾವ ಪಾಪವೋ, ವಿಧಿಕೂಪಕೆ ಹಾದಿಯೋ. ಏನು ಮಾಯವೋ, ಏನು ಚೋದ್ಯವೋ' ಎಂದು ಬಾಯ ಮೇಲೆ ಬೆರಳಿಟ್ಟು 'ಜಯಮಂಗಳಂ ಮುತ್ತಿನಾರತಿ ಎತ್ತಿರೆ ಭ್ರಾಂತಿಗೊಳಿಪ ಧೀರರಿಗೆ' ಎನ್ನುವಲ್ಲಿಗೆ ನಾಟಕಕ್ಕೆ ತೆರೆ ಬಿದ್ದಿತ್ತು.

ಸಂಗತ


ಜನಪ್ರತಿನಿಧಿಗಳ ನಾಲಿಗೆಗೆ ಅಂಕೆ ಅಗತ್ಯ

ಮಹಿಳೆಯರ ಬಗ್ಗೆ ಲಘುವಾಗಿ ಮಾತನಾಡುವ ರಾಜಕಾರಣಿಗಳ ವಿರುದ್ಧ ಕ್ರಮ ಜರುಗಿಸಬೇಕು. ಸಡಿಲ ನಾಲಿಗೆಯ ರಾಜಕಾರಣಿಗಳನ್ನು ಜನ ನಿರಾಕರಿಸಬೇಕು.

• ಸುಷ್ಮಾ ಸವಸುದ್ದಿ

ಮಹಿಳೆಯರ ಕುರಿತು ಲಘುವಾಗಿ ಮಾತನಾಡುವುದು ಹಾಗೂ ಲಿಂಗ ಸಂವೇದನೆ ಮರೆತು ನಾಲಿಗೆ ಸಡಿಲಬಿಡುವುದು ರಾಜಕಾರಣಿಗಳಿಗೆ ಚಾಳಿ ಆಗಿರುವಂತಿದೆ.

'ಉತ್ತರಕನ್ನಡ ಜಿಲ್ಲೆಯಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಯಾವಾಗ ನಿರ್ಮಿಸುವಿರಿ? ಪ್ರವಾಹ ಬಂದರೆ ಹೆರಿಗೆಗೆ ಆಸ್ಪತ್ರೆಗೆ ಹೋಗಲು ಕಷ್ಟದ ಸ್ಥಿತಿಯಿದೆ' ಎನ್ನುವ ಹಿರಿಯ ಪತ್ರಕರ್ತೆಯೊಬ್ಬರ ಪ್ರಶ್ನೆಗೆ, ಸಚಿವ ಆರ್‌.ವಿ. ದೇಶಪಾಂಡೆ, 'ಹಳಿಯಾಳಕ್ಕೆ ಬಾ, ನಿನ್ನ ಹೆರಿಗೆ ಮಾಡಿಸ್ತೀನಿ' ಎಂದು ಉಡಾಫೆಯಿಂದ ಮಾತಾಡಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಬೇಕು ಎನ್ನುವುದು ಆ ಜಿಲ್ಲೆಯ ಜನರ ಬಹುದಿನದ ಬೇಡಿಕೆ. ವೈದ್ಯಕೀಯ ತುರ್ತು ಎದುರಾದಾಗ ಆ ಜಿಲ್ಲೆಯ ಜನರು ಹುಬ್ಬಳ್ಳಿ, ಬೆಳಗಾವಿ, ಮಣಿಪಾಲ್, ಶಿವಮೊಗ್ಗ, ಮಂಗಳೂರಿಗೆ ಹೋಗಬೇಕು. ರೋಗಿಗಳು ದಾರಿ ಮಧ್ಯದಲ್ಲೇ ಅಸುನೀಗಿದ ಘಟನೆಗಳು ಇವೆ. ಈ ಗಂಭೀರ ಸಮಸ್ಯೆಗೆ ಉತ್ತರ ಹೇಳಬೇಕಾದ ಜವಾಬ್ದಾರಿ ಸ್ಥಾನದಲ್ಲಿರುವವರು, 'ಹೆರಿಗೆ ಮಾಡಿಸುತ್ತೇನೆ' ಎಂದು ಹಾಸ್ಯ ಚಟಾಕಿ ಹಾರಿಸಿದರೆ ಹೇಗೆ? ಪ್ರಶ್ನೆಯ ಗಾಂಭೀರ್ಯವನ್ನು ದೇಶಪಾಂಡೆ ಅವರಂತಹ ಹಿರಿಯ ರಾಜಕಾರಣಿ ಅರ್ಥ ಮಾಡಿಕೊಳ್ಳದೆ ಹೋದುದು ದುರದೃಷ್ಟಕರ. ಇದು ಅವರಿಗೆ ಮಹಿಳೆಯರ ಬಗ್ಗೆ ಇರುವ ಅಗೌರವದ ಜೊತೆಗೆ, ತಮ್ಮ ಹೊಣೆಗಾರಿಕೆಯ ಬಗ್ಗೆ ಇರುವ ಬೇಜವಾಬ್ದಾರಿತನವನ್ನೂ ಸೂಚಿಸುವಂತಿದೆ.



ಹೆಣ್ಣುಮಕ್ಕಳ ಬಗ್ಗೆ ರಾಜಕಾರಣಿಗಳು ಹಗುರವಾಗಿ ಮಾತನಾಡಿರುವುದು ಇದು ಹೊಸತೇನೂ ಅಲ್ಲ. ಈ ಹಿಂದೆಯೂ ಕೆಲವು ಜನಪ್ರತಿನಿಧಿಗಳು ಮಹಿಳೆಯರ ಕುರಿತು ಕೀಳಾಗಿ ಮಾತನಾಡಿ, ವಿರೋಧ ಎದುರಾದಾಗ ವಿಷಾದ ಅಥವಾ ಕ್ಷಮೆಯ ನಾಟಕ ಆಡಿರುವುದಿದೆ. ಈ ಹಿಂದೆ ಸದನದಲ್ಲಿ ಮಾಜಿ ಸ್ಪೀಕರ್ ಕೆ.ಆರ್. ರಮೇಶ ಕುಮಾರ್ ಅವರು ಅತ್ಯಾಚಾರದ ಕುರಿತು ಕೀಳು ಅಭಿರುಚಿಯ ಗಾದೆ ಹೇಳಿದ್ದರು. ಸಿ.ಟಿ. ರವಿ ಅವರು ಸಚಿವೆಗೆ ಅಸಾಂವಿಧಾನಿಕ ಪದ ಬಳಕೆಯ ಆರೋಪ ಹೊತ್ತಿದ್ದಾರೆ. ಮೈಸೂರಲ್ಲಿ ಯುವತಿಯೊಬ್ಬಳ ಮೇಲೆ ಅತ್ಯಾಚಾರ ನಡೆದ ಪ್ರಕರಣದಲ್ಲಿ, ಆಗ ಗೃಹ ಮಂತ್ರಿಗಳಾಗಿದ್ದ ಆರಗ ಜ್ಞಾನೇಂದ್ರ ಅವರು, 'ಅಷ್ಟು ಹೊತ್ತಲ್ಲಿ ಅಲ್ಲಿಗೆ ಯಾಕೆ ಹೋಗಬೇಕು' ಎಂದು ಪ್ರಶ್ನಿಸಿದ್ದರು. ದಾವಣಗೆರೆ ಜಿಲ್ಲೆಯ ಶಾಸಕರೊಬ್ಬರು ಜಿಲ್ಲೆಯ ಮಹಿಳಾ ಪೊಲೀಸ್ ವರಿಷ್ಠಾಧಿಕಾರಿಗೆ ಅವಹೇಳನಕಾರಿಯಾಗಿ ಮಾತನಾಡಿರುವುದೂ ಇದೆ.

ಶಾಸನಸಭೆಗಳಲ್ಲಿ ನಮ್ಮನ್ನು ಪ್ರತಿನಿಧಿಸುವ ಪ್ರತಿನಿಧಿಗಳು ಸಾರ್ವಜನಿಕ ವಲಯದಲ್ಲಿ ಕನಿಷ್ಠ ಪ್ರಜ್ಞೆಯೂ ಇರದೇ ಮಾತನಾಡುವುದು, ವಿರೋಧ ವ್ಯಕ್ತವಾದಾಗ ಕ್ಷಮೆ ಕೇಳುವುದು, ಸಾಮಾನ್ಯ ಎನ್ನುವಂತಾಗಿ ಬಿಟ್ಟಿದೆ. ರಾಜಕಾರಣಿಗಳ ಎಲ್ಲೆ ಮೀರುವ ಮಾತುಗಳನ್ನು ಕುರಿತು ನಾವು ಗಂಭೀರವಾಗಿ ಪರಿಗಣಿಸದಿದ್ದರೆ, ಮತ್ತೆ ಮತ್ತೆ ಅವರು ನಾಲಿಗೆ ಹರಿಬಿಡುತ್ತಲೇ ಇರುತ್ತಾರೆ.

ಮತದಾರರನ್ನು ಪ್ರತಿನಿಧಿಸುವ ರಾಜಕಾರಣಿಗಳು ಎಲ್ಲರಿಗೂ ಮಾದರಿ ಆಗುವಂತಿರಬೇಕು. ನಾಲ್ಕು ದಶಕಗಳ ರಾಜಕೀಯ ಅನುಭವ ಹೊಂದಿರುವ ಹಿರಿಯ ಶಾಸಕರೇ ಉಡಾಫೆ ಮಾತನಾಡುತ್ತಾರೆ, ಅದೂ ಒಬ್ಬ ಕಾರ್ಯನಿರತ ಪತ್ರಕರ್ತೆಗೆ. ಹಿರಿಯರ ಈ ಚಾಳಿಯನ್ನೇ ಕಿರಿಯ ರಾಜಕಾರಣಿಗಳೂ ಅನುಸರಿಸುತ್ತಾರೆ.

ದೇಶಪಾಂಡೆ ಅವರ ಸಲ್ಲದ ಮಾತಿಗೆ ನಮ್ಮ ಮಹಿಳಾ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಧ್ವನಿ ಎತ್ತಬೇಕಿತ್ತು. ವಿಪರ್ಯಾಸ ಎಂದರೆ, ಮಹಿಳೆಯರ ಬಗ್ಗೆ ಸದನದಲ್ಲೇ ಅವಹೇಳನದ ಮಾತುಗಳು ಕೇಳಿಬಂದರೂ ಶಾಸಕಿಯರು ಮೌನವಾಗಿರುತ್ತಾರೆ. ಮಹಿಳಾ ಪ್ರಾತಿನಿಧೀಕರಣ ಎನ್ನುವುದು ರಾಜಕೀಯ ವಲಯದಲ್ಲಿ ಅಂಕಿಸಂಖ್ಯೆಗಳ ಸರಿದೂಗಿಸುವಿಕೆಗಷ್ಟೇ ಸೀಮಿತವಾಗಿದೆ. ಮಹಿಳಾ ಕಾಳಜಿ ಕುರಿತ ಗಂಡಿನ ಧೋರಣೆ ಹಾಗೂ ಸಂವೇದನೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ ಎನ್ನುವುದು ಖೇದಕರ.

ಮಹಿಳಾ ಅವಹೇಳನದ ಮಾತುಗಳಿಗೆ ಕಾನೂನು ಅಡಿಯಲ್ಲೇ ಉತ್ತರ ಕೊಡಬೇಕಾಗಿದೆ. ಹಾಗೆ ಆದಾಗಲೇ, ಅಧಿಕಾರ ಬಳಸಿ ಏನನ್ನಾದರೂ ಮಾತನಾಡಬಹುದು ಎನ್ನುವ ಜನಪ್ರತಿನಿಧಿಗಳ ಅಹಂಗೆ ಹಾಗೂ ಗಂಡಾಳ್ವಿಕೆಯ ಮನಃಸ್ಥಿತಿಗೆ ಒಂದು ಎಚ್ಚರಿಕೆ ತಲುಪುತ್ತದೆ. ಆದರೆ ಎಚ್ಚರಿಕೆ ನೀಡಬೇಕಾದವರು ಯಾರು? ಪುರುಷರೇ ಹೆಚ್ಚಿರುವ ನಮ್ಮ ಶಾಸನಸಭೆಯ ಸದಸ್ಯರಿಂದ ಇದನ್ನು ನಿರೀಕ್ಷಿಸಲಾಗದು. ಇದೊಂದು ರೀತಿಯಲ್ಲಿ ಕಾಯಬೇಕಾದ ಬೇಲಿಯೇ ಎದ್ದು ಹೊಲ ಮೇಯ್ದಂತೆ. ಈ ಕೆಲಸವನ್ನು ಕಾನೂನೇ ಕೈಗೆತ್ತಿಕೊಳ್ಳಬೇಕು.

ಅಧಿಕಾರದಲ್ಲಿ ಇರುವವರಿಗೆ ಮಾತಿನ ಮೌಲ್ಯವನ್ನು ಕಲಿಸುವ ತುರ್ತು ಇಂದಿನದು. ಅವಹೇಳನದ ಮಾತುಗಳಿಗೆ ಕೇವಲ ಕ್ಷಮೆಯಾಚನೆ ಬೇಡ. ಶಿಕ್ಷೆಯೂ ಆಗಲಿ. ಆಗಲೇ ಬಾಯಿಬಡುಕರಿಗೆ ಬಿಸಿ ತಟ್ಟುವುದು. ಇದರ ಜೊತೆಗೆ, ಮಹಿಳೆಯರ ಬಗ್ಗೆ ಲಘುವಾಗಿ ಮಾತನಾಡುವ ರಾಜಕಾರಣಿಗಳನ್ನು ಮತದಾರರೇ, ವಿಶೇಷವಾಗಿ ಮಹಿಳೆಯರು ನಿರಾಕರಿಸಬೇಕು. ರಾಜಕಾರಣಿಯನ್ನು ನಿಯಂತ್ರಣದಲ್ಲಿ ಇರಿಸುವುದಕ್ಕೆ, ತಾವು ಮತ ಚಲಾಯಿಸುವ ವ್ಯಕ್ತಿಗೆ ನಾಲಿಗೆ ಸ್ವಚ್ಛವಾಗಿರಬೇಕು ಎನ್ನುವ ಮತದಾರನ ಅರಿವಿಗಿಂತಲೂ ಪರಿಣಾಮಕಾರಿ ಆಯುಧ ಮತ್ತೊಂದಿಲ್ಲ.

ಹೆಣ್ಣನ್ನು ದೇವತೆಯನ್ನಾಗಿ ಮಾಡಿ ಗೌರವಿಸುವ ಮಾತುಗಳನ್ನು ಕೆಲವರು ಆಡುತ್ತಾರೆ. ಇಂಥ ಮಾತುಗಳಿಗೆ ಅರ್ಥವೇನಿಲ್ಲ. ಬಹುತೇಕ ಸಂದರ್ಭದಲ್ಲಿ ಹೆಣ್ಣಿನ ಕುರಿತ ಗೌರವದ ಮಾತುಗಳೂ ಆಕೆಯನ್ನು ಅಂಕೆಯಲ್ಲಿಡುವ ಗಂಡಿನ ಪ್ರಯತ್ನಗಳೇ ಆಗಿರುತ್ತವೆ.

ಸಮಾಜದಲ್ಲಿ ಲಿಂಗ ಸಂವೇದನೆಯನ್ನು ರೂಪಿಸುವ ಪ್ರಯತ್ನಗಳು ನಿರಂತರವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿ ನಡೆಯುತ್ತಿರಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಟ್ರಂಪ್ ಸರ್ಕಾರದ ಸೂತ್ರಧಾರಿಗಳು

2025ರ ಜನವರಿ 20ರಂದು ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷ ಗಾದಿಗೆ ಏರಿದ ಡೊನಾಲ್ಡ್ ಟ್ರಂಪ್ ಅವರು ತಮ್ಮ ವಲಸೆ, ತೆರಿಗೆ ನೀತಿ ಮತ್ತಿತರ ಕಾರಣಗಳಿಂದ ಜಾಗತಿಕ ಮಟ್ಟದಲ್ಲಿ ಭಾರಿ ಸಂಚಲನವನ್ನೇ ಸೃಷ್ಟಿಸುತ್ತಿದ್ದಾರೆ. ಟ್ರಂಪ್ ಅವರಿಗೆ ಆಡಳಿತದಲ್ಲಿ, ನೀತಿ ನಿರೂಪಣೆಯಲ್ಲಿ ನೆರವಾಗುತ್ತಿರುವ, ಮುಖ್ಯ ಸಲಹೆ ಸೂಚನೆಗಳನ್ನು ನೀಡುತ್ತಿರುವ ನಂಬಿಕಸ್ಥರ ಒಂದು ತಂಡವೇ ಇದೆ. ಈ ತಂಡದಲ್ಲಿ ವ್ಯಾಪಾರ ಪರಿಣತಿ ಉಳ್ಳವರು, ರಾಷ್ಟ್ರೀಯ ಭದ್ರತಾ ಸಲಹೆಗಾರರು, ವಲಸೆ ಕಾರ್ಯನಿರ್ವಹಣಾಧಿಕಾರಿಗಳು ಸೇರಿದಂತೆ ಭಿನ್ನ ವೃತ್ತಿಗಳ, ಭಿನ್ನ ಹಿನ್ನೆಲೆಯ ಜನರು ಇದ್ದಾರೆ. ಇವರನ್ನು ಟ್ರಂಪ್ ಅವರ ಆಡಳಿತದ ಬೆನ್ನೆಲುಬು ಎಂದೇ ವಿಶ್ಲೇಷಿಸಲಾಗುತ್ತಿದೆ. ಅವರ ಕೆಲವು ನಿರ್ಧಾರಗಳಿಗೆ ಜಾಗತಿಕವಾಗಿ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದ್ದರೂ ಟ್ರಂಪ್ ಅವರು ತಮ್ಮ ಆಪ್ತರ ಪರ ದೃಢವಾಗಿ ನಿಂತಿದ್ದಾರೆ


ಡೊನಾಲ್ಡ್ ಟ್ರಂಪ್



ಮಾರ್ಕೊ ರುಬಿಯೊ (54)

ವಿದೇಶಾಂಗ ಕಾರ್ಯದರ್ಶಿ

ಟ್ರಂಪ್ ಆಡಳಿತ ಕಠಿಣ ರಾಜಕೀಯ ನಿರ್ಧಾರಗಳಿಗೆ ಇವರೇ ಕಾರಣ ಎನ್ನಲಾಗುತ್ತಿದೆ. ಚೀನಾ ಅಮೆರಿಕದ ಪ್ರಮುಖ ಎದುರಾಳಿ ಎನ್ನುವುದು ಇವರ ಪ್ರತಿಪಾದನೆ. ಅಷ್ಟೇ ಅಲ್ಲ, ಕ್ಯೂಬಾ, ವೆನುಜುವೆಲಾ ದೇಶಗಳಿಗೆ ಸಂಬಂಧಿಸಿದ ನೀತಿಗಳೂ ಇವರದೇ ಕೊಡುಗೆ. 'ಅಮೆರಿಕವೇ ಮೊದಲು' ನೀತಿ ಇವರದ್ದೇ ಕೂಸು. ಜಾಗತಿಕ ಮಟ್ಟದಲ್ಲಿ ಸಂಘರ್ಷದ ಸ್ಥಳಗಳಿಗೆ ಅಮೆರಿಕದ ಸೇನೆಯನ್ನು ಕಳುಹಿಸುವುದಕ್ಕೆ ಇವರು ವಿರೋಧಿ. ಮಾನವ ಹಕ್ಕುಗಳ ಪ್ರಬಲ ಪ್ರತಿಪಾದಕರಾಗಿರುವ ಇವರು, ಅಮೆರಿಕವು ವಿದೇಶಗಳ ಮೇಲೆ ನಿರ್ಬಂಧ ಹೇರಬೇಕು ಎನ್ನುವ ನಿಲುವುಳ್ಳವರು. ರಕ್ಷಣೆ ಮತ್ತಿತರ ಕ್ಷೇತ್ರಗಳಲ್ಲಿ ಅಮೆರಿಕ–ಭಾರತದ ನಡುವಿನ ಒಪ್ಪಂದಗಳು ಕೊನೆಗೊಳ್ಳಬೇಕು ಎನ್ನುವ ನಿಲುವಿನ ಇವರು ಭಾರತವು ರಷ್ಯಾದೊಂದಿಗಿನ ಶಸ್ತ್ರಾಸ್ತ್ರ ಮತ್ತು ಇಂಧನ ವ್ಯವಹಾರವನ್ನು ನಿಲ್ಲಿಸಬೇಕು ಎನ್ನುತ್ತಾರೆ.



ಪೀಟ್ ಹೆಗ್ಸೆಥ್ (45)

ರಕ್ಷಣಾ ಕಾರ್ಯದರ್ಶಿ

ಮಾಜಿ ಸೇನಾಧಿಕಾರಿಯಾಗಿರುವ ಇವರು, ಪತ್ರಕರ್ತರೂ ಹೌದು. ಸಾಕಷ್ಟು ವಿರೋಧದ ನಡುವೆಯೂ, ರಕ್ಷಣಾ ಇಲಾಖೆಯನ್ನು ಯುದ್ಧ ಇಲಾಖೆ (ಡಿಪಾರ್ಟ್‌ಮೆಂಟ್ ಆಫ್ ವಾರ್) ಎಂದು ಮರುನಾಮಕರಣ ಮಾಡಿ, ಇಲಾಖೆಯಲ್ಲಿ ತೀವ್ರ ಬದಲಾವಣೆಗಳನ್ನು ತಂದವರು ಪೀಟ್ ಹೆಗ್ಸೆಥ್. ಭಾರತದ ರಕ್ಷಣೆಗೆ ಅಮೆರಿಕ ನೆರವು ನೀಡಲಿದೆ ಎಂಬ ಭರವಸೆಯೊಂದಿಗೆ ಉಭಯ ದೇಶಗಳ ನಡುವೆ ಒಂದು ದೀರ್ಘ ಕಾಲದ ರಕ್ಷಣಾ ಚೌಕಟ್ಟು ರೂಪಿಸಲು ಪ್ರಯತ್ನಿಸುತ್ತಿದ್ದಾರೆ. ಕ್ವಾಡ್ ಚಟುವಟಿಕೆಗಳು, ರಕ್ಷಣಾ ಉದ್ಯಮ ಪಾಲುದಾರಿಕೆ ಮತ್ತು ಸಹಭಾಗಿ ವ್ಯವಸ್ಥೆಯ ಮೂಲಕ ಭಾರತದೊಂದಿಗೆ ಸಮಗ್ರ ಸಂಬಂಧ ವೃದ್ಧಿಯ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.



ಕಾಶ್ ಪಟೇಲ್ (44) ಎಫ್‌ಬಿಐ ನಿರ್ದೇಶಕ

ಇಂಡಿಯನ್ ಅಮೆರಿಕನ್ ಆಗಿರುವ ಇವರು ವಕೀಲರಾಗಿ ಅಮೆರಿಕದಲ್ಲಿ ಹೆಸರು ಮಾಡಿದವರು. ಟ್ರಂಪ್ ಆಪ್ತಬಳಗದಲ್ಲಿ ಒಬ್ಬರಾಗಿರುವ ಇವರು, ಪ್ರಸ್ತುತ ಅಮೆರಿಕದ ಮಹತ್ವದ ಹುದ್ದೆ ಅಲಂಕರಿಸಿದ್ದಾರೆ. ಎಫ್‌ಬಿಐ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಹಲವು ಮುಖ್ಯ ಕ್ರಮಗಳನ್ನು ಕೈಗೊಂಡಿದ್ದಾರೆ. ಎಫ್‌ಬಿಐ ಸ್ವರೂಪವನ್ನೇ ಬದಲಿಸಿರುವ ಕಾಶ್ ಪಟೇಲ್, ಸಾವಿರಾರು ಸಿಬ್ಬಂದಿಯನ್ನು ವರ್ಗಾವಣೆ ಮಾಡಿ, ಆಡಳಿತಕ್ಕೆ ಚುರುಕು ತಂದಿದ್ದಾರೆ; ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಿದ್ದಾರೆ. ಎಫ್‌ಬಿಐನಲ್ಲಿ ತೀವ್ರಗತಿಯ ಬದಲಾವಣೆಗಳಿಗೆ ಕಾರಣರಾಗಿರುವ ಪಟೇಲ್ ಅವರ ಬಗ್ಗೆ ರಾಜಕೀಯ ಪಕ್ಷಪಾತ ಅನುಸರಿಸುತ್ತಿದ್ದಾರೆ ಎನ್ನುವುದು ಸೇರಿದಂತೆ ಹಲವು ರೀತಿಯ ಟೀಕೆಗಳೂ ವ್ಯಕ್ತವಾಗಿವೆ.



ತುಳಸಿ ಗಬ್ಬಾರ್ಡ್ (44)

ರಾಷ್ಟ್ರೀಯ ಬೇಹುಗಾರಿಕಾ ಸಂಸ್ಥೆ ಮುಖ್ಯಸ್ಥೆ

ಇಂಡಿಯನ್ ಅಮೆರಿಕನ್ ಆಗಿರುವ ಇವರು ಮಾಜಿ ಸೇನಾಧಿಕಾರಿ. ಅಮೆರಿಕದ ಕಾಂಗ್ರೆಸ್ ಸದಸ್ಯೆಯೂ ಆಗಿದ್ದರು. ಪ್ರಸ್ತುತ ರಾಷ್ಟ್ರೀಯ ಬೇಹುಗಾರಿಕಾ ಸಂಸ್ಥೆ ಮುಖ್ಯಸ್ಥೆಯಾಗಿದ್ದು, ಈ ಹುದ್ದೆಗೆ ಏರಿದ ಮೊದಲ ಹಿಂದೂ ಎನ್ನಿಸಿಕೊಂಡಿದ್ದಾರೆ. ಬೇಹುಗಾರಿಕಾ ಸಂಸ್ಥೆಯಲ್ಲಿ ಮಹತ್ವದ ಬದಲಾವಣೆಗಳನ್ನು ತಂದ ಇವರು, ಅದರ ಸಿಬ್ಬಂದಿಯ ಪೈಕಿ ಅರ್ಧದಷ್ಟು ಕಡಿತ ಮಾಡಿದ್ದಾರೆ. ಇವರ ಅರ್ಹತೆ ಮತ್ತು ಹಿಂದಿನ ರಾಜಕೀಯ ನಿಲುವುಗಳು ಭಾರಿ ವಿವಾದಕ್ಕೆ ಕಾರಣವಾಗಿವೆ. ಇವುಗಳ ನಡುವೆಯೂ ಬೇಹುಗಾರಿಕಾ ಸಂಸ್ಥೆಯಲ್ಲಿ ಹಲವು ದಿಟ್ಟ ನಿರ್ಧಾರಗಳನ್ನು ಕೈಗೊಂಡು ಅವುಗಳನ್ನು ಜಾರಿಗೊಳಿಸಿದ ಹಿರಿಮೆ ಇವರದ್ದು.



ಪೀಟರ್ ನವರೊ (76)

ವ್ಯಾಪಾರ ಸಲಹೆಗಾರ

ಆರ್ಥಿಕ ತಜ್ಞರಾಗಿರುವ ಪೀಟರ್ ನವಾರೊ ಟ್ರಂಪ್ ಅವರ ವ್ಯಾಪಾರ ಮತ್ತು ತಯಾರಿಕಾ ನೀತಿಗಳ ಸಲಹೆಗಾರ. ಪಾಲುದಾರ ರಾಷ್ಟ್ರಗಳ ಮೇಲೆ ಗರಿಷ್ಠ ಸುಂಕ ಹೇರುವ ಟ್ರಂಪ್ ನಿರ್ಧಾರದ ಹಿಂದಿರುವ ವ್ಯಕ್ತಿ ಇವರು. ಆಕ್ರಮಣಕಾರಿ ವ್ಯಕ್ತಿತ್ವದ ನವರೊ ಅವರ ಆರ್ಥಿಕ ನೀತಿಯೂ ಅದೇ ಮಾದರಿಯದ್ದು.

ರಷ್ಯಾದಿಂದ ತೈಲ ಖರೀದಿಸುವ ವಿಚಾರದಲ್ಲಿ ಭಾರತದ ವಿರುದ್ಧ ದಿನಕ್ಕೊಂದು ವಿವಾದಾತ್ಮಕ ಹೇಳಿಕೆ ನೀಡುತ್ತಾ ಈಗ ಸುದ್ದಿಯಲ್ಲಿದ್ದಾರೆ.

ಅಮೆರಿಕದ ಸರಕುಗಳಿಗೆ ವಿವಿಧ ದೇಶಗಳು ಹೆಚ್ಚು ಸುಂಕ ವಿಧಿಸುತ್ತಿದ್ದುದನ್ನು ಆರಂಭದಿಂದಲೂ ವಿರೋಧಿಸುತ್ತಾ ಬಂದಿದ್ದ ಇವರು, ರಕ್ಷಣಾತ್ಮಕವಾದ ವ್ಯಾಪಾರ ನೀತಿಗಳ ಪರವಾದ ನಿಲುವನ್ನು ಹೊಂದಿದ್ದವರು. ಅಮೆರಿಕದ ಹೊಸ ವ್ಯಾಪಾರ ಮತ್ತು ಸುಂಕ ನೀತಿಯ ಹಿಂದೆ ಇವರ ಪಾತ್ರ ಬಹಳಷ್ಟಿದೆ. ಟ್ರಂಪ್ ಆಡಳಿತದ ನೀತಿ ವಿಶೇಷವಾಗಿ ಸುಂಕ ನೀತಿಯನ್ನು ವಿರೋಧಿಸುತ್ತಿರುವ ಇತರ ಆರ್ಥಿಕ ತಜ್ಞರ ಜೊತೆ ವಾಗ್ವಾದಕ್ಕೂ ಇಳಿದಿದ್ದಾರೆ.



ರಾಬರ್ಟ್ ಎಫ್ ಕೆನೆಡಿ ಜ್ಯೂನಿಯರ್ (71)

ಆರೋಗ್ಯ ಮತ್ತು ಮಾನವ ಸೇವೆ ಇಲಾಖೆ ಕಾರ್ಯದರ್ಶಿ

ಪರಿಸರ ಸಂರಕ್ಷಣೆ ಪರವಾಗಿ ಮಾತನಾಡುವ ರಾಬರ್ಟ್, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ವಿವಾದಿತ ವ್ಯಕ್ತಿ. ಆರೋಗ್ಯ ಇಲಾಖೆಯನ್ನು ಸಂಪೂರ್ಣವಾಗಿ ಪುನರ್‌ರಚಿಸುವ ಕಾರ್ಯ ಆರಂಭಿಸಿರುವ ಅವರು ನೂರಾರು ಆರೋಗ್ಯ ಕಾರ್ಯಕ್ರಮಗಳು ಮತ್ತು ಉದ್ಯೋಗಗಳನ್ನು ಕಡಿತ ಮಾಡಿದ್ದಾರೆ. ಲಸಿಕೆ ನೀತಿ ಮತ್ತು ಆಟಿಸಂ ಸಂಶೋಧನೆ ವಿಚಾರದಲ್ಲಿ ವಿವಾದಾತ್ಮಕ ನಿರ್ಧಾರಗಳನ್ನು ಕೈಗೊಂಡು ಆರೋಗ್ಯ ಕ್ಷೇತ್ರದ ತಜ್ಞರು, ಮಾಧ್ಯಮದವರು ಮತ್ತು ಅವರ ಕುಟುಂಬದವರಿಂದಲೇ ಟೀಕೆಗೆ ಗುರಿಯಾಗಿದ್ದಾರೆ. ಹಾಗಿದ್ದರೂ, ಟ್ರಂಪ್ ಅವರ ಬೆಂಬಲದಿಂದ ಇನ್ನೂ ಹುದ್ದೆಯಲ್ಲಿ ಮುಂದುವರಿದಿದ್ದಾರೆ.



ಸ್ಕಾಟ್ ಬೆಸ್ಸೆಂಟ್ (63)

ಖಜಾನೆ ಇಲಾಖೆ ಕಾರ್ಯದರ್ಶಿ

ಕೋಟ್ಯಧಿಪತಿ, ನಿಧಿ ನಿರ್ವಾಹಕರಾಗಿರುವ ಬೆಸ್ಸೆಂಟ್, ತೆರಿಗೆ ಕಡಿತ ಸೌಲಭ್ಯ ಮುಂದುವರಿಕೆ, ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವುದು ಮತ್ತು ಫೆಡರಲ್ ರಿಸರ್ವ್‌ನ ಪಾತ್ರವನ್ನು ಪರಾಮರ್ಶೆಗೆ ಒಳಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಸುಂಕ ಸಮರದ ಸಂದರ್ಭದಲ್ಲಿ ಅಮೆರಿಕ–ಭಾರತದ ಸಂಬಂಧದ ಬಗ್ಗೆ ಮಾತನಾಡಿದ್ದ ಅವರು, 'ಎರಡೂ ಶ್ರೇಷ್ಠ ದೇಶಗಳಾಗಿದ್ದು, ವ್ಯಾಪಾರ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳಲಿವೆ' ಎಂದು ಹೇಳಿದ್ದರು. ಅದರ ಜೊತೆಗೆ, ಭಾರತವು ರಷ್ಯಾ ಮತ್ತು ಚೀನಾದೊಂದಿಗೆ ವ್ಯಾಪಾರ ಸಂಬಂಧ ಹೊಂದಿರುವ ಬಗ್ಗೆ ಎಚ್ಚರಿಸಿದ್ದ ಅವರು, ಇದು ಜಾಗತಿಕ ಸ್ಥಿರತೆಯನ್ನು ಹಾಳುಮಾಡುತ್ತದೆ ಎಂದಿದ್ದರು.



ಹೊವಾರ್ಡ್ ಲುಟ್‌ನಿಕ್(64)

ಹಣಕಾಸು ಕಾರ್ಯದರ್ಶಿ

ಶತಕೋಟ್ಯಧಿಪತಿ ಆಗಿರುವ ಉದ್ಯಮಿ ಹೊವಾರ್ಡ್, ಟ್ರಂಪ್ ಆಡಳಿತದ ವ್ಯಾಪಾರ ಮತ್ತು ಹಣಕಾಸು ನೀತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಭಾರತ ನಿರ್ವಹಿಸುತ್ತಿರುವ ಪ್ರಮುಖ ಪಾತ್ರದ ಬಗ್ಗೆ ಮುಕ್ತವಾಗಿ ಮಾತನಾಡಿದ್ದರು. 'ಬ್ರಿಕ್ಸ್' ಸಂಘಟನೆಯಲ್ಲಿ ಭಾರತ ಭಿನ್ನ ರಾಷ್ಟ್ರ ಎಂದು ಹೇಳಿದ್ದ ಅವರು, ಭಾರತವು ಅಮೆರಿಕ, ರಷ್ಯಾ ಮತ್ತು ಚೀನಾಗಳ ಪೈಕಿ ಪಶ್ಚಿಮದ ರಾಷ್ಟ್ರದ ಪರವಾದ ಸ್ಪಷ್ಟ ನಿಲುವನ್ನು ಹೊಂದಬೇಕು ಎಂದು ಅಭಿಪ್ರಾಯಪಟ್ಟಿದ್ದರು. ಚೀನಾದ ಪ್ರಾಬಲ್ಯವನ್ನು ಹತ್ತಿಕ್ಕಲು ಅಮೆರಿಕ–ಭಾರತ ನಡುವೆ ಪ್ರಬಲ ವ್ಯಾಪಾರ ಒಪ್ಪಂದ ಇರಬೇಕು ಎಂಬುದು ಅವರ ಅಭಿಪ್ರಾಯ.

ರಾಷ್ಟ್ರೀಯ

ಹಿಮಾಲಯದಲ್ಲಿ 'ಪಲ್ಲಾಸ್ ಕ್ಯಾಟ್'


ಪಲ್ಲಾಸ್ ಕ್ಯಾಟ್

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶದ ಹಿಮಾಚ್ಛಾದಿತ ಪ್ರದೇಶದಲ್ಲಿ ಅಳವಡಿಸಲಾಗಿದ್ದ ಕ್ಯಾಮೆರಾದಲ್ಲಿ 'ಪಲ್ಲಾಸ್ ಕ್ಯಾಟ್' ಎಂಬ ವಿರಳ ಜಾತಿಯ ಕಾಡುಬೆಕ್ಕಿನ ಚಿತ್ರಗಳು ಇದೇ ಮೊದಲ ಬಾರಿ ಸೆರೆಯಾಗಿವೆ.

ಇದರೊಂದಿಗೆ ಹಿಮಾಲಯದಲ್ಲಿ 4,200 ಮೀಟರ್‌ಗಿಂತ ಹೆಚ್ಚಿನ ಎತ್ತರದಲ್ಲಿ 6 ವಿವಿಧ ಜಾತಿಯ ಕಾಡಿನ ಬೆಕ್ಕುಗಳ ಇರುವಿಕೆಯು ಪತ್ತೆಯಾದಂತಾಗಿದೆ ಎಂದು ವಿಶ್ವ ವನ್ಯಜೀವಿ ಸಂಸ್ಥೆಯ ಭಾರತ ಘಟಕವು ಸೋಮವಾರ ತಿಳಿಸಿದೆ.

ಈವರೆಗೆ 5 ವಿಧದ ಕಾಡು ಬೆಕ್ಕಿನ ಚಿತ್ರಗಳನ್ನು ಸೆರೆಹಿಡಿಯಲಾಗಿದೆ. ಅವುಗಳೆಂದರೆ: ಸ್ನೋ ಲೆಪರ್ಡ್, ಕ್ಲೌಡೆಡ್ ಲೆಪರ್ಡ್, ಲೆಪರ್ಡ್ ಕ್ಯಾಟ್, ಕಾಮನ್ ಲೆಪರ್ಡ್ ಮತ್ತು ಮಾರ್ಬಲ್ಡ್ ಕ್ಯಾಟ್‌ಗಳು.

ಭಾರತದ ವಿಶ್ವ ವನ್ಯಜೀವಿ ಸಂಸ್ಥೆಯು ಹಿಮಾಲಯದಲ್ಲಿನ ವನ್ಯಜೀವಿ ಪರಿಸರದ ಕುರಿತು ತವಾಂಗ್ ಹಾಗೂ ಪಶ್ಚಿಮ ಕಮೆಂಗ್ ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸುತ್ತಿದೆ.

ಸಮುದ್ರ ಮಟ್ಟದಿಂದ 4,000 ಮೀಟರ್‌ಗಿಂತ ಹೆಚ್ಚಿನ ಎತ್ತರದಲ್ಲಿ ವನ್ಯಜೀವಿಗಳ ಇರುವಿಕೆಯು ದೇಶದ ಮಹತ್ವದ ದಾಖಲೆಯಾಗಿದ್ದು, ನೂತನ ಅಧ್ಯಯನಕ್ಕೆ ದಾರಿಯಾಗಿದೆ.

ರಾಜ್ಯ ಅರಣ್ಯ ಇಲಾಖೆಯ ಬೆಂಬಲ ಹಾಗೂ ಸ್ಥಳೀಯರ ಬೆಂಬಲದೊಂದಿಗೆ ಸಂಸ್ಥೆಯು 'ರಿವೈವಿಂಗ್ ಟ್ರಾನ್ಸ್–ಹಿಮಾಲಯನ್ ರೇಂಜ್‌ಲ್ಯಾಂಡ್ಸ್–ಎ ಕಮ್ಯುನಿಟಿ– ಲೆಡ್ ವಿಶನ್ ಫಾರ್ ಪೀಪಲ್ ಆ್ಯಂಡ್ ನೇಚರ್' ಯೋಜನೆಯಡಿ ಸಮೀಕ್ಷೆ ನಡೆಸುತ್ತಿವೆ.

2024ರ ಸೆಪ್ಟೆಂಬರ್‌ನಲ್ಲಿ ಹಿಮಾಲಯದ 2,000 ಚದರ ಅಡಿ ಕಿ.ಮೀ ಎತ್ತರದಲ್ಲಿ 83 ಕಡೆ 136 ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು.

ಸೇನಾಧಿಕಾರಿಗಳೊಂದಿಗೆ ಶೀಘ್ರದಲ್ಲೇ ಮೋದಿ ಸಂವಾದ



ನವದೆಹಲಿ (ಪಿಟಿಐ): ಭೂಸೇನೆ, ನೌಕಾಪಡೆ, ವಾಯುಪಡೆಯ ಉನ್ನತ ಅಧಿಕಾರಿಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶೀಘ್ರದಲ್ಲೇ ಸಂವಾದ ನಡೆಸಲಿದ್ದಾರೆ.

ಕೋಲ್ಕತ್ತದಲ್ಲಿ ಮೂರು ಪಡೆಗಳ ಉನ್ನತ ಕಮಾಂಡರ್‌ಗಳ ಸಮಾವೇಶವು (ಸೆ. 15ರಿಂದ 17) ಮುಂದಿನ ವಾರ ನಡೆಯಲಿದೆ. ಇದನ್ನು ಉದ್ಘಾಟಿಸುವ ಪ್ರಧಾನಿಯು ನಂತರ ಸೇನೆಯ ಅಧಿಕಾರಿಗಳೊಂದಿಗೆ ಸಂವಾದಿಸಲಿದ್ದಾರೆ.

ಈ ಸಂವಾದವು ಆಪರೇಷನ್ ಸಿಂಧೂರ ಕುರಿತ ವಿವಿಧ ದೃಷ್ಟಿಕೋನ ಮತ್ತು ದೇಶದ ಮಿಲಿಟರಿಯ ಪರಾಕ್ರಮವನ್ನು ಮತ್ತಷ್ಟು ಹೆಚ್ಚಿಸುವ ಮಾರ್ಗಗಳನ್ನು ಉತ್ತೇಜಿಸುವ ನಿರೀಕ್ಷೆಯಿದೆ ಎಂದು ರಕ್ಷಣಾ ಸಚಿವಾಲಯವು ತಿಳಿಸಿದೆ.

'ಸ್ವದೇಶಿ ಮೇಳ' ನಡೆಸಲು ಸೂಚನೆ

ನವದೆಹಲಿ (ಪಿಟಿಐ): ದೇಶೀಯ ಉತ್ಪನ್ನಗಳನ್ನು ಉತ್ತೇಜಿಸುವುದು ಮತ್ತು ಅದನ್ನು ಚಳವಳಿಯನ್ನಾಗಿ ಮಾಡಲು 'ಸ್ವದೇಶಿ ಮೇಳ'ವನ್ನು ಆಯೋಜಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಎನ್‌ಡಿಎ ಸಂಸದರಿಗೆ ಸೋಮವಾರ ಸಲಹೆ ನೀಡಿದರು.

ಸಂಸದರನ್ನು ಉದ್ದೇಶಿಸಿ ಮಾತನಾಡಿದ ಮೋದಿ, 'ನವರಾತ್ರಿ ಮತ್ತು ದೀಪಾವಳಿ ಹಬ್ಬಗಳ ಸಂದರ್ಭದಲ್ಲಿ ಸಂಸದರು ತಮ್ಮ ಕ್ಷೇತ್ರಗಳಲ್ಲಿನ ಜನರು ಮತ್ತು ವ್ಯಾಪಾರಿಗಳೊಂದಿಗೆ ಸಭೆಗಳನ್ನು ನಡೆಸಿ, ಭಾರತದಲ್ಲಿ ತಯಾರಿಸಿದ ಉತ್ಪನ್ನಗಳನ್ನು ಉತ್ತೇಜಿಸುವ ಕೆಲಸ ಮಾಡಬೇಕು. ಜಿಎಸ್‌ಟಿ ಸುಧಾರಣೆಗಳ ಕುರಿತು ಜನರಿಗೆ ಮಾಹಿತಿ ನೀಡಬೇಕು. ಸ್ವಾವಲಂಬನೆಯು ಭಾರತದ ಅಭಿವೃದ್ಧಿಗೆ ಶಕ್ತಿಯ ಮಾರ್ಗವಾಗಿದೆ' ಎಂದು ಹೇಳಿದರು ಎಂದು ಮೂಲಗಳು ತಿಳಿಸಿವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ವಿಡಿಯೊ ಸಾಮಾಜಿಕ ಜಾಲತಾಣ-ಗಳಲ್ಲಿ ಹರಿದಾಡುತ್ತಿದೆ. 'ರಾಹುಲ್ ಗಾಂಧಿ ಅವರು ದೇಶವನ್ನು ಹಾಳು ಮಾಡುತ್ತಿದ್ದಾರೆ' ಎಂದು ಖರ್ಗೆ ಅವರು ನಿಂದಿಸಿರುವುದಾಗಿ ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವ-ವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊದ ಕೀಫ್ರೇಮ್‌ಗಳನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಮೂಲ ವಿಡಿಯೊ ಕಾಂಗ್ರೆಸ್ ಪಕ್ಷದ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ 2024ರ ಮಾರ್ಚ್ 3ರಂದು ಅಪ್‌ಲೋಡ್ ಆಗಿರುವುದು ಕಂಡಿತು. 'ಇಂಡಿಯಾ' ಮೈತ್ರಿಕೂಟವು ಪಟ್ನಾದಲ್ಲಿ ಹಮ್ಮಿಕೊಂಡಿದ್ದ 'ಜನ ವಿಶ್ವಾಸ ರ‍್ಯಾಲಿ'ಗೆ ಸಂಬಂಧಿಸಿದ ವಿಡಿಯೊ ಇದಾಗಿದೆ. ವಿಡಿಯೊದ 29ನೇ ಸೆಕೆಂಡ್‌ನಿಂದ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಮಾತನಾಡಿದ್ದಾರೆ. 'ದೇಶಕ್ಕೆ ಹಾನಿ ಮಾಡುತ್ತಿರುವುದು ಮೋದಿ ಅವರೇ ಹೊರತು ರಾಹುಲ್ ಗಾಂಧಿ ಅಲ್ಲ' ಎಂದು ಖರ್ಗೆ ಅವರು ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ. ವಿಡಿಯೊದಲ್ಲಿ ಖರ್ಗೆ ಅವರು ಎಲ್ಲಿಯೂ ರಾಹುಲ್ ಗಾಂಧಿ ಅವರ ಪ್ರಸ್ತಾಪ ಮಾಡಿಲ್ಲ. ಜತೆಗೆ, ಗೂಗಲ್‌ನಲ್ಲಿ ನಿರ್ದಿಷ್ಟ ಪದದ ಮೂಲಕ ಹುಡುಕಾಟ ನಡೆಸಿದಾಗ, ಖರ್ಗೆ ಅವರು ರಾಹುಲ್ ಗಾಂಧಿ ಬಗ್ಗೆ ಆ ರೀತಿ ಹೇಳಿದ್ದಾರೆ ಎನ್ನುವ ಬಗ್ಗೆ ಯಾವ ವರದಿಯೂ ಕಾಣಲಿಲ್ಲ. ಖರ್ಗೆ ಅವರು ಮೋದಿ ಅವರ ಬಗ್ಗೆ ಹೇಳಿರುವುದನ್ನೇ ಕೆಲವರು ತಿರುಚಿ, ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಕುಲವೆಂಬ ಕತ್ತಲಕೂಪ



ನುಡಿ ಬೆಳಗು

ದೀಪಾ ಹಿರೇಗುತ್ತಿ

ಪಂಪ ಕನ್ನಡದ ಶ್ರೇಷ್ಠ ಕವಿ. ಸಾವಿರ ವರ್ಷಗಳ ಹಿಂದೆ ಬರೆದ ಆತನ ಕೃತಿಗಳು ಇಂದಿಗೂ ಪ್ರಸ್ತುತ ಎನಿಸುತ್ತವೆ. ಮಹಾನ್ ಲೇಖಕರು ಯಾವಾಗಲೂ ತಮ್ಮ ಕೃತಿಗಳಲ್ಲಿನ ಸಮಕಾಲೀನತೆಯಿಂದ ಪ್ರತೀ ಪೀಳಿಗೆಗೂ ಆಪ್ತರಾಗುತ್ತಾರೆ. ಪಂಪ ಬರೆದ ಪ್ರಮುಖ ಕೃತಿ ವಿಕ್ರಮಾರ್ಜುನ ವಿಜಯ. ಅದನ್ನು ಪಂಪಭಾರತ ಎಂದೂ ಕರೆಯುತ್ತಾರೆ. ಅದರಲ್ಲಿ ಮಹಾಭಾರತ ಯುದ್ಧದ ಪ್ರಸಂಗ ಬರುತ್ತದೆ. ಕೌರವರ ಕಡೆ ಭೀಷ್ಮ, ದ್ರೋಣ, ಕರ್ಣ ಮುಂತಾದ ವೀರಾಧಿವೀರರಿದ್ದಾರೆ. ದುರ್ಯೋಧನ ಹಿರಿಯರಾದ ಭೀಷ್ಮರಿಗೆ ಸೇನಾಧಿಪತಿಯ ಪಟ್ಟವನ್ನು ಕಟ್ಟುತ್ತಾನೆ. ಜಾತಿಯ ಕಾರಣದಿಂದ ಪಾಂಡವರಿಂದ ಅವಮಾನ ಅನುಭವಿಸಿದ್ದ ಕರ್ಣ, ಯುದ್ಧದಲ್ಲಿ ಸೇನೆಯ ನೇತೃತ್ವ ವಹಿಸಿ ಅವರನ್ನು ಮಣ್ಣುಮುಕ್ಕಿಸಿ ಕೌರವನ ಋಣವನ್ನು ತೀರಿಸಬೇಕೆಂದಿರುತ್ತಾನೆ. ವೀರಾಧಿವೀರನಾಗಿದ್ದರೂ ತನ್ನ ಕುಲದ ಕಾರಣದಿಂದ ಪ್ರತೀ ಸಂದರ್ಭದಲ್ಲೂ ತಲೆತಗ್ಗಿಸಬೇಕಾಗಿದ್ದಕ್ಕೆ ಸೇಡು ತೀರಿಸಿಕೊಳ್ಳಲು ಕಾತರನಾಗಿರುತ್ತಾನೆ. ಈಗ ವಯೋವೃದ್ಧರಾದ ಭೀಷ್ಮರಿಗೆ ಗೆಳೆಯ ಪಟ್ಟ ಕಟ್ಟಿದಾಗ ಕರ್ಣನಿಗೆ ಭಾರೀ ಕೋಪವೇ ಬರುತ್ತದೆ.


ಆಗ ಆತ ತಡೆಯಲಾಗದೇ ಈ ಹಣ್ಣುಹಣ್ಣು ಮುದುಕರಿಗೆ ಸೇನಾಧಿಪತ್ಯ ಕೊಟ್ಟುಬಿಟ್ಟೆಯಲ್ಲಾ ಎಂದು ಕೌರವನನ್ನು ಕೇಳುತ್ತಾನೆ. ಕರ್ಣನು ಭೀಷ್ಮನನ್ನು ಮೂದಲಿಸಿದ್ದನ್ನು ಕೇಳಿ ದ್ರೋಣನಿಗೆ ಸಿಟ್ಟು ಬರುತ್ತದೆ. ಆಗ ಅವರು ಕರ್ಣನನ್ನು ಉದ್ದೇಶಿಸಿ 'ನಿನ್ನ ನಾಲಗೆ ಕುಲವನ್ನು ಹೇಳುತ್ತಿದೆ' ಅಂದುಬಿಡುತ್ತಾರೆ. ಈಗ ಕರ್ಣನ ಬಾಯಲ್ಲಿ ಪಂಪ ಹೇಳಿಸಿರುವ ಮಾತುಗಳು ಅದ್ಭುತವಾದವು. 'ಕುಲ ಕುಲ ಎಂದು ಮಾತಿಗೆ ಮುಂಚೆ ಏಕೆ ಹೇಳುತ್ತೀರಾ, ನಿಮ್ಮ ಕುಲವೇನಾದರೂ ಶತ್ರುವನ್ನು ಹಿಂಬಾಲಿಸಿ ಹೋಗಿ ಸಾಯಿಸುತ್ತದೆಯೇ? ಕುಲ ಅನ್ನುವುದು ಹುಟ್ಟಿನಿಂದ ಬರುವುದಲ್ಲ. ಛಲ ಅನ್ನುವುದು ಕುಲ, ಅಭಿಮಾನ ಅಂದರೆ ಕುಲ, ಶೌರ್ಯವೆಂದರೆ ಕುಲ' ಎನ್ನುತ್ತಾನೆ ಕರ್ಣ.

ಒಬ್ಬ ವ್ಯಕ್ತಿಯನ್ನು ಜಾತಿಯಿಂದ ಗುರುತಿಸದೇ ಯೋಗ್ಯತೆಯಿಂದ ಗುರುತಿಸಬೇಕೆಂಬ ಪಂಪನ ಮಾತುಗಳು ಅದೆಷ್ಟು ಸೂಕ್ತವಾದವು. ಆದರೆ ನಾವು? ಅಂತಹ ಪ್ರತಿಭಾವಂತ, ದೇಶಕ್ಕೆ ಕೀರ್ತಿ ತಂದ ಅಂಬೇಡ್ಕರ್ ಅವರನ್ನೇ ಜಾತಿಯ ಹೆಸರಿನಲ್ಲಿ ಅವಮಾನಿಸಿದ ಸಮಾಜ ನಮ್ಮದು. ಇಂದಿಗೂ ಈ ಜಾತಿಯ ಕಬಂಧಬಾಹುಗಳು ನಮ್ಮನ್ನು ಆವರಿಸಿವೆ.

ಸಮಸಮಾಜ ನಿರ್ಮಾಣವಾಗಬೇಕು, ಜಾತಿ ಧರ್ಮದ ಹೆಸರಿನಲ್ಲಿ ಕಂದಕಗಳು ಸೃಷ್ಟಿಯಾಗಬಾರದೆಂದು ಮಹಾನ್ ವ್ಯಕ್ತಿಗಳೆಲ್ಲ ಕನಸು ಕಂಡರು, ಅದಕ್ಕಾಗಿ ಶ್ರಮಿಸಿದರು. ನಾವು ಮಾತ್ರ ಈ ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಜಾತಿಯ ಕೂಪದೊಳಗೆ ಬಿದ್ದು ಒದ್ದಾಡುತ್ತಿದ್ದೇವೆ. ಚಂದ್ರನ ಮೇಲೆ ಹೆಜ್ಜೆ ಇಟ್ಟರೂ ಮಂಗಳಯಾನವನ್ನು ಯಶಸ್ವಿಯಾಗಿಸಿದರೂ ಜಾತೀಯತೆಯನ್ನು ಮಾತ್ರ ಬಿಡಲಾರೆವು. ಇತರ ಜಾತಿಗಳೆಡೆಗಿನ ಅಸಹನೆಯನ್ನು ತೊರೆಯಲಾರೆವು. ಮನುಷ್ಯ ಜಾತಿ ತಾನೊಂದೆ ವಲಂ ಎಂದಿದ್ದ ಪಂಪನ ಮಾತುಗಳು ನಮ್ಮೆದೆಯ ಆಳಕ್ಕಿಳಿಯುವುದು ಯಾವಾಗ? ❖

ಪದಬಂಧ 6159

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

3.ಈತ ಮಾತು ಬಾರದವನು (2)
6.ನಡುವೆ ಗರ ಬಡಿದಾಗಲೇ ಈ ತೊಂದರೆ! (4)
7.ಒಳ್ಳೆಯ ಚರಿತ್ರೆಯುಳ್ಳವನು ಅಥವಾ ಸಂಪನ್ನ (4)
8. ನಂಬಿಸಿ ದ್ರೋಹ ಮಾಡುವವನು (6)
10.ಕಾಫಿನಾಡು ಎಂದು ಹೆಸರಾಗಿರುವ ಜಿಲ್ಲೆ (6)
12.ಓಟನ್ನು ನೀಡುವಿಕೆ (4)
14.ಭೂಷಣವಾಗಿರುವ ಅಲಂಕಾರ! (4)
16.ಗುಗ್ಗುಲ ಖರೀದಿಸುತ್ತಿರುವವನು ದಡ್ಡ! (2)

ಮೇಲಿಂದ ಕೆಳಕ್ಕೆ

1.ಉದಾಹರಣೆ ನೀಡುವಾಗ ಆದ ಬಾಯಾರಿಕೆ (2)
2.ಅನುಗ್ರಹವುಳ್ಳ ಶ್ರೇಷ್ಠನಾದ ಕವಿ (4)
4.ಕನಸಲ್ಲಿ ಹಾಕಿದ ಕೊಳೆ (2)
5.ಚಂದ್ರನನ್ನು ಹೀಗೂ ಕರೆಯುತ್ತಾರೆ (4)
9.ಆನೆಗಳ ಗುಂಪಿನ ನಾಯಕ (3)
10.ಇದು ಶಾಶ್ವತವಾದುದು (4)
11.ಸ್ಮಶಾನವನ್ನು ಹೀಗೂ ಹೇಳುವರು (4)
13.ಅಳು ಪದದ ವಿರುದ್ಧ ಪದ (2)
15.ಉಲ್ಟಾ ಕಾಣುತ್ತಿರುವ ಶರ (2)

6158ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ವಿರಹ 3.ಪಾಶವೀವೃತ್ತಿ
6.ರಸನ 8.ದಶಮಾಂಶ
10.ಸದಾಚಾರ 15.ಮೂಷಿಕ
17.ಸಮೀಕರಣ 18.ತಿಕ್ಕಲು

ಮೇಲಿಂದ ಕೆಳಕ್ಕೆ:

1.ವಿಧುರ 2.ಹವನ
4.ಶಬ್ದಕೋಶ 5.ತ್ರಿತ್ವಲು
7.ಸಮಂಜಸ 8.ದಡಾರ
9.ಶತಾಯುಷಿ 11.ಚಾಡಿಕೋರ
14.ಆವಾಸ 15.ಮೂಗುತಿ
16.ಕಡಲು

ಸುಡೊಕು 6543

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	5			9		7		
	1		4		7		5	2
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1				

6542 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

09 ಸೆಪ್ಟೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ದ್ವಿತೀಯ ಗಂ. 18-30 **ನಕ್ಷತ್ರ:** ಉತ್ತರಾಭಾದ್ರ ಗಂ. 18-07 ಯೋಗ: ಗಂಡ ಗಂ. 23-59 **ಕರಣ:** ತೈತಿಲ ಗಂ. 7-53 ಸಿಂಹ ಮಾಸದ 23 ನೇ ದಿನ. **ಮಳೆ ನಕ್ಷತ್ರ:** ಹುಬ್ಬಾ 3 ನೇ ಪಾದ. **ರಾಹುಕಾಲ:** ಮಧ್ಯಾಹ್ನ 03-00 04-30, **ಸೂರ್ಯೋದಯ:** 06-23 **ಸೂರ್ಯಾಸ್ತ:** 06-33, **ಮುಸ್ಲಿಂ ದಿನಾಂಕ:** 16 ರಬಿಉಲ್ಲಾವಲ್, **ಅದೃಷ್ಟ ಸಂಖ್ಯೆ:** 3, 9

ಮೇಷ: ಸಾಧನೆಯಲ್ಲಿ ಮೇಲುಗೈ ಸಾಧಿಸುವಿರಿ. ವ್ಯವಹಾರದಲ್ಲಿನ ಲಾಭವು ಅಭಿವೃದ್ಧಿಗೆ ಸಹಕಾರಿ. ಆತಂಕ ಎದುರಾದಾಗ ಹಿರಿಯರ ಸಲಹೆ ಸಮಾಧಾನ ತರಲಿದೆ.

ವೃಷಭ: ಪ್ರಾಮಾಣಿಕವಾಗಿ ಹಾಗೂ ನಿಷ್ಠೆಯಿಂದ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಂಡಲ್ಲಿ ನಿಧಾನವಾಗಿ ಯಶಸ್ಸು ಪ್ರಾಪ್ತಿ. ಕೌಟುಂಬಿಕವಾಗಿ ಕೆಟ್ಟು ಹೋದ ಸಂಬಂಧಗಳು ಮರಳಿ ಬರಲಿವೆ. ಬರಹಗಾರರಿಗೆ ಶುಭ ದಿನ.

ಮಿಥುನ: ಸಮೀಪವರ್ತಿಗಳ ಸಹಕಾರದಿಂದ ವ್ಯಾಪಾರ ವಹಿವಾಟುಗಳಲ್ಲಿನ ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ಕುಟುಂಬ ವರ್ಗದವರಲ್ಲಿ ಆರೋಗ್ಯ ಉತ್ತಮವಾಗಿರುವುದು. ಓದಿನಲ್ಲಿ ಅತೀವ ಆಸಕ್ತಿ ಇರುವುದು.

ಕರ್ಕಾಟಕ: ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯ ಮಾಡುವಿರಿ. ನಟ ನಟಿಯರಿಗೆ ಖ್ಯಾತಿ ಹೊಂದಲು ವಿಪುಲ ಅವಕಾಶಗಳು ದೊರೆಯಲಿವೆ. ಭಿನ್ನಾಭಿಪ್ರಾಯ ದೂರವಾಗಿ ಸಂಬಂಧ ಸುಧಾರಿಸಲಿದೆ.

ಸಿಂಹ: ಕಳೆದು ಹೋಗಿರಬಹುದೆಂದು ತಿಳಿದಿದ್ದ ದಾಖಲೆಪತ್ರಗಳು ಸಿಕ್ಕಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಕಬ್ಬಿಣ, ಸಿಮೆಂಟ್ ವ್ಯಾಪಾರದವರು ನಷ್ಟ ಫಲವನ್ನು ಅನುಭವಿಸಬೇಕಾಗುತ್ತದೆ.

ಕನ್ಯಾ: ಹೊಸ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ಜಾಣತನ ತೋರಿಸಬೇಕಾಗುತ್ತದೆ. ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಹಾಗೂ ಹೊಸ ಸಾಧ್ಯತೆಗಳನ್ನು ಸಾಧಿಸಲು ಸಮಯ ಒದಗಿದೆ.

ತುಲಾ: ಮಕ್ಕಳ ವಿದ್ಯಾಭ್ಯಾಸದತ್ತ ಹೆಚ್ಚಿನ ಗಮನ ಹರಿಸಿ. ಚಿಲ್ಲರೆ ವ್ಯಾಪಾರಿಗಳಿಗೆ ತೃಪ್ತಿಕರ ಲಾಭ. ಸಂದರ್ಭಕ್ಕೆ ಸರಿಯಾಗಿ ಹೊಂದಿಕೊಳ್ಳುವ ಗುಣ ಹಾಗೂ ಸಾಮರ್ಥ್ಯ ಮುಖ್ಯವೆನಿಸುವುದು.

ವೃಶ್ಚಿಕ: ಔಷಧಿ ವ್ಯಾಪಾರಿಗಳಿಗೆ ವ್ಯಾಪಾರದಿಂದ ಆದಾಯ ಹೆಚ್ಚುವುದು. ಯೋಚನೆಗಳನ್ನು ಜನರು ಇಷ್ಟ ಪಡುತ್ತಾರೆ. ಆರ್ಥಿಕ ತಾಪತ್ರಯಗಳೇನು ಇರುವುದಿಲ್ಲ. ಪ್ರತಿಭೆಗೆ ತಕ್ಕ ಪುರಸ್ಕಾರ ದೊರೆಯಲಿದೆ.

ಧನು: ಕೋರ್ಟು ವ್ಯವಹಾರಗಳಿಗೆ ಓಡಾಟ ತಪ್ಪಲಿದೆ. ಮುಖ್ಯವಾದ ಕೆಲಸವೊಂದು ದಿನಾಂತ್ಯದ ವೇಳೆಗೆ ನೆರವೇರುವುದು. ಆರೋಗ್ಯದಲ್ಲಿ ಬದಲಾವಣೆಗಳಿರುವುದು. ಗೃಹೋಪಯೋಗಿ ವಸ್ತುಗಳನ್ನು ಖರೀದಿಸಲಿದ್ದೀರಿ.

ಮಕರ: ವೃತ್ತಿರಂಗದಲ್ಲಿ ಅದೃಷ್ಟ ನಿಮ್ಮ ಪಾಲಿಗಿರುವುದು. ಆಫೀಸಿನಲ್ಲಿ ಪರಿಸ್ಥಿತಿಯನ್ನು ನಿಭಾಯಿಸುವ ಸಾಮರ್ಥ್ಯವನ್ನು ಪ್ರದರ್ಶಿಸುವಿರಿ. ಧಾರ್ಮಿಕ ವಿಚಾರಗಳತ್ತ ಮನಸ್ಸು ಹರಿಯುವುದು. ಸಿದ್ಧಿ ವಿನಾಯಕನನ್ನು ಆರಾಧಿಸಿ.


ಕುಂಭ: ವ್ಯವಸ್ಥಾಪಕರ ಜತೆ ನಿಮ್ಮ ಧೈರ್ಯದ ಮಾತುಗಳು ಜವಾಬ್ದಾರಿಯನ್ನು ಉತ್ತಮ ಗುಣಮಟ್ಟದ್ದಾಗಿಸುತ್ತದೆ. ಉತ್ತಮ ವಿಚಾರಗಳು ಜಾರಿಗೆ ಬರಬೇಕೆಂದು ಮಾಡುತ್ತಿರುವ ಪ್ರಯತ್ನವು ಶೀಘ್ರ ಶುಭಫಲ ನೀಡುವುದು.

ಮೀನ: ಖಾಸಗಿ ಕಂಪನಿಯಲ್ಲಿರುವವರು ಉದ್ಯೋಗದಲ್ಲಿ ತಮ್ಮ ಮೇಲಧಿಕಾರಿಗಳಿಂದ ಅನುಕೂಲ ಪಡೆಯುವರು. ಗಣಕಯಂತ್ರದ ರೀತಿಯ ಉಪಕರಣಗಳ ತಯಾರಕರು ಹಾಗೂ ದುರಸ್ತಿ ಮಾಡುವವರಿಗೆ ಉತ್ತಮ ದಿನ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,741
ಇಂದಿನ ಅಂತ್ಯ:	24,773
ದಿನದ ಗರಿಷ್ಠ:	24,885
▲	32

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹565

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹439-655
ದ್ವಿತಳಿ (ಬಿ.ವಿ)	₹512-797

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹189
ಆರ್‌ಎಸ್‌ಎಸ್-5	₹184
ಗುಡ್ ಲಾಟ್	₹169

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1370 (–)
ಸೋಯಾ (ರಿಫೈನ್ಡ್)	₹1275 (–)
ಸೂರ್ಯಕಾಂತಿ (ರಿಫೈನ್ಡ್)	₹1420 (–)
ಪಾಮೋಲಿನ್	₹1275 (–)

‘ಲಿಪುಲೇಖ್ ವ್ಯಾಪಾರ ಒಪ್ಪಂದ ರದ್ದುಪಡಿಸಿ’

ಕಠ್ಮಂಡು (ಪಿಟಿಐ): ಲಿಪುಲೇಖ್ ಪಾಸ್ ಗಡಿಭಾಗದ ಮೂಲಕ ವ್ಯಾಪಾರವನ್ನು ಪುನರಾರಂಭಿಸಲು ಭಾರತ ಹಾಗೂ ಚೀನಾ ಇತ್ತೀಚೆಗೆ ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಪಡಿಸಬೇಕು ಎಂದು ನೇಪಾಳದ ಆಡಳಿತಾರೂಢ ಪಕ್ಷವಾದ ಸಿಪಿಎನ್‌-ಯುಎಂಎಲ್ ಒತ್ತಾಯಿಸಿದೆ.

ಕೋಲಾರದಲ್ಲಿ ಇ.ವಿ ತಯಾರಿಕೆ

ಜಪಾನ್‌ಗೆ ಭೇಟಿ ನೀಡಿರುವ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಜಪಾನಿನ ಹೋಂಡಾ ಕಂಪನಿಯು ಸುಮಾರು ₹600 ಕೋಟಿ ವೆಚ್ಚದ ಎಲೆಕ್ಟ್ರಿಕ್ ದ್ವಿಚಕ್ರ ವಾಹನ ತಯಾರಿಕಾ ಘಟಕವನ್ನು ಶೀಘ್ರದಲ್ಲಿಯೇ ಆರಂಭಿಸಲಿದೆ.

ಬೃಹತ್ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ನೇತೃತ್ವದ ರಾಜ್ಯದ ಉನ್ನತ ಮಟ್ಟದ ನಿಯೋಗ ಜಪಾನ್ ಪ್ರವಾಸದಲ್ಲಿದ್ದು, ಅಲ್ಲಿ ಹೋಂಡಾ ಕಂಪನಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ನೋರಿಯಾ ಕೈಹರಾ ಅವರನ್ನು ಭೇಟಿ ಮಾಡಿ ಚರ್ಚಿಸಿತು.

ಈ ವೇಳೆ, ನೋರಿಯಾ ಅವರು ಈ ವಿಷಯ ತಿಳಿಸಿದರು. ಇದರಿಂದ ರಾಜ್ಯದಲ್ಲಿ ವಾಹನ ತಯಾರಿಕಾ ವಲಯದಲ್ಲಿ ಉದ್ಯೋಗ ಅವಕಾಶಗಳು ಹೆಚ್ಚಲಿವೆ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಭಾರತದಲ್ಲಿನ ತನ್ನ ಮೊದಲ ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ತಯಾರಿಕಾ ಘಟಕವು ನರಸಾಪುರದಲ್ಲಿ ಕಾರ್ಯಾರಂಭ ಮಾಡಲಿದೆ. ಫೆಬ್ರುವರಿಯಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಮಾಡಿಕೊಂಡಿರುವ ಈ ಒಪ್ಪಂದಕ್ಕೆ ಸದ್ಯದಲ್ಲೇ ಚಾಲನೆ ದೊರೆಯಲಿದೆ ಎಂದು ಕಂಪನಿಯು ನಿಯೋಗಕ್ಕೆ ಮಾಹಿತಿ ನೀಡಿದೆ.



ಮುಖ್ಯಾಂಶಗಳು

- ₹600 ಕೋಟಿ ಬಂಡವಾಳ ಹೂಡಿಕೆ
- ಹೋಂಡಾ ಕಂಪನಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ಜತೆ ಚರ್ಚೆ
- ಭವಿಷ್ಯದ ವಿಸ್ತರಣಾ ಯೋಜನೆಗಳಿಗೆ ಅಗತ್ಯ ನೆರವು

ಇಎಂಎಸ್ ಸೇವೆಗೆ ಮನವಿ

ಬೆಂಗಳೂರಿನಲ್ಲಿ ಎಲೆಕ್ಟ್ರಾನಿಕ್ಸ್ ತಯಾರಿಕಾ ಸೇವೆಗಳನ್ನು (ಇಎಂಎಸ್) ಆರಂಭಿಸಲು ಮುಂದಾಗಬೇಕು ಎಂದು ಜಪಾನಿನ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ವಲಯದ ಪ್ರಮುಖ ಕಂಪನಿಯಾಗಿರುವ ರೆಸ್ಟರ್ ಹೋಲ್ಡಿಂಗ್ಸ್‌ಗೆ ಸಚಿವರು ಮನವಿ ಮಾಡಿದ್ದಾರೆ.


ಎಂ.ಬಿ. ಪಾಟೀಲ

ಸಚಿವರ ನೇತೃತ್ವದ ನಿಯೋಗವು, ಸೆಮಿಕಂಡಕ್ಟರ್, ಎಲೆಕ್ಟ್ರಾನಿಕ್ಸ್ ಮತ್ತು ಅತ್ಯಾಧುನಿಕ ತಯಾರಿಕಾ ವಲಯದಲ್ಲಿ ಕರ್ನಾಟಕವನ್ನು ಜಾಗತಿಕ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಅಲ್ಲಿಯ ಬಹುರಾಷ್ಟ್ರೀಯ ಪ್ರಮುಖ ಕಂಪನಿಗಳ ಜೊತೆಗೆ ಸೋಮವಾರ ಮಾತುಕತೆ ನಡೆಸಿತು.

ಪ್ರಮುಖ ಬಹುರಾಷ್ಟ್ರೀಯ ಕಂಪನಿಗಳಿಂದ ಹೆಚ್ಚುವರಿ ಬಂಡವಾಳ ಆಕರ್ಷಿಸುವ ಉದ್ದೇಶದಿಂದ ನಿಯೋಗವು ಜಪಾನ್‌ಗೆ ಭೇಟಿ ನೀಡಿದೆ. ಟೋಕಿಯೊ ಎಲೆಕ್ಟ್ರಾನ್, ಮಿತ್ಸುಬಿಸಿ ಎಲೆಕ್ಟ್ರಿಕ್, ಹೋಂಡಾ, ಯೋಕೊಗಾವಾ ಎಲೆಕ್ಟ್ರಿಕ್ ಮತ್ತು ರೆಸ್ಟರ್ ಹೋಲ್ಡಿಂಗ್ಸ್ ಕಂಪನಿಗಳ ಜೊತೆಗೆ ವಾಣಿಜ್ಯ ಬಾಂಧವ್ಯ ಬಲಪಡಿಸುವ ಮತ್ತು ಹೊಸ ಬಂಡವಾಳ ಹೂಡಿಕೆ ಸಾಧ್ಯತೆಗಳನ್ನು ಪ್ರಮುಖವಾಗಿ ಚರ್ಚಿಸಲಾಗಿದೆ.

ಮಿತ್ಸುಬಿಸಿ ಎಲೆಕ್ಟ್ರಿಕ್ ಜೊತೆಗಿನ ಭೇಟಿ ಸಂದರ್ಭದಲ್ಲಿ, ಕಂಪನಿಯು ಕರ್ನಾಟಕದಲ್ಲಿನ ತನ್ನ ತಯಾರಿಕಾ ಚಟುವಟಿಕೆಗಳ ಮಾಹಿತಿ ಹಂಚಿಕೊಂಡಿತು. ಕಂಪನಿಯ ಭವಿಷ್ಯದ ವಿಸ್ತರಣಾ ಯೋಜನೆಗಳಿಗೆ ಅಗತ್ಯ ನೆರವು ಕಲ್ಪಿಸಿಕೊಡುವುದಾಗಿ ಸಚಿವರು ಭರವಸೆ ನೀಡಿದರು.

ಕರ್ನಾಟಕದಲ್ಲಿನ ತನ್ನ ತಯಾರಿಕಾ ಸಾಮರ್ಥ್ಯವು ಶೀಘ್ರದಲ್ಲಿಯೇ ಪೂರ್ಣ ಪ್ರಮಾಣಕ್ಕೆ ತಲುಪಲಿದ್ದು, ವಿಸ್ತರಣಾ ಅವಕಾಶಗಳನ್ನು ಪರಿಶೀಲಿಸುತ್ತಿರುವುದಾಗಿ ಯೋಕೊಗಾವಾ ಎಲೆಕ್ಟ್ರಿಕ್ ತಿಳಿಸಿದೆ.

ನಿಯೋಗದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಇದ್ದಾರೆ.

ಸೆ.22ರಿಂದ ಸಿಗಲಿಕ್ಕಿಲ್ಲ ಬೆಲೆ ಇಳಿಕೆ ಲಾಭ: ಗೋದ್ರೆಜ್ ಸಿಇಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಎಸ್‌ಟಿ ದರ ಇಳಿಕೆಯು ಸೆಪ್ಟೆಂಬರ್ 22ರಿಂದ ಜಾರಿಗೆ ಬಂದರೂ, ಎಫ್‌ಎಂಸಿಜಿ ಉತ್ಪನ್ನಗಳ ಬೆಲೆ ಇಳಿಕೆಯ ಪ್ರಯೋಜನವು ಗ್ರಾಹಕರಿಗೆ ಅಕ್ಟೋಬರ್ ಆರಂಭದಿಂದ ಅಥವಾ ಅಕ್ಟೋಬರ್ ಮಧ್ಯಭಾಗದಿಂದ ಸಿಗಲಿದೆ ಎಂದು ಗೋದ್ರೆಜ್ ಕನ್ಸ್ಯೂಮರ್ ಕಂಪನಿಯ ಸಿಇಒ ಸುಧೀರ್ ಸೀತಾಪತಿ ಹೇಳಿದ್ದಾರೆ.


ಸುಧೀರ್ ಸೀತಾಪತಿ

ಹೆಚ್ಚಿನ ಎಂಆರ್‌ಪಿ ಇರುವ ಉತ್ಪನ್ನಗಳ ದಾಸ್ತಾನು ಕಂಪನಿಗಳು ಹಾಗೂ ವರ್ತಕರ ಬಳಿ ಇದೆ. ಹೀಗಾಗಿ, ಹಲವು ಉತ್ಪನ್ನಗಳ ಮೇಲಿನ ತೆರಿಗೆ ಪ್ರಮಾಣವನ್ನು ಶೇ 5ಕ್ಕೆ ಇಳಿಕೆ ಮಾಡಿರುವ ಕ್ರಮವು ಅಲ್ಪಾವಧಿಯ ಕೆಲವು ಅಡ್ಡಿಗಳನ್ನು ಸೃಷ್ಟಿಸಿದೆ ಎಂದು ಅವರು ಹೇಳಿದ್ದಾರೆ.

‘ಎಫ್‌ಎಂಸಿಜಿ ವಲಯವು ಗರಿಷ್ಠ ಮಾರಾಟ ಬೆಲೆ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಈಗ ಕಂಪನಿಗಳು ಹಾಗೂ ವರ್ತಕರ ಬಳಿ ಹೆಚ್ಚಿನ ಎಂಆರ್‌ಪಿ ಇರುವ ದಾಸ್ತಾನು ಇದೆ... ಹೊಸ ಎಂಆರ್‌ಪಿ ಇರುವ ಉತ್ಪನ್ನಗಳು ಮಾರುಕಟ್ಟೆಗೆ ಬರಲು ತುಸು ಸಮಯ ಬೇಕಾಗುತ್ತದೆ’ ಎಂದು ಅವರು ಹೇಳಿದ್ದಾರೆ.

ಮುಂದಿನ ತಿಂಗಳ ಆರಂಭದಲ್ಲಿ ಅಥವಾ ಮಧ್ಯ ಭಾಗದಲ್ಲಿ ಗ್ರಾಹಕರು ಕಡಿಮೆ ಎಂಆರ್‌ಪಿ ಇರುವ ಉತ್ಪನ್ನಗಳನ್ನು ಕಾಣಬಹುದು ಎಂದು ಅವರು ಅಂದಾಜು ಮಾಡಿದ್ದಾರೆ.

ಜನಸಾಮಾನ್ಯರು ಹೆಚ್ಚಾಗಿ ಬಳಸುವ ಬಹುತೇಕ ಉತ್ಪನ್ನಗಳ ಮೇಲಿನ ತೆರಿಗೆ ದರವನ್ನು ಸೆಪ್ಟೆಂಬರ್ 22ರಿಂದ ಅನ್ವಯವಾಗುವಂತೆ ಕಡಿಮೆ ಮಾಡಲು ಜಿಎಸ್‌ಟಿ ಮಂಡಳಿಯು ಈಚೆಗೆ ತೀರ್ಮಾನಿಸಿದೆ.

‘ಜಿಎಸ್‌ಟಿ ಇಳಿಕೆಯ ಒಂದು ಪ್ರಯೋಜನವೆಂದರೆ, ತೆರಿಗೆ ಪ್ರಮಾಣ ಕಡಿಮೆ ಆಗಿರುವ ವರ್ಗದ ಉತ್ಪನ್ನಗಳಷ್ಟೇ ಅಲ್ಲದೆ, ಜಿಎಸ್‌ಟಿ ಕಡಿಮೆ ಆಗಿರದ ವರ್ಗಕ್ಕೆ ಸೇರಿದ ಉತ್ಪನ್ನಗಳ ಮಾರಾಟವೂ ಹೆಚ್ಚಳ ಕಾಣುತ್ತದೆ. ಏಕೆಂದರೆ, ಖರೀದಿಗೆ ಲಭ್ಯವಾಗುವ ಹಣದ ಮೊತ್ತ ಹೆಚ್ಚಾಗುತ್ತದೆ. ಹೀಗಾಗಿ ನಾವು ನಮ್ಮ ಎಲ್ಲ ಬಗೆಯ ಉತ್ಪನ್ನಗಳ ಮಾರಾಟವು ಹೆಚ್ಚಳ ಕಾಣುತ್ತದೆ ಎಂಬ ನಿರೀಕ್ಷೆ ಹೊಂದಿದ್ದೇವೆ’ ಎಂದಿದ್ದಾರೆ.

ಹಳೆಯ ಎಂಆರ್‌ಪಿ ಉತ್ಪನ್ನಗಳ ದಾಸ್ತಾನು ಚಿಂತೆ

ನವದೆಹಲಿ (ಪಿಟಿಐ): ಚಾಲ್ತಿಯಲ್ಲಿರುವ ಜಿಎಸ್‌ಟಿ ದರಕ್ಕೆ ಅನುಗುಣವಾಗಿ ಎಂಆರ್‌ಪಿ ದರವನ್ನು ಮುದ್ರಿಸಿರುವ ಉತ್ಪನ್ನಗಳ ದಾಸ್ತಾನು ಎಫ್‌ಎಂಸಿಜಿ ಕಂಪನಿಗಳ ಬಳಿ ದೊಡ್ಡ ಮಟ್ಟದಲ್ಲಿ ಇದ್ದು, ಅವುಗಳನ್ನು ಹೇಗೆ ಮಾರಾಟ ಮಾಡುವುದು ಎಂಬ ವಿಚಾರವಾಗಿ ಕೇಂದ್ರ ಸರ್ಕಾರದಿಂದ ಮಾರ್ಗಸೂಚಿ ಬರುವುದಕ್ಕಾಗಿ ಕಂಪನಿಗಳು ಕಾದಿವೆ.

ಜಿಎಸ್‌ಟಿ ದರ ಇಳಿಕೆಯು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ. ಆದರೆ, ಈಗಿರುವ ಜಿಎಸ್‌ಟಿ ದರಕ್ಕೆ ಸರಿಹೊಂದುವ ಎಂಆರ್‌ಪಿ ನಮೂದಿಸಿ ಪ್ಯಾಕ್ ಮಾಡಲಾಗಿರುವ ಉತ್ಪನ್ನಗಳ ದಾಸ್ತಾನು ವರ್ತಕರ ಬಳಿಯೂ ಉಳಿದಿದೆ.

ಹಳೆಯ ಎಂಆರ್‌ಪಿ ಇರುವ ಉತ್ಪನ್ನಗಳನ್ನು ಸೆಪ್ಟೆಂಬರ್ 22ರ ನಂತರ ರಿಯಾಯಿತಿ ದರಕ್ಕೆ ಮಾರಾಟ ಮಾಡಲು ಕೇಂದ್ರವು ಅನುಮತಿ ನೀಡಲಿದೆ ಎಂಬ ಭರವಸೆಯು ಎಫ್‌ಎಂಸಿಜಿ ಉದ್ಯಮಕ್ಕೆ ಇದೆ. ‘ಏನು ಮಾಡಬೇಕು ಎಂಬ ಬಗ್ಗೆ ಎಲ್ಲರೂ ಅವಲೋಕನ ನಡೆಸುತ್ತಿದ್ದಾರೆ’ ಎಂದು ಇಮಾಮಿ ಕಂಪನಿಯ ಉಪಾಧ್ಯಕ್ಷ ಹಾಗೂ ಎಂ.ಡಿ. ಹರ್ಷವರ್ಧನ್ ಅಗರ್ವಾಲ್ ಅವರು ಹೇಳಿದ್ದಾರೆ.

ಉತ್ಪನ್ನಗಳ ಎಂಆರ್‌ಪಿ ದರವನ್ನು ತಾನು ಬದಲಾಯಿಸುವುದಿಲ್ಲ. ಆದರೆ ಗ್ರಾಹಕರು ಉತ್ಪನ್ನಗಳ ಬಿಲ್ ಮಾಡಿಸುವಾಗ, ಜಿಎಸ್‌ಟಿ ದರ ಇಳಿಕೆಗೆ ಸರಿಹೊಂದುವಂತೆ ರಿಯಾಯಿತಿ ನೀಡಲಾಗುತ್ತದೆ ಎಂದು ವಿ-ಮಾರ್ಟ್ ರಿಟೇಲ್ ಕಂಪನಿಯ ಅಧ್ಯಕ್ಷ ಮತ್ತು ಎಂ.ಡಿ. ಲಲಿತ್ ಅಗರ್ವಾಲ್ ಹೇಳಿದ್ದಾರೆ.

ನಿಸಾನ್, ಕಿಯಾ, ಔಡಿ ಕಾರು ಬೆಲೆ ಇಳಿಕೆ

ನವದೆಹಲಿ (ಪಿಟಿಐ): ವಾಹನಗಳ ಮೇಲಿನ ಜಿಎಸ್‌ಟಿ ದರ ಇಳಿಕೆಯ ಪರಿಣಾಮವಾಗಿ ತನ್ನ ಜನಪ್ರಿಯ ಮ್ಯಾಗ್ನೈಟ್ ಎಸ್‌ಯುವಿ ಮಾದರಿಯ ಬೆಲೆಯಲ್ಲಿ ₹1 ಲಕ್ಷದವರೆಗೆ ಇಳಿಕೆ ಆಗಲಿದೆ ಎಂದು ನಿಸಾನ್ ಮೋಟರ್ ಇಂಡಿಯಾ ಕಂಪನಿಯು ಸೋಮವಾರ ತಿಳಿಸಿದೆ.

ಹೊಸ ದರವು ಜಿಎಸ್‌ಟಿ ಪರಿಷ್ಕೃತ ದರ ಜಾರಿಗೆ ಬರಲಿರುವ ಸೆಪ್ಟೆಂಬರ್ 22ರಿಂದ ಅನ್ವಯವಾಗಲಿದೆ. ಆದರೆ, ಹೊಸ ದರಕ್ಕೆ ಕಾರು ಬುಕ್ ಮಾಡಲು ಈಗಿನಿಂದಲೇ ಅವಕಾಶ ಇದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಔಡಿ ಕಾರು ಬೆಲೆ ಇಳಿಕೆ: ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾವಣೆ ಮಾಡಲಿರುವ ಐಷಾರಾಮಿ ಕಾರು ತಯಾರಿಕಾ ಕಂಪನಿ ಔಡಿ, ತನ್ನ ವಿವಿಧ ಮಾದರಿಯ ಕಾರುಗಳ ಬೆಲೆಯು ₹2.6 ಲಕ್ಷದಿಂದ ₹7.8 ಲಕ್ಷದವರೆಗೆ ಇಳಿಯಲಿದೆ ಎಂದು ತಿಳಿಸಿದೆ.

ಕಿಯಾ ಕಂಪನಿಯ ಕಾರುಗಳ ಬೆಲೆಯು ಗರಿಷ್ಠ ₹4.48 ಲಕ್ಷದವರೆಗೆ ಇಳಿಕೆ ಆಗಲಿದೆ. ಕಾರೆನ್ಸ್ ಕಾರಿನ ಬೆಲೆಯು ₹48,513ರಷ್ಟು ಹಾಗೂ ಕಾರ್ನಿವಲ್ ಕಾರಿನ ಬೆಲೆಯು ₹4.48 ಲಕ್ಷದವರೆಗೆ ಇಳಿಕೆ ಆಗಲಿದೆ. ಬೆಲೆ ಇಳಿಕೆಯು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ.

ಜೆಎಸ್‌ಡಬ್ಲ್ಯು ಎಂಜಿ ಮೋಟರ್ ಇಂಡಿಯಾ ಕಂಪನಿಯು ತನ್ನ ಕಾರುಗಳ ಬೆಲೆಯು ₹54 ಸಾವಿರದಿಂದ ₹3.04 ಲಕ್ಷದವರೆಗೆ ಕಡಿಮೆ ಆಗಲಿದೆ ಎಂದು ಹೇಳಿದೆ. ಇದು ಸೆಪ್ಟೆಂಬರ್ 7ರಿಂದಲೇ ಜಾರಿಗೆ ಬಂದಿದೆ.

₹20 ಲಕ್ಷ ಇಳಿಕೆ: ಲೆಕ್ಸಸ್ ಇಂಡಿಯಾ ಕಂಪನಿಯ ಕಾರಿನ ಬೆಲೆಯು ₹20.8 ಲಕ್ಷದವರೆಗೆ ಇಳಿಕೆ ಆಗಲಿದೆ. ಪರಿಷ್ಕೃತ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ.

ಇಳಿಕೆ ಲಾಭ ಗ್ರಾಹಕರಿಗೆ: ಟಿವಿಎಸ್

ನವದೆಹಲಿ (ಪಿಟಿಐ): ಐಸಿಇ ಎಂಜಿನ್ ವಾಹನಗಳ ಮೇಲಿನ ತೆರಿಗೆ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ಪೂರ್ತಿಯಾಗಿ ವರ್ಗಾವಣೆ ಮಾಡಲಾಗುತ್ತದೆ ಎಂದು ಟಿವಿಎಸ್ ಮೋಟರ್ ಕಂಪನಿಯು ತಿಳಿಸಿದೆ. ಆದರೆ ಯಾವ ಮಾದರಿಯ ಬೆಲೆ ಎಷ್ಟು ಇಳಿಕೆಯಾಗುತ್ತದೆ ಎಂಬುದನ್ನು ಅದು ಹೇಳಿಲ್ಲ.

ಇಸ್ರೇಲ್ ಜೊತೆ ಹೂಡಿಕೆ ಒಪ್ಪಂದಕ್ಕೆ ಸಹಿ

ನವದೆಹಲಿ (ಪಿಟಿಐ): ಭಾರತ ಮತ್ತು ಇಸ್ರೇಲ್ ನಡುವೆ ದ್ವಿಪಕ್ಷೀಯ ಹೂಡಿಕೆ ಒಪ್ಪಂದಕ್ಕೆ (ಬಿಐಟಿ) ಸಹಿ ಹಾಕಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಸೋಮವಾರ ಹೇಳಿದೆ. ಈ ಒಪ್ಪಂದವು ಎರಡೂ ದೇಶಗಳ ನಡುವೆ ಹೂಡಿಕೆಗಳಿಗೆ ಉತ್ತೇಜನ ನೀಡಲು ನೆರವಾಗಲಿದೆ ಎಂದು ಅದು ತಿಳಿಸಿದೆ.

‘ಒಪ್ಪಂದಕ್ಕೆ ನವದೆಹಲಿಯಲ್ಲಿ ಸೋಮವಾರ ಸಹಿ ಮಾಡಲಾಗಿದೆ’ ಎಂದು ಹಣಕಾಸು ಸಚಿವಾಲಯವು ಎಕ್ಸ್ ಮೂಲಕ ತಿಳಿಸಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಇಸ್ರೇಲ್‌ನ ಹಣಕಾಸು ಸಚಿವ ಬೆಜಲೆಲ್ ಸ್ಮೊಟ್ರಿಕ್ ಅವರು ಒಪ್ಪಂದಕ್ಕೆ ಸಹಿ ಮಾಡಿದ್ದಾರೆ.

ಅಧಿಕ ರಕ್ತದೊತ್ತಡ: ಏಮ್ಸ್‌ಗೆ ದಾಖಲಾದ ಹೊಸಬಾಳೆ

ಜೋಧಪುರ/ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರು ಅಧಿಕ ರಕ್ತದೊತ್ತಡದಿಂದ ಅಸ್ವಸ್ಥರಾಗಿದ್ದು, ಜೋಧಪುರದ ‘ಏಮ್ಸ್’ಗೆ ಸೋಮವಾರ ದಾಖಲಿಸಲಾಗಿದೆ.


ದತ್ತಾತ್ರೇಯ ಹೊಸಬಾಳೆ

ಮಧ್ಯಾಹ್ನ ಹೊಸಬಾಳೆ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ಕೂಡಲೇ ಏಮ್ಸ್‌ಗೆ ದಾಖಲಿಸಲಾಯಿತು. ವೈದ್ಯರ ತಂಡ ಚಿಕಿತ್ಸೆ ನೀಡುತ್ತಿದ್ದು, ಆರೋಗ್ಯ ಸ್ಥಿತಿ ಉತ್ತಮವಾಗಿದೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

‘ಹೊಸಬಾಳೆ ಅವರು ಆರೋಗ್ಯವಾಗಿದ್ದಾರೆ’ ಎಂದು ಆರ್‌ಎಸ್‌ಎಸ್ ರಾಷ್ಟ್ರೀಯ ಪ್ರಚಾರ ಮತ್ತು ಮಾಧ್ಯಮ ವಿಭಾಗದ ಮುಖ್ಯಸ್ಥ ಸುನಿಲ್ ಅಂಬೇಕರ್ ಅವರು ಸಾಮಾಜಿಕ ಮಾಧ್ಯಮ ‘ಎಕ್ಸ್’ ಮೂಲಕ ಮಾಹಿತಿ ನೀಡಿದ್ದಾರೆ.

ಆರ್‌ಎಸ್‌ಎಸ್ ಆಯೋಜಿಸಿದ್ದ ಮೂರು ದಿನಗಳ ವಾರ್ಷಿಕ ಸಮನ್ವಯ ಸಭೆಯಲ್ಲಿ ಪಾಲ್ಗೊಳ್ಳಲು ಹೊಸಬಾಳೆ ಅವರು ಜೋಧಪುರಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದರು.

ನಾಗರಿಕರನ್ನು ಸಂಕಷ್ಟಕ್ಕೆ ತಳ್ಳುತ್ತಿರುವ ರಷ್ಯಾ: ಉಕ್ರೇನ್ ಇಂಧನ ಸಚಿವ ಆರೋಪ

ಕೀವ್: ವಿದ್ಯುತ್ ಸ್ಥಾವರ ಮೇಲೆ ದಾಳಿ

ಕೀವ್ (ರಾಯಿಟರ್ಸ್): ‘ಉಕ್ರೇನ್‌ನ ಕೀವ್ ಪ್ರಾಂತ್ಯದಲ್ಲಿರುವ ಉಷ್ಣ ವಿದ್ಯುತ್ ಉತ್ಪಾದನಾ ಕೇಂದ್ರದ ಮೇಲೆ ಭಾನುವಾರ ರಾತ್ರಿಯಿಡೀ ರಷ್ಯಾ ಪಡೆಗಳು ದಾಳಿ ನಡೆಸಿವೆ’ ಎಂದು ಇಲ್ಲಿನ ಇಂಧನ ಸಚಿವಾಲಯವು ತಿಳಿಸಿದೆ.

ಉಕ್ರೇನ್‌ನ ಮೇಲೆ ಮೂರೂವರೆ ವರ್ಷಗಳಿಂದ ರಷ್ಯಾ ಸೇನಾ ದಾಳಿ ನಡೆಸುತ್ತಿದೆ. ಶುಕ್ರವಾರವಷ್ಟೇ ಅತೀ ದೊಡ್ಡ ವಾಯುದಾಳಿ ನಡೆಸಿತ್ತು. ಒಂದು ದಿನದ ಅಂತರದಲ್ಲೇ, ವಿದ್ಯುತ್ ಉತ್ಪಾದನಾ ಕೇಂದ್ರಗಳ ಮೇಲೂ ದಾಳಿ ಮುಂದುವರಿಸಿದೆ.

‘ಅವರ ಗುರಿ ಸ್ಪಷ್ಟವಾಗಿದೆ. ಉಕ್ರೇನ್‌ನ ಶಾಂತಿಯುತ ನಾಗರಿಕರಿಗೆ ಮತ್ತಷ್ಟು ತೊಂದರೆ ಮಾಡುವ ಮೂಲಕ ಸಂಕಷ್ಟಕ್ಕೆ ತಳ್ಳುತ್ತಿದ್ದು, ಇಡೀ ದೇಶದ ಮನೆ, ಆಸ್ಪತ್ರೆ, ಶಾಲೆಗಳಿಗೆ ವಿದ್ಯುತ್ ಪೂರೈಕೆ ತಡೆಯುವ ಉದ್ದೇಶ ಹೊಂದಿದ್ದಾರೆ’ ಎಂದು ಸಚಿವಾಲಯವು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದೆ.

ರಕ್ಷಣಾ ಕಾರ್ಯಕರ್ತರು ಹಾಗೂ ತಂತ್ರಜ್ಞರು ಸ್ಥಳಕ್ಕೆ ಭೇಟಿ ನೀಡಿದ್ದು, ರಕ್ಷಣಾ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ತಿಳಿಸಿದೆ. ಉಕ್ರೇನ್‌ನ ಇಂಧನ ಉತ್ಪಾದನಾ ಕೇಂದ್ರಗಳ ಮೇಲೆ ದಾಳಿ ನಡೆಸಿರುವುದನ್ನು ರಷ್ಯಾ ರಕ್ಷಣಾ ಇಲಾಖೆಯು ಖಚಿತಪಡಿಸಿದೆ.

ಮಾತುಕತೆಗೆ ಪುಟಿನ್‌ಗೆ ಆಸಕ್ತಿಯಿಲ್ಲ: ಉಕ್ರೇನ್ ಮೇಲೆ ರಷ್ಯಾವು ಆಕ್ರಮಣ ತೀವ್ರಗೊಳಿಸಿರುವುದು ಶಾಂತಿ ಮಾತುಕತೆಗೆ ಆಸಕ್ತಿ ಹೊಂದಿಲ್ಲ ಎಂಬುದನ್ನು ತೋರಿಸುತ್ತದೆ ಎಂದು ಜರ್ಮನ್ ಸರ್ಕಾರವು ತಿಳಿಸಿದೆ.

‘ಸಂಘರ್ಷ ತೀವ್ರಗೊಳಿಸಿರುವುದನ್ನು ಗಮನಿಸಿದರೆ, ಪುಟಿನ್‌ಗೆ ಶಾಂತಿ ಮಾತುಕತೆಯನ್ನು ಬಯಸುತ್ತಿಲ್ಲ ಎಂಬುದನ್ನು ತೋರಿಸುತ್ತದೆ’ ಎಂದು ಸರ್ಕಾರದ ವಕ್ತಾರರು ಹೇಳಿದ್ದಾರೆ.

ನಿರ್ಬಂಧದಿಂದ ಪರಿಣಾಮವಿಲ್ಲ: ‘ಉಕ್ರೇನ್ ಮೇಲೆ ಸಂಘರ್ಷ ನಡೆಸುತ್ತಿರುವ ರಷ್ಯಾದ ಮೇಲೆ ಯಾವುದೇ ನಿರ್ಬಂಧ ಹೇರಿದರೂ ಪರಿಣಾಮ ಬೀರುವುದಿಲ್ಲ’ ಎಂದು ರಷ್ಯಾ ತಿಳಿಸಿದೆ.

ಅಮೆರಿಕ ಹಾಗೂ ಐರೋಪ್ಯ ಒಕ್ಕೂಟವು ಮತ್ತಷ್ಟು ಆರ್ಥಿಕ ನಿರ್ಬಂಧ ಹೇರಲು ಮುಂದಾದ ಬೆನ್ನಲ್ಲೇ, ಕ್ರೆಮ್ಲಿನ್ ಈ ಸ್ಪಷ್ಟನೆ ನೀಡಿದೆ.

‘ಸುಂಕ ಹೇರಿಕೆ– ಸರಿಯಾದ ನಿರ್ಧಾರ’

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ರಷ್ಯಾದೊಂದಿಗೆ ಒಪ್ಪಂದ ಮಾಡಿಕೊಳ್ಳುವ ದೇಶಗಳ ಮೇಲೆ ಸುಂಕ ಹೇರುವುದು ಸರಿಯಾದ ನಿರ್ಧಾರ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿಕೆ ನೀಡಿದ್ದಾರೆ. ಭಾರತ ಹೆಸರು ಉಲ್ಲೇಖಿಸದೇ ಅವರು ಈ ಹೇಳಿಕೆ ನೀಡಿದ್ದಾರೆ.


ವೊಲೊಡಿಮಿರ್ ಝೆಲೆನ್‌ಸ್ಕಿ

‘ರಷ್ಯಾದ ಜೊತೆ ಒಪ್ಪಂದ ಮಾಡಿಕೊಳ್ಳುವ ದೇಶಗಳಿಗೆ ಸುಂಕ ವಿಧಿಸುವುದು ಸರಿಯಾದ ನಿರ್ಧಾರವಾಗಿದೆ’ ಎಂದು ಎಬಿಸಿ ಸುದ್ದಿವಾಹಿನಿಯ ‘ದಿಸ್ ವೀಕ್’ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

‘ಶಾಂಘೈ ಸಹಕಾರ ಸಂಘಟನೆಯ’ (ಎಸ್‌ಸಿಒ) ಶೃಂಗಸಭೆಯಲ್ಲಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಹಾಗೂ ಭಾರತದ ಪ್ರಧಾನಿ ನರೇಂದ್ರ ಮೋದಿ ಭೇಟಿಯಾಗುವ ಮೂಲಕ ಸುಂಕ ಹೇರಿಕೆ ಹಿನ್ನಡೆಯಾಗಿಲ್ಲವೇ ಎಂಬ ಪ್ರಶ್ನೆಗೆ ಉತ್ತರ ನೀಡಲು ಝೆಲೆನ್‌ಸ್ಕಿ ನಿರಾಕರಿಸಿದರು.

ಮೂತ್ರ ವಿಸರ್ಜನೆ ಪ್ರಶ್ನಿಸಿದ್ದಕ್ಕೆ ಯುವಕನ ಹತ್ಯೆ

ಚಂಡೀಗಢ (ಪಿಟಿಐ): ಅಂಗಡಿಯ ಮುಂದೆ ಮೂತ್ರ ವಿಸರ್ಜನೆ ಮಾಡುವುದನ್ನು ತಡೆದ ಕಾರಣಕ್ಕೆ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಸ್ಥಳೀಯ ವ್ಯಕ್ತಿಯೊಬ್ಬ ಹರಿಯಾಣದ ಯುವಕನನ್ನು ಶನಿವಾರ ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ.

ಹರಿಯಾಣದ ಜಿಂದ್ ಜಿಲ್ಲೆಯ ಬಾರಹ್ ಕಲಾಂ ಗ್ರಾಮದ ಕಪಿಲ್ (26) ಹತ್ಯೆಯಾದ ಯುವಕ.

ಮೂರು ವರ್ಷಗಳ ಹಿಂದೆ ಅಮೆರಿಕಕ್ಕೆ ತೆರಳಿದ್ದ ಕಪಿಲ್, ಅಂಗಡಿಯ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು ಎಂದು ಜಿಂದ್‌ನ ಬಾರಹ್ ಕಲಾಂ ಗ್ರಾಮದ ಮುಖ್ಯಸ್ಥ ಸುರೇಶ್ ಕುಮಾರ್ ಗೌತಮ್ ಸೋಮವಾರ ಹೇಳಿದ್ದಾರೆ.

‘ಕಪಿಲ್ ಕರ್ತವ್ಯದಲ್ಲಿದ್ದ ವೇಳೆ, ಅಂಗಡಿಯ ಹೊರಗಿನ ರಸ್ತೆಯಲ್ಲಿ ವ್ಯಕ್ತಿಯೊಬ್ಬ ಮೂತ್ರ ವಿಸರ್ಜನೆ ಮಾಡುವುದನ್ನು ಕಂಡು ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಆಗ ವಾಗ್ವಾದ ನಡೆದು, ಯುವಕನನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಈ ಘಟನೆ ಬಗ್ಗೆ ಕುಟುಂಬಕ್ಕೆ ಮಾಹಿತಿ ನೀಡಲಾಗಿದ್ದು, ಅವರು ಇನ್ನೂ ಆಘಾತದಿಂದ ಹೊರಬಂದಿಲ್ಲ’ ಎಂದು ಸುರೇಶ್ ಕುಮಾರ್ ಹೇಳಿದ್ದಾರೆ.

ಯುವಕನ ಮೃತದೇಹವನ್ನು ಭಾರತಕ್ಕೆ ತರಲು ನೆರವಾಗುವಂತೆ ಕೇಂದ್ರ ಮತ್ತು ಹರಿಯಾಣ ಸರ್ಕಾರವನ್ನು ಸುರೇಶ್ ಕುಮಾರ್ ಅವರು ಮನವಿ ಮಾಡಿದ್ದಾರೆ.

ಎಎಪಿ ಶಾಸಕ ಮೆಹರಾಜ್ ಮಲಿಕ್ ಬಂಧನ

ಪ್ರಜಾವಾಣಿ ವಾರ್ತೆ

ಶ್ರೀನಗರ: ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕ ಮೆಹರಾಜ್ ಮಲಿಕ್ ಅವರನ್ನು ಸಾರ್ವಜನಿಕ ಸುರಕ್ಷತಾ ಕಾಯ್ದೆಯಡಿ (ಪಿಎಸ್‌ಎ) ಜಮ್ಮು ಮತ್ತು ಕಾಶ್ಮೀರದ ಆಡಳಿತವು ಬಂಧಿಸಿದೆ.

ಕಠಿಣ ಕಾಯ್ದೆಯಡಿ ಶಾಸಕರೊಬ್ಬರು ಬಂಧಿತರಾಗಿರುವುದು ಇದೇ ಮೊದಲು. ವಿಚಾರಣೆ ನಡೆಸದೆ ಎರಡು ವರ್ಷದವರೆಗೆ ಜೈಲು ಶಿಕ್ಷೆ ವಿಧಿಸಬಹುದಾದ ಪ್ರಕರಣ ಇದಾಗಿದೆ.

ಸಾಮಾಜಿಕ ಜಾಲತಾಣ ನಿಷೇಧ ತೆರವಿಗೆ ಆಗ್ರಹ ● ಹಿಂಸಾಚಾರಕ್ಕೆ ತಿರುಗಿದ ಪ್ರತಿಭಟನೆ

ನೇಪಾಳದಲ್ಲಿ ಘರ್ಷಣೆ: 19 ಸಾವು

ಕಠ್ಮಂಡು (ಪಿಟಿಐ/ರಾಯಿಟರ್ಸ್/ಎಎಫ್‌ಪಿ): ಸಾಮಾಜಿಕ ಜಾಲತಾಣಗಳ ಮೇಲಿನ ನಿಷೇಧವನ್ನು ವಾಪಸ್ ಪಡೆಯಬೇಕು ಮತ್ತು ಭ್ರಷ್ಟಾಚಾರ ನಿಯಂತ್ರಿಸುವಂತೆ ಆಗ್ರಹಿಸಿ ಕಠ್ಮಂಡು ಸೇರಿದಂತೆ ನೇಪಾಳದ ವಿವಿಧೆಡೆ ಯುವಕರು ನಡೆಸಿದ ಬೃಹತ್ ಪ್ರತಿಭಟನೆ ಸೋಮವಾರ ಹಿಂಸಾಚಾರಕ್ಕೆ ತಿರುಗಿತು. ಈ ಘಟನೆಯಲ್ಲಿ 19 ಮಂದಿ ಮೃತಪಟ್ಟಿದ್ದು, 300ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಶಾಲಾ ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಯುವಕರು ಕಠ್ಮಂಡುವಿನಲ್ಲಿ ‘ಜೆನ್–ಝೀ’ ಬ್ಯಾನರ್ ಅಡಿಯಲ್ಲಿ ಪ್ರತಿಭಟನೆ ನಡೆಸಿದರು.


‘ಭ್ರಷ್ಟಾಚಾರವನ್ನು ನಿಯಂತ್ರಿಸಿ, ಸಾಮಾಜಿಕ ಜಾಲತಾಣಗಳನ್ನಲ್ಲ’ ಎನ್ನುವ ಬರಹಗಳಿರುವ ಫಲಕಗಳನ್ನು ಪ್ರದರ್ಶಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ 20 ವರ್ಷ ವಯೋಮಾನದ ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನವರೇ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ವಿದ್ಯಾರ್ಥಿಗಳು ಶಾಲಾ ಸಮವಸ್ತ್ರ ಧರಿಸಿಯೇ ಭಾಗವಹಿಸಿದ್ದರು.

ಕೆಲವು ಪ್ರತಿಭಟನಕಾರರು ಸಂಸತ್ ಭವನದ ಆವರಣಕ್ಕೆ ನುಗ್ಗಲು ಯತ್ನಿಸಿದರು. ಇನ್ನೂ ಕೆಲವರು ಸಂಸತ್ ಭವನದ ತಡೆಗೋಡೆಗಳನ್ನು ಏರಿ ಗೇಟುಗಳನ್ನು ಧ್ವಂಸಗೊಳಿಸಿದರು. ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಪ್ರತಿಭಟನಕಾರರು ಕಲ್ಲು ತೂರಾಟ ನಡೆಸಿದ್ದರಿಂದ ಪೊಲೀಸರು ಜಲಫಿರಂಗಿ, ರಬ್ಬರ್ ಬುಲೆಟ್, ಅಶ್ರುವಾಯು ಪ್ರಯೋಗಿಸಿದರು.

ಆಂಬುಲೆನ್ಸ್‌ಗೆ ಬೆಂಕಿ: ಪೊಲೀಸರು ಲಾಠಿ ಪ್ರಹಾರ ಮಾಡುತ್ತಿದ್ದಂತೆಯೇ ಸಿಟ್ಟಿಗೆದ್ದ ಪ್ರತಿಭಟನಕಾರರು ಸಂಸತ್ ಭವನದ ಎದುರಿಗಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿ ಒಳನುಗ್ಗಲು ಯತ್ನಿಸಿದರು. ಅಲ್ಲದೆ, ಆಂಬುಲೆನ್ಸ್‌ಗೆ ಬೆಂಕಿ ಹಚ್ಚಿದರು. ಜತೆಗೆ ಪೊಲೀಸರ ಮೇಲೆ ಸಿಕ್ಕ ಸಿಕ್ಕ ವಸ್ತುಗಳನ್ನು ಎಸೆದು ದಾಂದಲೆ ನಡೆಸಿದ್ದರಿಂದ ಭದ್ರತಾ ಸಿಬ್ಬಂದಿಯೂ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದ್ವಿಗ್ನ ಪರಿಸ್ಥಿತಿಯನ್ನು ಶಮನಗೊಳಿಸಿ ನಿಯಂತ್ರಣಕ್ಕೆ ತರಲು ಸರ್ಕಾರವು ಸೇನೆಯನ್ನು ನಿಯೋಜಿಸಿದೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

‘ಪೊಲೀಸರು ನಿರ್ದಾಕ್ಷಿಣ್ಯವಾಗಿ ಲಾಠಿ ಪ್ರಹಾರ ಮಾಡಿ, ರಬ್ಬರ್ ಬುಲೆಟ್‌ಗಳನ್ನು ಸಿಡಿಸಿದ್ದಾರೆ. ನಮ್ಮ ಹೋರಾಟ ಇಷ್ಟಕ್ಕೇ ನಿಲ್ಲದು ಇದು ನೇಪಾಳದ ಹೊಸ ಪೀಳಿಗೆಯ ಪ್ರತಿಭಟನೆ’ ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.


ಕಠ್ಮಂಡುವಿನಲ್ಲಿ ಸಂಸತ್ ಭವನದ ಮುಂದೆ ಪ್ರತಿಭಟನೆ ನಡೆಸಿದ ಯುವಕರು
– ಎಎಫ್‌ಪಿ ಚಿತ್ರ

> **ನಾವು ಸಾಮಾಜಿಕ ಜಾಲತಾಣಗಳ ವಿರೋಧಿಗಳಲ್ಲ. ಆದರೆ, ನೇಪಾಳದಲ್ಲೇ ಹಣ ಸಂಪಾದಿಸಿ ಇಲ್ಲಿನ ಕಾನೂನಿಗೆ ಬದ್ಧರಾಗುವುದಿಲ್ಲ ಎನ್ನುವವರನ್ನು ಸಹಿಸಲೂ ಸಾಧ್ಯವಿಲ್ಲ**
> **ಕೆ.ಪಿ.ಶರ್ಮಾ ಓಲಿ,** ನೇಪಾಳ ಪ್ರಧಾನಿ

ಗೃಹ ಸಚಿವ ರಾಜೀನಾಮೆ

ಹಿಂಸಾಚಾರದ ಕಾರಣದಿಂದ ನೇಪಾಳದ ಗೃಹ ಸಚಿವ ರಮೇಶ್ ಲೇಖಕ್ ಅವರು ರಾಜೀನಾಮೆ ನೀಡಿದ್ದಾರೆ.

ನೈತಿಕ ಹೊಣೆಹೊತ್ತು ರಮೇಶ್ ಅವರು ರಾಜೀನಾಮೆ ನೀಡಿದ್ದಾರೆ ಎಂದು ನೇಪಾಳಿ ಕಾಂಗ್ರೆಸ್ ಪಕ್ಷದ ಮೂಲಗಳು ತಿಳಿಸಿವೆ.

ಪ್ರತಿಭಟನೆಗೆ ಕಾರಣವೇನು?

ಫೇಸ್‌ಬುಕ್, ವ್ಯಾಟ್ಸ್‌ಆ್ಯಪ್, ಯುಟ್ಯೂಬ್, ಎಕ್ಸ್ ಸೇರಿದಂತೆ 26 ಸಾಮಾಜಿಕ ಜಾಲತಾಣ ವೇದಿಕೆಗಳನ್ನು ಸೆ.5ರಂದು ನೇಪಾಳ ಸರ್ಕಾರ ನಿಷೇಧಿಸಿತ್ತು.

ಸಚಿವ ಸಂಪುಟದಲ್ಲಿ ಇತ್ತೀಚೆಗೆ ಕೈಗೊಂಡ ನಿರ್ಧಾರದ ಅನ್ವಯ ಸಾಮಾಜಿಕ ಜಾಲತಾಣಗಳ ನೋಂದಣಿಯನ್ನು ಕಡ್ಡಾಯಗೊಳಿಸಿದೆ. ನೋಂದಣಿಯಾಗದ ಕಾರಣಕ್ಕೆ ನೇಪಾಳ ಸರ್ಕಾರ ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸಿತ್ತು.

ನಕಲಿ ಖಾತೆಗಳ ಮೂಲಕ ದ್ವೇಷ ಭಾಷಣ, ಸುಳ್ಳು ಸುದ್ದಿಯನ್ನು ಹಬ್ಬಿಸಲು ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಹೀಗಾಗಿ, ಈ ಕ್ರಮಕೈಗೊಳ್ಳಲಾಗಿದೆ ಎಂದು ಸರ್ಕಾರ ಸಮರ್ಥಿಸಿಕೊಂಡಿದೆ.

ನೇಪಾಳದ ಶೇ 90ರಷ್ಟು ಮಂದಿ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದು, ಸರ್ಕಾರದ ನಿರ್ಣಯದಿಂದ ಯುವಜನರ ಆಕ್ರೋಶ ಹೆಚ್ಚಾದ ಪರಿಣಾಮ ಪ್ರತಿಭಟನೆಗಳು ನಡೆಯುತ್ತಿವೆ.

ದಕ್ಷಿಣ ಪಿನಾಕಿನಿ: ನ್ಯಾಯಮಂಡಳಿಗೆ ತಮಿಳುನಾಡು ಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆ ವಿವಾದ ಬಗೆಹರಿಸಲು ನ್ಯಾಯಮಂಡಳಿ ರಚಿಸಬೇಕು ಎಂದು ತಮಿಳುನಾಡು ಸರ್ಕಾರ ಮತ್ತೆ ಪಟ್ಟು ಹಿಡಿದಿದೆ.

ವಿವಾದ ಬಗೆಹರಿಸಲು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರು ಕರೆದಿದ್ದ ಎರಡು ಸಭೆಗಳನ್ನು ತಮಿಳುನಾಡು ಬಹಿಷ್ಕರಿಸಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ನಡೆದ ವಿಚಾರಣೆ ಸಂದರ್ಭದಲ್ಲೂ ತಮಿಳುನಾಡು ಇದೇ ನಿಲುವು ತಳೆಯಿತು. ಬಳಿಕ ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಲಾಯಿತು.

ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪಿನಾಕಿನಿ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ಗೆ 2018ರ ಮೇ 18ರಂದು ಅರ್ಜಿ ಸಲ್ಲಿಸಿತ್ತು. ಜಲವಿವಾದ ನ್ಯಾಯ ಮಂಡಳಿ ಸ್ಥಾಪಿಸುವಂತೆ ಒತ್ತಾಯಿಸಿ ತಮಿಳುನಾಡು ಸರ್ಕಾರವು ಕೇಂದ್ರ ಸರ್ಕಾರಕ್ಕೆ 2019ರ ನವೆಂಬರ್ ತಿಂಗಳಲ್ಲಿ ಮನವಿ ಮಾಡಿತ್ತು.

ಜಲಶಕ್ತಿ ಸಚಿವಾಲಯವು 2020ರಲ್ಲಿ ಸಂಧಾನ ಸಭೆ ನಡೆಸಿತ್ತು. ಆದರೆ, ರಾಜ್ಯ ಸರ್ಕಾರಗಳು ಒಮ್ಮತಕ್ಕೆ ಬಂದಿರಲಿಲ್ಲ. ಹೊಸದಾಗಿ ಸಂಧಾನ ನಡೆಸುವಂತೆ ಕರ್ನಾಟಕ ಸರ್ಕಾರವು ಕೇಂದ್ರಕ್ಕೆ 2024ರ ಜೂನ್‌ನಲ್ಲಿ ಒತ್ತಾಯಿಸಿತ್ತು. ಈ ನಡುವೆ, ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ, ಕೇಂದ್ರ ಜಲ ಆಯೋಗದ ಅಧ್ಯಕ್ಷರ ನೇತೃತ್ವದಲ್ಲಿ ಜಲಶಕ್ತಿ ಸಚಿವಾಲಯವು ಹೊಸ ಸಂಧಾನ ಸಮಿತಿ ರಚಿಸಿತ್ತು. ಈ ಸಮಿತಿಯು ಉಭಯ ರಾಜ್ಯಗಳ ನಡುವೆ ಒಂಬತ್ತು ಸಭೆಗಳನ್ನು ನಡೆಸಿತ್ತು ಹಾಗೂ ಯೋಜನಾ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು.

ಆರ್ಥಿಕ ನೀತಿಗಳು ಪಾರದರ್ಶಕವಾಗಿರಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್

ನವದೆಹಲಿ (ಪಿಟಿಐ): ಜಾಗತಿಕ ಆರ್ಥಿಕ ನೀತಿಗಳು ನ್ಯಾಯಯುತ, ಪಾರದರ್ಶಕ ಮತ್ತು ಎಲ್ಲರಿಗೂ ಪ್ರಯೋಜನವಾಗುವಂತೆ ಇರಬೇಕು ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಪ್ರತಿಪಾದಿಸಿದರು.

‘ಬ್ರಿಕ್ಸ್’ ರಾಷ್ಟ್ರಗಳ ನಾಯಕರ ವರ್ಚುವಲ್ ಶೃಂಗಸಭೆಯಲ್ಲಿ ಸೋಮವಾರ ಮಾತನಾಡಿದ ಅವರು, ‘ವ್ಯಾಪಾರ ಮತ್ತು ಹೂಡಿಕೆಗಾಗಿ ಜಗತ್ತು ಇಂದು ಸ್ಥಿರ ವಾತಾವರಣವನ್ನು ಬಯಸುತ್ತಿದೆ’ ಎಂದರು.

‘ಅಂತರರಾಷ್ಟ್ರೀಯ ವ್ಯಾಪಾರ ನೀತಿಯು ಮುಕ್ತ, ನಿಷ್ಪಕ್ಷಪಾತ, ಎಲ್ಲರನ್ನೂ ಒಳಗೊಳ್ಳುವ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ವಿಶೇಷ ಒತ್ತು ನೀಡುವ ತತ್ವಗಳನ್ನು ಆಧರಿಸಿರಬೇಕು’ ಎಂದು ಹೇಳಿದರು.

ಜೈಶಂಕರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿನಿಧಿಯಾಗಿ ಶೃಂಗಸಭೆಯಲ್ಲಿ ಪಾಲ್ಗೊಂಡರು. ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೂ ಶೃಂಗದಲ್ಲಿ ಭಾಗವಹಿಸಿದ್ದಾರೆ.

ನಿರ್ದೇಶಕರೇ ನಿರ್ಮಾಪಕರಾದಾಗ...


• ಅಭಿಲಾಷ್ ಪಿ.ಎಸ್.

ಇತ್ತೀಚೆಗೆ ತೆರೆಕಂಡು ಮೆಚ್ಚುಗೆ, ಯಶಸ್ಸು ಪಡೆದಿರುವ ಎರಡು ಸಿನಿಮಾಗಳೆಂದರೆ ಜೆ.ಪಿ.ತೂಮಿನಾಡು ನಿರ್ದೇಶನದ ‘ಸು ಫ್ರಮ್ ಸೋ’ ಹಾಗೂ ಪುನೀತ್ ರಂಗಸ್ವಾಮಿ ನಿರ್ದೇಶನದ ‘ಏಳುಮಲೆ’. ಈ ಎರಡೂ ಸಿನಿಮಾಗಳಿಗಿರುವ ಸಾಮ್ಯತೆ ಏನೆಂದರೆ, ಇವುಗಳನ್ನು ನಿರ್ಮಿಸಿದವರು ನಿರ್ದೇಶಕರು.

‘ಕಾಟೇರ’ ಖ್ಯಾತಿಯ ತರುಣ್ ಕಿಶೋರ್ ಸುಧೀರ್ ಹಾಗೂ ‘ಗರುಡ ಗಮನ ವೃಷಭ ವಾಹನ’ ಖ್ಯಾತಿಯ ರಾಜ್ ಬಿ.ಶೆಟ್ಟಿ ತಮ್ಮದೇ ತಂಡದಲ್ಲಿದ್ದವರ ಕಥೆಯ ಮೇಲೆ ನಂಬಿಕೆ ಇಟ್ಟು ಸಿನಿಮಾ ಮಾಡಿ ಗೆದ್ದವರು. ಇದೇ ರೀತಿ ನಟ, ನಿರ್ದೇಶಕ ರಕ್ಷಿತ್ ಶೆಟ್ಟಿ ಅವರೂ ತಮ್ಮದೇ ‘ಸೆವೆನ್ ಆಡ್ಸ್’ ಸದಸ್ಯರ ಸಿನಿಮಾ ನಿರ್ಮಾಣ ಮಾಡಿದ್ದರು. ಈ ಪೈಕಿ ‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾ ಗಮನಸೆಳೆದಿತ್ತು. ಈ ರೀತಿ ನಿರ್ದೇಶಕರೇ ನಿರ್ಮಾಪಕರಾದರೆ ಸಿನಿಮಾವೊಂದಕ್ಕೆ ಹಲವು ಲಾಭವಿದೆ. ಆರಂಭದಲ್ಲೇ ಕಥೆಯ ಗುಣಮಟ್ಟದ ಮೌಲ್ಯಮಾಪನವಾಗುತ್ತದೆ, ಅನಗತ್ಯ ಖರ್ಚುಗಳಿಗೆ ಕಡಿವಾಣ ಬೀಳುತ್ತದೆ. ಇಂತಹ ಲಾಭದ ಜೊತೆಗೆ ಕೊಂಚ ಎಡವಿದರೆ ಸಮಸ್ಯೆಯೂ ಎದುರಾಗುತ್ತದೆ. ಇವುಗಳ ಬಗ್ಗೆ ರಾಜ್ ಬಿ.ಶೆಟ್ಟಿ ಹಾಗೂ ‘ಏಳುಮಲೆ’ ನಿರ್ದೇಶಕ ಪುನೀತ್ ರಂಗಸ್ವಾಮಿ ಹೀಗನ್ನುತ್ತಾರೆ.

> ಈ ರೀತಿಯ ಹೆಜ್ಜೆಯಿಂದ ನಿರ್ದೇಶಕರ ಹೊಸ ಪೀಳಿಗೆಯನ್ನು ಸೃಷ್ಟಿಸಲು ಸಾಧ್ಯ. ತನ್ನ ಸುತ್ತಮುತ್ತ ಇರುವವರಲ್ಲಿ ಯಾರಿಗೆ ನಿರ್ದೇಶನದ ಸಾಮರ್ಥ್ಯವಿದೆ ಎಂಬುವುದು ನಿರ್ದೇಶಕನೊಬ್ಬನಿಗೆ ತಿಳಿದಿರುತ್ತದೆ. ಇದರಿಂದ ಸರಿಯಾದ ವ್ಯಕ್ತಿಗೆ ಅವಕಾಶ ಸಿಗುವುದು ಹೆಚ್ಚಾಗುತ್ತದೆ.
> **ರಾಜ್ ಬಿ.ಶೆಟ್ಟಿ**, ನಟ

ಅನಿವಾರ್ಯವಾಗಿ ನಿರ್ಮಾಪಕನಾದೆ: ರಾಜ್



‘ನಾನು ಕನಸಿನಲ್ಲೂ ನಿರ್ಮಾಪಕನಾಗಬೇಕು ಎಂದುಕೊಂಡಿರಲಿಲ್ಲ. ಇದು ಅನಿವಾರ್ಯವಾಗಿ ಆದದ್ದು. ಸಿನಿಮಾ ಕಥೆಯನ್ನು ಪಿಚ್ ಮಾಡುವಾಗ ನಮ್ಮ ಯೋಚನೆಯಂತೇ ನಿರ್ಮಾಪಕರ ಯೋಚನೆ ಇರುವುದಿಲ್ಲ. ನಿರ್ದೇಶಕ–ನಿರ್ಮಾಪಕ ಪರಸ್ಪರ ಜೊತೆಗೂಡಿ ಕೆಲಸ ಮಾಡುವುದೇ ಇಂದಿನ ಅಗತ್ಯ. ಹೊಸ ನಿರ್ದೇಶಕನಿಗೆ ಎದುರಾಗುವ ಸಮಸ್ಯೆಗಳು ಏನೆಂದು ನನಗೆ ಗೊತ್ತು. ನಿರ್ದೇಶಕನಾಗಿದ್ದಾಗ ನನಗೆ ಎದುರಾಗಿದ್ದ ತೊಂದರೆಗಳನ್ನೆಲ್ಲ ಮೊದಲೇ ನಿವಾರಣೆ ಮಾಡಿಕೊಟ್ಟು ಹೊಸ ನಿರ್ದೇಶಕರಿಗೆ ದಾರಿ ಮಾಡಿಕೊಡಬಹುದು. ನಿರ್ಮಾಣವೆಂದರೆ ಬರೀ ಹಣ ಹಾಕುವುದಲ್ಲ. ಬದಲಾಗಿ ಹೊಸ ಹುಡುಗರಿಗೆ ಮಾರ್ಗದರ್ಶಕನಾಗುವುದು. ಈ ರೀತಿ ಮಾಡಿದರೆ ಸಿನಿಮಾಗಳಿಗೆ ಲಾಭ ಹೆಚ್ಚು. ಪ್ರಸ್ತುತ ದುಡ್ಡು ಹಾಕುವುದಷ್ಟೇ ನಿರ್ಮಾಣ ಎಂದುಕೊಂಡಿದ್ದಾರೆ. ಇದು ತಪ್ಪು. ಒಂದು ಸಿನಿಮಾಗೆ ಯಾವ ಕಲಾವಿದ, ಯಾವ ತಂತ್ರಜ್ಞ ಬಂದರೆ ನಿರ್ದೇಶಕನಿಗೆ ಸಿನಿಮಾ ಕಟ್ಟಲು ಸುಲಭವಾಗುತ್ತದೆ ಎನ್ನುವ ಅನುಭವವನ್ನು ಅಗತ್ಯ ಇದ್ದಾಗ ಧಾರೆ ಎರೆಯಬೇಕು. ಇದು ಬಹಳ ಮುಖ್ಯ. ಹಾಗೆಂದು ಇದು ಅತಿಯಾಗಬಾರದು. ಈ ಎಲ್ಲಾ ಕಾರಣದಿಂದ ನಿರ್ದೇಶಕರು ನಿರ್ಮಾಪಕರಾಗಿ ಬದಲಾಗುತ್ತಿದ್ದಾರೆ. ಇದರಿಂದ ಅಂದುಕೊಂಡ ಕನಸನ್ನು ಸರಿಯಾಗಿ ಕಟ್ಟಲು, ಗುಣಮಟ್ಟದ ಸಿನಿಮಾ ನೀಡಲು ಸಾಧ್ಯವಾಗುತ್ತದೆ. ಅನಗತ್ಯ ಖರ್ಚು-ವೆಚ್ಚಗಳಿಗೂ ಕಡಿವಾಣ ಬೀಳುತ್ತದೆ’ ಎಂದರು ರಾಜ್ ಬಿ.ಶೆಟ್ಟಿ.

‘ನಿರ್ದೇಶಕನೊಬ್ಬ ನಿರ್ಮಾಪಕನಾದಾಗ ದುಡ್ಡು ಹಾಕಿ ನಿಂತರೆ ಸಾಲುವುದಿಲ್ಲ. ಈ ಪ್ರಾಜೆಕ್ಟ್ ಏತಕ್ಕಾಗಿ ಆಯ್ಕೆ ಮಾಡಿದೆ? ಅದು ಎಲ್ಲಿ ದಾರಿ ತಪ್ಪುತ್ತಿದೆ? ಎನ್ನುವುದನ್ನು ಸೂಕ್ಷ್ಮವಾಗಿ ನೋಡುತ್ತಿರಬೇಕು. ನಮ್ಮ ಸಿನಿಮಾದಷ್ಟೇ ಜತನದಿಂದ ಕಾಣಬೇಕು. ಈ ರೀತಿ ಮಾಡದೇ ಇದ್ದಾಗ ಪ್ರಾಜೆಕ್ಟ್‌ಗಳು ಹಿಡಿತ ತಪ್ಪುತ್ತವೆ, ಇದರ ಪರಿಣಾಮ ಹೊಸಬರಿಗೆ ಅವಕಾಶ ಸಿಗುವುದು ಕಡಿಮೆಯಾಗುತ್ತದೆ’ ಎನ್ನುತ್ತಾರೆ ರಾಜ್.

‘ನಿರ್ದೇಶಕನೊಬ್ಬ ನಿರ್ಮಾಪಕನಾದ ಸಂದರ್ಭದಲ್ಲಿ ಆತ ತನಗಿರುವ ಕಲ್ಪನೆಗಳಿಗೆ ಹೋಲಿಕೆಯಾಗುವ ಕಥೆಗಳನ್ನಷ್ಟೇ ಬೆಂಬಲಿಸಿದರೆ ಏಕತಾನತೆಯ ಸಿನಿಮಾಗಳು ಆಗುತ್ತವೆ. ಜೊತೆಗೆ ಹೆಚ್ಚಿನ ಹಸ್ತಕ್ಷೇಪದ ಸಾಧ್ಯತೆಯೂ ಇರುತ್ತದೆ. ಹೊಸ ನಿರ್ದೇಶಕರು ಹೇಳುವ ಭಿನ್ನ ಕಥೆಯನ್ನು ಒಪ್ಪಿಕೊಳ್ಳುವ ಮನಃಸ್ಥಿತಿ ಇರದೇ ಇದ್ದರೂ ಸಮಸ್ಯೆಯೇ. ‘ಗ್ರೂಪಿಸಂ’ ಮಾತುಗಳೂ ಕೇಳಿಬರಬಹುದು. ಒಬ್ಬ ನಿರ್ದೇಶಕ ತನ್ನ ಶಕ್ತಿಯನ್ನು ಭಿನ್ನ ಕಲ್ಪನೆಯ ನಿರ್ದೇಶಕರನ್ನು ನೋಡಲು ಬಳಸಿಕೊಂಡರೆ ಯಶಸ್ವಿ ಸಿನಿಮಾಗಳನ್ನು ನೀಡಲು ಸಾಧ್ಯ’ ಎಂದರು ರಾಜ್.

‘ಸಿನಿಮಾಗೆ ಪೂರಕವಾದ ಚರ್ಚೆ ಅಗತ್ಯ’




ಪುನೀತ್ ರಂಗಸ್ವಾಮಿ, ತರುಣ್ ಸುಧೀರ್

‘ಒಬ್ಬ ಯಶಸ್ವಿ ನಿರ್ದೇಶಕರೇ ನಿರ್ಮಾಪಕರಾಗಿ ಸಿಕ್ಕಿದಾಗ ಆಗುವ ಲಾಭ ದುಪ್ಪಟ್ಟು’ ಎನ್ನುತ್ತಾ ಮಾತು ಆರಂಭಿಸಿದ ಪುನೀತ್ ರಂಗಸ್ವಾಮಿ, ‘ಅನುಭವಿ ನಿರ್ದೇಶಕರ ಸಲಹೆ, ಸೂಚನೆಗಳು ಎಲ್ಲವೂ ನಮಗೆ ದೊರೆಯುತ್ತದೆ. ಈ ಬದಲಾವಣೆಗಳನ್ನು ಸ್ವೀಕರಿಸುವ ಮನಃಸ್ಥಿತಿ ಹೊಸ ನಿರ್ದೇಶಕರಿಗೆ ಇರಬೇಕು. ಹೀಗಾದಾಗಷ್ಟೇ ಇಂತಹ ಸಿನಿಮಾಗಳು ಹೊರಬರಲು ಸಾಧ್ಯ. ಜೊತೆಗೆ ಮುಖ್ಯವಾಗಿ ನಿರ್ಮಾಪಕರನ್ನು ಒಪ್ಪಿಸುವ ಕೆಲಸವೂ ಸುಲಭ. ಹೊಸ ನಿರ್ಮಾಪಕರಾಗಿದ್ದರೆ ಬಜೆಟ್ ಬಗ್ಗೆ, ಕಲಾವಿದರ ಬಗ್ಗೆ, ಶೂಟಿಂಗ್ ದಿನಗಳ ಬಗ್ಗೆ ಎಲ್ಲವನ್ನೂ ವಿವರಿಸಬೇಕು, ಮನವರಿಕೆ ಮಾಡಿಕೊಡಬೇಕು. ಆದರೆ ನಮ್ಮ ನಿರ್ಮಾಪಕರಿಗೆ ಏನು ಬೇಕು, ಏನು ಬೇಡ ಎನ್ನುವುದು ಮೊದಲೇ ತಿಳಿದಿತ್ತು. ಕೇಳುವುದಷ್ಟೇ ನನ್ನ ಕೆಲಸವಾಗಿತ್ತು’ ಎಂದರು.

‘ನನ್ನ ಹಾಗೂ ತರುಣ್ ಅವರ ಮೇಕಿಂಗ್ ಮಾದರಿ ಬೇರೆ ಬೇರೆ. ಆದರೆ ನಾನು ತರುಣ್ ಅವರ ಜೊತೆಯೇ ಕೆಲಸ ಮಾಡಿದ್ದ ಕಾರಣ ಸಿನಿಮಾ ಮಾಡುವ ಪ್ಲ್ಯಾನಿಂಗ್ ಕಲಿತಿದ್ದೆ. ಈ ಸಿನಿಮಾ ಮಾಡುವಾಗ ನಾನೇ ಒಂದಿಷ್ಟು ಇತಿಮಿತಿಗಳನ್ನು ಹಾಕಿಕೊಂಡಿದ್ದೆ. ಹೆಚ್ಚಿನ ಜೂನಿಯರ್ ಕಲಾವಿದರು ಬೇಡ, ಹೆಚ್ಚಿನ ಸೆಟ್ ಬೇಡ ಎಂದಿದ್ದೆ. ಆದರೆ ಈ ವಿಚಾರದಲ್ಲಿ ತರುಣ್ ಅವರು ಕೆಲ ಸಲಹೆಗಳನ್ನು ನೀಡಿ ಬದಲಾವಣೆಗೆ ಸೂಚಿಸಿದರು. ಒಬ್ಬ ನಿರ್ದೇಶಕನ ಕಥೆಯನ್ನು ಈ ರೀತಿಯ ಸಲಹೆಗಳ ಮೂಲಕ ಇನ್ನಷ್ಟು ಉತ್ತಮಪಡಿಸಿದರೆ ಒಳ್ಳೆಯದಲ್ಲವೇ. ಉದಾಹರಣೆಗೆ ಸಿನಿಮಾದೊಳಗಿನ ನಟ ಜಗಪತಿ ಬಾಬು ಅವರ ಪಾತ್ರ. ಈ ಪಾತ್ರಕ್ಕೆ ಕಥೆಯಲ್ಲಿ ಹೆಚ್ಚಿನ ಪ್ರಾಶಸ್ತ್ಯವಿಲ್ಲ. ಹೀಗಾಗಿ ಈ ಪಾತ್ರಕ್ಕೆ ಸಾಮಾನ್ಯ ಕಲಾವಿದರೊಬ್ಬರು ಸಾಕು ಎಂದು ನಾನು ಹೇಳಿದ್ದೆ. ಆದರೆ ರಿಯಲ್ ಲೈಫ್‌ನಲ್ಲಿ ಈ ಪಾತ್ರ ಬಹಳ ಗಟ್ಟಿಯಾಗಿದೆ. ಜಗಪತಿ ಬಾಬು ಅವರಂಥ ಕಲಾವಿದ ಇದನ್ನು ಸಮರ್ಥವಾಗಿ ದಾಟಿಸುತ್ತಾರೆ ಎನ್ನುವುದು ತರುಣ್ ಅವರ ಯೋಚನೆಯಾಗಿತ್ತು. ಪ್ರೇಕ್ಷಕರು ಕುತೂಹಲದಿಂದ ಈ ಕಥೆಯನ್ನು ನೋಡಲು ಆ ಪಾತ್ರವೂ ಮುಖ್ಯವಾಗುತ್ತದೆ ಎಂದಿದ್ದರು. ಹೀಗೆ ನಿರ್ಮಾಪಕ–ನಿರ್ದೇಶಕರ ನಡುವೆ ಸಿನಿಮಾಗೆ ಪೂರಕವಾದ ವಿಷಯಗಳ ಬಗ್ಗೆ ಚರ್ಚೆಯಾದರೆ ಉತ್ತಮ’ ಎನ್ನುತ್ತಾರೆ ಪುನೀತ್.

ನಿರ್ದೇಶಕನ ಕ್ಯಾಪ್ ತೊಟ್ಟ ಪೃಥ್ವಿ ಅಂಬಾರ್





ಪೃಥ್ವಿ ಅಂಬಾರ್

‘ದಿಯಾ’ ಖ್ಯಾತಿಯ ನಟ ಪೃಥ್ವಿ ಅಂಬಾರ್ ಇದೀಗ ನಿರ್ದೇಶನಕ್ಕೆ ಇಳಿದಿದ್ದಾರೆ. ಅವರು ನಿರ್ದೇಶಿಸಿರುವ ಮೊದಲ ತುಳು ಸಿನಿಮಾದ ಶೀರ್ಷಿಕೆ ಅನಾವರಣಗೊಂಡಿದೆ. ‘ಬುಲ್‌ಡಾಗ್’ ಹೆಸರಿನ ಈ ಸಿನಿಮಾದಲ್ಲಿ ಖ್ಯಾತ ರಂಗಭೂಮಿ, ಸಿನಿಮಾ ನಟ ಅರವಿಂದ ಬೋಳಾರ್ ಮುಖ್ಯಭೂಮಿಕೆಯಲ್ಲಿದ್ದಾರೆ.

ಲಂಚುಲಾಲ್ ಕೆ.ಎಸ್. ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದು, ಭಿನ್ನವಾದ ಪಾತ್ರದಲ್ಲಿ ಅರವಿಂದ ಬೋಳಾರ್ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ. ‘ದಿಯಾ’ ಬಳಿಕ, ‘ಜೂನಿ’, ‘ಫಾರ್ ರಿಜಿಸ್ಟ್ರೇಷನ್’, ‘ಮತ್ಸ್ಯಗಂಧ’, ‘ಭುವನಂ ಗಗನಂ’, ‘ಕೊತ್ತಲವಾಡಿ’ ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ನಟಿಸಿದ ಪೃಥ್ವಿ ಸದ್ಯ ‘ಚೌಕಿದಾರ್’ ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಜೊತೆಗೆ ನಾಗತಿಹಳ್ಳಿ ಚಂದ್ರಶೇಖರ ಅವರು ನಿರ್ದೇಶಿಸಿರುವ ‘ಅಮೆರಿಕ ಅಮೆರಿಕ-2’ ಚಿತ್ರ ಕೂಡ ಬಿಡುಗಡೆಗೆ ಸಿದ್ಧವಾಗಿದೆ. ‘ದಿಯಾ’ ಸಿನಿಮಾ ನಿರ್ದೇಶಕರ ಜೊತೆಗೂ ಸಿನಿಮಾವೊಂದನ್ನು ಪೃಥ್ವಿ ಮಾಡಲಿದ್ದಾರೆ.

‘ಬುಲ್‌ಡಾಗ್’ ಸಿನಿಮಾವನ್ನು ತುಳುವಿನ ಜೊತೆಗೆ ಕನ್ನಡದಲ್ಲೂ ರಿಲೀಸ್ ಮಾಡುವ ಯೋಜನೆಯನ್ನು ಪೃಥ್ವಿ ಹಾಕಿಕೊಂಡಿದ್ದು, ಈ ಸಿನಿಮಾ ಮೂಲಕ ತಂಡವೊಂದನ್ನು ರಚಿಸಿಕೊಂಡು ಕನ್ನಡದಲ್ಲೂ ಸಿನಿಮಾ ನಿರ್ದೇಶನ ಮಾಡುವುದಕ್ಕೆ ಅವರು ಯೋಚಿಸಿದ್ದಾರೆ.

ಒಟಿಟಿಯಲ್ಲಿ ಸು ಫ್ರಮ್ ಸೋ



ಸು ಫ್ರಮ್ ಸೋ

ನಟ ರಾಜ್ ಬಿ.ಶೆಟ್ಟಿ ಅವರ ಲೈಟರ್ ಬುದ್ಧ ಫಿಲಂಸ್ ನಿರ್ಮಾಣ ಸಂಸ್ಥೆಯಡಿ ನಿರ್ಮಾಣಗೊಂಡ ‘ಸು ಫ್ರಮ್ ಸೋ’ ಸಿನಿಮಾ ಇಂದಿನಿಂದ (ಸೆ.9) ಜಿಯೋ ಹಾಟ್‌ಸ್ಟಾರ್ ಒಟಿಟಿಯಲ್ಲಿ ಪ್ರಸಾರವಾಗಲಿದೆ.

ಸುಮಾರು ₹5 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ಈ ಸಿನಿಮಾವು ಬಾಕ್ಸ್ ಆಫೀಸ್‌ನಲ್ಲಿ ₹100 ಕೋಟಿ ಕ್ಲಬ್ ಸೇರಿದೆ. ಕನ್ನಡದಲ್ಲಿ ತೆರೆಕಂಡ ಬಳಿಕ ಮಲಯಾಳ ಹಾಗೂ ತೆಲುಗು ಭಾಷೆಗೆ ಡಬ್ ಆದ ಈ ಸಿನಿಮಾ ಮುಂಬೈನಲ್ಲೂ ಸದ್ದು ಮಾಡಿತ್ತು. ಜೆ.ಪಿ.ತೂಮಿನಾಡು ನಿರ್ದೇಶನದ ಈ ಸಿನಿಮಾವನ್ನು ನಟ ಅಜಯ್ ದೇವಗನ್, ಸುದೀಪ್, ರಿಷಬ್ ಶೆಟ್ಟಿ ಹೊಗಳಿದ್ದರು. ಸಿನಿಮಾವನ್ನು ಶಶಿಧರ್ ಶೆಟ್ಟಿ ಬರೋಡ, ರವಿ ರೈ ಕಳಸ, ರಾಜ್ ಬಿ ಶೆಟ್ಟಿ ಮೂವರು ಸೇರಿ ನಿರ್ಮಿಸಿದ್ದರು. ರಾಜ್ ಬಿ.ಶೆಟ್ಟಿ, ಜೆ.ಪಿ.ತೂಮಿನಾಡು, ಶನೀಲ್ ಗೌತಮ್, ಪ್ರಕಾಶ್ ಕೆ.ತೂಮಿನಾಡು, ದೀಪಕ್ ರೈ ಪಾಣಾಜೆ, ಮೈಮ್ ರಾಮದಾಸ್, ಅರ್ಜುನ್ ಕಜೆ ನಟಿಸಿದ್ದ ಈ ಸಿನಿಮಾವನ್ನು ಮಂಗಳೂರು ಸುತ್ತಮುತ್ತಲಿನ ವೇಣೂರು, ಕಕ್ಕಪದವು ಎಂಬಲ್ಲಿ ಚಿತ್ರೀಕರಿಸಲಾಗಿತ್ತು.

ಚುಟುಕು ಸುದ್ದಿ

ಅಂಗನವಾಡಿ ಸಿಬ್ಬಂದಿ ಗೌರವಧನ ಹೆಚ್ಚಳ

ಪಟ್ನಾ (ಪಿಟಿಐ): ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆಯೇ ಬಿಹಾರದಲ್ಲಿ ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕಿಯರ ಗೌರವಧನವನ್ನು ಹೆಚ್ಚಳ ಮಾಡಲಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೋಮವಾರ ಘೋಷಣೆ ಮಾಡಿದ್ದಾರೆ.

‘ಅಂಗನವಾಡಿ ಕಾರ್ಯಕರ್ತೆಯರು ಇನ್ನು ಮುಂದೆ ₹7 ಸಾವಿರಕ್ಕೆ ಬದಲಾಗಿ ₹9 ಸಾವಿರ ಪಡೆಯಲಿದ್ದಾರೆ. ಅಂಗನವಾಡಿ ಸಹಾಯಕಿಯರ ಗೌರವಧನವನ್ನು ₹4 ಸಾವಿರದಿಂದ ₹4,500ಕ್ಕೆ ಏರಿಕೆ ಮಾಡಲಾಗಿದೆ’ ಎಂದು ‘ಎಕ್ಸ್’ನಲ್ಲಿ ಮಾಡಿದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

17ರಂದು ವಿಶೇಷ ಅಭಿಯಾನಕ್ಕೆ ಚಾಲನೆ

ನವದೆಹಲಿ (ಪಿಟಿಐ): ಮಹಿಳೆಯರು ಮತ್ತು ಮಕ್ಕಳಿಗೆ ಉತ್ತಮ ಆರೋಗ್ಯ ಸೇವೆಗಳನ್ನು ನೀಡುವ ಸಲುವಾಗಿ ‘ಸ್ವಸ್ಥ ನಾರಿ, ಸಶಕ್ತ ಪರಿವಾರ’ ಎಂಬ ವಿಶೇಷ ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 17ರಂದು ಚಾಲನೆ ನೀಡಲಿದ್ದಾರೆ.

ದೇಶದಾದ್ಯಂತ ಆಯುಷ್ಮಾನ್ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಇತರ ವೈದ್ಯಕೀಯ ಕೇಂದ್ರಗಳಲ್ಲಿ 75 ಸಾವಿರ ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗಿದೆ.

ನಿಧನ ವಾರ್ತೆ

ಸಂಕರ್ಷಣ್ ಠಾಕೂರ್



ನವದೆಹಲಿ (ಪಿಟಿಐ): ‘ದಿ ಟೆಲಿಗ್ರಾಫ್’ ಸಂಪಾದಕ ಸಂಕರ್ಷಣ್ ಠಾಕೂರ್ (63) ಅವರು ದೀರ್ಘಕಾಲದ ಅನಾರೋಗ್ಯದ ನಂತರ ಸೋಮವಾರ ಗುರುಗ್ರಾಮದ ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ಸಾಕ್ಷಾತ್ ವರದಿ ಮತ್ತು ವಿಶ್ಲೇಷಣೆಗೆ ಅವರು ಹೆಸರುವಾಸಿಯಾಗಿದ್ದರು.

1962ರಲ್ಲಿ ಪಟ್ನಾದಲ್ಲಿ ಜನಿಸಿದ ಅವರು, ಪತ್ರಕರ್ತ ಜನಾರ್ದನ್ ಠಾಕೂರ್ ಅವರ ಪುತ್ರ. ಆರಂಭಿಕ ಶಿಕ್ಷಣವನ್ನು ಪಟ್ನಾದ ಸೇಂಟ್ ಕ್ಸೇವಿಯರ್‌ನಲ್ಲಿ ಪಡೆದ ಅವರು, ನಂತರ ದೆಹಲಿಯಲ್ಲಿ ಶಿಕ್ಷಣ ಮುಂದುವರಿಸಿದರು. ದೆಹಲಿ ವಿಶ್ವವಿದ್ಯಾಲಯದ ಹಿಂದೂ ಕಾಲೇಜಿನಲ್ಲಿ ಅವರು ರಾಜಕೀಯ ವಿಜ್ಞಾನದಲ್ಲಿ ಪದವಿ ಪಡೆದರು.

1984ರಲ್ಲಿ ‘ಸಂಡೆ’ ನಿಯತಕಾಲಿಕದಲ್ಲಿ ಪತ್ರಿಕೋದ್ಯಮ ವೃತ್ತಿ ಆರಂಭಿಸಿದ ಠಾಕೂರ್ ಅವರಿಗೆ ಪತ್ನಿ ಸೋನಾ, ಮಗಳು ಜಹಾನ್ ಮತ್ತು ಮಗ ಆಯುಷ್ಮಾನ್ ಇದ್ದಾರೆ. ‘ಇಂಡಿಯನ್ ಎಕ್ಸ್‌ಪ್ರೆಸ್’, ‘ತೆಹಲ್ಕಾ’ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಠಾಕೂರ್ ಕೆಲಸ ಮಾಡಿದ್ದಾರೆ.

ಅರ್ಜಿ ವರ್ಗಾವಣೆಗೆ ‘ಸುಪ್ರೀಂ’ ಒಪ್ಪಿಗೆ

ಆನ್‌ಲೈನ್ ಗೇಮಿಂಗ್ ನಿಷೇಧ: ಮನವಿ ಸಲ್ಲಿಸಿದ್ದ ಕೇಂದ್ರ ಸರ್ಕಾರ

ಪ್ರಜಾವಾಣಿ ವಾರ್ತೆ



ನವದೆಹಲಿ: ‘ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಕಾಯ್ದೆ’ ಪ್ರಶ್ನಿಸಿ ಮೂರು ಹೈಕೋರ್ಟ್‌ಗಳಿಗೆ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸುವಂತೆ ಕೋರಿ ಕೇಂದ್ರ ಸರ್ಕಾರ ಸಲ್ಲಿಸಿರುವ ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ಪುರಸ್ಕರಿಸಿದೆ.

ದೆಹಲಿ, ಕರ್ನಾಟಕ ಮತ್ತು ಮಧ್ಯಪ್ರದೇಶ ಹೈಕೋರ್ಟ್‌ಗಳ ಮುಂದೆ ಬಾಕಿ ಇರುವ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠವು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಿತು.

ಕಾಯ್ದೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳು ಮತ್ತು ಇದುವರೆಗೆ ನಡೆದಿರುವ ವಿಚಾರಣೆಯ ಸಂಪೂರ್ಣ ದಾಖಲೆಗಳನ್ನು ಒಂದು ವಾರದೊಳಗೆ ವರ್ಗಾಯಿಸುವಂತೆ ಪೀಠವು ಸಂಬಂಧಪಟ್ಟ ಹೈಕೋರ್ಟ್‌ಗಳಿಗೆ ನಿರ್ದೇಶಿಸಿತು.

ಕೇಂದ್ರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲರಾದ ಸಿ.ಎ.ಸುಂದರಂ ಹಾಗೂ ಅರವಿಂದ ದಾತಾರ್ ಅವರ ವಾದ ಆಲಿಸಿದ ಪೀಠ, ‘ಸಮಯವನ್ನು ಉಳಿಸಲಿಕ್ಕಾಗಿ ಈ ವರ್ಗಾವಣೆ ಪ್ರಕ್ರಿಯೆ ಡಿಜಿಟಲ್ ರೂಪದಲ್ಲಿ ನಡೆಯಲಿ’ ಎಂದು ಹೇಳಿತು.

ಹೈಕೋರ್ಟ್‌ಗಳಿಗೆ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸುವಂತೆ ಕೋರಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಮನವಿ ಮಾಡಿತ್ತು.

ಕಾನೂನಿನಲ್ಲಿರುವ ಅಂಶಗಳ ಕುರಿತು ಒಂದೇ ರೀತಿಯ ಪ್ರಶ್ನೆಗಳನ್ನು ಎತ್ತಿರುವ ಹಲವು ಅರ್ಜಿಗಳು ವಿವಿಧ ಹೈಕೋರ್ಟ್‌ಗಳ ಮುಂದೆ ಬಾಕಿಯಿರುವುದರಿಂದ, ಅಭಿಪ್ರಾಯಗಳ ಭಿನ್ನತೆ ಅಥವಾ ಬಹುವಿಧದ ವಿಚಾರಣೆಗಳನ್ನು ತಪ್ಪಿಸಲು ಅದನ್ನು ಈ ನ್ಯಾಯಾಲಯ (ಸುಪ್ರೀಂ ಕೋರ್ಟ್) ಅಥವಾ ಯಾವುದಾದರೂ ಹೈಕೋರ್ಟ್‌ಗೆ ವರ್ಗಾಯಿಸುವುದು ಒಳ್ಳೆಯದು ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

ಆನ್‌ಲೈನ್ ಜೂಜು ನಿಷೇಧಿಸಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕಾಯ್ದೆಯನ್ನು ಪ್ರಶ್ನಿಸಿ ಹೆಡ್ ಡಿಜಿಟಲ್ ವರ್ಕ್ಸ್ ಪ್ರೈವೆಟ್ ಲಿಮಿಟೆಡ್, ಬಘೀರಾ ಕೇರಮ್ ಪ್ರೈವೆಟ್ ಲಿಮಿಟೆಡ್ ಮತ್ತು ಕ್ಲಬ್‌ಬೂಮ್ ಇಲೆವೆನ್ ಸ್ಪೋರ್ಟ್ಸ್ ಆ್ಯಂಡ್ ಎಂಟರ್‌ಟೇನ್‌ಮೆಂಟ್ ಪ್ರೈವೆಟ್ ಲಿಮಿಟೆಡ್ ಕಂಪನಿಗಳು ಕ್ರಮವಾಗಿ ಕರ್ನಾಟಕ ಹೈಕೋರ್ಟ್, ದೆಹಲಿ ಹೈಕೋರ್ಟ್ ಹಾಗೂ ಮಧ್ಯ ಪ್ರದೇಶ ಹೈಕೋರ್ಟ್‌ಗಳಿಗೆ ಅರ್ಜಿ ಸಲ್ಲಿಸಿವೆ.

‘ಪರೀಕ್ಷಾ ವ್ಯವಸ್ಥೆಯನ್ನೇ ಹಾಳು ಮಾಡಿದ್ದೀರಿ’



ನವದೆಹಲಿ (ಪಿಟಿಐ): ಸಾರ್ವಜನಿಕ ಪರೀಕ್ಷಾ ವ್ಯವಸ್ಥೆಯನ್ನೇ ಹಾಳು ಮಾಡಿದ್ದೀರಿ ಎಂದು ಉತ್ತರ ಪ್ರದೇಶದಲ್ಲಿ ಸಿಟಿಇಟಿ ಪರೀಕ್ಷೆ ಬರೆಯಲು ಬೇರೊಬ್ಬ ವ್ಯಕ್ತಿಯನ್ನು ಕಳುಹಿಸಿದ್ದ ಪ್ರಕರಣದ ಆರೋಪಿಗೆ ಸುಪ್ರೀಂ ಕೋರ್ಟ್ ಸೋಮವಾರ ಛೀಮಾರಿ ಹಾಕಿತು.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರು, ಬಾಲಿವುಡ್ ಸಿನಿಮಾ ‘ಮುನ್ನಾಭಾಯಿ ಎಂಬಿಬಿಎಸ್’ ಉಲ್ಲೇಖಿಸಿ, ‘ಮುನ್ನಾಭಾಯಿ ಜೈಲಿನಲ್ಲಿಯೇ ಇರಲಿ’ ಎಂದು ಹೇಳಿದರು.

‘ನಿಮ್ಮಂಥವರಿಂದಾಗಿಯೇ ಸಾಕಷ್ಟು ಆಕಾಂಕ್ಷಿಗಳು ಕಷ್ಟ ಅನುಭವಿಸುತ್ತಿದ್ದಾರೆ’ ಎಂದು ಹೇಳಿದರು. ಅರ್ಜಿದಾರರ ಪರ ಹಾಜರಿದ್ದ ವಕೀಲರು, ಪ್ರಕರಣದಲ್ಲಿ ಮೂವರ ವಿರುದ್ಧ ದೋಷಾರೋಪಪಟ್ಟಿ ಸಲ್ಲಿಸಲಾಗಿತ್ತು. ಈ ಪೈಕಿ ಇಬ್ಬರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ ಎಂದರು.

ಜಾಮೀನು ನಿರಾಕರಿಸಿದ್ದ ಅಲಹಾಬಾದ್ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿಗೆ ಪ್ರತಿಕ್ರಿಯೆ ನೀಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ನ್ಯಾಯಪೀಠ ನೋಟಿಸ್ ರವಾನಿಸಿತು. ನಂತರ ಅರ್ಜಿ ವಿಚಾರಣೆಯನ್ನು ನಾಲ್ಕು ವಾರ ಮುಂದೂಡಿತು.

ಅವಧಿ ಪೂರ್ವ ಬಿಡುಗಡೆಗೆ ನಿರಾಕರಣೆ

ಜೈಲಿನಲ್ಲಿದ್ದ ಉಗ್ರರ ಬಿಡುಗಡೆಗಾಗಿ ಸರ್ಕಾರದ ಮೇಲೆ ಒತ್ತಡ ಹೇರುವ ಉದ್ದೇಶದಿಂದ ನಾಲ್ವರು ವಿದೇಶಿ ಪ್ರಜೆಗಳನ್ನು ಅಪಹರಿಸಿದ್ದ ಭಯೋತ್ಪಾದನೆ ಪಿತೂರಿ ಪ್ರಕರಣದ ದೋಷಿಯ ಅವಧಿಪೂರ್ವ ಬಿಡುಗಡೆಗೆ ಕೋರಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾಗೊಳಿಸಿದೆ.

ಆತ ಮಾಡಿರುವ ಅಪರಾಧವು ಗಂಭೀರ ಸ್ವರೂಪದ್ದು ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿತು.

ಅವಧಿ ಪೂರ್ವ ಬಿಡುಗಡೆ ಕೋರಿದ್ದ ನಾಸಿರ್ ಮಹಮ್ಮದ್ ಸೊದೊಜೆ ಅಲಿಯಾಸ್ ಅಫ್ತಾಬ್ ಅಹ್ಮದ್‌ಗೆ ಮೊದಲು ಮರಣದಂಡನೆ ಶಿಕ್ಷೆ ವಿಧಿಸಲಾಗಿತ್ತು. ನಂತರ ಸುಪ್ರೀಂ ಕೋರ್ಟ್ 2003ರಲ್ಲಿ ಜೀವಾವಧಿ ಶಿಕ್ಷೆಗೆ ಇಳಿಸಿತ್ತು.

ಕೇರಳ: ವಿರಳ ಮಿದುಳು ಸೋಂಕಿಗೆ ಮತ್ತೊಬ್ಬರು ಬಲಿ



ಮಲಪ್ಪುರಂ (ಕೇರಳ)(ಪಿಟಿಐ): ಅತ್ಯಂತ ವಿರಳ ಮತ್ತು ಮಾರಣಾಂತಿಕ ಮಿದುಳು ಸೋಂಕಾದ ಅಮೀಬಿಕ್ ಮೆನಿಂಗೋಯೆನ್‌ಸೆಫಾಲಿಟಿಸ್ ಕಾಯಿಲೆಗೆ ತುತ್ತಾಗಿ ಕೇರಳದಲ್ಲಿ ಮತ್ತೊಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಆಗಸ್ಟ್‌ನಿಂದ ಈ ಕಾಯಿಲೆಗೆ ತುತ್ತಾಗಿ ಮೃತಪಟ್ಟವರ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ.

ವಂಡೂರು ಜಿಲ್ಲೆಯ 54 ವರ್ಷದ ಮಹಿಳೆ ಸೋಂಕಿನಿಂದಾಗಿ ಸೋಮವಾರ ಮೃತಪಟ್ಟರು ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದರು.

ಶನಿವಾರ 45 ವರ್ಷ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಇದಕ್ಕೂ ಮುನ್ನ ಆಗಸ್ಟ್‌ನಲ್ಲಿ ಮೂವರು ಮೃತಪಟ್ಟಿದ್ದಾರೆ. ಸೋಂಕಿನ ಲಕ್ಷಣಗಳಿರುವ ಅನೇಕರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಸೋಂಕು ಹೆಚ್ಚುತ್ತಿರುವ ಕಾರಣ ಕೇರಳ ಆರೋಗ್ಯ ಇಲಾಖೆಯು ವಿಶೇಷ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಆಧಾರ್ ಪರಿಗಣನೆಗೆ ‘ಸುಪ್ರೀಂ’ ಸೂಚನೆ

ಒಂದನೇ ಪುಟದಿಂದ...

ಮತದಾರ ಸಲ್ಲಿಸಿದ ಆಧಾರ್ ಕಾರ್ಡ್ ಅಸಲಿ ಹೌದೇ ಅಲ್ಲವೇ ಎನ್ನುವುದನ್ನು ಆಯೋಗವು ಪರಿಶೀಲಿಸಬಹುದು ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ಅಕ್ರಮ ವಲಸಿಗರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕೆಂದು ಯಾರೂ ಬಯಸುತ್ತಿಲ್ಲ. ಆಯೋಗವು ನೈಜ ಮತದಾರರಿಗೆ ಮಾತ್ರ ಮತ ಚಲಾವಣೆಗೆ ಅವಕಾಶ ನೀಡಬೇಕು. ನಕಲಿ ದಾಖಲೆಗಳ ಆಧಾರದಲ್ಲಿ ನೈಜ ಪ್ರಜೆಗಳು ಎಂದು ಹೇಳಿಕೊಳ್ಳುತ್ತಿರುವವರನ್ನು ಮತದಾರರ ಪಟ್ಟಿಯಿಂದ ಹೊರಹಾಕಬೇಕು’ ಎಂದು ಕೋರ್ಟ್ ಸ್ಪಷ್ಟಪಡಿಸಿತು.

ಆಧಾರ್ ಅನ್ನು ಗುರುತಿನ ದಾಖಲೆಯಾಗಿ ಸ್ವೀಕರಿಸುವ ಸಂದರ್ಭದಲ್ಲಿ ಅಧಿಕಾರಿಗಳಿಗೆ ಅಗತ್ಯವಿರುವ ನಿರ್ದೇಶನಗಳನ್ನು ನೀಡುವಂತೆ ಆಯೋಗಕ್ಕೆ ನ್ಯಾಯಪೀಠ ಹೇಳಿತು.

ಇದೇ ವೇಳೆ, ಆಧಾರ್ ಕಾರ್ಡನ್ನು ಗುರುತಿನ ದಾಖಲೆಯಾಗಿ ಸ್ವೀಕರಿಸದ್ದಕ್ಕೆ ಸಂಬಂಧಿಸಿದಂತೆ ನೀಡಿದ್ದ ಶೋಕಾಸ್ ನೋಟಿಸ್‌ಗೆ ವಿವರಣೆ ನೀಡುವಂತೆ ಕೇಳಿತು. ಆಯೋಗದ ಪರ ಹಾಜರಿದ್ದ ಹಿರಿಯ ವಕೀಲ ರಾಕೇಶ್ ದ್ವಿವೇದಿ ಅವರು, 99.6ರಷ್ಟು ಮತದಾರರ ಹೆಸರನ್ನು ಒಳಗೊಂಡ ಕರಡು ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು.

ಎ.ಸಿ ಕಂಪ್ರೆಸರ್ ಸ್ಫೋಟ: 3 ಸಾವು



ಕಟ್ಟಡಕ್ಕೆ ಹಾನಿಯಾಗಿದೆ – ಪಿಟಿಐ ಚಿತ್ರ


ಫರೀದಾಬಾದ್, ಹರಿಯಾಣ (ಪಿಟಿಐ): ಇಲ್ಲಿನ ಮನೆಯೊಂದರಲ್ಲಿ ಎ.ಸಿ ಕಂಪ್ರೆಸರ್ ಸ್ಫೋಟಗೊಂಡು, ದಂಪತಿ ಹಾಗೂ ಮಗಳು ಮೃತಪಟ್ಟ ಪ್ರಕರಣ ಸೋಮವಾರ ಬೆಳಿಗ್ಗೆ ನಡೆದಿದೆ.

ಇಲ್ಲಿನ ಗ್ರೀನ್‌ಫೀಲ್ಡ್ ಕಾಲೊನಿಯಲ್ಲಿ ಬೆಳಿಗ್ಗೆ 3.30ರ ಸುಮಾರಿಗೆ ಶಾರ್ಟ್ ಸರ್ಕೀಟ್‌ನಿಂದ ಎ.ಸಿಯಲ್ಲಿ ಬೆಂಕಿ ಕಾಣಿಸಿಕೊಂಡು ಈ ಅನಾಹುತ ಸಂಭವಿಸಿರುವ ಸಾಧ್ಯತೆಯಿದೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಮೃತರನ್ನು ಸಚಿನ್ ಕಪೂರ್ (49) ಪತ್ನಿ ರಿಂಕಿ ಕಪೂರ್ (48) ಸುಜ್ಯೈನ್ (13) ಎಂದು ಗುರುತಿಸಲಾಗಿದೆ.

ಗಾಯಗೊಂಡ ಆರ್ಯನ್ ಕಪೂರ್ (24)ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

6 ಉಗ್ರವಾದಿಗಳ ಬಂಧನ




ಇಂಫಾಲ್ (ಪಿಟಿಐ): ತೆಂಗನೌಪಾಲ್ ಮತ್ತು ಥೌಬಲ್ ಜಿಲ್ಲೆಗಳಲ್ಲಿ ವಿವಿಧ ಸಂಘಟನೆಗಳಿಗೆ ಸೇರಿದ 6 ಮಂದಿ ಉಗ್ರರನ್ನು ಬಂಧಿಸಲಾಗಿದೆ ಎಂದು ಸೋಮವಾರ ಮಣಿಪುರ ಪೊಲೀಸರು ತಿಳಿಸಿದ್ದಾರೆ.

ಪೀಪಲ್ಸ್ ಲಿಬರೇಷನ್ ಆರ್ಮಿ, ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್ (ಕೆ), ಕಾಂಗ್ಲೈಪಾಕ್ ಕಮ್ಯುನಿಸ್ಟ್ ಪಾರ್ಟಿಗೆ ಸೇರಿದ ನಾಲ್ವರು, ಕೆಸಿಪಿಗೆ ಸೇರಿದ ಇಬ್ಬರನ್ನು ಸುಲಿಗೆ ಮತ್ತು ತಮ್ಮ ಸಂಘಟನೆಗಳಿಗೆ ಯುವಕರನ್ನು ನೇಮಿಸಿಕೊಳ್ಳುತ್ತಿರುವ ಆರೋಪದ ಮೇಲೆ ಬಂಧಿಸಲಾಗಿದೆ.

ಮತ್ತೊಂದೆಡೆ, ಪಶ್ಚಿಮ ಇಂಫಾಲ್ ಜಿಲ್ಲೆಯಲ್ಲಿ ಭದ್ರತಾ ಪಡೆಯವರು ಭಾನುವಾರ ಬಂದೂಕು, ಪಿಸ್ತೂಲ್, ಕಚ್ಚಾಬಾಂಬ್ ಸೇರಿ ಹಲವು ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನೂ ವಶಕ್ಕೆ ಪಡೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀನಗರ: ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆ

ಇಬ್ಬರು ಸೈನಿಕರು, ಇಬ್ಬರು ಉಗ್ರರು ಮೃತ



ಶ್ರೀನಗರ (ಪಿಟಿಐ): ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಸೋಮವಾರ ನಡೆದ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಯ ವೇಳೆ ಇಬ್ಬರು ಸೈನಿಕರು ಮತ್ತು ಇಬ್ಬರು ಉಗ್ರರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕುಲ್ಗಾಮ್‌ನ ಗುಡರ್ ಕಾಡು ಪ್ರದೇಶದಲ್ಲಿ ಉಗ್ರರು ಅಡಗಿರುವ ಬಗ್ಗೆ ಖಚಿತ ಗುಪ್ತಚರ ಮಾಹಿತಿಯ ಮೇರೆಗೆ ಭದ್ರತಾ ಪಡೆ, ಜಮ್ಮು ಕಾಶ್ಮೀರ ಪೊಲೀಸ್ ಮತ್ತು ಸಿಆರ್‌ಪಿಎಫ್ ಅರೆಸೈನಿಕ ಪಡೆಯು ಜಂಟಿಯಾಗಿ ಶೋಧ ಕಾರ್ಯಾಚರಣೆ ಪ್ರಾರಂಭಿಸಿತ್ತು. ಈ ವೇಳೆ ಗುಂಡಿನ ಚಕಮಕಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿದಾಳಿಯಲ್ಲಿ ಇಬ್ಬರು ಭಯೋತ್ಪಾದಕರನ್ನು ಕೊಲ್ಲಲಾಗಿದ್ದು, ಅಧಿಕಾರಿ ಸೇರಿದಂತೆ ಮೂವರು ಸೈನಿಕರು ಗಾಯಗೊಂಡಿದ್ದರು. ಗಾಯಗೊಂಡ ಸೈನಿಕರನ್ನು ತಕ್ಷಣವೇ ಸೈನಿಕ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತಾದರೂ, ಇಬ್ಬರು ಸೈನಿಕರು ತೀವ್ರ ಗಾಯಗಳಿಂದಾಗಿ ಮೃತಪಟ್ಟಿದ್ದಾರೆ.

ಮೃತಪಟ್ಟ ಉಗ್ರರ ಗುರುತು ಪತ್ತೆಯಾಗಿಲ್ಲವಾದರೂ, ಅವರು ವಿದೇಶಿಗರು ಎಂದು ನಂಬಲಾಗಿದೆ ಎಂದು ಭದ್ರತಾ ಅಧಿಕಾರಿಗಳು ಹೇಳಿದ್ದಾರೆ. ಕಾಡಿನಲ್ಲಿ ಉಗ್ರರು ಅಡಗಿ ಕುಳಿತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಶೋಧ ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಡಿಯೊಳಗೆ ನುಸುಳಿದ ಪಾಕ್ ಪ್ರಜೆ

ಜಮ್ಮು (ಪಿಟಿಐ): ಅಂತರರಾಷ್ಟ್ರೀಯ ಗಡಿಯಲ್ಲಿನ ಆರ್.ಎಸ್.ಪುರ ಸೆಕ್ಟರ್‌ನಲ್ಲಿ ಪಾಕಿಸ್ತಾನದ ನುಸುಳುಕೋರನನ್ನು ಬಂಧಿಸಲಾಗಿದೆ ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ತಿಳಿಸಿದೆ.

ನುಸುಳುಕೋರ ಸಿರಾಜ್ ಖಾನ್ ಭಾನುವಾರ ರಾತ್ರಿ 9.10ರ ಸುಮಾರಿಗೆ ಗಡಿ ದಾಟುತ್ತಿರುವುದು ಪತ್ತೆಯಾಗಿತ್ತು. ಸೇನಾಪಡೆಗಳು ಎಚ್ಚರಿಕೆ ನೀಡಿದರೂ ಕಿವಿಗೊಡದೆ ಗಡಿಯಲ್ಲಿ ನುಸುಳುತ್ತಿದ್ದ. ನಂತರ ಗುಂಡು ಹಾರಿಸಿ ಆತನನ್ನು ವಶಕ್ಕೆ ಪಡೆಯಲಾಯಿತು ಎಂದು ಬಿಎಸ್‌ಎಫ್ ಹೇಳಿಕೆಯಲ್ಲಿ ತಿಳಿಸಿದೆ.

ಆತನ ಬಳಿ ಇದ್ದ 20 ರೂಪಾಯಿ ಮತ್ತು 10 ರೂಪಾಯಿಯ ಎರಡು ನೋಟುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದೆ.

ಮರಳುಗಾಡಿನಲ್ಲಿ ಭಾರತವೇ ನೆಚ್ಚಿನ ತಂಡ

ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿ ಇಂದಿನಿಂದ • ಉದ್ಘಾಟನಾ ಪಂದ್ಯದಲ್ಲಿ ಅಫ್ಗಾನಿಸ್ತಾನಕ್ಕೆ ಹಾಂಗ್‌ಕಾಂಗ್ ತಂಡದ ಸವಾಲು



ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಬಿಸಿಸಿಐ ಚಿತ್ರ

ದುಬೈ (ಪಿಟಿಐ): ಸೂರ್ಯಕುಮಾರ್ ಯಾದವ್ ನೇತೃತ್ವದ ತಂಡ ಮಂಗಳವಾರ ಇಲ್ಲಿ ಆರಂಭವಾಗುವ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಫೇವರಿಟ್ ಆಗಿದೆ ಎನ್ನುವುದು ನಿಜ. ಆದರೆ ಅದಕ್ಕಿಂತ ಮುಖ್ಯವಾಗಿ ಭಾರತ ತಂಡಕ್ಕೂ, ಪಾಕಿಸ್ತಾನ ಸೇರಿದಂತೆ ಇತರ ಏಳು ತಂಡಗಳಿಗೂ ಸಾಕಷ್ಟು ಅಂತರವಿದೆ ಎನ್ನುವುದೇ ಸೂಕ್ತ.

ಅಫ್ಗಾನಿಸ್ತಾನ ತಂಡವು, ಅಬುಧಾಬಿಯಲ್ಲಿ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಹಾಂಗ್‌ಕಾಂಗ್ ತಂಡವನ್ನು ಎದುರಿಸಲಿದೆ. ಆದರೆ ಎಲ್ಲರ ಕಣ್ಣು ಇರುವುದು ದುಬೈ ಮೇಲೆ. ಇಲ್ಲಿ ತಾರಾಖಚಿತ ಭಾರತ ತಂಡ ಬುಧವಾರ ನಡೆಯುವ ಪಂದ್ಯದಲ್ಲಿ ಯುಎಇ ತಂಡವನ್ನು ಸದೆಬಡಿದು ಅಭಿಯಾನ ಆರಂಭಿಸುವ ಗುರಿಹೊಂದಿದೆ.

ಭಾರತ ತಂಡದ ಮೇಲೆ ನಿರೀಕ್ಷೆಯ ಭಾರವಿದೆ. ಈ ಟೂರ್ನಿಯ ದಾಖಲೆಗಳತ್ತ ಕಣ್ಣುಹೊರಳಿಸಿದರೆ, ತಂಡದ ನಿರ್ವಹಣೆ ಉತ್ತಮವಾಗಿದೆ. ಮಾತ್ರವಲ್ಲ, ಸಮತೋಲನದ ದೃಷ್ಟಿಯಿಂದಲೂ ತಂಡ ಸಶಕ್ತವಾಗಿದೆ.

ಏಷ್ಯಾ ಕಪ್ 2025

ಭಾರತ ತಂಡದಲ್ಲಿ ಪ್ರತಿಭೆಗಳು ಹೇರಳವಾಗಿವೆ. ಏಷ್ಯಾ ಕಪ್‌ಗೆ 17 ಸದಸ್ಯರ ತಂಡವನ್ನು ಆಯ್ಕೆ ಮಾಡುವ ಅವಕಾಶ ಆಯ್ಕೆ ಸಮಿತಿಗೆ ಇತ್ತು. ಆದರೆ ಸಮಿತಿಗೆ ಎಷ್ಟೊಂದು ವಿಶ್ವಾಸ ಮತ್ತು ಭರವಸೆಯಿತ್ತು ಎಂದರೆ ಅದು 15 ಮಂದಿಯ ತಂಡವನ್ನು ಆಯ್ಕೆ ಮಾಡಿತು. ಅನುಭವಿ ಶ್ರೇಯಸ್ ಅಯ್ಯರ್ ಮತ್ತು ಯಶಸ್ವಿ ಜೈಸ್ವಾಲ್ ಅಂಥ ಆಟಗಾರರನ್ನೇ ಕೈಬಿಟ್ಟಿತು.

ಭಾರತ ಈ ಹಿಂದೆ ಎಂಟು ಬಾರಿ (ಏಳು ಬಾರಿ ಏಕದಿನ ಮಾದರಿ, ಒಮ್ಮೆ ಟಿ20 ಮಾದರಿ) ಈ ಟೂರ್ನಿಯಲ್ಲಿ ಚಾಂಪಿಯನ್ ಆಗಿದೆ.

ಒಂಬತ್ತನೇ ಬಾರಿ ಗೆದ್ದರೂ ಅದು ಸೂರ್ಯಕುಮಾರ್ ಅವರಿಗಾಗಲಿ, ಹೆಡ್ ಕೋಚ್ ಗೌತಮ್ ಗಂಭೀರ್ ಅವರಿಗಾಗಲಿ ಹೆಚ್ಚಿನ ಶ್ರೇಯಸ್ಸು ತಂದುಕೊಡದು. ಆದರೆ, ಟಿ20 ವಿಶ್ವಕಪ್‌ಗೆ ಕೆಲವೇ ತಿಂಗಳು ಇರುವಾಗ ಭಾರತವು ಈಗ ಟ್ರೋಫಿ ಗೆಲ್ಲದೇ ಹೋದರೆ ಟೀಕೆಗಳಿಗೆ ಆಹಾರವಾಗಲಿದೆ.

2026ರ ಫೆಬ್ರುವರಿ–ಮಾರ್ಚ್‌ನ ವಿಶ್ವಕಪ್ ಆರಂಭಕ್ಕೆ ಮುನ್ನ, ಭಾರತ ತಂಡಕ್ಕೆ (ಇಲ್ಲಿ ಫೈನಲ್ ತಲುಪಿದಲ್ಲಿ) ಸುಮಾರು 20 ಪಂದ್ಯಗಳು ಆಡಲು ಇವೆ. ಈ ಅವಧಿಯಲ್ಲಿ ವಿಶ್ವಕಪ್‌ಗೆ ಸೂಕ್ತ ರೀತಿಯಲ್ಲಿ ಸಂಯೋಜನೆ ಕಂಡುಕೊಳ್ಳುವುದು ತಂಡದ ಮುಂದಿರುವ ಗುರಿ.

ಸೂರ್ಯ ಅವರು ನಾಯಕರಾಗಿ ಶೇ 80 ವಿಜಯದ ದಾಖಲೆ ಹೊಂದಿದ್ದಾರೆ. ಈಗ ಅವರ ತಂಡದಲ್ಲಿ ಉಪನಾಯಕ ಶುಭಮನ್ ಗಿಲ್ ಇದ್ದಾರೆ. ಮುಂಬರುವ ವರ್ಷಗಳಲ್ಲಿ ಗಿಲ್, ಮುಂಬೈನ ಆಟಗಾರನಿಂದ ನಾಯಕತ್ವದ ಹೊಣೆ ವಹಿಸಬಹುದು.

ಯಾರಿಂದ ಸವಾಲು?: ಭಾರತ ತಂಡಕ್ಕೆ ಯಾರಿಂದ ಸವಾಲು ಎದುರಾಗಬಹುದು ಎಂಬ ಪ್ರಶ್ನೆಗೆ ಉತ್ತರ ಸುಲಭವಲ್ಲ. ಸಲ್ಮಾನ್ ಅಲಿ ಅಘಾ ನೇತೃತ್ವದ ಪಾಕಿಸ್ತಾನ ತಂಡ ಹೊಸಬರಿಂದ ಕೂಡಿದೆ. ಶ್ರೀಲಂಕಾ ತಂಡ ಪರಿವರ್ತನೆಯ ಹಂತದಲ್ಲಿದೆ.

ಪಾಕ್ ಆಯ್ಕೆ ಮಂಡಳಿ ಬಾಬರ್ ಆಜಂ ಮತ್ತು ಮೊಹಮ್ಮದ್ ರಿಜ್ವಾನ್ ಅವರನ್ನು ಕೈಬಿಟ್ಟು, ಹೆಸರುಗಳು ಮುಖ್ಯವಲ್ಲ ಎಂಬ ಸಂದೇಶ ರವಾನಿಸಿದೆ. ಆ ತಂಡದ ಯಶಸ್ಸು, ಶಹೀನ್ ಶಾ ಅಫ್ರಿದಿ, ಹ್ಯಾರಿಸ್ ರವೂಫ್ ಮತ್ತು ಹಸನ್ ಅಲಿ ಅವರ ಬೌಲಿಂಗ್ ಪಡೆಯ ಮೇಲಿದೆ.

ತ್ರಿಕೋನ ಸರಣಿಯ ಫೈನಲ್‌ನಲ್ಲಿ ಭಾನುವಾರ 75 ರನ್‌ಗಳಿಂದ ಅಫ್ಗಾನಿಸ್ತಾನ ತಂಡವನ್ನು ಸೋಲಿಸಿರುವ ಕಾರಣ ಪಾಕಿಸ್ತಾನ ಸ್ವಲ್ಪ ಉತ್ಸಾಹದಲ್ಲಿದೆ. ಶಾರ್ಜಾದ ಮಂದಗತಿಯ ಟ್ರ್ಯಾಕ್‌ನಲ್ಲಿ ಪಾಕ್ ಸ್ಪಿನ್ನರ್‌ಗಳು ಕೈಚಳಕ ತೋರಿದ್ದರು.

ಚರಿತ್ ಅಸಲಂಕಾ ನೇತೃತ್ವದ ಶ್ರೀಲಂಕಾವನ್ನು ದುರ್ಬಲವೆಂದು ಹೇಳುವಂತಿಲ್ಲ. ಆದರೆ ಆರರಿಂದ ಏಳು ಪಂದ್ಯಗಳನ್ನು ಗೆಲ್ಲುವ ಸ್ಥಿರ ಪ್ರದರ್ಶನ ನೀಡಲು ಅದು ಸಮರ್ಥವೇ ಎಂಬ ಪ್ರಶ್ನೆಯಿದೆ. ಬಾಂಗ್ಲಾದೇಶ ಅನುಭವಿಗಳನ್ನು ಕಳೆದುಕೊಂಡಿದೆ. ಬಿ ಗುಂಪಿನಲ್ಲಿ ಲಂಕಾ, ಅಫ್ಗಾನಿಸ್ತಾನ ಮೊದಲೆರಡು ಸ್ಥಾನ ಪಡೆಯುವ ನಿರೀಕ್ಷೆಯಿದೆ.


ಅಫ್ಗನ್ ಸ್ಪಿನ್ನರ್‌ಗಳಾದ ರಶೀದ್ ಖಾನ್, ನೂರ್ ಅಹ್ಮದ್ ಮತ್ತು ಉದಯೋನ್ಮುಖ ಆಟಗಾರ ಘಜನ್‌ಫರ್ ಅವರು ಮಧ್ಯಮ ಹಂತದ ಓವರುಗಳಲ್ಲಿ ಸವಾಲಾಗಬಲ್ಲವರು. ಅದರ ಬ್ಯಾಟಿಂಗ್ ಸರದಿಯೂ ಶಕ್ತವಾಗಿದೆ. ಆತಿಥೇಯ ಯುಎಇ, ಹಾಂಗ್‌ಕಾಂಗ್ ತಂಡ ಒಮಾನ್ ತಂಡಗಳಿಗೆ ಇಲ್ಲಿ ಅನುಭವ ಸಂಪಾದಿಸುವ ಅವಕಾಶ ದೊರೆಯಲಿದೆ.

ಭಾರತದ ಪಂದ್ಯಗಳು (ಗುಂಪು ಹಂತ)

ದಿನಾಂಕ	ಎದುರಾಳಿ	ತಾಣ	ಸಮಯ
ಸೆ.10	ಯುಎಇ	ದುಬೈ	ರಾತ್ರಿ 8
ಸೆ.14	ಪಾಕಿಸ್ತಾನ	ದುಬೈ	ರಾತ್ರಿ 8
ಸೆ.19	ಒಮಾನ್	ಅಬುಧಾಬಿ	ರಾತ್ರಿ 8

ಬಲ ತಂದ ಬೂಮ್ರಾ ಪುನರಾಗಮನ

ಪ್ರಜಾವಾಣಿ ವಾರ್ತೆ



ಜಸ್‌ಪ್ರೀತ್ ಬೂಮ್ರಾ

ದುಬೈ: ಈ ಹಿಂದೆ ವಿರಾಟ್ ಕೊಹ್ಲಿ ಮತ್ತು ಅವರ ನಂತರ ರೋಹಿತ್ ಶರ್ಮಾ ಅವರು ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಅಸಾಧಾರಣ ಪ್ರತಿಭೆಯ ಲಾಭ ಪಡೆದಿದ್ದರು. ಸುಮಾರು 13 ತಿಂಗಳಿಂದ ಭಾರತ ಟಿ20 ತಂಡದ ನಾಯಕರಾಗಿರುವ ಸೂರ್ಯಕುಮಾರ್ ಯಾದವ್ ಅವರಿಗೂ ಈಗ ಪಂದ್ಯಕ್ಕೆ ತಿರುವು ನೀಡಬಲ್ಲ ಬೂಮ್ರಾ ಅವರ ನಾಲ್ಕು ಓವರುಗಳ ಪ್ರಯೋಜನ ಪಡೆಯುವ ಅವಕಾಶ ಒದಗಿದೆ.

ಕೊಹ್ಲಿ ಮತ್ತು ರೋಹಿತ್ ಅವರು 2017 ರಿಂದ 2024ರವರೆಗೆ ನಾಯಕರಾಗಿದ್ದಾಗ ದೇಶಕ್ಕೆ ಮತ್ತು ಫ್ರಾಂಚೈಸಿ ಪರ ಅವರ ಕೌಶಲದ ಲಾಭ ಪಡೆದಿದ್ದರು.

ಭಾರತ 14 ತಿಂಗಳ ಹಿಂದೆ ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ಟಿ20 ವಿಶ್ವಕಪ್ ಗೆದ್ದ ನಂತರ ಬೂಮ್ರಾ ಟಿ20 ಅಂತರರಾಷ್ಟ್ರೀಯ ಪಂದ್ಯ ಆಡಿಲ್ಲ. ಬೆನ್ನುನೋವಿನಿಂದಾಗಿ ಮಾರ್ಚ್‌ನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯಲ್ಲೂ ಅವರು ಆಡಿರಲಿಲ್ಲ. ಇಂಗ್ಲೆಂಡ್ ಪ್ರವಾಸದ ವೇಳೆ ಅವರು ಕಾರ್ಯಭಾರ ಒತ್ತಡದ ಕಾರಣ ಕೆಲವು ಟೆಸ್ಟ್‌ಗಳನ್ನಷ್ಟೇ ಆಡಿದ್ದರು. ಅದರಲ್ಲೂ ಭಾರತ ಅವರ ಅನುಪಸ್ಥಿತಿಯಲ್ಲಿ ಎರಡು ಪಂದ್ಯಗಳನ್ನು ಗೆದ್ದಾಗ ಅವರು ಬೀರಬಹುದಾದ ಪರಿಣಾಮದ ಬಗ್ಗೆ ಪ್ರಶ್ನೆಗಳೂ ಎದ್ದಿದ್ದವು. ಆದರೆ ತಂಡದಲ್ಲಿ ಅವರ ಬದ್ಧತೆಯನ್ನು ಮಾತ್ರ ಪ್ರಶ್ನಿಸುವಂತಿರಲಿಲ್ಲ.

ಇಲ್ಲಿಗೆ ಬಂದ ಮೇಲೆ ನೆಟ್ಸ್‌ನಲ್ಲಿ ಬೂಮ್ರಾ ತೊಡಗಿಸಿಕೊಂಡ ರೀತಿ ಸೂರ್ಯಕುಮಾರ್ ಅವರ ಪಾಲಿಗಂತೂ ಖುಷಿ ಕೊಡುವ ವಿಷಯ. ಆದರೆ ಭಾರತ ತಂಡದ ಎದುರಾಳಿಗಳಿಗೆ ಇದು ಶುಭಸೂಚಕವಲ್ಲ.

ಬೂಮ್ರಾ ಅವರ ಗೈರಿನ ಅವಧಿಯಲ್ಲಿ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರು ಭಾರತ ತಂಡದ ಪ್ರಮುಖ ಟಿ20 ವೇಗಿಯಾಗಿ ಗುರುತಿಸಿಕೊಂಡರು. ಪದಾರ್ಪಣೆ ಮಾಡಿದ ನಂತರ ಮೂರು ವರ್ಷಗಳ ಅವಧಿಯಲ್ಲಿ 26 ವರ್ಷದ ಪಂಜಾಬ್ ವೇಗಿ 99 ವಿಕೆಟ್‌ಗಳನ್ನು ಪಡೆದು ಯಶಸ್ವಿಯೆನಿಸಿದ್ದಾರೆ. ತಮ್ಮ ಬದಲಿಗೆ ಬೂಮ್ರಾ ಅವರಿಗೆ ಅವಕಾಶ ನೀಡಿದರೆ ಅವರ ತಕರಾರೇನೂ ಇರಲಿಕ್ಕಿಲ್ಲ. ಆದರೆ ಬ್ಯಾಟಿಂಗ್ ಬಲಕ್ಕೆ ತೊಂದರೆಯಾಗದಂತೆ ಇವರಿಬ್ಬರಿಗೂ ಅವಕಾಶ ಕಲ್ಪಿಸುವುದು ಸೂರ್ಯಕುಮಾರ್ ಮುಂದಿರುವ ಸವಾಲಾಗಿದೆ.

ಎಸಿಸಿ ಏಷ್ಯಾ ಕಪ್ ವಿಜೇತರು

ವರ್ಷ	ಮಾದರಿ	ಚಾಂಪಿಯನ್
1984	ಏಕದಿನ	ಭಾರತ
1986	ಏಕದಿನ	ಶ್ರೀಲಂಕಾ
1988	ಏಕದಿನ	ಭಾರತ
1990-91	ಏಕದಿನ	ಭಾರತ
1995	ಏಕದಿನ	ಭಾರತ
1997	ಏಕದಿನ	ಶ್ರೀಲಂಕಾ
2000	ಏಕದಿನ	ಪಾಕಿಸ್ತಾನ
2004	ಏಕದಿನ	ಶ್ರೀಲಂಕಾ
2008	ಏಕದಿನ	ಶ್ರೀಲಂಕಾ
2010	ಏಕದಿನ	ಭಾರತ
2012	ಏಕದಿನ	ಪಾಕಿಸ್ತಾನ
2014	ಏಕದಿನ	ಶ್ರೀಲಂಕಾ
2016	ಟಿ20	ಭಾರತ
2018	ಏಕದಿನ	ಭಾರತ
2022	ಟಿ20	ಶ್ರೀಲಂಕಾ
2023	ಏಕದಿನ	ಭಾರತ

ಎ ಗುಂಪಿನಲ್ಲಿರುವ ತಂಡಗಳು

ಭಾರತ, ಒಮಾನ್, ಪಾಕಿಸ್ತಾನ, ಯುಎಇ

ಬಿ ಗುಂಪಿನಲ್ಲಿರುವ ತಂಡಗಳು

ಅಫ್ಗಾನಿಸ್ತಾನ, ಬಾಂಗ್ಲಾದೇಶ, ಹಾಂಗ್‌ಕಾಂಗ್, ಶ್ರೀಲಂಕಾ

ಇಂದಿನ ಪಂದ್ಯ

ಅಫ್ಗಾನಿಸ್ತಾನ Vs ಹಾಂಗ್‌ಕಾಂಗ್ (ರಾತ್ರಿ 8)

ಲೈವ್ ನೇರಪ್ರಸಾರ: ಸೋನಿ ಟೆನ್ 1

ಬಾಕ್ಸಿಂಗ್: ಕ್ವಾರ್ಟರ್‌ಗೆ ಜಾಸ್ಮಿನ್



ಲಿವರ್‌ಪೂಲ್ (ಪಿಟಿಐ): ಭಾರತದ ಜಾಸ್ಮಿನ್ ಲಂಬೋರಿಯಾ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 57 ಕೆಜಿ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ತಲುಪಿದರು.

ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತೆಯಾಗಿರುವ ಜಾಸ್ಮಿನ್, ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 5–0ಯಿಂದ ಎರಡು ಬಾರಿ ಒಲಿಂಪಿಯನ್ ಬ್ರೆಜಿಲ್‌ನ ಜುಸಿಯೆಲೆನ್ ಸೆರ್ಕ್ವೀರಾ ರೊಮಿಯು ಅವರನ್ನು ಸದೆಬಡಿದರು.

ಜಾಸ್ಮಿನ್ ಮುಂದಿನ ಸುತ್ತಿನಲ್ಲಿ ಏಷ್ಯನ್ 22 ವರ್ಷದೊಳಗಿನವರ ಚಾಂಪಿಯನ್ ಖುಮೊರಬೊನು ಮಮಜೊನೊವಾ (ಉಜ್ಬೇಕಿಸ್ತಾನ) ಅವರನ್ನು ಎದುರಿಸಲಿದ್ದಾರೆ. ಈ ಸವಾಲನ್ನು ಗೆದ್ದರೆ ಭಾರತದ ಬಾಕ್ಸರ್‌ಗೆ ಕನಿಷ್ಠ ಕಂಚಿನ ಪದಕ ಖಚಿತವಾಗಲಿದೆ.

ಪುರುಷರ 65 ಕೆಜಿ ವಿಭಾಗದಲ್ಲಿ ಅಭಿನಾಶ್ ಜಮ್ವಾಲ್ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅವರು ಮೊದಲ ಸುತ್ತಿನಲ್ಲಿ 5–0 ಅಂತರದಿಂದ ಮೆಕ್ಸಿಕೋದ ಹ್ಯೂಗೋ ಬ್ಯಾರನ್ ಅವರನ್ನು ಮಣಿಸಿದರು. ಆದರೆ, ಮಹಿಳೆಯರ 75 ಕೆಜಿ ವಿಭಾಗದಲ್ಲಿ ಸನಮಾಚಾ ಚಾನು ಮತ್ತು 54 ಕೆಜಿ ವಿಭಾಗದಲ್ಲಿ ಸಾಕ್ಷಿ ಚೌಧರಿ ನಿರಾಸೆ ಮೂಡಿದರು. ಅವರು ಪ್ರಿ ಕ್ವಾರ್ಟರ್ ಫೈನಲ್ ಹಂತದಲ್ಲಿ ಹೊರಬಿದ್ದರು.


ಪ್ರಜ್ಞಾನಂದ, ಗುಕೇಶ್‌ಗೆ ಆಘಾತ

ಐಲ್ ಆಫ್ ಮ್ಯಾನ್ (ಪಿಟಿಐ): ಅಗ್ರಶ್ರೇಯಾಂಕದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಮತ್ತು ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಗ್ರ್ಯಾಂಡ್ ಸ್ವಿಸ್ ಚೆಸ್ ಲೀಗ್‌ನ ಓಪನ್ ವಿಭಾಗದಲ್ಲಿ ಸೋಮವಾರ ಐದನೇ ಸುತ್ತಿನಲ್ಲಿ ಆಘಾತಕಾರಿ ಸೋಲು ಅನುಭವಿಸಿದರು.

ಪ್ರಜ್ಞಾನಂದ (3 ಅಂಕ) ಅವರು ಜರ್ಮನಿಯ ಮಥಿಯಾಸ್ ಬ್ಲೂಬಾಮ್ (4) ಅವರಿಗೆ ಸೋತರೆ, ಡಿ.ಗುಕೇಶ್ (3) ಅವರು ಅಮೆರಿಕದ ಅಭಿಮನ್ಯು ಮಿಶ್ರಾ (4) ಅವರಿಗೆ ಶರಣಾದರು. ಅರ್ಜುನ್ ಇರಿಗೇಶಿ (4) ಅವರು ನಿಕಿತಾ ವಿಟುಯಿಗೋವ್ ವಿರುದ್ಧ ಗೆಲುವು ಸಾಧಿಸಿದರು. ಇರಾನ್‌ನ ಪರ್ಹಾಮ್ ಮಘಸೂಡ್ಲು (4.5) ಅವರು ಗೆಲುವಿನ ಓಟ ಮುಂದುವರಿಸಿ, ಏಕಾಂಗಿಯಾಗಿ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. ಅವರು ಹಂಗೇರಿಯ ರಿಚರ್ಡ್ ರ್ಯಾಪೋರ್ಟ್ ಅವರನ್ನು ಸೋಲಿಸಿದರು. ಅರ್ಜುನ್, ಬ್ಲೂಬಾಮ್ ಮತ್ತು ಮಿಶ್ರಾ ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಆರ್. ವೈಶಾಲಿ (4), ರಷ್ಯಾದ ಲ್ಯಾಟೆರಿನಾ ಲಗ್ನೋ (4) ಅವರೊಂದಿಗೆ ಡ್ರಾ ಸಾಧಿಸಿ, ಜಂಟಿ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.

ಐಸಿಸಿ ಪ್ರಶಸ್ತಿ ರೇಸ್‌ನಲ್ಲಿ ಸಿರಾಜ್




ದುಬೈ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ಅಮೋಘ ಪ್ರದರ್ಶನ ನೀಡಿದ ಭಾರತದ ವೇಗಿ ಮೊಹಮ್ಮದ್ ಸಿರಾಜ್ ಸೇರಿ ಮೂವರು ಐಸಿಸಿ ‘ಆಗಸ್ಟ್ ತಿಂಗಳ ಆಟಗಾರ’ ಪ್ರಶಸ್ತಿಗೆ ಸೋಮವಾರ ನಾಮನಿರ್ದೇಶನಗೊಂಡಿದ್ದಾರೆ.

ಸಿರಾಜ್ ಅವರು ಸರಣಿಯ ಎಲ್ಲ ಐದು ಪಂದ್ಯಗಳಲ್ಲಿ ಆಡಿ, 185.3 ಓವರುಗಳನ್ನು ಮಾಡಿದ್ದರು. 23 ವಿಕೆಟ್‌ಗಳನ್ನು ಕಬಳಿಸಿದ್ದರು. ಅದರಲ್ಲೂ, ಸರಣಿ ಸಮಬಲ ಮಾಡಿಕೊಳ್ಳಲು ಭಾರತ ತಂಡಕ್ಕೆ ನಿರ್ಣಾಯಕವಾಗಿದ್ದಅಂತಿಮ ಪಂದ್ಯದಲ್ಲಿ 9 ವಿಕೆಟ್ ಪಡೆದು ಮಿಂಚಿದ್ದರು. ಪಂದ್ಯದ ಆಟಗಾರ ಪ್ರಶಸ್ತಿಗೂ ಭಾಜನರಾಗಿದ್ದರು.

ಜಿಂಬಾಬ್ವೆ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 16 ವಿಕೆಟ್ ಪಡೆದಿದ್ದ ನ್ಯೂಜಿಲೆಂಡ್‌ನ ಮ್ಯಾಟ್ ಹೆನ್ರಿ ಮತ್ತು ಪಾಕಿಸ್ತಾನ ಎದುರಿನ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ 10 ವಿಕೆಟ್‌ಗಳನ್ನು ಕಬಳಿಸಿದ್ದ ವೆಸ್ಟ್ ಇಂಡೀಸ್ ತಂಡದ ಜೇಡನ್ ಸೀಲ್ಸ್ ಅವರು ನಾಮನಿರ್ದೇಶನಗೊಂಡ ಇನ್ನಿಬ್ಬರು ಬೌಲರ್‌ಗಳು.

ಚಿಟಿಕೆ ಸುದ್ದಿ

ಹಾಕಿ ಆಟಗಾರರಿಗೆ ಬಹುಮಾನ



ನಿತೀಶ್ ಕುಮಾರ್

ಪಟ್ನಾ (ಪಿಟಿಐ): ಏಷ್ಯಾ ಕಪ್ ಗೆದ್ದ ಭಾರತ ತಂಡದ ಆಟಗಾರರಿಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ತಲಾ ₹10 ಲಕ್ಷ ಬಹುಮಾನ ಘೋಷಣೆ ಮಾಡಿದ್ದಾರೆ.

ಬಿಹಾರದ ರಾಜ್‌ಗಿರ್‌ನಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಭಾರತ 4–1 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿ, ನಾಲ್ಕನೇ ಬಾರಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತ್ತು. ಇದರೊಂದಿಗೆ ಮುಂದಿನ ವರ್ಷದ ವಿಶ್ವಕಪ್‌ಗೆ ಅರ್ಹತೆ ಪಡೆದಿದೆ.

ಸಂತ್ರಸ್ತರಿಗೆ ಅರ್ಪಣೆ: ಭಾರತ ಹಾಕಿ ತಂಡದ ಮಾಜಿ ನಾಯಕ ಮನ್‌ಪ್ರೀತ್ ಸಿಂಗ್ ಅವರು ಏಷ್ಯಾ ಕಪ್ ಗೆಲುವನ್ನು ಪಂಜಾಬ್‌ನ ಪ್ರವಾಹ ಸಂತ್ರಸ್ತರಿಗೆ ಅರ್ಪಿಸಿದ್ದಾರೆ.

ಕೇಂದ್ರ ವಲಯ ತಂಡದಲ್ಲಿ ಬದಲಾವಣೆ

ಮುಂಬೈ (ಪಿಟಿಐ): ವಿದರ್ಭದ ವೇಗದ ಬೌಲರ್ ನಚಿಕೇತ್ ಭೂತೆ ಮತ್ತು ಮಧ್ಯಪ್ರದೇಶದ ಸ್ಪಿನ್ನರ್ ಕಾರ್ತಿಕೇಯ ಸಿಂಗ್ ಅವರು ದುಲೀಪ್ ಟ್ರೋಫಿ ಫೈನಲ್‌ನಲ್ಲಿ ಆಡುವ ಕೇಂದ್ರ ವಲಯ ತಂಡಕ್ಕೆ ಸೇರ್ಪಡೆಗೊಂಡಿದ್ದಾರೆ. ಸೆಮಿಫೈನಲ್ ಆಡಿದ ತಂಡದಲ್ಲಿ ನಾಲ್ಕು ಬದಲಾವಣೆ ಮಾಡಲಾಗಿದೆ.

ಕೇಂದ್ರ ವಲಯ ಇದೇ 11 ರಿಂದ ಬೆಂಗಳೂರಿನಲ್ಲಿ ನಡೆಯುವ ಫೈನಲ್‌ನಲ್ಲಿ ದಕ್ಷಿಣ ವಲಯ ತಂಡವನ್ನು ಎದುರಿಸಲಿದೆ.

ಭೂತೆ ಅವರು ವಿದರ್ಭದವರೇ ಆದ ಯಶ್ ಠಾಕೂರ್ ಬದಲು, ಎಡಗೈ ಸ್ಪಿನ್ನರ್ ಕಾರ್ತಿಕೇಯ ಅವರು, ಹರ್ಷ್ ದುಬೆ ಬದಲು ಅವಕಾಶ ಪಡೆದಿದ್ದಾರೆ. ಮಧ್ಯಪ್ರದೇಶದ ಎಡಗೈ ವೇಗಿ ಕುಲದೀಪ್ ಸೇನ್ ಮತ್ತು ರಾಜಸ್ಥಾನದ ಎಡಗೈ ಸ್ಪಿನ್ನರ್ ಅಜಯ್ ಸಿಂಗ್ ಕುಕ್ನಾ ಅವರೂ ಅವಕಾಶ ಪಡೆದಿದ್ದಾರೆ.

ವಿಶ್ವ ಆರ್ಚರಿ: ಭಾರತಕ್ಕೆ ನಿರಾಸೆ

ಗ್ವಾಂಗ್‌ಜು (ದಕ್ಷಿಣ ಕೊರಿಯಾ), (ಪಿಟಿಐ): ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನ ಪುರುಷರ ಕಾಂಪೌಂಡ್ ಸ್ಪರ್ಧೆಯಲ್ಲಿ ಭಾರತದ ಯಶಸ್ಸಿನ ಓಟವು ಸೋಮವಾರ ನಿರಾಸೆಯೊಂದಿಗೆ ಕೊನೆಗೊಂಡಿತು.

ತಂಡ ವಿಭಾಗದಲ್ಲಿ ಚಾರಿತ್ರಿಕ ಚಿನ್ನದ ಪದಕ ಗೆದ್ದ ರಿಷಭ್ ಯಾದವ್, ಅಮನ್ ಸೈನಿ ಮತ್ತು ಪ್ರಥಮೇಶ್ ಫುಗೆ ಅವರು ವೈಯಕ್ತಿಕ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದರು.

2023ರಲ್ಲಿ ಬರ್ಲಿನ್‌ನಲ್ಲಿ ನಡೆದ ಆವೃತ್ತಿಯಲ್ಲಿ ಓಜಸ್ ದೇವತಾಳೆ ಚಿನ್ನದ ಪದಕ ಗೆದ್ದಿದ್ದರು. ಆದರೆ, ಈ ಬಾರಿ ಅವರಿಗೆ ತಂಡದಲ್ಲಿ ಸ್ಥಾನ ಪಡೆಯಲು ಸಾಧ್ಯವಾಗಲಿಲ್ಲ.

ಅಲ್ಕರಾಜ್‌ಗೆ ಅಮೆರಿಕ ಓಪನ್ ಕಿರೀಟ

ಫೈನಲ್ ಪಂದ್ಯದಲ್ಲಿ ಇಟಲಿಯ ಯಾನಿಕ್ ಸಿನ್ನರ್ ವಿರುದ್ಧ 4 ಸೆಟ್‌ಗಳ ಗೆಲುವು

ನ್ಯೂಯಾರ್ಕ್ (ಎಎಫ್‌ಪಿ): ಕಾರ್ಲೋಸ್ ಅಲ್ಕರಾಜ್ ಅವರು ನಾಲ್ಕು ಸೆಟ್‌ಗಳ ಫೈನಲ್ ಸೆಣಸಾಟದಲ್ಲಿ ಯಾನಿಕ್ ಸಿನ್ನರ್ ಅವರನ್ನು ಸೋಲಿಸಿ ಅಮೆರಿಕ ಓಪನ್ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಬದ್ಧ ಎದುರಾಳಿಗಳ ಸೆಣಸಾಟದಲ್ಲಿ ಸ್ಪೇನ್‌ನ ಆಟಗಾರ ತಮ್ಮ ಪ್ರಭುತ್ವವನ್ನು ಮತ್ತೊಮ್ಮೆ ಸ್ಥಾಪಿಸಿದರು.

22 ವರ್ಷ ವಯಸ್ಸಿನ ಅಲ್ಕರಾಜ್ ಭಾನುವಾರ ಫೈನಲ್‌ನಲ್ಲಿ 6–2, 3–6, 6–1, 6–4 ರಿಂದ ಗೆಲುವು ಸಾಧಿಸಿ ಎರಡನೇ ಸಲ ಅಮೆರಿಕ ಓಪನ್ ಪ್ರಶಸ್ತಿ ಗೆದ್ದುಕೊಂಡರು. ಒಟ್ಟಾರೆ ಅವರಿಗೆ ಇದು ಆರನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯಾಗಿದೆ.

ಜುಲೈ ತಿಂಗಳಲ್ಲಿ ವಿಂಬಲ್ಡನ್ ಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಆಟಗಾರನ ಕೈಲಿ ಅನುಭವಿಸಿದ ಸೋಲಿಗೆ ಅಲ್ಕರಾಜ್ ಇಲ್ಲಿ ಸೇಡು ತೀರಿಸಿಕೊಂಡರು. ಅದು ಪ್ರಮುಖ ಟೂರ್ನಿಗಳ ಫೈನಲ್‌ನಲ್ಲಿ ಅವರಿಗೆ ಮೊದಲ ಸೋಲಾಗಿತ್ತು.

‘ಇದು ಅಪೂರ್ವ ಅನುಭವ. ಈ ಟ್ರೋಫಿ ಎತ್ತಿಹಿಡಿಯಲು ಕಠಿಣ ಶ್ರಮ ಹಾಕಿದ್ದೆ. ಇದು ನನಗೆ ಇಲ್ಲಿ ಎರಡನೇ ಟ್ರೋಫಿ. ಆದರೆ ಕನಸು ನನಸಾದ ಹಾಗೆ ಅನಿಸುತ್ತಿದೆ’ ಎಂದು ಎರಡನೇ ಶ್ರೇಯಾಂಕದ ಅಲ್ಕರಾಜ್ ಪ್ರತಿಕ್ರಿಯಿಸಿದರು.

ಅಗ್ರಪಟ್ಟ: ಇಲ್ಲಿ ಪಡೆದ ಪ್ರಶಸ್ತಿಯೊಂದಿಗೆ ಅಲ್ಕರಾಜ್ ಅವರು ಸೆಪ್ಟೆಂಬರ್ 2023ರ ನಂತರ ವಿಶ್ವ ಕ್ರಮಾಂಕಪಟ್ಟಿಯಲ್ಲಿ ಸಿನ್ನರ್ ಅವರನ್ನು ಹಿಂದೆಹಾಕಿ ಮರಳಿ ಅಗ್ರಸ್ಥಾನಕ್ಕೇರಿದರು. ಮಾತ್ರವಲ್ಲ, ಹಾರ್ಡ್‌ಕೋರ್ಟ್‌ನಲ್ಲಿ 25 ವರ್ಷದ ಸಿನ್ನರ್ ಅವರ ಸತತ 27 ಗೆಲುವುಗಳ ಸರಪಣಿಯನ್ನು ತುಂಡರಿಸಿದರು.

‘ಅಗ್ರಪಟ್ಟವನ್ನು (ವಿಶ್ವ ಕ್ರಮಾಂಕದಲ್ಲಿ) ಮರಳಿ ಪಡೆಯುವುದು ನನ್ನ ಗುರಿಗಳಲ್ಲಿ ಒಂದಾಗಿತ್ತು’ ಎಂದು ಅಲ್ಕರಾಜ್ ಹೇಳಿದರು.

ಅಲ್ಕರಾಜ್ ಅವರು ಸಿನ್ನರ್ ಎದುರಿನ ಈ ಹಿಂದಿನ ಎಂಟು ಮುಖಾಮುಖಿಗಳಲ್ಲಿ ಏಳನ್ನು ಗೆದ್ದಂತಾಗಿದೆ. ಒಟ್ಟಾರೆ ಸಿನ್ನರ್ ವಿರುದ್ಧ ಅವರು 10–5 ಗೆಲುವಿನ ದಾಖಲೆ ಹೊಂದಿದ್ದಾರೆ.

ಕಳೆದ ಎಂಟು ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಇವರಿಬ್ಬರು ತಲಾ ನಾಲ್ಕನ್ನು ಹಂಚಿಕೊಂಡಿದ್ದಾರೆ. ಆ ಮೂಲಕ ವಿಶ್ವ ಟೆನಿಸ್‌ನಲ್ಲಿ ಹಳೆಯ ಹುಲಿ ನೊವಾಕ್ ಜೊಕೊವಿಚ್ ಅವರನ್ನೂ ಸೇರಿದಂತೆ ಎಲ್ಲರ ಮೇಲೂ ಪ್ರಾಬಲ್ಯ ಮೆರೆದಿದ್ದಾರೆ.

ಫ್ಲಷಿಂಗ್ ಮಿಡೋಸ್‌ನಲ್ಲಿ ದಶಕಕ್ಕೂ ಹೆಚ್ಚು ಸಮಯದಿಂದ ಯಾರೂ ಪ್ರಶಸ್ತಿ ಉಳಿಸಿಕೊಂಡಿಲ್ಲ. ಕಳೆದ ಸಲದ ವಿಜೇತ ಸಿನ್ನರ್ ಸಹ ಆ ಸಾಲಿಗೆ ಸೇರಿದರು. ರೋಜರ್ ಫೆಡರರ್ ಅವರು 2004 ರಿಂದ 08ರವರೆಗೆ ಸತತ ಐದು ಸಲ ಪ್ರಶಸ್ತಿ ಗೆದ್ದಿದ್ದರು. ನಂತರ ಯಾರೂ ಇಲ್ಲಿ ಸತತವಾಗಿ ಚಾಂಪಿಯನ್ ಆಗಿಲ್ಲ.


ಮೊದಲ ಸೆಟ್‌ನಲ್ಲಿ ಎರಡು ಬಾರಿ ಸರ್ವ್ ಬ್ರೇಕ್ ಮಾಡಿ 5–2 ಮುನ್ನಡೆ ಪಡೆದ ಅಲ್ಕರಾಜ್, ಇಟಲಿಯ ಆಟಗಾರನನ್ನು ಒತ್ತಡಕ್ಕೆ ಸಿಲುಕಿಸಿದರು. ನಂತರ ಒಂದೂ ಪಾಯಿಂಟ್ ನೀಡದೇ ಎಂಟನೇ ಗೇಮ್ ಮತ್ತು ಸೆಟ್ ಕೈವಶ ಮಾಡಿಕೊಂಡರು.

ಎರಡನೇ ಗೇಮ್‌ನಲ್ಲಿ ಅಲ್ಕರಾಜ್ ಸರ್ವ್ ಬ್ರೇಕ್ ಮಾಡಿ ಸಿನ್ನರ್ 3–1 ಮುನ್ನಡೆ ಪಡೆದರು. ಸ್ಪೇನ್ ಆಟಗಾರ ಸರ್ವ್‌ಗಳು ತೀಕ್ಷ್ಣತೆ ಕಳೆದುಕೊಂಡಂತೆ ಕಂಡಿತು. ಸೆಟ್ 1–1 ಸಮಬಲಗೊಂಡಿತು. ಆದರೆ ಮೂರನೇ ಸೆಟ್‌ನಲ್ಲಿ ಅಲ್ಕರಾಜ್ ಚೇತರಿಸಿಕೊಂಡರು. ಸೊಗಸಾದ ಬೇಸ್‌ಲೈನ್ ಸ್ಮ್ಯಾಶ್ ಮೂಲಕ ಅವರು 3–0 ಮುನ್ನಡೆ ಪಡೆದರು. ನಂತರ ಸೆಟ್ ಗೆಲ್ಲಲು ಕಷ್ಟಪಡಲಿಲ್ಲ. ಅಂತಿಮ ಸೆಟ್‌ನಲ್ಲಿ ಅಲ್ಕರಾಜ್ ಮೇಲುಗೈ ಮುಂದುವರಿಯಿತು.

ಮುಖ್ಯಾಂಶಗಳು

- ಸ್ಪೇನ್ ಆಟಗಾರನ ಮುಡಿಗೆ ಆರನೇ ಗ್ರ್ಯಾನ್‌ಸ್ಲಾಮ್ ಕಿರೀಟ
- ಚಾಂಪಿಯನ್ ಅಲ್ಕರಾಜ್ ಪಡೆದ ಬಹುಮಾನ ₹43.98 ಕೋಟಿ
- ರನ್ನರ್ ಅಪ್ ಸಿನ್ನರ್ ಗಳಿಸಿದ ಬಹುಮಾನ ₹21,99 ಕೋಟಿ

ಪಂದ್ಯ ಅರ್ಧ ಗಂಟೆ ತಡವಾಗಿ ಆರಂಭ



ಪಂದ್ಯ ವೀಕ್ಷಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್

ಟ್ರಂಪ್ ಅವರು ಫೈನಲ್ ಪಂದ್ಯ ವೀಕ್ಷಣೆಗೆ ಆಗಮಿಸಿದ ಕಾರಣ ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಬಿಗಿ ಭದ್ರತಾ ಕ್ರಮ ಕೈಗೊಳ್ಳಲಾಯಿತು. ಪ್ರೇಕ್ಷಕರಿಗೆ ಕ್ರೀಡಾಂಗಣಕ್ಕೆ ಬರಲು ಹೆಚ್ಚುವರಿ 30 ನಿಮಿಷ ನೀಡಲಾಯಿತು. ಹೀಗಾಗಿ ಪಂದ್ಯ ತಡವಾಗಿ ಆರಂಭವಾಯಿತು.

ಮೊದಲ ಸೆಟ್‌ನ ಮೊದಲ ಗೇಮ್‌ನಲ್ಲಿ ಅಲ್ಕರಾಜ್ ಎದುರಾಳಿ ಸಿನ್ನರ್ ಸರ್ವ್ ಬ್ರೇಕ್ ಮಾಡಿದಾಗ ಕ್ರೀಡಾಂಗಣ ಮುಕ್ಕಾಲು ಪಾಲು ಸಹ ಭರ್ತಿಯಾಗಿರಲಿಲ್ಲ.



ರನ್ನರ್ ಅಪ್ ಯಾನಿಕ್ ಸಿನ್ನರ್ (ಎಡ) ಮತ್ತು ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ –ಎಎಫ್‌ಪಿ ಚಿತ್ರಗಳು

ಮಹಿಳಾ ಏಷ್ಯಾ ಕಪ್ ಹಾಕಿ: ಸಿಂಗಪುರ ಎದುರು ಗೆಲುವು

ಸೂಪರ್ ಫೋರ್ ಹಂತಕ್ಕೆ ಭಾರತ



ಭಾರತದ ಪರ ಗೋಲು ಹೊಡೆದ ಉದಿತಾ (ಮಧ್ಯ) ಅವರು ಸುಮನ್ ದೇವಿ ಅವರೊಂದಿಗೆ ಸಂಭ್ರಮಿಸಿದರು ಚಿತ್ರ: ಹಾಕಿ ಇಂಡಿಯಾ

ಹಾಂಗ್‌ಝೌ (ಚೀನಾ) (ಪಿಟಿಐ): ನವನೀತ್ ಕೌರ್ ಹಾಗೂ ಮುಮ್ತಾಜ್ ಖಾನ್ ಅವರು ಗಳಿಸಿದ ತಲಾ ಮೂರು ಗೋಲುಗಳ ನೆರವಿನಿಂದ ಭಾರತ ಹಾಕಿ ತಂಡವು ಏಷ್ಯಾ ಕಪ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಸೋಮವಾರ ಸಿಂಗಪುರ ಎದುರು 12–0 ಭರ್ಜರಿ ಗೆಲುವು ಸಾಧಿಸಿತು. ಜೊತೆಗೆ ಬಿ ಗುಂಪಿನಲ್ಲಿ ಅಗ್ರಸ್ಥಾನದೊಡನೆ ಸೂಪರ್ ಫೋರ್ ಹಂತಕ್ಕೆ ಲಗ್ಗೆ ಇಟ್ಟಿತು.

ನವನೀತ್ ಅವರು 14ನೇ ನಿಮಿಷ, 20ನೇ ನಿ., ಹಾಗೂ 28ನೇ ನಿಮಿಷದಲ್ಲಿ ಗೋಲು ಹೊಡೆದರೆ, ಮುಮ್ತಾಜ್ ಅವರು ಎರಡನೇ, 32ನೇ ಹಾಗೂ 39ನೇ ನಿಮಿಷದಲ್ಲಿ ಗೋಲು ಹೊಡೆದು ಹ್ಯಾಟ್ರಿಕ್ ಪೂರೈಸಿದರು.

ನೇಹಾ (11ನೇ ಹಾಗೂ 38ನೇ ನಿ.) ಎರಡು ಗೋಲು ಹೊಡೆದರೆ, ಲಾಲ್ರೆಮ್‌ಸಿಯಾಮಿ (13ನೇ ನಿ.), ಉದಿತಾ (29ನೇ ನಿ.), ಶರ್ಮಿಳಾ (45ನೇ ನಿ.) ಹಾಗೂ ರುತುಜಾ ದಾದಾಸೊ ಪಿಸಾಳ್ (53ನೇ ನಿ.) ತಲಾ ಒಂದು ಗೋಲು ಗಳಿಸಿದರು.

ಭಾರತ ತಂಡದ ಆಟಗಾರ್ತಿಯರು ಪಂದ್ಯದ ಆರಂಭದಿಂದಲೇ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿದರು. ಡಿಫೆನ್ಸ್, ಮಿಡ್‌ಫೀಲ್ಡ್ ಮತ್ತು ಫಾರ್ವರ್ಡ್ ಆಟಗಾರ್ತಿಯರ ನಡುವೆ ಉತ್ತಮ ಹೊಂದಾಣಿಕೆ ಇತ್ತು. ಎದುರಾಳಿಯ ಗೋಲಿನತ್ತ ಪದೇಪದೇ ಲಗ್ಗೆಯಿಟ್ಟು ನಿರಂತರ ಒತ್ತಡ ಹೇರಿದರು.

ಭಾರತ ತಂಡವು ಗುಂಪು ಹಂತದ ಮೊದಲ ಪಂದ್ಯದಲ್ಲಿ ಥಾಯ್ಲೆಂಡ್ ಎದುರು 11–0ಯಿಂದ ಜಯಿಸಿದ್ದರೆ, ಎರಡನೇ ಪಂದ್ಯದಲ್ಲಿ ಜಪಾನ್ ಜತೆಗೆ 2–2ರ ಸಮಬಲ ಸಾಧಿಸಿತ್ತು.


ಸಾತ್ವಿಕ್–ಚಿರಾಗ್ ಮೇಲೆ ಚಿತ್ತ

ಹಾಂಗ್‌ಕಾಂಗ್ (ಪಿಟಿಐ): ವಿಶ್ವ ಬ್ಯಾಡ್ಮಿಂಟನ್ ಕಂಚಿನ ಪದಕ ವಿಜೇತ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ ಮಂಗಳವಾರ ಆರಂಭವಾಗಲಿರುವ ಹಾಂಗ್‌ಕಾಂಗ್ ಓಪನ್ ಸೂಪರ್ 500 ಟೂರ್ನಿಯಲ್ಲಿ ಭಾರತದ ಸವಾಲು ಮುನ್ನಡೆಸಲಿದೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಈ ಜೋಡಿಯು, ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಬ್ಯಾಡ್ಮಿಂಟನ್ ಟೂರ್ನಿ ಸೇರಿದಂತೆ ಈ ವರ್ಷ ನಡೆದ ಹಲವು ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡಿದೆ. ಆದರೂ, ‘ಸೆಮಿಫೈನಲ್ ಹಂತ ದಾಟುವಲ್ಲಿ ಎಡವಿದೆ. ಈ ಟೂರ್ನಿಯಲ್ಲಿ ಆ ವೈಫಲ್ಯವನ್ನು ಮೆಟ್ಟಿ ನಿಲ್ಲುವ ವಿಶ್ವಾಸದಲ್ಲಿದೆ. ಸಾತ್ವಿಕ್–ಚಿರಾಗ್ ಅವರು ಮೊದಲ ಸುತ್ತಿನಲ್ಲಿ ಚೀನಾ ತೈಪೆಯ ಶಿಯು ಸಿಯಾಂಗ್ ಶಿಯೆಹ್–ವಾಂಗ್ ಶಿ ಲಿನ್ ಜೋಡಿಯನ್ನು ಎದುರಿಸಬೇಕಿದೆ.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ. ಸಿಂಧು ಅವರೂ ಲಯಕ್ಕೆ ಮರಳುವ ವಿಶ್ವಾಸದಲ್ಲಿದ್ದಾರೆ. ಮೊದಲ ಸುತ್ತಿನಲ್ಲಿ ಅವರು ಡೆನ್ಮಾರ್ಕ್‌ನ ಲೀನ್ ಕ್ರಿಸ್ಟೊಫರ್ಸನ್ ಅವರ ಸವಾಲನ್ನು ಎದುರಿಸಲಿದ್ದಾರೆ. ಅಮೆರಿಕ ಓಪನ್ 300 ಟೂರ್ನಿಯ ವಿಜೇತ ಆಯುಷ್ ಶೆಟ್ಟಿ ಕೂಡ ಕಣದಲ್ಲಿದ್ದು, ಚೀನಾದ ಲು ಗುವಾಂಗ್ ಜು ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಆಟಗಾರ ಲಕ್ಷ್ಯ ಸೇನ್ ಹಾಗೂ ಎಚ್.ಎಸ್. ಪ್ರಣಯ್ ಅವರು ಲಯ ಕಂಡುಕೊಳ್ಳಲು ಎದುರು ನೋಡುತ್ತಿದ್ದಾರೆ.

ಜಾವೆಲಿನ್ ಥ್ರೋ: ನೀರಜ್ ದಾಖಲೆ ಮುರಿದ ಶಿವಂ



ಬೆಂಗಳೂರು: ಜಾವೆಲಿನ್ ಥ್ರೋಪಟು ಶಿವಂ ಲೋಹಕರೆ ಅವರು ಜಾಲಹಳ್ಳಿಯಲ್ಲಿ ಭಾನುವಾರ ನಡೆದ ಇಂಟರ್ ಸರ್ವೀಸಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದರು.

ಆರ್ಮಿ ರೆಡ್ ತಂಡವನ್ನು ಪ್ರತಿನಿಧಿಸಿದ 20 ವರ್ಷದ ಶಿವಂ (ಮಹಾರಾಷ್ಟ್ರ) ಅವರು 84.31 ಮೀಟರ್ ದೂರ ಈಟಿಯನ್ನು ಎಸೆದರು. ಈ ಮೂಲಕ ನೀರಜ್ ಚೋಪ್ರಾ (83.80 ಮೀ) ಹೆಸರಿನಲ್ಲಿದ್ದ ಕೂಟ ದಾಖಲೆಯನ್ನು ಅವರು ಮುರಿದರು. ಈ ಕೂಟವು ವಿಶ್ವ ಅಥ್ಲೆಟಿಕ್ಸ್‌ನಿಂದ ಮಾನ್ಯತೆ ಪಡೆಯದ ಕಾರಣ ವೈಯಕ್ತಿಕ ಶ್ರೇಷ್ಠ ದಾಖಲೆಗೆ ಪರಿಗಣಿಸುವುದಿಲ್ಲ.

ಕರ್ನಾಟಕದ ಮಣಿಕಂಠ ಹೋಬಳಿದಾರ್ ಅವರು ಆರ್ಮಿ ರೆಡ್ ತಂಡವನ್ನು ಪ್ರತಿನಿಧಿಸಿ 100 ಮೀ, 200 ಮೀ ಮತ್ತು 4x100 ಮೀ ರಿಲೆ ಸ್ಪರ್ಧೆಯಲ್ಲಿ ಚಿನ್ನದ ಪದಕಗಳನ್ನು ಗೆದ್ದರು.

ಪ್ರೊ ಕಬಡ್ಡಿ: ಹಾಲಿ ಚಾಂಪಿಯನ್ ಹರಿಯಾಣ ಸ್ಟೀಲರ್ಸ್‌ಗೆ ಸೋಲು

ಬೆಂಗಳೂರು ಬುಲ್ಸ್‌ಗೆ ಎರಡನೇ ಗೆಲುವು



ಹರಿಯಾಣ ಸ್ಟೀಲರ್ಸ್ ತಂಡದ ರೇಡರ್‌ನನ್ನು ಹಿಡಿಯಲು ಯತ್ನಿಸಿದ ಬೆಂಗಳೂರು ಬುಲ್ಸ್ ಆಟಗಾರರು

ವಿಶಾಖಪಟ್ಟಣ: ಅಲಿರೆಜಾ ಮಿರ್ಜೈಯನ್ ಅವರ ಅಮೋಘ ರೇಡಿಂಗ್ ಬಲದಿಂದ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್ 12ನೇ ಆವೃತ್ತಿಯ ಪಂದ್ಯದಲ್ಲಿ 40–33ರಿಂದ ಹಾಲಿ ಚಾಂಪಿಯನ್ ಹರಿಯಾಣ ಸ್ಟೀಲರ್ಸ್ ತಂಡವನ್ನು ಸೋಲಿಸಿತು.

ಆರಂಭದ ಮೂರು ಪಂದ್ಯಗಳಲ್ಲಿ ಸೋತಿದ್ದ ಬುಲ್ಸ್ ತಂಡವು ಇದೀಗ ಸತತ ಎರಡನೇ ಗೆಲುವು ದಾಖಲಿಸಿಕೊಂಡು ಪಾಯಿಂಟ್ಸ್ ಪಟ್ಟಿಯಲ್ಲಿ ಏಳನೇ ಬಡ್ತಿ ಪಡೆಯಿತು. ಹರಿಯಾಣ ತಂಡಕ್ಕೆ ನಾಲ್ಕು ಪಂದ್ಯಗಳಲ್ಲಿ ಇದು ಎರಡನೇ ಸೋಲು.

ವಿಶ್ವನಾಥ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಸೋಮವಾರ ಪಂದ್ಯ ಆರಂಭವಾದ ಕೇವಲ 5 ನಿಮಿಷಗಳ ಅಂತರದಲ್ಲಿ ಅಲಿರೆಜಾ ಅವರ ಬಲದಿಂದ ಸ್ಟೀಲರ್ಸ್ ತಂಡವನ್ನು ಆಲೌಟ್ ಬಲೆಗೆ ಬೀಳಿಸಿದ ಬುಲ್ಸ್ ಆಟಗಾರರು 9-2ರಿಂದ ಮುನ್ನಡೆ ಸಾಧಿಸಿದರು.

ವಿರಾಮದ ವೇಳೆಗೆ ಮೂರು ಅಂಕಗಳಿಂದ (21–18) ಮುನ್ನಡೆಯಲ್ಲಿದ್ದ ಯೋಗೇಶ್ ನಾಯಕತ್ವದ ಬುಲ್ಸ್, ಉತ್ತರಾರ್ಧದಲ್ಲೂ ಪಾರಮ್ಯ ಸಾಧಿಸಿ ಗೆಲುವಿನ ಅಂತರವನ್ನು ಹಿಗ್ಗಿಸಿಕೊಂಡಿತು. ಬುಲ್ಸ್ ತಂಡವು ಎದುರಾಳಿ ತಂಡವನ್ನು ಎರಡು ಬಾರಿ ಆಲೌಟ್ ಮಾಡಿತು.

ಪಟ್ನಾ ಪೈರೇಟ್ಸ್ ವಿರುದ್ಧದ ಪಂದ್ಯದಲ್ಲಿ ಗೆಲುವಿನ ರೂವಾರಿಯಾಗಿದ್ದ ಅಲಿರೆಜಾ ಈ ಪಂದ್ಯದಲ್ಲೂ 12 ಅಂಕ ಕಲೆಹಾಕಿದರು. ಅವರಿಗೆ ರೇಡಿಂಗ್‌ನಲ್ಲಿ ಆಶೀಶ್ ಮಲಿಕ್ (5) ಸಾಥ್ ನೀಡಿದರು.

ಈ ಪಂದ್ಯದಲ್ಲಿ ಬುಲ್ಸ್ ತಂಡವು ಟ್ಯಾಕಲ್‌ನಲ್ಲೇ 14 ಅಂಕ ಗಳಿಸಿದ್ದು ವಿಶೇಷವಾಗಿತ್ತು. ಯೋಗೇಶ್ ದಹಿಯಾ (6), ದೀಪಕ್ ಶಂಕರ್ (5) ಟ್ಯಾಕಲ್‌ನಲ್ಲಿ ಮೋಡಿ ಮಾಡಿದರು. ಸ್ಟೀಲರ್ಸ್ ತಂಡಕ್ಕಾಗಿ ಶಿವಂ ಪತಾರೆ 7 ಮತ್ತು ಮಯಂಕ್ ಸೈನಿ 6 ಪಾಯಿಂಟ್ಸ್ ಗಳಿಸಿದರು.

ಪೈರೇಟ್ಸ್‌ಗೆ ಜಯ: ದಿನದ ಮತ್ತೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 48–37ರಿಂದ ಪುಣೇರಿ ಪಲ್ಟನ್ ತಂಡವನ್ನು ಸೋಲಿಸಿತು.

ಇಂದಿನ ಪಂದ್ಯಗಳು:
ಡೆಲ್ಲಿ ದಬಾಂಗ್– ಬೆಂಗಾಲ್ ವಾರಿಯರ್ಸ್ (ರಾತ್ರಿ 8)
ಗುಜರಾತ್ ಜೈಂಟ್ಸ್– ಜೈಪುರ ಪಿಂಕ್ ಪ್ಯಾಂಥರ್ಸ್ (ರಾತ್ರಿ 9)
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಫುಟ್‌ಬಾಲ್: ಭಾರತಕ್ಕೆ 3ನೇ ಸ್ಥಾನ

ಹಿಸೋರ್ (ತಾಜಿಕಿಸ್ತಾನ), (ಪಿಟಿಐ): ಭಾರತ, ಸಿಎಎಫ್‌ಎ ನೇಷನ್ಸ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ತನಗಿಂತ ಮೇಲಿನ ಕ್ರಮಾಂಕದ ಒಮಾನ್ ತಂಡವನ್ನು ಪೆನಾಲ್ಟಿಯಲ್ಲಿ 3–2 ಗೋಲುಗಳಿಂದ ಸೋಲಿಸಿ ಪದಾರ್ಪಣೆಯಲ್ಲಿ ಮೂರನೇ ಸ್ಥಾನ ಗಳಿಸಿತು.

ಭಾರತಕ್ಕೆ, ಪಶ್ಚಿಮ ಏಷ್ಯಾದ ರಾಷ್ಟ್ರ ಒಮಾನ್ ವಿರುದ್ಧ ಇದು ಮೊದಲ ಗೆಲುವು. ಹಿಸೋರ್ ಸೆಂಟ್ರಲ್ ಸ್ಟೇಡಿಯಂನಲ್ಲಿ ನಿಗದಿ ಅವಧಿಯ ಆಟ 1–1 ಸಮಬಲಗೊಂಡಿತ್ತು. ಒಮಾನ್ ಪರ ಜಮೀಲ್ ಅಲ್ ಯಹ್ಮದಿ 55ನೇ ನಿಮಿಷ ಗೋಲು ಗಳಿಸಿದರು. ಆದರೆ ಉದಾಂತ ಸಿಂಗ್ ಕುಮಮ್ 80ನೇ ನಿಮಿಷ ಗೋಲು ಗಳಿಸಿದ್ದರಿಂದ ಸ್ಕೋರ್ ಸಮನಾಯಿತು.

ಪೆನಾಲ್ಟಿಯಲ್ಲಿ ಲಾಲಿಯನ್ ಝುವಾಲ ಚಾಂಗ್ಟೆ, ರಾಹುಲ್ ಭೆಕೆ ಮತ್ತು ಜಿತಿನ್ ಎಂ.ಎಸ್. ತಮ್ಮ ಯತ್ನಗಳಲ್ಲಿ ಯಶಸ್ಸು ಕಂಡರು.